ಪ್ರಬುದ್ಧ ಕರ್ಣಾಟಕ

ಪ್ರಜೋತ್ಪತ್ತಿ ಸಂವತ್ಸರ — ೪೮ — ದೀಪಾವಳಿಯ ಸಂಚಿಕೆ

ಸಂಪುಟ ೧೩] ವಿಷಯ ಸೂಚಿಕೆ [ಸಂಚಿಕೆ ೨

೧–೨–೩ ಕವನಗಳು.

೪. ಕನ್ನಡಸಾಹಿತ್ಯವನ್ನು ಕುರಿತು ಕೆಲವು ಸಲಹೆಗಳು—ಮ॥ ಎ೯. ರಾಮರಾವ್, [ಬಿ.ಎ., ಬಿ.ಎಲ್

೫. ಕರ್ಣಾಟಕದ ಜನತೆಯ ಸಂಸ್ಕೃತಿ: ಮ॥ ಎಂ. ವೆಂಕಟೇಶಯ್ಯಂಗಾರ್, ಎಂ.ಎ.

೬. ಶ್ರೀ ಕೈಲಾಸವೂ ಮಾನಸಸರೋವರವೂ— ಮ॥ ಬಿ.ಎ೯. ಶ್ರೀನಿವಾಸಯ್ಯ, ಎಂ.ಎಸ್‌ಸಿ.

೭. ಫಾಹಿಯಾನನ ಕ್ಷೇತ್ರಯಾತ್ರೆ— ಮ॥ ಜಿ. ಪಿ. ರಾಜರತ್ನಂ, ಎಂ. ಎ.

೮. ಮ್ಯಾಕ್‌ಬೆತ್— ಮ॥ ಕೈ॥ ಲಕ್ಷ್ಮೀನೃಸಿಂಹಶಾಸ್ತ್ರಿಗಳು.

೯. ಬಂದನಾ ಹುಲಿರಾಯನು— ಮ॥ ಕೆ. ವಿ. ಪುಟ್ಟಪ್ಪ, ಎಂ. ಎ.

೧೦. ಆಲಂ ಗಿರಿ (ಸಣ್ಣ ಕಥೆ)— "ಶ್ರೀ ಸ್ವಾಮಿ"

೧೧. ಸಾದರ ಸ್ವೀಕಾರ—

೧೨. ವಸ್ತುಕೋಶ—

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದಿಂದ ಪ್ರಕಟಿಸಲ್ಪಟ್ಟಿದೆ.

೧೯೩೧

All Rights Reserved.

ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ—ಅಂಚೆವೆಚ್ಚ ಸೇರಿ

ಆಶ್ರಯದಾತರಿಗೆ	ರೂ. ೧೦	೦	೦
ಪೋಷಕರಿಗೆ	ರೂ. ៦	೮	೦
ಸಂಸ್ಥೆಗಳಿಗೆ	ರೂ. ೨	೮	೦
ಸಾಮಾನ್ಯ ಚಂದಾದಾರರಿಗೆ	ರೂ. ೨	೦	೦

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ವಿನಿಮಯ ಪತ್ರಿಕೆಗಳು

ಬೆಂಗಳೂರು:—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ, ಸ್ಕೂಲು ಮತ್ತು ಸ್ಕೌಟ್ ಪತ್ರಿಕೆ, ಒಕ್ಕಲಿಗರ ಪತ್ರಿಕೆ, ಸುಬೋಧ, ಕುರುಬರ ಪತ್ರಿಕೆ, ಮಕ್ಕಳ ಪುಸ್ತಕ, ಕಲಾ, ಕಥಾಂಜಲಿ, ಸರಸ್ವತಿ, ಬ್ರಹ್ಮಚರ್ಯ, ವಿಶ್ವಕರ್ಣಾಟಕ, ಅರ್ಥಸಾಧಕಪತ್ರಿಕೆ, ತಾಯಿನಾಡು, ಮೈಸೂರು ಸಹಕಾರ ಪತ್ರಿಕೆ.

ಮೈಸೂರು:—ವಿಶ್ವಬಂಧು, ಮೈಸೂರು ಮಕ್ಕಳು.

ತುಮಕೂರು:—ಸ್ಕೂಲ್ ಫೋಕ್.

ನಂಜನಗೂಡು:—ಸತೀಹಿತೈಷಿಣೀ, ತಾಯ್ನುಡಿ.

ಚಾಮರಾಜನಗರ:—ಕಾದಂಬರೀ ಸಂಗ್ರಹ.

ಧಾರವಾಡ:—ಕರ್ಮವೀರ, ವಾಗ್ಭೂಷಣ, ಕರ್ಣಾಟಕ ವಿದ್ಯಾಶಾಲಾ ಪತ್ರಿಕೆ, ಜಯಕರ್ನಾಟಕ, ಸ್ವಧರ್ಮ, ಒಕ್ಕಲಿಗರೂ ಒಕ್ಕಲುತನವೂ, Karnataka Historical Quarterly, ಜಯಕರ್ನಾಟಕ ಗ್ರಂಥಮಾಲೆ, ಕರ್ನಾಟಕ ಟೈಮ್ಸ್.

ಹುಬ್ಬಳ್ಳಿ:—ತರುಣಕರ್ಣಾಟಕ, ಲೋಕಮತ.

ಬೆಳಗಾಂ:—ಸಂಯುಕ್ತ ಕರ್ಣಾಟಕ, ಒಂದಾಣೆಯ ಮಾಲೆ, ಸ್ಕೂಲ್ ಬೋರ್ಡ್ ಗೆಜೆಟ್, ಜಿನವಿಜಯ.

ಬಿಜಾಪುರ:—ಶಿವಾನುಭವ, ಉದ್ಯೋಗ, ಚೈತನ್ಯ.

ಬೊಂಬಾಯಿ:—ಪ್ರಬೋಧಕ. ಗದಗ:—ಕರ್ನಾಟಕ ಬಂಧು.

ಬಾಗಲಕೋಟೆ:—ಕನ್ನಡಿಗ. ಅಗಡಿ:—ಸದ್ಬೋಧಚಂದ್ರಿಕೆ.

ಮಡಿಕೇರಿ:—ಲೋಕಪಾವನ. ತುಂಗಭದ್ರ:—ಪ್ರೇಮ.

ಮಂಗಳೂರು:—ರಾಷ್ಟ್ರಬಂಧು, ಕನ್ನಡ ಸಹಕಾರಿ.

ಮದರಾಸು:—ಆರೋಗ್ಯಚಂದ್ರಿಕೆ, ಪ್ರಜಾಮತ.

೧. ಗೊಸಲ್ ವಿಹಾರದಿಂದ ಮಾನಸ ಸರೋವರದ ದೃಶ್ಯ.



ಬಾಳ್ಕೆಯ ತೋಟ

ಧರೆಯು ಜೀವಸವೆಲ್ಲ
ಮರಣದೋಲಗವೆನುತ
ಸರಳಿ ಫಲವೇನು ಸಖನೆ?
ಪಾಳಡವಿ ಧರೆಯೆಂದು
ಬಾಳು ಬರಿ ಕನಸೆಂದು
ಗೋಳಿಟ್ಟೊಡೇನು ಸುಖವೆ?

ಆದನಿತು ಸಂದನಿತು
ಕಾದಲ್ಮೆ ನಲ್ಮೆಗಳ
ಸಾದಿಪನ ಬದುಕು ಬರಿದೆ?
ಬಂದನಿತು ಸೊಗದಿನಾ
ನಂದಪಡುವುದ ಬಿಟ್ಟು
ದಂದುಗದೊಳಿಹುದು ಸರಿಯೆ?

ಸಂತಸವದೇಕೆನುತ
ಚಿಂತೆಗೆಲ್ಲವ ತೆರಲು
ಪಂತವೇಂ ಬೊಮ್ಮನೊಡನೆ?
ಬಣಗು ಬಾಳ್ವೆಯಿದೆಂಬ
ಉಣಲಿಹುದ ಬೇಡೆಂಬ
ಒಣ ವಿರತಿಯುವಗೆ ಮುಡುಪೆ?

ತವಿಸಿ ನೀಂ ಬಾಯ್ಬಿಡಲು
ಕಿವಿಗುಡುವರಾರದಕೆ?
ಕಿವುಡನಾ ಬಿದಿ ಯರಿಯೆಯಾ?
ಏಸು ಜನರಳಲಿಹರು?
ಏಸೇಸು ಬಳಲಿಹರು?
ಗಾಸಿಯೇ ಗೆಲವೆನುವೆಯಾ?

ಸಾವ ಬೆದರಿನ ಸೆಕೆಗೆ
ಜೀವ ಸುಮುವನು ಬಿಸುಟು
ಏವೈಪುದೊಂದು ಸಯ್ಪೆ?
ಒದಗಿ ಬಂದುದ ಕೊಳುತೆ
ಬಿದಿಯು ನಿದಿರಿಸಿ ನಗುತೆ
ಬದುಕ ಮೇಲೆನಿಸೆ ತಪ್ಪೆ?

ಇಳೆಯು ಬಾಳ್ಕೆಯು ತೋಟ
ದೊಳಗೆ ಮುಳ್ಳಿಹುವು, ದಿಟ,
ಬಳಸಿಹುದು ಮಿತ್ತು ಪೊಸಲು;
ಇರಲಿ, ನೀನಿತ್ತಲುಳಿ
ದಿರುವಂದು ಮರೆಯದಿರು
ಸರಸ ಸುಮ ಫಲ ಕಲಗಳ.

ಡಿ. ವಿ. ಜಿ.

ಶಿಲಾ ತಪಸ್ವಿ

ವ್ಯೋಮ ಮಂಡಿತ ಸಹ್ಯಶೈಲಾಗ್ರದಡವಿಯಲಿ
ಸಂಚರಿಸುತಿರೆ, ಸಂಜೆ ಪಶ್ಚಿಮ ದಿಗಂತದಲಿ
ಕೆನ್ನಗೆಯ ಬೀರಿತ್ತು. ರವಿ ಮುಳುಗುತಿರ್ದಂ;
ಅಸ್ತಗಿರಿ ಚೂಡಸ್ಥ ತಪ್ತ ಬಿಂಬಾರ್ಧಂ
ರಕ್ತಸಿಕ್ತಾಂಬರದ ಹೇಮ ಜೀಮೂತದಲಿ
ಮಿಂಚಿನಂಚನು ನೆಯ್ದು, ರಕ್ತಕಾಂತಿಯ ಹೊಯ್ದು,
ಶೋಭಿಸಿತು. ಸಂಧ್ಯೆಯಾ ಶೋಣಿತ ಸ್ರೋತದಲಿ
ಮಿಂದ ಮುಗಿಲೆಸೆದತ್ತು ಪೂರ್ವಯುಗದಲಿ ಪಿಂತೆ
ರಕ್ಕಸನ ಹೀರ್ದ ನರಹರಿಯ ನಾಲಗೆಯಂತೆ.
ಬೈಗುಗೆಂಪನು ಹೊದೆದ ಬಿತ್ತರದರಣ್ಯಂ
ಪರ್ವತಧ್ಯಾನದಲಿ ಮುಳುಗಿತ್ತು. ಧನ್ಯಂ
ನಾನೆಂದು ತೇಲುತಿರೆ ಸೌಂದರ್ಯಪೂರದಲಿ,
ಯಾವುದೋ ಭವ್ಯತರ ಸಾನ್ನಿಧ್ಯಭಾರದಲಿ,
ಕೇಳಿಸಿತು ದನಿಯೊಂದು; ಕಾಣಿಸಿತು ದೂರದಲಿ
ಶಿಲೆಯೊಂದು ಮೊರಡಾದ ಮನುಜನಾಕಾರದಲಿ.
ಆ ಶಿಲಾ ಶೈಲತಪಸಿಯು ಕರೆಯುತೆನ್ನಂ
ನುಡಿದುದಿಂತೆಂದು : ಓ ಕಬ್ಬಿಗನೆ, ತನ್ನಂ
ಕಲ್ಲುಕರೆಯಿತು ಎಂದು ಬೆಚ್ಚದಿರು. ಮುನ್ನಂ,
ಶತಶತ ಸಹಸ್ರ ಶತಮಾನಗಳ ಮುನ್ನಂ
ನಾವಿರ್ವರೊಂದೆ ಬಸಿರಿಂ ಬಂದು ಲೀಲೆಯಲಿ
ಮುಳುಗಿದೆವು ಸಂಸಾರ ಮಾಯಾಗ್ನಿ ಜ್ವಾಲೆಯಲಿ.
ನೀನು ಮರೆತಿರಬಹುದು, ಚೇತನದ ಸುಖದೊಳಿಹೆ ;
ನಾನು ಮರೆತಿಲ್ಲದನು, ಜಡತನದ ಸೆರೆಯೊಳಿಹೆ !

ಆ ಕಲ್ಲುಕಿತ್ತಡಿಯ ಹೊರೆಗಾಗಿ ನಡೆಯುತ್ತೆ
ನಿಂತೆನಾಶ್ಚರ್ಯದಲಿ. ಮೂರುತಿಯು ನುಡಿಯುತ್ತೆ,
ನುಡಿಯುತ್ತೆ ಕಣ್ಣೀರು ಕರೆವುದನು ಕಂಡೆ;

ಹರಳುಗಂಬನಿಯುರುಳಿಸಳುತಿತ್ತು, ಬಂಡೆ!
ನೋವೆಲ್ಲ ಹೊನಲುಹರಿವಂದದಲಿ ವಾಣಿ
ತುಂಬಿತಾಕಾಶವನು; ಗಿರಿವನಶ್ರೇಣಿ
ಮರುಗಿದುದು ಮೌನದಲಿ ಅನುಕಂಪವನು ತೋರಿ.
ಅಸ್ತಮಿಪ ಬೆಳಕಿನಲಿ ದೀರ್ಘಛಾಯೆಯ ಬೀರಿ
ಬಳಿಯ ಮರಗಳು ನಿಂತುವಾಲೈಸಿ. ನಿಂತು
ಕೇಳುತಿರಲಾ ಕಲ್ಲು ಮುಂದರಿಯಿತಿಂತು:
ಕಾಲವಲ್ಲಿರಲಿಲ್ಲ; ದೇಶವಲ್ಲಿರಲಿಲ್ಲ;
ಗ್ರಹಕೋಟಿ ಶಶಿಸೂರ್ಯ ತಾರಕೆಗಳಿರಲಿಲ್ಲ;
ಬೆಳಕು ಕತ್ತಲೆ ಎಂಬ ಭೇದವಿನಿತಿರಲಿಲ್ಲ.
ಮಮಕಾರ ಶೂನ್ಯದಲಿ ಮುಳುಗಿದ್ದುವೆಲ್ಲ!
ಮೂಡಿದುದು ಮೊದಲು ಮಮಕಾರವೆಂಬುವ ಮಾಯೆ;
ಬೆಂಕೊಂಡು ತೋರಿದುದು ಸೃಷ್ಟಿ ಎಂಬುವ ಛಾಯೆ.
ಕಾಲದೇಶದ ಕಡಲ ಕಡೆಹದಲಿ ಸಿಕ್ಕಿ
ಆದಿಮ ಲಯಾಗ್ನಿ ಹೊರಹೊಮ್ಮಿದುದು. ಉಕ್ಕಿ
ಸುತ್ತಿದುದು; ಚಿಮ್ಮಿದುದು ದೆಸೆದೆಸೆದೆಸೆಗೆ ಹಬ್ಬಿ
ಘೂರ್ಣಿಸುತೆ ವಿಶ್ವದ ಅನಂತತೆಯನೇ ತಬ್ಬಿ.
ಓ ಕವಿಯೆ, ಆ ಭೀಷ್ಮ ಲಯಶಿಖಿ ಪ್ರವಾಹದಲಿ,
ಸಿದ್ಧಿಯಿಂದೆದ್ದಾ ಪರಬ್ರಹ್ಮದೇಹದಲಿ,
ಆ ಮಹಾ ಉಜ್ವಲ ಪ್ರೇಮ ಘನವಹ್ನಿಯಲಿ,
ಸದ್ಯಃ ಪ್ರಫುಲ್ಲಕಲ್ಪಾದಿ ಪ್ರತಿಭೆಯಲ್ಲಿ
ಕನಸಿನಲಿ ಸಂಚರಿಪ ಚಿತ್ರಸಂಕುಲದಂತೆ,
ಮಂಥನದಿ ಮೂಡಿಬಹ ಜಲಬುದ್ಬುದಗಳಂತೆ,
ಕವಿಮನದಿ ಮಿಂಚಿಬಹ ಭಾವಮಂಜರಿಯಂತೆ,
ಮರುಮರೀಚಿಕೆಯಲ್ಲಿ ನರ್ತಿಸುವಲೆಗಳಂತೆ,
ವೈಣಿಕನ ಸ್ವರ ಸ್ವರ್ಗ ಸೋಪಾನಶ್ರೀಯಂತೆ

ಆ ವಿಶ್ವಕಾವ್ಯದಸ್ಪಷ್ಟ ಪೂರ್ಣತೆಯಲ್ಲಿ
ಸ್ಪಷ್ಟವ್ಯಕ್ತಿತ್ವದಾಕಾಂಕ್ಷೆಯಿಂ ಸಿಂದಲ್ಲಿ
ನಿಲದೆ ಸಂಚರಿಸಿದೆವು ಆ ಅಗ್ನಿ ಜಲದಲ್ಲಿ!
ನೋಡಿನ್ನುಮಿಹುದಾ ಕಲೆಯೆನ್ನ ಎದೆಯಲ್ಲಿ!
ಮೌನದಲಿ ನಿಂತಾ ಮಹಾಚಲಶ್ರೇಣಿ
ಆಲಿಸಿತು ತನಗದು ಪ್ರತಿನಿಧಿಯ ವಾಣಿ
ಎಂಬಂತೆ. ಭೀಮಗಿರಿ ಶಿಖರಗಳ ಕರಿನೆರಳು
ಹೊನಲಾಗಿ ಹರಿದುದು ಕಣಿವೆಯೊಳಗೆ. ಮುನ್ನಿರುಳು
ಮೆಲುಮೆಲನೆ ನಾಡನಾಲಿಂಗಿಸಿತು. ಸದ್ದು
ಕರಗುತಿದ್ದುದು ನಿದ್ದೆಗಡಲಿನಲಿ ಬಿದ್ದು.
ಭೂಗೋಲ ಭೀಮ ಛಾಯಾ ಸ್ತೂಪ ಚೂಡಂ
ಆಕಾಶದೇಶದಲಿ ಕರಿದೆರೆಯ ಬೀಡಂ
ತಿಮಿರರಾಣಿಗೆ ರಚಿಸಿದತ್ತು; ಪಟಶಾಲೆಯಲಿ
ತಾರೆಗಳ ಕೆತ್ತತೊಡಗಿತು ಮಾಲೆಮಾಲೆಯಲಿ!
ನೋಡೆಂದು ಶಿಲೆಯು ಬೆಸಗೊಳೆ ನೋಡಿ ಬೆಚ್ಚಿದೆನು;
ಕಲ್ಪಾದಿಯಗ್ನಿಯನು ಕಂಡು ಕಣ್ಮುಚ್ಚಿದೆನು!
ಆ ಸನಾತನ ಶೈಲತಪಸಿಯೆದೆಯಾಳದಲಿ
ಯುಗಯುಗಗಳಿನ್ನು ಮಲಗಿಹವಲ್ಲಿ. ನಾಳದಲಿ,
ನಾಳದಲಿ ಕಲ್ಪಗಳು ಆತ್ಮಕಥೆ ಹೇಳುತಿವೆ;
ಹಿಂದುಮುಂದೊಂದರಿಯದಿಂದಿನೊಳೆ ಬಾಳುತಿವೆ
ಕಾಲದೇಶಾದಿ ಪರಿಣಾಮ ಕೋಟಿಗಳಲ್ಲಿ.
ಮರಳಿ ನುಡಿ ತೊಡಗಿತಿಂತಾ ಶಿಲೆಯು ಸೆರೆಯಲ್ಲಿ:
ಇಂತಿರಲು, ಸೀರಿನಲಿ ತೇದ ಮಿಂಚಿನ ತೆರದಿ,
ಬಂಧನವ ಹರಿಯಲೆಳಸುವ ಕೇಸರಿಯ ತೆರದಿ,
ಹರಿದು ಭೋರಿಡುವ ಆ ಅಗ್ನಿಪ್ರವಾಹಂ
ದಿಕ್ಕುದಿಕ್ಕಿಗೆ ಸಿಡಿದೊಡೆದು, ದೇಶದೇಹಂ

ಗ್ರಹಭೂಮಿ ಶಶಿಸೂರ್ಯ ತಾರಾಖಚಿತವಾಯ್ತು!
ನನಗೆ ಈ ಭೂಗರ್ಭವೇ ಸೆರೆಯಮನೆಯಾಯ್ತು!
ಕಲ್ಪಕಲ್ಪಗಳಿಂದ ನಾನಲ್ಲಿ ಸೆರೆಯಾಗಿ
ನರಳಿದೆನು ಕತ್ತಲಲಿ. ಜ್ಯೋತಿದರ್ಶನಕಾಗಿ
ಮೊರೆಯಿಟ್ಟು ಕೂಗುತಿರೆ ಕಲ್ಲೆನಗೆ ಮೈಯಾಗಿ
ಕಡೆಗಿಲ್ಲಿ ನೆಲೆಸಿದೆನು. ಇರೆಯಿರೆ ಕ್ರಮವಾಗಿ
ನನ್ನ ಸೋದರರೆಲ್ಲ ಮರಗಿಡಗಳಂದದಲಿ
ಮೂಡಿದರು; ಉಸಿರೆಳೆದು ಬೆಳೆಬೆಳೆದು ಚಂದದಲಿ
ನಲಿದಾಡಿದರು; ಕೆಲರು ಸ್ವಪ್ನವನು ಸೀಳಿ
ತಿರುಗಾಡಿದರು ಪ್ರಾಣಿರೂಪವನು ತಾಳಿ;
ಮೆಲ್ಲಮೆಲ್ಲನೆ ಕೆಲರು ನರರಾಕೃತಿಯ ತಳೆದು
ತಪ್ಪು ಹಾದಿಯೊಳೆನಿತೊ ಶತಮಾನಗಳ ಕಳೆದು
ನಾಗರಿಕರಾದರೈ ಬುದ್ಧಿಶಕ್ತಿಯ ತೋರಿ!
(ಹಾ! ದೂರವಿಹುದಿನ್ನುಮೆನಗೆ ನಡೆಯುವ ದಾರಿ!)
ಗಗನದಲಿ ಕಾಣುವಾ ತಾರೆಗಳಲೆಲ್ಲಿಯೂ
ತಿರುಗಿಹೆನು; ಆದರೇನವುಗಳಲಿ ಎಲ್ಲಿಯೂ
ಕ್ರಿಮಿಯೊಂದರಲ್ಲಿರುವ ಚೇತನದ ಕಣವಿಲ್ಲ;
ಸ್ವೇಚ್ಛೆಯೆಂಬುವುದಿಲ್ಲ; ಕಡೆಗೊಂದು ತೃಣವಿಲ್ಲ!
ಈ ಭೂಮಿಯೊಂದು ಕ್ರಿಮಿ ಕ್ಷಣಜೀವಿಯಾದರೂ
ತಾರೆಗಳ ಮಿಾರಿಹುದು; ಯುಗಜೀವಿಯಾದರೂ
ತನ್ನಿಚ್ಛೆ ಏನೆಂಬುದರಿಯದಿಹ ದಾಸ್ಯಂ
ಸಾವಿಗೆಣೆ. ನೇಸರ್ಗೆ ಕ್ರಿಮಿಗಿರದ ದಾಸ್ಯಂ!
ಎಲ್ಲ ಜಡತೆಯ ಬಯಕೆ ಚೈತನ್ಯಸಿದ್ಧಿಯೈ!
ಈ ರಹಸ್ಯವನರಿತ ಮಾನವನೆ ಬುದ್ಧನೈ!—
ಆ ಶಿಲಾತಪಸಿಯುಪದೇಶವನು ಕೇಳುತ್ತೆ
ನಿಷ್ಪಂದನಾದೆನಾವೇಶವನು ತಾಳುತ್ತೆ!

ಶಿಲೆಯೆ ಕವಿ; ಕವಿಯೆ ಶಿಲೆ; ಅದೆ ತತ್ತ್ವಬೋಧೆ!
ಕಲ್ಲೆನಗೆ ಗುರುವಾಯ್ತು; ನಾ ಶಿಷ್ಯನಾದೆ!
ಮೇಲೆ ನಭದಲಿ ತಾರೆ ಸಾಕ್ಷಿಕಾಂತಿಯ ಬೀರಿ
ಮಿಣುಕಿದುವು! ಕೆಳಗೆ ಕತ್ತಲು ಸಂಶಯವ ತೋರಿ
ಮುಸುಗಿತ್ತು!—
ಓ ಕಬ್ಬಿಗನೆ, ಸೋದರನೆ ಕೇಳು;
ನಾನು ಈ ಕಲ್ಲಿನಲಿ ಸೆರೆಸಿಕ್ಕಿರಲು, ಹಾಳು
ಜಡತನಕೆ ಬೇಸತ್ತು ಜೀವವನು ಬಯಸುತ್ತೆ
ಮರುಗುತಿರೆ, ಶಿಲ್ಪಿಯೊರ್ವನು ಇಲ್ಲಿ ತಿರುಗುತ್ತೆ
ಬಂದು, ಮರುಗುತೆ ನನಗೆ, ಬಂಡೆಯನು ಕಡೆದು
ಬಿಡಿಸಿದನು. ನಾನು ಈ ರೂಪವನು ಪಡೆದು
ಕಲೆಯ ಸಾನ್ನಿಧ್ಯದಲಿ ಒಂದಿಸಿತು ಕಣ್ದೆರೆದು,
ಪೂರ್ವಬಂಧದ ಶಿಲಾಕ್ಲೇಶವನು ನಸುತೊರೆದು
ಚೇತನದ ಛಾಯೆಯನು ಸವಿಯುತೊಡಗಿದೆನಂದು.
(ಕಲ್ಗೆ ಕಣ್ಣಿತ್ತ ಆ ಕಲೆಯೆನಗತುಲ ಬಂಧು!)
ಕಲೆಯ ಕಣ್ಣಿರದ ನರರಿಗೆ ನಾನು ಬರಿಕಲ್ಲು;
ಕವಿಯನುಳಿದಾರಿಗೂ ಕೇಳದೆನ್ನೀ ಸೊಲ್ಲು!
ನಾನು ರವಿಯುದಯವನು ನೋಡಿ ನಲಿಯಲು ಬಲ್ಲೆ;
ಒನದ ಬೆಟ್ಟದ ನೆತ್ತಿಯಲ್ಲಿ ತಿಂಗಳು ನಿಲ್ಲೆ,
ಹುಣ್ಣಿಮೆಯ ತಿಳಿಬಾನು ಬೆಳ್ದಿಂಗಳನು ಚೆಲ್ಲೆ
ಭಾವದಲೆಗಳು ನನ್ನ ರಕ್ತನಾಳಗಳಲ್ಲಿ
ಮೊರೆಯುವುವು ಸೌಂದರ್ಯದಾನಂದಭರದಲ್ಲಿ!
ನಿನ್ನಂತೆಯೇ ನಾನು ಕೋಗಿಲೆಯ ದನಿಗೇಳಿ
ಮುದವ ತಾಳಲುಬಲ್ಲೆ; ಬೀಸಿಬರೆ ತೆಂಗಾಳಿ
ಮೈಯೊಡ್ಡಿ ಬೇಗೆಯನು ಪರಿಹರಿಸಿಕೊಳಬಲ್ಲೆ!
ಈ ವಿಶ್ವವೆಲ್ಲವನು ನಿನ್ನಂತೆ ನಿಂತಲ್ಲೆ

ಕಲ್ಪನೆಯ ತಕ್ಕೆಯಲಿ ತಬ್ಬಿ ಸಾಯಲುಬಲ್ಲೆ!
ಆದರೂ ನನಗಿನ್ನು ನಿನ್ನಿರವು ಬಂದಿಲ್ಲ;
ಅದಕಾಗಿ ತಪವಗೈಯುತ್ತಿಹೆನು. ಬಂದಿಲ್ಲ
ಒಂದು ದಿನ ಮುಂದೆ ನಿನ್ನಂತೆ ತಿರುಗಾಡುವೆನು;
ಕವಿಯಾಗಿ ಕನ್ನಡದ ಕವನಗಳ ಮಾಡುವೆನು;
ಪಾಡಿ, ನಿನ್ನಂತೆಯೇ ಜನಗಳಿಗೆ ಹಾಡುವೆನು!
ಅದಕಾಗಿ, ಓ ಕವಿಯೆ, ನಿನ್ನ ನೆರವನು ಬೇಡಿ
ಕರೆದೆನಿಂದೀಯೆಡೆಗೆ: ನೀನಿಲ್ಲಿಗೈತಂದು
ನಿತ್ಯವೂ ನನಗಾಗಿ ನಿನ್ನ ರಚನೆಯ ಹಾಡಿ
ಕಲೆಯ ಸಾನ್ನಿಧ್ಯದಿಂದೆನಗೆ ನರತನ ಬಂದು,
ನಿನ್ನಂತೆಯೇ ನಾನು ಚೇತನದ ಮುಕ್ತಿಯಂ
ಪಡೆದು ನಲಿವಂದದಲಿ ನೀಡೆನಗೆ ಶಕ್ತಿಯಂ!
ಓ ಕಬ್ಬಿಗನೆ, ನಿನ್ನೊಳಿಹ ಕಲೆಗೆ ಶಕ್ತಿಯಿದೆ,
ಜಡವ ಚೇತನ ಗೊಳಿಪ ದಿವ್ಯತರ ಮುಕ್ತಿಯಿದೆ.
ಮನುಜರಿಗೆ ಸೊಗವೀವ ಕರ್ತವ್ಯವೊಂದೆ
ನಿನ್ನದೆಂದರಿಯದಿರು; ನಿನ್ನ ಕಲೆಯಿಂದೆ
ನೂರಾರು ಆತ್ಮಗಳು ಜಡತನದ ಬಲೆಯಿಂದೆ
ಬಿಡುಗಡೆಯ ಹೊಂದುವುವು! ಏಕೆನೆ ಕವನದಿಂದೆ
ಕಲ್ಲುಗಳು ವಾಲ್ಮೀಕಿಯಾಗಿಹವು ಹಿಂದೆ!

ದನಿಯು ನಿಂತಿತು. ನಾನು ಕಲ್ಲುತವಸಿಯ ಮುಟ್ಟಿ
ಮುದ್ದಿಟ್ಟು ಮರಳಿದೆನು. ಕಾಲಡಿಯೊಳಿಹ ಮುಟ್ಟಿ
ನೋಯುವುದೊ ಎಂದಳುಕಿ ಮೆಲ್ಲಮೆಲ್ಲನೆ ನಡೆದೆ.
ನಾಳೆ ಸಂಜೆಯೊಳಾನು ಕಲ್ಲುಗೆಳೆಯನ ಬಿಡದೆ
ಕಂಡು ಮಾತಾಡುವೆನು; ಕವನಗಳ ಹಾಡುವೆನು!
ಕಲ್ಲು ಕವಿಯಪ್ಪನ್ನೆವರಮಾನು ಹಾಡುವೆನು!
ಶಿಲೆಯು ಕಲೆಯಪ್ಪನ್ನೆವರಮಾನು ಹಾಡುವೆನು!

ಕೆ. ವಿ. ಪುಟ್ಟಪ್ಪ.

ಕನ್ನಡ ಸಾಹಿತ್ಯವನ್ನು ಕುರಿತು ಕೆಲವು ಸಲಹೆಗಳು

ಮಹನೀಯರೆ :—

ಕನ್ನಡವು ನನ್ನ ಮಾತೃಭಾಷೆ; ಈಗ ಐವತ್ತಕ್ಕಿಂತಲೂ ಹೆಚ್ಚು ವರ್ಷಗಳಿಂದ ನಾನು ಆಡುತ್ತಿರುವ ಭಾಷೆ. ಆದರೆ ಅದರಲ್ಲಿ ನಾನು ಇದು ವರೆಗೆ ಯಾವ ಗ್ರಂಥವನ್ನೂ ಬರೆದಿಲ್ಲ; ಅಥವಾ ಬರೆದಿದ್ದರೆ ಅದು ಗುಟ್ಟಾಗಿದೆ; ಅದನ್ನು ಯಾರೂ ಓದಿಲ್ಲ. ಅಂತೂ ನಾನು ಗ್ರಂಥಕರ್ತರ ಗುಂಪಿಗೆ ಸೇರಿದವನಲ್ಲ; ಗ್ರಂಥ ಕರ್ತರು ಬಹಳ ಗೌರವದಿಂದ "ವಾಚಕ ಮಹಾಶಯರೇ'' ಎಂದು ಸಂಬೋಧಿಸುತ್ತಾರಲ್ಲ, ಆ ಪ್ರಬಲವಾದ ಗುಂಪಿಗೆ ಸೇರಿದವನು. ಆದರೂ ಗ್ರಂಥ ಬರೆಯುವುದರ ವಿಚಾರವಾಗಿ ಒಂದೆರಡು ಮಾತು ಹೇಳಲು ಅಪೇಕ್ಷಿಸುತ್ತೇನೆ. ಪಾಕಶಾಸ್ತ್ರ ಗೊತ್ತಿಲ್ಲದಿದ್ದರೂ ಭೋಜನದ ರೀತಿ ಬಲ್ಲವನು ಅಡಿಗೆಯ ವಿಚಾರವನ್ನು ಕುರಿತು ಹೇಳಬಹುದಲ್ಲವೇ ?

ಈಗ ಕನ್ನಡಸಾಹಿತ್ಯವು ಬೇರೆ ಬೇರೆ ರೂಪವನ್ನು ಹೊಂದುತ್ತಿದೆ. ಇದಕ್ಕೆ ಕಾರಣ ನಮ್ಮ ಜನರಲ್ಲಿ ಕಂಡು ಬರುತ್ತಿರುವ ಹೊಸ ಜೀವ; ಹಿಂದಿನ ಶರೀರದಲ್ಲಿ ನವಚೈತನ್ಯ. ಇದನ್ನು ಇಂಗ್ಲಿಷಿನಲ್ಲಿ Renaissance (ನವಜೀವನ) ಎಂದು ಕರೆಯುವರು. ಇದು ಒಂದೊಂದು ಸಾಹಿತ್ಯದಲ್ಲಿ ಒಂದೊಂದು ವೇಳೆ ಕಂಡು ಬಂದಿದೆ. ಅದಕ್ಕೆ ಕಾರಣ ಆಯಾ ಕಾಲದಲ್ಲಿ ಆಯಾ ಜನಾಂಗದಲ್ಲಿ ತೋರಿ ಬಂದ ಹೊಸ ಕಳೆ, ಹೊಸ ಶಕ್ತಿ. ಈಗ ನಮ್ಮ ದೇಶದಲ್ಲಿ ಜನಾಂಗ ಜೀವನವು ವ್ಯತ್ಯಾಸ ಹೊಂದುತ್ತಿದೆ.— ಜನರಲ್ಲಿ ನಂಬಿಕೆ, ಕರ್ತವ್ಯ ಬುದ್ಧಿ, ಆಸಕ್ತಿ, ಉತ್ಸಾಹ ಇವು ಬರುತ್ತಿವೆ; ಸಾಹಿತ್ಯವೂ ಇವುಗಳನ್ನು ಪ್ರತಿಬಿಂಬಿಸುತ್ತಿದೆ. ಸಾಹಿತ್ಯವು "ಜನಜೀವನದ ವಿಮರ್ಶೆ'' ಯೆಂದು ಹೇಳುವುದುಂಟು. ಇದು ನಿಜ ; ಆದರೆ ಇಲ್ಲಿ 'ಜೀವನ' 'ವಿಮರ್ಶೆ' ಈ ಎರಡು ಶಬ್ದಗಳಿಗೂ ಸ್ವಲ್ಪ ವಿಸ್ತಾರವಾದ, ಉದಾರವಾದ, ಅರ್ಥವನ್ನು ಕೊಡಬೇಕು. ಜನದಲ್ಲಿ ಕಂಡುಬರುವ, ಹೊಸ ಆಸಕ್ತಿ, ಲಕ್ಷ್ಯ,

ಸ್ಥಾನ ಸಂಪಾದನೆ, ಉತ್ಸಾಹ ಆಗ್ರಹ ಇವೂ, ಈ ಗುಣಗಳಿಂದ ಪ್ರೇರಿತವಾದ ಮಾತು ಕಥೆಗಳೂ ಜನಜೀವನದಲ್ಲಿ ಸೇರುತ್ತವೆ. ಸಾಹಿತ್ಯದಲ್ಲಿ ಇವುಗಳ ಪ್ರತಿಫಲನವೇ 'ವಿಮರ್ಶೆ'.

ಈಗಿನ ನಮ್ಮ ಜೀವನದಲ್ಲಿ ಪಾಶ್ಚಾತ್ಯ ಜನಜೀವನದ ಪ್ರಭಾವವು ಒಂದು ಮುಖ್ಯವಾದ ಅಂಶವಾಗಿದೆ. ಆಧುನಿಕ ಕನ್ನಡಸಾಹಿತ್ಯವು ಇದನ್ನು ಪ್ರತಿಬಿಂಬಿಸುತ್ತಿದೆ; ಎಂದರೆ, ಅದರ ನಕಲನ್ನು ಬರೆದಿಡುತ್ತಿದೆ ಯೆಂದು ಅರ್ಥವಲ್ಲ. ಆದರೂ ಅದರ ಪ್ರಭಾವವು ವ್ಯಕ್ತವಾಗುವಷ್ಟು ಸಾದೃಶ್ಯವಿದೆ. ಸಾದೃಶ್ಯವು ಸ್ವಾಭಾವಿಕವೂ ಹೌದು. ಏಕೆಂದರೆ, ಎಲ್ಲಾ ಮನುಷ್ಯ ಜೀವನದ ಮುಖ್ಯಾಂಶವೂ ಒಂದೇಯೆ; ಭೇದವಿದ್ದರೂ, ಭೇದಕ್ಕಿಂತ ಸಾದೃಶ್ಯವೇ ಹೆಚ್ಚು. ಪಾಶ್ಚಾತ್ಯ ಜನಜೀವನ ಸಾಹಿತ್ಯಗಳು ನಮ್ಮವರಲ್ಲನೇಕರಿಗೆ ಕಾವ್ಯಾವೇಶವನ್ನು ಉಂಟುಮಾಡಿದೆ. ಈಗಿನ ಕಾಲಕ್ಕೆ ಅನುಗುಣವಾಗಿ ಆ ವಿಚಾರಗಳನ್ನು ಜನಸಾಮಾನ್ಯಕ್ಕೆ ತಿಳಿಸುವುದು ಆವಶ್ಯಕ. ಇದಕ್ಕಾಗಿ ಪಾಶ್ಚಾತ್ಯ ಭಾಷೆಗಳನ್ನು ಕಲಿತ ವಿದ್ವಾಂಸರೇ ಕನ್ನಡಸಾಹಿತ್ಯದಲ್ಲಿ ಕೆಲಸ ಮಾಡುತ್ತ ಮಾರ್ಗದರ್ಶಕರಾಗಿದ್ದಾರೆ. ಸಾಮಾನ್ಯ ಜನರಿಗೆ ಪಾಶ್ಚಿಮಾತ್ಯ ನಡೆನುಡಿಗಳ ಅನುಭವವಿರುವುದಿಲ್ಲ; ಇದು ಆಗುವಂತೆ ಸನ್ನಿವೇಶವನ್ನು ಸೃಷ್ಟಿಸಬೇಕಾದರೆ ಭಾಷಾಂತರದಿಂದಲೇ ಸಾಧ್ಯ. ಭಾಷಾಂತರವು ಮೂಲಗ್ರಂಥದಷ್ಟು ಚೆನ್ನಾಗಿರುವುದಿಲ್ಲ, ನಿಜ. ಆದರೆ ಅದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ.

ಇದುವರೆಗೆ ಸಾಹಿತ್ಯವನ್ನು ಓದುವವರಿಗೆ ಒಂದು "ಅಧಿಕಾರ" ಬೇಕಾಗಿತ್ತು. ಏಕೆಂದರೆ ಗ್ರಂಥಕರ್ತರೆಲ್ಲರೂ ವಿದ್ಯಾವಂತರಿಗೋಸ್ಕರವೇ ಬರೆಯುತ್ತಿದ್ದರು. ಈಗ ಆದಷ್ಟು ಹೆಚ್ಚು ಜನಕ್ಕೆ ತಿಳಿಸಬೇಕೆಂಬುದು ಲೇಖಕರ ಲಕ್ಷ್ಯ. ಇದು ಸಿದ್ಧಿಸಬೇಕಾದರೆ, ಕೈಲಾದ ಮಟ್ಟಿಗೆ, ಎಲ್ಲರೂ ತಿಳಿಯುವ ಭಾಷೆಯಲ್ಲಿ ಬರೆಯಬೇಕು. ಗ್ರಂಥ ಬರೆಯುವವರೂ ಬೇಕು, ಓದುವವರೂ ಬೇಕು; ಬರೆಯುವವರಿಗಿಂತ ಹೆಚ್ಚಾಗಿ ಓದುವವರು ಬೇಕು. ಬರೆದ ಗ್ರಂಥವನ್ನು ಜನರು ಓದಿದರೆ, ಬರೆದದ್ದಕ್ಕೆ ಸಾರ್ಥಕ; ಬರೆದವನಿಗೆ ಸಂತೋಷ. ಲೇಖಕ ಪಾಠಕರಲ್ಲಿ ಈ ಅನ್ಯೋನ್ಯತೆ ಅಥವಾ

ಪರಸ್ಪರ ಭಾವನೆ ಎಷ್ಟು ಹೆಚ್ಚಾಗಿದ್ದರೆ ಅಷ್ಟು ಒಳ್ಳೆಯದು. ಹಿಂದೆ ಒಂದು ಕಾಲದಲ್ಲಿ ಗ್ರಂಥ ಎಷ್ಟು ಕಷ್ಟವಾಗಿದ್ದರೆ ಅಷ್ಟು ಶ್ರೇಷ್ಠವೆಂಬ ಭಾವವಿತ್ತು: ಆದ್ದರಿಂದ ಅದನ್ನು ಓದುವವರು ಬಹಳ ಕಡಮೆಯಾಗಿದ್ದರು; ಆ ಓದು ವವರಿಗೂ ಪ್ರೀತಿ ಆಸಕ್ತಿಗಳು ಕಡಮೆಯಾಗಿದ್ದುವು. ನಾನು ಬಿ. ಎ. ಪರೀಕ್ಷೆಗೆ ಕನ್ನಡವನ್ನು ತೆಗೆದುಕೊಂಡು ಓದಿ ತೇರ್ಗಡೆಯಾದವನು. ಆದರೆ ನನಗೆ ಕನ್ನಡ ಸಂಸ್ಕೃತ ಸಾಹಿತ್ಯಗಳ ಪರಿಚಯ ಚೆನ್ನಾಗಿಲ್ಲ. ಈ ಸಂದರ್ಭದಲ್ಲಿ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ. ನಮಗೆ ಕೈ. ಗರಣಿ ಕೃಷ್ಣಾಚಾರ್ಯರು ಕನ್ನಡದ ಉಪಾಧ್ಯಾಯರಾಗಿದ್ದರು. ಅವರು "ನಿನಗೆ ಪ್ಯಾಸು ಆಯಿತೇನಯ್ಯ?" ಎಂದು ಕೇಳಿದರು. ನಾನು ರೂಢಿಯಂತೆ "ತಮ್ಮ ಆಶೀರ್ವಾದದಿಂದ ಆಯಿತು ಪಂಡಿತರೆ!" ಎಂದು ಉತ್ತರ ಕೊಟ್ಟೆ. ನನ್ನ ಪಾಂಡಿತ್ಯ ಗೊತ್ತಿದ್ದ ಅವರು, "ನನ್ನ ಆಶೀರ್ವಾದಿಂದ ಲೇ ಆಗಿರಬೇಕೆಂದು ತೋರುತ್ತದೆ!" ಎಂದರು. ನನಗೂ ಅದು ನಿಜ ವೆಂದು ತೋರಿತು. ಕೆಲವು ಕಾವ್ಯಗಳನ್ನು ನೋಡಿದರೆ, ಅವು ಸುಲಭ ವಾಗಿ ಅರ್ಥವಾಗಬಾರದೆಂದೇ ಬರೆದಿರುವ ಹಾಗೆ ತೋರುತ್ತದೆ. ಎಲ್ಲೋ ಐದಾರು ಜನಕ್ಕೆ ಮಾತ್ರ ಅರ್ಥವಾಗಿ ಬಿಟ್ಟರೆ ಅದು ಒಳ್ಳೆಯ ಕಾವ್ಯ, ಅದನ್ನು ಬರೆದವನು ಒಳ್ಳೆಯ ಕವಿ, ಎಂದು ಕೊಂಡಿದ್ದರೋ ಏನೊ! ಬ್ರೌನಿಂಗ್ ಕವಿಯು ಸಾರ್ಡೆಲೋ ಎಂಬ ಒಂದು ಕವಿತೆಯನ್ನು ಬರೆದಿ ದ್ದಾನೆ. ಅದರಲ್ಲಿ ಒಂದು ಪಂಕ್ತಿಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ: ಅದು ಹೀಗೆ ಹಾಗೆ ಎಂದು ಕೆಲವರು ಚರ್ಚೆ ಮಾಡಿಕೊಂಡು ತೀರ್ಮಾನ ವಾಗದೆ ಕವಿಯ ಹತ್ತಿರಕ್ಕೇ ಹೋಗಿ ಆತನ ಅರ್ಥವೇನೆಂದು ಕೇಳಿದರಂತೆ. ಆತನು ಅದನ್ನು ಹಿಂದಕ್ಕೆ ಮುಂದಕ್ಕೆ ಓದಿನೋಡಿ, ಬಹಳ ಹೊತ್ತು ಯೋಚಿಸಿ, ಕೊನೆಗೆ "ಈ ಪಂಕ್ತಿಯನ್ನು ಬರೆದಾಗ ದೇವರಿಗೆ ನನಗೆ ಇಬ್ಬರಿಗೇ ಇದರ ಅರ್ಥ ಗೊತ್ತಿದ್ದದ್ದು; ಈಗ ನನಗೆ ಮರೆತು ಹೋಗಿದೆ; ಆದ್ದರಿಂದ ದೇವರಿಗೇ ಗೊತ್ತು!" ಎಂದು ಉತ್ತರ ಕೊಟ್ಟನಂತೆ! ಶಕ್ತಿ ಯಿದ್ದರೆ ಹಾಗೆ ಬರೆಯಬಹುದು; ಆದರೆ ಸಾಹಿತ್ಯಕ್ಕೆ ಉಪಯೋಗವಿರ ಬೇಕೆನ್ನುವುದಾದರೆ ಅದು ಹತ್ತು ಜನಕ್ಕೆ ತಿಳಿಯುವಂತಿರಬೇಕು. ಈ ಅಭಿಪ್ರಾಯವು ತಪ್ಪೆಂದು ಕೆಲವರ ಮತವಿರಬಹುದು; ಆದರೆ ನ್ಯಾಯ

ವೆಂದು ನನಗೂ, ಪಂಡಿತರಲ್ಲದ ಇತರ ಕನ್ನಡಿಗರಿಗೂ ತೋರುತ್ತದೆ. ಇಲ್ಲದಿದ್ದರೆ ಗ್ರಂಥದ ತಿಳಿವಳಿಕೆ ಕೊನೆಗೆ ಬರೆದವರು ಅಚ್ಚುಹಾಕಿದವರು ಇಬ್ಬರಲ್ಲಿಯೇ ಉಳಿದೀತು! ಸಾಹಿತ್ಯವು ಜೀವನ ವಿಮರ್ಶೆಯೆಂದು ಹೇಳಿದೆ. ಎಲ್ಲೋ ಕೆಲವು ಆಕಸ್ಮಿಕವಾದ ಅಂಶಗಳನ್ನು ಬಿಟ್ಟರೆ ಜೀವನದ ಸಂಗತಿಗಳೆಲ್ಲಾ—ಭಕ್ತಿ ಪ್ರೀತಿ, ಸುಖ ಕಷ್ಟ, ದುಃಖ ಸಂತೋಷ, ಇವೆಲ್ಲವೂ—ಐಶ್ವರ್ಯವಂತರಿಗೂ ಬಡವರಿಗೂ ಸಾಮಾನ್ಯವಾದವು. ಇವೇ ಸಾಹಿತ್ಯದಲ್ಲಿಯೂ ಮುಖ್ಯವಾದ ಅಂಶಗಳು. ಜನರನ್ನು ಬೆರಗು ಮಾಡುವುದಕ್ಕೆ ಬೇಕಾದರೆ ದೊಡ್ಡ ಕಟ್ಟಡವನ್ನು ಕಟ್ಟಬಹುದು. ಆದರೆ ನೆಮ್ಮದಿಯಾಗಿ ಸಂಸಾರ ಮಾಡಿಕೊಂಡಿರುವುದಕ್ಕೆ ಸಣ್ಣ ಮನೆಯೇ ಸಾಕು. ನನ್ನ ಮನಸ್ಸು ಮುಟ್ಟಿದ್ದನ್ನು ನಿಮ್ಮ ಮನಸ್ಸು ಮುಟ್ಟುವಂತೆ ಬರೆಯುವುದು ಸುಲಭ. ಈ ಸೌಲಭ್ಯವೇ ಮುಂದೆ ಬರುವ ಸಾಹಿತ್ಯಕ್ಕೆ ಲಕ್ಷ್ಯವಾಗಿರಬೇಕು. ಎಂದರೆ, ಆಡುವ ಮಾತಿನಲ್ಲೇ ಬರೆಯಬೇಕೆಂಬುದು ನನ್ನ ಭಾವವಲ್ಲ. ಯಾವ ಸಾಹಿತ್ಯವನ್ನು ನೋಡಿದರೂ, ಬರೆಯುವ ಮಾತಿಗೂ ಆಡುವ ಮಾತಿಗೂ ಅಲ್ಪಸ್ವಲ್ಪ ವ್ಯತ್ಯಾಸವಿದ್ದೇ ಇರುತ್ತದೆ. ಆದರೆ "ಅಂಭಃ ಕುಂಭೀನ........'' ಎಂದು ಯಾರು ಮಾತನಾಡಿಯಾರು, ಯಾರು ಬರೆದಾರು?

ಈ ನವಜೀವನ ಕಾಲದಲ್ಲಿ ನಮ್ಮ ದೇಶಕ್ಕೆ ಹಿಂದೆ ಇಲ್ಲದೆ ಇದ್ದ ಎಷ್ಟೋ ಹೊಸ ಸಂಗತಿಗಳು ಬಂದಿವೆ— ಸ್ತ್ರೀವಿದ್ಯಾಭ್ಯಾಸ, ರಾಜಕೀಯ ಸ್ವಾತಂತ್ರ್ಯ, ಹಕ್ಕು ಬಾಧ್ಯತೆಗಳು, ಹೊಸ ಉದ್ಯೋಗಗಳು, ಯಜಮಾನ ಕೆಲಸಗಾರರ ಸಮಸ್ಯೆ, ಇತ್ಯಾದಿ. ಇದರಂತೆ ಈಗ ಪ್ರತಿಯೊಬ್ಬರಿಗೂ ಎಲ್ಲಾ ವಿಷಯಗಳಲ್ಲಿಯೂ ಅಧಿಕಾರವಿದೆ ಯೆಂಬ ಭಾವನೆ ಬಂದಿದೆ. ಅಧಿಕಾರವೂ ಇದೆ. ಆದ್ದರಿಂದ ಭಾಷೆಯೂ ಕೈಲಾದಷ್ಟು ಮಟ್ಟಿಗೆ ಎಲ್ಲರೂ ತಿಳಿಯುವಂತಾಗಬೇಕು. ಎಲ್ಲರೂ ಸೇರಿದರೆ ಒಂದು ಜನಾಂಗ. ಜನಾಂಗಕ್ಕೆ ಹೊಂದುವಂತೆ ನಮ್ಮ ಭಾಷೆಯನ್ನು ತಿಳಿಮಾಡಿ ಶೋಧಿಸಬೇಕು. ಈಗ ಅದು ರಾಡಿಯಾಗಿದೆ; ಕೆಸರನ್ನು ನೀರೆಂದು ಕರೆದರೆ ಹೇಗೋ ಹಾಗೆ ಅರ್ಥವಾಗದಿರುವ ಕನ್ನಡವನ್ನು ಕನ್ನಡವೆಂದೇ ಕರೆಯುತ್ತಿದ್ದೇವೆ. ಇದನ್ನು ಶೋಧಿಸಿ ಬಲಪಡಿಸಿ ಕೊಳ್ಳಬೇಕು. ಭಾಷೆ ಜೀವವಿರತಕ್ಕದ್ದು; ಅದು ತನ್ನ ಸುತ್ತಿನ ಸನ್ನಿವೇಶವನ್ನು ಅವಲಂಬಿಸಿ ಬೆಳೆಯುತ್ತ ಹೋಗ

ಬೇಕು. ಸನ್ನಿವೇಶಕ್ಕೆ ಹೊಂದಿಕೊಳ್ಳದೆ ಬಿಟ್ಟರೆ, ಸನ್ನಿವೇಶ ಹೋಗುವುದಿಲ್ಲ, ಜೀವ ಹೋಗುತ್ತದೆ. ಈಗ ಪ್ರಪಂಚವೆಲ್ಲಾ ಒಂದು ಸಂಸಾರವಾಗಿದೆ. ಅಲ್ಲಿ ನಡೆಯುತ್ತಿರುವುದರಲ್ಲೆಲ್ಲಾ ನಾವು ಭಾಗಿಗಳಾಗಿದ್ದೇವೆ. ಅದರ ತತ್ವ ಶಾಸ್ತ್ರ ವಿಜ್ಞಾನ ಸಂಪತ್ತು ಇವೆಲ್ಲವುಗಳಲ್ಲಿಯೂ ನಮಗೆ ಭಾಗವುಂಟು, ಅಧಿಕಾರವುಂಟು. ಇವುಗಳನ್ನು ನಮ್ಮ ಸಾಹಿತ್ಯದಲ್ಲಿ ಸೇರಿಸಿ ಅದನ್ನು ಬಲಪಡಿಸಿಕೊಳ್ಳಬೇಕು. ಇದು ಸುಲಭವೇನಲ್ಲ. ಉದಾಹರಣೆಗಾಗಿ, ವಿಜ್ಞಾನ ವಿಚಾರವನ್ನು ಬರೆಯುತ್ತಿರುವಾಗ ಅದಕ್ಕೆ ಬೇಕಾದ ಮಾತುಗಳನ್ನು ಒದಗಿಸುವುದು ಕಷ್ಟ. ಅವುಗಳನ್ನು ಹೇಗೆ ಒದಗಿಸಿಕೊಳ್ಳಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಪಾರಿಭಾಷಿಕ ಶಬ್ದಗಳನ್ನು ಕನ್ನಡಿಸಿಕೊಳ್ಳುವುದಕ್ಕಿಂತ ಹಾಗೇ ಉಪಯೋಗಿಸಿ ಕೊಳ್ಳುವುದು ಉತ್ತಮವೆಂದು ನನ್ನ ಅಭಿಪ್ರಾಯ. ಏಕೆಂದರೆ ಅವುಗಳಿಗೆ ಬಹು ದಿವಸದ ಪ್ರಯೋಗದಿಂದ ಕೆಲವು ತೂಕ ಬಣ್ಣ ಬೆಲೆಗಳು ನಿಖರವಾಗಿ ಬಂದಿರುತ್ತವೆ. ಆಕ್ಸಿಜೆನ್ ಎಂಬ ಕಡೆ 'ಆಮ್ಲಜನಕ' ಎಂದರೆ ಆ ವಸ್ತುವಿನ ಛಾಯೆಯೆಲ್ಲವೂ ಬರುವುದಿಲ್ಲ. ಆಯಾ ಮಾತುಗಳನ್ನು ಹಾಗೆ ಹಾಗೇ ತೆಗೆದುಕೊಳ್ಳುವುದಕ್ಕೆ ನಾವು ಏಕೆ ಹಿಂಜರಿಯಬೇಕು? ವಿಜ್ಞಾನವು ಯಾವ ದೇಶದ್ದೂ ಅಲ್ಲ. ಇನ್ನೂ, ಭೂಲೋಕದ ಎಲ್ಲೆಯನ್ನೇ ಮೀರಿ ಇತರ ಲೋಕಗಳನ್ನೆಲ್ಲಾ ವ್ಯಾಪಿಸತಕ್ಕದ್ದು. ಅದನ್ನು ಉಪಯೋಗಿಸಿಕೊಳ್ಳುವುದು ನಮ್ಮ ಹಕ್ಕು. ಹಕ್ಕುದಾರಿಯನ್ನು ಕಳೆದುಕೊಳ್ಳಬಾರದು.

ಹೀಗೆ, ಭಾಷಾಂತರಗಳು ಬರಬೇಕು; ಅದರಲ್ಲಿಯೂ ವಿಜ್ಞಾನದಲ್ಲಿ ಹೆಚ್ಚಾಗಿ ಬರಬೇಕು. ಇದು ಕಷ್ಟ. ಇದರಿಂದ ಮೂಲವನ್ನು ಬರೆದವನಿಗೆ ಬರುವ ಕೀರ್ತಿ ಬರುವುದಿಲ್ಲ; ಆದರೂ ಇದು ನಿಜವಾದ ಸೇವೆ. ಈ ಸಂದರ್ಭದಲ್ಲಿ ಸ್ಕಾಟ್ ಕವಿಯು ೧೬ನೆಯ ಶತಮಾನದಲ್ಲಿ ವರ್ಜಿಲ್ ಮಹಾಕವಿಯ ಗ್ರಂಥವನ್ನು ಭಾಷಾಂತರಮಾಡಿದ ಗೆವೇನ್ ಡಗ್ಲಾಸ್ ಎಂಬ ಮಹನೀಯನ ವಿಚಾರದಲ್ಲಿ ಹೇಳಿರುವುದು ನನ್ನ ನೆನಪಿಗೆ ಬರುತ್ತದೆ.—

More proud that in a barbarous age
He gave poor Scotland Virgil's page
Than that beneath his sway he held
The bishopric of fair Dunkeld.

ನಾವೆಲ್ಲರೂ ಆ ಭಾವದಲ್ಲಿ ಕೆಲಸಮಾಡಬೇಕು. ಹಾಗೆ, ಕೀರ್ತಿಯನ್ನು ಗಮನಿಸದೆ ಭಾಷಾಂತರ ಕೆಲಸವನ್ನು ಕೈಕೊಂಡರೆ ಅದು ದೊಡ್ಡ ಸೇವೆ.

ಪಾಶ್ಚಾತ್ಯ ಸಾಹಿತ್ಯಗಳನ್ನು ನೋಡಿದರೆ, ಅವುಗಳಲ್ಲಿ ಇತಿಹಾಸ ಜೀವನ ಚರಿತ್ರೆಗಳು ವಿಶೇಷವಾಗಿ ಕಂಡುಬರುತ್ತವೆ. ಅಲ್ಲಿ ದೇಶಸೇವೆ ಮಾಡಿದವನು ಮಹಾಪುರುಷನೆಂದು ಬಗೆದು ಮುಂದೆ ಬರುವವರಿಗೆ ಮೇಲ್ಪಂಕ್ತಿಯಾಗಿರುವಂತೆ ಹಿಂದಿದ್ದವರ ಯೋಗ್ಯತೆ ಪೂಜ್ಯತೆಗಳನ್ನು ವ್ಯಕ್ತಪಡಿಸುತ್ತಾರೆ. ಇದು ನಮ್ಮಲ್ಲಿಲ್ಲ— ಕೊನೆಗೆ ಐತಿಹಾಸಿಕ ಕಾದಂಬರಿಗಳೂ ಕಡಮೆ. ಇತಿಹಾಸವನ್ನು ಬರೆಯುವುದಕ್ಕೆ ಹೊರಟರೆ ನಮ್ಮವರು ಹೊಗಳುಭಟ್ಟರಾಗುತ್ತಾರೆ, ಇಲ್ಲವೇ ಬಯ್ಯುವುದಕ್ಕೆ ಮೊದಲು ಮಾಡುತ್ತಾರೆ. ಯಾವುದು ನಿಜವೋ ಯಾವುದು ಸುಳ್ಳೋ ಒಂದೂ ಗೊತ್ತಾಗುವುದಿಲ್ಲ— ಅರೇಬಿಯನ್ ನೈಟ್ಸ್ ಕಥೆಯಂತಿರುತ್ತದೆ. ನಮ್ಮ ಪುರಾಣಗಳಲ್ಲಿರುವಂತೆಯೇ ಪಾಶ್ಚಾತ್ಯರಲ್ಲಿಯೂ 'ವಾಲ್ಹಾಲಾ' ಅಥವಾ ವೀರಸ್ವರ್ಗವೆಂಬುದಿದೆ. ಆದರೆ ಅವರದು ನಿಜವಾದ ವೀರಸ್ವರ್ಗ, ಭೂಮಿಯ ಮೇಲಿರುವ ವೀರಸ್ವರ್ಗ. ಲಂಡನ್ನಲ್ಲಿ ಹೋಗಿ ನೋಡಿದರೆ ಅದನ್ನು ಕಾಣಬಹುದು ; ಅದೇ "ವೆಸ್ಟ್‌ಮಿನಿಸ್ಟರ್ ಆಬಿ" ಎಂಬ ಅರಮನೆ. ಅಲ್ಲಿ ಕವಿಶ್ರೇಷ್ಠರು ದೇಶವತ್ಸಲರು ಮುಂತಾದವರ ಪ್ರತಿಮೆಗಳೂ ಜ್ಞಾಪಕಾರ್ಥವಾದ ಶಾಸನ ವಸ್ತುಗಳೂ ಸಾಲುಸಾಲಾಗಿ ಇರಿಸಲ್ಪಟ್ಟಿವೆ. ಅವುಗಳ ಕೆಳಗೆ ಅವರವರ ಶ್ಲಾಘನೆ ಇದೆ. "ನ್ಯಾಷನಲ್ ಗ್ಯಾಲರಿ" ಎಂಬ ಚಿತ್ರಶಾಲೆಗೆ ಹೋದರೆ ಅಲ್ಲಿ ಅಂಥ ಮಹಾಪುರುಷರ ದೊಡ್ಡ ದೊಡ್ಡ ಚಿತ್ರಗಳಿರುತ್ತವೆ. ಯಾವ ರಸ್ತೆಯನ್ನು ನೋಡಲಿ, ಚೌಕವನ್ನು ನೋಡಲಿ ಅಲ್ಲಿ ಜಯಸ್ತಂಭ, ಮಹಾಪುರುಷರ ಪ್ರತಿಮೆ! ಇದೇ ನಿಜವಾದ 'ವಾಲ್ಹಾಲಾ' ವೀರಸ್ವರ್ಗ. ಈಗ ಕೆಲವು ವರ್ಷಗಳ ಕೆಳಗೆ ಡಾಕ್ಟರ್ ಫ್ರಿಗಲ್ ಜೇಮ್ಸ್ ಎಂಬಾತನೊಬ್ಬನು ನಮ್ಮ ದೇಶದ ಐತಿಹಾಸಕ ಸ್ಥಳಗಳನ್ನೆಲ್ಲಾ ನೋಡಿಕೊಂಡು ಹೋದನು. ನಾನು ಆತನಿಗೆ ಶ್ರೀರಂಗಪಟ್ಟಣದ ಗುಂಬಸ್ ದರಿಯಾದವಲತ್ ಮುಂತಾದ ಕಟ್ಟಡಗಳನ್ನೂ ಅದೇ ಊರಲ್ಲಿರುವ ಇಂಗ್ಲಿಷಿನವರ ಜಯಸ್ತಂಭ ಗೋರಿಗಳನ್ನೂ ತೋರಿಸಿದೆನು. ಅವುಗಳನ್ನೆಲ್ಲಾ ನೋಡಿ, ಆತನು "ಈ ಪರದೇಶೀಯರ

ಜಯಸ್ತಂಭಗಳನ್ನೂ ಗೋರಿಗಳನ್ನೂ ತೋರಿಸುತ್ತೀರಲ್ಲ, ನಿಮ್ಮವರು ಆ ಯುದ್ಧದಲ್ಲಿ ಯಾರೂ ಸಾಯಲೇ ಇಲ್ಲವೇ?" ಎಂದು ಕೇಳಿದನು. ಆತನು ಆ ಮಾತನ್ನು ಹಾಸ್ಯಕ್ಕೆ ಅಂದಿರಬಹುದು; ಆದರೆ ಅದು ನನಗೆ ಚೂರಿಯಿಂದ ತಿವಿದಹಾಗಾಯಿತು. ನಾವು ನಮ್ಮವರಿಗೆ ಸರಿಯಾದ ಸ್ಥಾನವನ್ನು ಕೊಡುತ್ತಿಲ್ಲ. ನಮಗೆ ವಾಲ್ಹಾಲವೂ ಇಲ್ಲ ವೀರಸ್ವರ್ಗವೂ ಇಲ್ಲ. ನಮ್ಮಲ್ಲಿ ಮಡಿದ ಶೂರರಿಗೆ ನಮ್ಮ ಶೋಕವನ್ನೇ ಆಗಲಿ, ನಮ್ಮ ಕೃತಜ್ಞತೆಯನ್ನೇ ಆಗಲಿ ನಾವು ಅರ್ಪಿಸುತ್ತಿಲ್ಲ. ನಮ್ಮಲ್ಲಿ ಶೂರರೇ ಇಲ್ಲವೇ? ಹಾಗಿದ್ದರೆ, ನಮ್ಮ 'ತಾಬೆ'ಯ ಇತಿಹಾಸವೇನೆಂದೇ ಬರೆಯೋಣ. ಇತಿಹಾಸಕ್ಕೆ ನಾಯಕನು ಗೆದ್ದವನೇ ಆಗಬೇಕಾಗಿಲ್ಲ. ಸೋತವನೂ ಸತ್ತವನೂ ಆಗಬಹುದು; ಅವನು ಗೆದ್ದವನಿಗಿಂತ ದೊಡ್ಡವನು. ಪ್ರಾಣದಮೇಲೆ ಆಶೆಯಿಲ್ಲದೆ, ತನ್ನ ದೇಶದಸೇವೆಗಾಗಿ, ಅಥವಾ ಧರ್ಮ ಪರಿಪಾಲನೆಗಾಗಿ ನುಗ್ಗಿ ಸಾಯುವವನು ಶೂರನೇ ಹೌದು. ಆದಿಯಿಂದ ಇಂದಿನವರೆಗೆ ನಮ್ಮ ದೇಶದಲ್ಲಿಯೂ ಧೈರ್ಯಶೌರ್ಯಗಳು ಕಂಡುಬರುತ್ತವೆ. ಇಂದಿನವರ ಮತ್ತು ಮುಂದಿನವರ ಉಪಯೋಗಕ್ಕಾಗಿ ಇವುಗಳನ್ನು ತೆಗೆದು ಪ್ರದರ್ಶಿಸಬೇಕು.

ನಮ್ಮ ಸಾಹಿತ್ಯವು ನಮ್ಮ ಜನದ ಜೀವನವನ್ನು ಸರಿಯಾಗಿ ಮುಟ್ಟಿಲ್ಲ. ರಾಜ ಹೊಡೆದರೇ ಷಿಕಾರಿ, ಗೌಡ ಒಂದು ದೊಣ್ಣೆ ತೆಗೆದುಕೊಂಡು ಹೊಡೆದು ಕೊಂದರೆ ಅದು ಬೇಟೆಯಲ್ಲ, ಎಂಬಂತಾಗಿದೆ. ಮಹಾರಾಣಿಯು ಬೆಳದಿಂಗಳಲ್ಲಿ "ಆರ್ಯಪುತ್ರನೆ!" ಎಂದು ಕರೆದರೆ ಕಾವ್ಯ, ಗೌಡನ ಹೆಂಡತಿ ತನ್ನಗಂಡ ಬರಲಿಲ್ಲವೆಂದು ಹಂಬಲಿಸಿದರೆ ಕಾವ್ಯವಲ್ಲ ಎಂಬಂತಾಗಿದೆ. ಇನ್ನು ಮುಂದೆ ಸಾಹಿತ್ಯಕ್ಕೂ ಸಾಮಾನ್ಯ ಜನಜೀವನಕ್ಕೂ ಹೆಚ್ಚು ಹೊಂದಿಕೆ ಬರಬೇಕು. ಸಾಮಾನ್ಯರು ತ್ಯಾಜ್ಯರಲ್ಲ, ಅವರ ಮಾತು ಒಡ್ಡ ಒಡ್ಡ ಭಾಷೆಯಲ್ಲ, ಅವರೂ ಮನುಷ್ಯರು ಅವರ ಮಾತೂ ಕನ್ನಡ ಎಂಬ ಭಾವನೆಯುಂಟಾದರೆ, ಸಾಹಿತ್ಯವು ದೊಡ್ಡ ದೊಡ್ಡ ಅಧಿಕಾರಿಗಳ ಚರಿತ್ರೆಯನ್ನೇ ಬರೆದಿಡುವ ಸರ್ಕಾರದ 'ಸಿವಿಲ್ ಲಿಸ್ಟ್' ನಂತಾಗದೆ, ಅದರ ವ್ಯಾಪನೆಯು ವಿಸ್ತಾರವಾಗುತ್ತದೆ. ನಮ್ಮ ಹಳಗನ್ನಡ ಸಾಹಿತ್ಯದಲ್ಲಿ ಕಂಡುಬರುವ ಮತ್ತೊಂದು ಸಂಗತಿಯೆಂದರೆ,

ಹಾಸ್ಯದ ಅಭಾವ. ಹಿಂದಣ ಸಾಹಿತ್ಯದ ಹಾಸ್ಯವೆಲ್ಲಾ, ಮುಖ್ಯವಾಗಿ, ನಾಟಕದಲ್ಲಿ ವಿದೂಷಕನು ದೊಡ್ಡ ಹೊಟ್ಟೆ ಕಟ್ಟಿಕೊಂಡು ಬಂದು ರಾಜನ ಹತ್ತಿರ ಹುಚ್ಚುಹುಚ್ಚಾಗಿ ಆಡುವುದು ಮಾತ್ರ. ವಿದೂಷಕನು ಬುದ್ಧಿ ವಂತ; ಇಲ್ಲದಿದ್ದರೆ ರಾಜನು ಹತ್ತಿರ ಸೇರಿಸುತ್ತಿದ್ದನೆ? ಹೊಟ್ಟೆಯ ಪಾಡು ಕಷ್ಟ ಎಂದು ತೋರಿಸಲು ಅದನ್ನು ನಮ್ಮವರು ದೊಡ್ಡದಾಗಿ ಮಾಡಿ ತೋರಿಸಿದ್ದಾರೆ, ಅಷ್ಟೇಯೆ; ಆದಿರಲಿ. ಇದನ್ನು ಬಿಟ್ಟರೆ ಜೇರೆ ವಿಧವಾದ ಹಾಸ್ಯವಿಲ್ಲ. ಆದರೆ ಈಗಿನ ಕಾಲದಲ್ಲಿ ಹಾಸ್ಯವು ಬಗೆಬಗೆಯಾಗಿದೆ, ಬಲು ನಾಜೂಕಾಗಿದೆ. ಇದನ್ನು ಅಭಿವೃದ್ಧಿಪಡಿಸಿ ಸಾಹಿತ್ಯದಲ್ಲಿ ಸೇರಿ ಸುತ್ತ ಹೋಗುವುದರಿಂದಲೂ ಜನಜೀವನಕ್ಕೂ ಸಾಹಿತ್ಯಕ್ಕೂ ಹೆಚ್ಚು ಹೊಂದಿಕೆಯಾಗುವುದು.

ಪಾಶ್ಚಾತ್ಯ ಸಾಹಿತ್ಯದಿಂದ ನಾವು ತೆಗೆದುಕೊಳ್ಳಬೇಕಾದ ಸಂಗತಿ ಗಳು ಅನೇಕವಾಗಿವೆ. ಅವುಗಳನ್ನು ತೆಗೆದುಕೊಳ್ಳಲು ನಮಗೆ ಹಕ್ಕು ಉಂಟು; ಅವುಗಳಿಂದ ನಿಜವಾದ ಪ್ರಯೋಜನವೂ ಉಂಟು; ಈಗಾಗಲೇ ಆಗಿದೆ, ಮುಂದಕ್ಕೆ ಆಗುತ್ತದೆ. ಈ ಕೆಲಸದಲ್ಲಿ ಮ॥ ಬಿ.ಎಂ. ಶ್ರೀಕಂಠಯ್ಯ ನವರು ದಾರಿ ತೋರಿಸಿದ್ದಾರೆ; ಹೊಸ ಹೊಸ ಯೋಚನೆಗಳು ಭಾವ ಗಳು ಛಂದಸ್ಸುಗಳು ಇವುಗಳನ್ನು ಬಳಕೆಗೆ ತಂದಿದ್ದಾರೆ ; ಇವರಿಂದ ಮೊದಲಾದ ಕೆಲಸವನ್ನು ಅವರ ಶಿಷ್ಯರು ಮುಂದುವರಿಸುತ್ತಿದ್ದಾರೆ. ಮ॥ ಪುಟ್ಟಪ್ಪನಂಥವರನ್ನು ಯಾವ ಇಂಗ್ಲಿಷ್ ಕವಿಗೆ ಹೋಲಿಸಿದರೂ ತಪ್ಪಾಗುವಂತಿಲ್ಲ. ಸಣ್ಣ ಕಥೆಗಳಲ್ಲಿ ಮ॥ ಎಂ. ವೆಂಕಟೇಶಯ್ಯಂಗಾರ್‍ಯರು ಹೆಸರು ಪಡೆದಿದ್ದಾರೆ. ಅವರ ಕಥೆಗಳಲ್ಲಿ ಹಾಸ್ಯಶೋಕಾದಿಗಳು ಬಹಳ ನಯವಾಗಿ ಬಂದಿವೆ; ಅವರ ಕಾವ್ಯಗಳಲ್ಲಿ ಸತ್ಯವಿದೆ. ಉತ್ಪ್ರೇಕ್ಷೆ ಅತಿ ಶಯೋಕ್ತಿಗಳಲ್ಲಿ ಯಾವಾಗಲೂ ಶಕ್ತಿ ಕಡಮೆ. ನಾವು ನೋಡಿ ಅನುಭವಿ ಸಿದ ಸಂಗತಿಗಳನ್ನು ಸ್ಪಷ್ಟವಾಗಿ ವಿವರಿಸಬಹುದು; ಅಂಥವೇ ಸುಲಭವಾಗಿ ಮನಸ್ಸಿನಿಂದ ಮನಸ್ಸಿಗೆ ಹರಿಯುತ್ತದೆ. ಈ ಸ್ವಭಾವೋಕ್ತಿಯು ಹೊಸ ಸಾಹಿತ್ಯದ ಮುಖ್ಯಗುಣ ; ಅದನ್ನು ಅಭಿವೃದ್ಧಿಗೆ ತರುವ ಗುಣ.

ಆಧುನಿಕ ಸಾಹಿತ್ಯವನ್ನು ಕುರಿತು ಮಾತನಾಡುತ್ತಿರುವಾಗ ವರ್ತ ಮಾನ ಪತ್ರಿಕೆಗಳ ಬರೆವಣಿಗೆಯನ್ನು ಕುರಿತು ಒಂದೆರಡು ಮಾತು ಹೇಳ

ವುದು ಆವಶ್ಯಕ. ವರ್ತಮಾನ ಪತ್ರಿಕೆಗಳ ಬರೆವಣಿಗೆ ಸಾಮಾನ್ಯವಾಗಿ ಸಾಹಿತ್ಯವೆನ್ನಿಸಿಕೊಳ್ಳುವುದಿಲ್ಲ. ಅದರ ವಿಷಯಗಳಲ್ಲಿ ಅನಿತ್ಯವಾದ, ತಾತ್ಕಾಲಿಕವಾದ, ಅಂಶವೇ ಹೆಚ್ಚಾಗಿರುತ್ತದೆ. ಜನರ ಕಣ್ಣಿಗೆ ಕಾಣಲಿ ಎಂದು ಹೇಳುವುದನ್ನು ಅತ್ಯುಕ್ತಿಯಿಂದ ಹೇಳುತ್ತಾರೆ; ಇರುವುದನ್ನು ದೊಡ್ಡದು ಮಾಡುತ್ತಾರೆ, ಅದಕ್ಕೆ ಹೆಚ್ಚು ಬಣ್ಣ ಕಟ್ಟುತ್ತಾರೆ. ವಿಷಯ ಅನಿತ್ಯವಾದರೂ, ಪತ್ರಿಕಾ ಸಾಹಿತ್ಯವು ಉತ್ತಮ ಸಾಹಿತ್ಯವಾಗಬಹುದು. ಇದಕ್ಕೆ ಅದರ ಭಾಷಾ ಶೈಲಿಗಳು ತಿಳಿಯಾಗಿರಬೇಕು ; ಸಾಹಿತ್ಯದ ಗಾಂಭೀರ್ಯ ಬರಬೇಕು. ಹೀಗಾದರೆ ಸಾಹಿತ್ಯದ ಬೆಳೆವಣಿಗೆ ಈ ಮುಖ ವಾಗಿಯೂ ಆಗುತ್ತದೆ. ಪತ್ರಿಕಾಸಾಹಿತ್ಯವೂ ಸಾಹಿತ್ಯದ ಒಂದು ಶಾಖೆ; ಅದನ್ನು ಬೆಳೆಸುವುದೂ ಸಾಹಿತಿಗಳ ಒಂದು ಉದ್ದೇಶವಾಗಿರಬೇಕು.

ಈಗಿನ ಕಾಲದಲ್ಲಿ ಜನರು ತಮ್ಮ ಹಕ್ಕುಬಾಧ್ಯತೆಗಳನ್ನು ಅರಿಯುತ್ತಿದ್ದಾರೆ ; ಪ್ರಭುತ್ವದಲ್ಲಿ ಹೆಚ್ಚು ಹೆಚ್ಚು ಭಾಗಿಗಳಾಗುತ್ತಿದ್ದಾರೆ. ಕ್ರಮೇಣ ರಾಜ್ಯವಾಳತಕ್ಕ ಅಧಿಕಾರವೂ ಬರಬಹುದು. ಪ್ರಪಂಚದ ಆಡಳಿತವೇ ಹಾಗೆ ಹೋಗುತ್ತಿದೆ. ನಾವು ಅದನ್ನು ಬಿಟ್ಟಿರಲು ಆಗುವುದಿಲ್ಲ. ಆಗ ಜನರಿಗೆ ವಿಷಯವನ್ನು ತಿಳಿಸುವುದಕ್ಕೂ ವಿವೇಕ ಹೇಳುವುದಕ್ಕೂ ವಾಕ್ಚಾತುರ್ಯವುಳ್ಳ ಜನರು ಬೇಕಾಗುತ್ತಾರೆ. ಈಗಲೇ, ಚೆನ್ನಾಗಿ ಮಾತನಾಡುವವರಿದ್ದರೆ ಅವರ ಮಾತನ್ನು ಜನರು ಆದರವಿಟ್ಟು ಕೇಳುತ್ತಾರೆ; ಯುಕ್ತವಾಗಿದ್ದರೆ ಅದರಂತೆ ನಡೆಯುತ್ತಾರೆ. ಮುಂದೆ ಹತ್ತು ಜನ ಆಳುವಂತಾದಾಗ ಮಾತುಗಾರಿಕೆಗೆ ಇನ್ನೂ ಪ್ರಾಶಸ್ತ್ಯ ಬಂದೇ ಬರುತ್ತದೆ. ಇದರಿಂದ ಸಾಹಿತ್ಯಕ್ಕೂ ಪ್ರಯೋಜನವುಂಟು. ಮಿಕ್ಕ ದೇಶಗಳಲ್ಲಿ ವಾಗ್ಮಿಗಳ ಉಪನ್ಯಾಸಗಳು ಸಾಹಿತ್ಯವಾಗಿವೆ. ಅವು ಆಯಾ ಕಾಲದ ಜನಜೀವನವನ್ನು ವಿಮರ್ಶಿಸಿ ಪ್ರತಿಬಿಂಬಿಸುತ್ತಿವೆ. ಆದ್ದರಿಂದ ನಮ್ಮ ದೇಶಭಾಷೆ ಸಾಹಿತ್ಯಗಳಲ್ಲಿ ಆದರವಿರತಕ್ಕವರು ಮಾತನಾಡುವ ಕಲೆಗೂ ಪ್ರಾಶಸ್ತ್ಯ ಕೊಟ್ಟು ಅದನ್ನು ಈಗಿನಿಂದ ಬೆಳೆಸಿಕೊಂಡು ಬರಬೇಕು.

ಮಗು

೧

ಶಿಶುವು ಮೂರು ಮಾಸದೊಂದು
ಹಸಿಯೆ ತುಂಬ ಮೊಲೆಯನುಂಡು
ನಸುವೆ ಕಣ್ಗೆ ಜೊಂಪು ಬರಲು
ನಿದ್ದೆ ಹೋಯಿತು.

೨

"ಮುತ್ತು ಮಲಗಿತೆ"ಂದು ತಾಯಿ
ಯೆತ್ತಿ ಮೆಲ್ಲನವಚಿಕೊಂಡು
ತೊಟ್ಟಿಲೊಳಗೆ ಮಲಗಿಸೆನ್ನ
ತೂಗ ಕರೆದಳು.

೩

ತೂಗಿ ತೂಗಿ ಬೇಸರಾಯ್ತು,
ತೂಗುತೊಮ್ಮೆ ತೊಟ್ಟಿಲೊಳಗೆ
ಬಾಗಿ ಕಂಡೆ ಗಾಢನಿದ್ರೆ-
ಗೈವ ಕೂಸನು.

೪

ಏನು ಶಾಂತ ಧೀರಮುದ್ರೆ!
ಏನು ಶುದ್ಧ ಸುಖದ ನಿದ್ರೆ!
ಏನದೊಂದೆ ನಿಮಿಷದೆನ್ನ
ಬಗೆಯನೆಳೆದವೊ!

೫

ತಾನೆ ನಿಂತ ತೊಟ್ಟಿಲೆಡೆಗೆ
ಸಾನುರಾಗದಿಂದ ನಡೆದು
ಲೀನನಾದೆ ಸುಖದೊಳೆನಿತೊ
ನಯನ ಮನಗಳಾ.

೬

ಮುದ್ದುಮೊಗದಿ ಶಿಶುವಿನೆದೆಯೊ
ಳಿದ್ದ ಶುದ್ಧ ಹೃದಯವೆಲ್ಲ
ಮೆದ್ದು ತೋರಲಾಗ ಮುಗ್ಧ-
ನಾಗಿ ಹೋದೆನು.

೭

ಹೋಯ್ತು ಗಳಿಗೆಯೊಂದು ಕಾಲ
ವಾತುಕೊಂಡು ನಿಂತೆಯಿದ್ದೆ!
ನೋಯ್ತು ಕತ್ತು; ಕಂಡೆ ಕಡೆಗೆ
ನೋಟವೊಂದನು.

೮

ಮಿನುಗಿ ಮಿನುಗಿ ಮಿಂಚಿತೊಂದು
ಮನವನೆಳೆವ ಮುಗುಳು ನಗೆಯು!
"ಎನಿತು ಇನಿದೊ!" ಎಂದುಕೊಂಡೆ
"ಮರಳಿ ಬಾರದೊ?"

೯

ಅರಳಿತೆನ್ನ ಹೃದಯವಲ್ಲಿ
ಹರಿಯಿತಕ್ಕರತೆಯ ಝುರಿಯು;
ಭರದೆ ಬಾಗಿ ಮೆಲ್ಲನೊಂದು
ಮುತ್ತನಿಟ್ಟೆನು.

೧೦

ಮೂರು ಮಾಸವೇನು! ಶಿಶುವು
ಬೀರುತಿರುವ ನಗೆಯದೇನು!
ಆರಿಗಾದರುಂಟೆ ಜ್ಞಾನ-
ವಿದರ ಮರ್ಮದಾ?

ಎಸ್. ಆರ್. ಮಳಗಿ.— ಕರ್ನಾಟಕ ವಿದ್ಯಾಲಯ ಪತ್ರಿಕೆಯಿಂದ.

ಕರ್ಣಾಟಕದ
ಜನತೆಯ ಸಂಸ್ಕೃತಿ

ವಿಷಯದ ಸ್ವರೂಪ: ವಿಚಾರದ ಆವಶ್ಯಕತೆ

ಭರತಖಂಡದ ಪ್ರಕೃತ ಸ್ಥಿತಿಯಲ್ಲಿ ಸಮಾಜ ನೇತೃಗಳು ಜನ ಸಾಮಾನ್ಯದ ಸಂಸ್ಕೃತಿಯನ್ನು ಕುರಿತು ವಿಚಾರಮಾಡುವುದು ಹಲವು ಕಾರಣಗಳಿಂದ ಆವಶ್ಯಕವಾಗಿದೆ. ನಮ್ಮ ಜನದ ಜೀವನವು ಈಗ ಹೊಸ ದೊಂದು ರೀತಿಯಲ್ಲಿ ಬಹುಮುಖವಾಗಿ ಹಬ್ಬುತ್ತಿದೆ. ಈ ಹಬ್ಬುಗೆಯು ಶುಭಪ್ರದವಾಗಬೇಕಾದರೆ ನಾವು ಅದನ್ನು ಸರಿಯಾದ ದಾರಿಗಳಿಗೆ ತಿದ್ದಿಕೊಳ್ಳಬೇಕು. ಹಳೆಯದನ್ನು ತೀರಾ ಬಿಡದೆ ಅದಕ್ಕೆ ಅತಿಯಾಗಿ ಕಟ್ಟುಬೀಳದೆ ವಿವೇಚನೆಯಿಂದ ನಡೆದುಕೊಳ್ಳಬೇಕು. ಅಲ್ಲದೆ ಹೊರ ಗಣಿಂದ ಬರುವ ಅನೇಕರೂ, ಅವರ ಅನುಕರಣದಲ್ಲಿ ಕ್ಷೇಮವನ್ನು ಕಾಣುವ ನಮ್ಮವರು ಕೆಲವರೂ, ನಮ್ಮ ಸಂಸ್ಕೃತಿಯಲ್ಲಿ ದೋಷಗಳನ್ನು ನಿರ್ದೇಶಿಸುವರು. ಇಂಥವರು ನಿಂದಿಸುವ ಸಂಸ್ಕೃತಿ ನಮ್ಮದು ಎಂಬ ಕಾರಣದಿಂದ ನಾವು ಕೋಪಮಾಡಿದರೆ ಉಪಯೋಗವಿಲ್ಲ; ಅಥವಾ ಇವರು ತಿಳಿದವರು, ಹೇಳಿದರು, ಎಂದು ಅವರು ಹೇಳಿದ್ದನ್ನೆಲ್ಲ ಒಪ್ಪಿಕೊಂಡರೂ ಒಳ್ಳೆಯದಲ್ಲ. ಇಂಥವರು ಹೇಳಿದ್ದನ್ನು ಸಾವಧಾನವಾಗಿ ಪರಿಶೀಲಿಸಿ ಅವರ ಅಭಿಪ್ರಾಯಗಳ ಸಾಧುತೆಯನ್ನು ನಮ್ಮ ಮನಸ್ಸಿಗೆ ತೃಪ್ತಿಯಾಗು ವಂತೆ ನಾವು ಕಂಡುಕೊಳ್ಳಬೇಕು. ಪಾಶ್ಚಾತ್ಯ ಸಂಸ್ಕೃತಿಯ ಹೊಗಳಿಕೆ ಯನ್ನು ಕೇಳಿಕೇಳಿ ಆ ಜನದ ಏಳಿಗೆಯನ್ನು ನೋಡಿನೋಡಿ ನಮ್ಮಲ್ಲಿ ಅನೇಕರು ನಮ್ಮ ಸಂಸ್ಕೃತಿಯ ವಿಷಯದಲ್ಲಿ ಬಹಳ ಅತೃಪ್ತರಾಗಿರುತ್ತಾರೆ. ಇಂಥವರಿಗೆ ನಮ್ಮ ಜನಾಂಗದ ಜೀವನದಲ್ಲಿ ದೋಷಗಳಿರುವಂತೆಯೇ ಗುಣ ಗಳೂ ಇವೆ; ದೋಷಗಳಿಂದ ನಾವು ಕುಗ್ಗಬೇಕಾಗಿರುವಂತೆ ಗುಣಗಳಿಂದ ನಾವು ಧೈರ್ಯಗೊಳ್ಳಬೇಕಾಗಿದೆ ಎಂಬುದನ್ನು ನಾವು ತೋರಿಸಬೇಕು.

ನಮ್ಮ ಜನರು ಎಷ್ಟೇ ವಿನಯದಿಂದಲಾದರೂ ತಲೆಯೆತ್ತಿಕೊಂಡು ನಡೆಯುವಂತೆ ಮಾಡಬೇಕು. ಇದೆಲ್ಲ ಕಾರಣಗಳಿಂದ ನಾಡ ಸಂಸ್ಕೃತಿಯನ್ನು ಕುರಿತ ವಿಚಾರವು ಆವಶ್ಯಕವಾಗಿದೆ.

ರಾಜ್ಯದ ಆಡಳಿತದಲ್ಲಿ ಜನಾಂಗದ ದಿನ ದಿನದ ಕಾರ್ಯದಲ್ಲಿ ಜನದ ಸಂಸ್ಕೃತಿಯ ಜ್ಞಾನವು ಕೇವಲ ಆವಶ್ಯಕ. ಇದಕ್ಕೆ ಕೆಲವು ಉದಾಹರಣೆಗಳನ್ನು ಹೇಳಬಹುದು. ಯಾವುದಾದರೊಂದು ನಗರದ ಅಧಿಕಾರಿಗಳು ಬೀದಿಯ ನಾಯಿಗಳನ್ನು ಕೊಲ್ಲುವುದಕ್ಕೆ ಒಂದು ಏರ್ಪಾಡನ್ನು ಯೋಚಿಸಬಹುದು. ಅದಕ್ಕೆ ಒಪ್ಪುವರು ಎಷ್ಟು ಜನ? ಊರು ಚೊಕ್ಕಟವಾಗಬೇಕು. ನಿಜ. ಆದರೆ ಅದಕ್ಕೆ ನಾಯನ್ನು ಕೊಲ್ಲುವುದೆಂದರೆ ನಮ್ಮ ಜನಕ್ಕೆ ಮನಸ್ಸು ಬರುವುದಿಲ್ಲ. ಆಂಗ್ಲೇಯರು ಮುನ್ನೂರು ವರುಷಗಳ ಹಿಂದೆ ಬಡವರನ್ನು ಕುರಿತು ಒಂದು ಕಾನೂನನ್ನು ಮಾಡಿ ನಾಡಿನಲ್ಲಿ ಭಿಕ್ಷುಕರಿರಕೂಡದೆಂದು ಏರ್ಪಾಡನ್ನು ಹೂಡಿದರು. ಈಗ ಇಂಗ್ಲೆಂಡಿನಲ್ಲಿ ಯಾವನಾದರೂ ಭಿಕ್ಷೆ ಬೇಡಿದರೆ ಅವನಿಗೆ ಶಿಕ್ಷೆಯಾಗುವುದು. ಭಿಕ್ಷೆಯನ್ನು ಬೇಡುವವನೇ ಆದರೂ ನೆಪಮಾತ್ರಕ್ಕೆ ಒಂದು ಸಿಗರೇಟನ್ನೋ ಒಂದು ಬೆಂಕಿಯ ಕಡ್ಡಿಯನ್ನೋ ಮಾರಿ ನಾಲ್ಕು ಆಣೆ ದಾನವನ್ನು ತೆಗೆದುಕೊಳ್ಳಬೇಕು. ದಾನಿಯು ದಾನವನ್ನು ವ್ಯಾಪಾರದ ಹೆಸರಿನಲ್ಲಿ ಮಾಡಬೇಕು; ಬೇಡುವನು ಭಿಕ್ಷೆಯನ್ನು ಬೆಲೆಯ ಹೆಸರಿನಲ್ಲಿ ತೆಗೆದುಕೊಳ್ಳಬೇಕು. ಭಿಕ್ಷುಕನು ಕೆಡುವನಲ್ಲಾ ಎಂದು ಈ ಜನಾಂಗ ನೀಡುವ ಸ್ವಾತಂತ್ರ್ಯವನ್ನು ಕಳೆದುಕೊಂಡಿತು. ನಮ್ಮಲ್ಲಿ ಭಿಕ್ಷುಕರ ಹಾವಳಿಯನ್ನು ತಪ್ಪಿಸುವ ಕಾನೂನು ಆಗಬೇಕೆಂದು ಆಗಾಗ ಮಾತು ಬರುತ್ತದೆ. ಅಂಥ ಕಾನೂನನ್ನು ಮಾಡುವುದೇ ಬಿಡುವುದೇ? ಹೊಲದಲ್ಲಿ ದೊಡ್ಡದೊಂದು ಮರ ಬೆಳೆದು ಬೆಳೆಯಿಲ್ಲದಂತೆ ಮಾಡಿದೆ. ಅದನ್ನು ಕಡಿಯುವುದಕ್ಕೆ ನಮ್ಮವರು ಹಿಂಜರಿಯುತ್ತಾರೆ. ಅದಕ್ಕೆ ಕಾರಣ ಅದರಲ್ಲಿ ಭೂತವಿದೆಯೆಂಬುದು. ಊರಿನಲ್ಲಿ ಹೊಸ ಮನೆಗಳನ್ನು ಕಟ್ಟುವುದಕ್ಕೆ ಒಳ್ಳೆಯ ಸ್ಥಳವನ್ನು ಸರ್ಕಾರದವರು ಹುಡುಕಬಹುದು. ಜನ ಅಲ್ಲಿ ಮನೆ ಕಟ್ಟುವುದಕ್ಕೆ ಒಪ್ಪುವುದಿಲ್ಲ. ಅಲ್ಲಿ ಸಾಲಾವಳಿಯಿಲ್ಲ ಎಂದು; ಅಥವಾ ನಿಮಿತ್ತ ಹೇಳುವವನು ಅದು ಕೆಟ್ಟದು ಎಂದ ಎಂದು. ಹೀಗೆ ದಿನದಿನದ ಬಾಳಿನಲ್ಲೂ ಜನದ ಸಂಸ್ಕೃತಿ ಜನದ ಪುರೋಭಿ

ವೃದ್ಧಿಗೆ ಅಡ್ಡಿಯಾಗಿಯೋ ಸಹಾಯವಾಗಿಯೋ ಬರುತ್ತದೆ. ಆ ಪುರೋಭಿವೃದ್ಧಿಯನ್ನು ಸಾಧಿಸಲಪೇಕ್ಷಿಸುವವರು ಈ ವಿವರಗಳನ್ನು ತಿಳಿದು ಆಯಾ ಸಂದರ್ಭಗಳಲ್ಲಿ ಏನು ಮಾಡಬೇಕೆಂದು ಯೋಚಿಸಬೇಕಾಗಿದೆ.

ಭರತಖಂಡದ ಒಟ್ಟಿನ ಸಂಸ್ಕೃತಿಯನ್ನು ದೇಶದ ಮುಖಂಡರು ಕುರಿತು ವಿಚಾರಮಾಡಬೇಕಾದ ಹಾಗೆ ಕರ್ಣಾಟಕದ ಜನರು ತಮ್ಮ ನಾಡಿನ ಸಂಸ್ಕೃತಿಯನ್ನು ಕುರಿತು ಯೋಚನೆ ಮಾಡುವುದು ಆವಶ್ಯಕ. ಭರತಖಂಡದ ಬೇರೆ ಬೇರೆ ನಾಡುಗಳ ಸಂಸ್ಕೃತಿಯನ್ನು ನೋಡಿದರೆ ಅದರಲ್ಲಿ ಬಹುಭಾಗ ಸಾಮಾನ್ಯವಾಗಿ ಇರಬಹುದು ; ಸಾಮಾನ್ಯವಾಗಿರುವುದೇ ನಿಜ. ಆದರೆ ಆಯಾ ನಾಡಿನ ಲಕ್ಷಣ ಸೌಕರ್ಯ ಇತಿಹಾಸಗಳಿಗೆ ಅನುಗುಣವಾಗಿ ವಿಶೇಷ ಗುಣಗಳೂ ಕೆಲವು ಕಾಣುವುದರಲ್ಲಿ ಸಂದೇಹವಿಲ್ಲ. ಸಂಸ್ಕೃತಿಯೆನ್ನುವುದು ಜನದ ಒಟ್ಟು ಎಲ್ಲಾ ಅನುಭವದಿಂದ ಅದರ ಮನಸ್ಸಿನಲ್ಲಿ ಉಂಟಾಗಿರುವ ಪರಿಣಾಮ. ಇದು ಒಟ್ಟು ದೇಶದಲ್ಲೆಲ್ಲಾ ಒಂದೇ ಆಗಲಾರದು; ಭಾಗ ಭಾಗದಲ್ಲೂ ಬೇರೆ ಬೇರೆಯಾಗಿಯೇ ಇದ್ದೀತು. ಅಥವಾ ಅಂಥ ವ್ಯತ್ಯಾಸಗಳೇ ಇಲ್ಲವೆಂದು ಹೇಳುವುದಕ್ಕೇ ಆದರೂ ಬೇರೆಬೇರೆ ಭಾಗಗಳ ಸಂಸ್ಕೃತಿಯ ಮುಖ್ಯಾಂಶಗಳೇನೆಂದು ವಿಚಾರಮಾಡುವುದು ಆವಶ್ಯಕವಾಗುತ್ತದೆ. ಈ ಉಪನ್ಯಾಸದಲ್ಲಿ ಕರ್ಣಾಟಕದ ಜನತೆಯ ಸಂಸ್ಕೃತಿಯನ್ನು ಈ ದೃಷ್ಟಿಯಿಂದ ಸಂಕ್ಷೇಪವಾಗಿ ಪರೀಕ್ಷಿಸಲು ಯತ್ನಮಾಡಿದೆ.

ಕರ್ಣಾಟಕದ ಜನತೆ: ಇದರ ಸಂಸ್ಕೃತಿ

ಕಾವೇರಿಯಿಂದ ಗೋದಾವರಿಯವರೆಗಿನ ನಾಡು ಕನ್ನಡ ನಾಡೆಂದು ಪೂರ್ವದ ರಾಜಕವಿಯೊಬ್ಬನು ಹೇಳಿದನು. ಈಗ ಕನ್ನಡವು ವಿಶೇಷವಾಗಿ ಮೈಸೂರು, ಧಾರವಾಡ, ಬಿಜಾಪುರ, ಬೆಳಗಾಂ, ಉತ್ತರ ಮತ್ತು ದಕ್ಷಿಣ ಕನ್ನಡ, ಹೈದರಾಬಾದು, ಬಳ್ಳಾರಿ, ಕೊಯಿಮುತ್ತೂರು, ಮಧುರೆ ಈ ಪ್ರಾಂತಗಳಲ್ಲಿ ಪ್ರಚಾರದಲ್ಲಿದೆ. ಉತ್ತರದ ಕಡೆ ಸಂಕೋಚವಾಗಿ ದಕ್ಷಿಣದ ಕಡೆ ಕಾವೇರಿಯಿಂದಾಚೆ ಸ್ವಲ್ಪ ದೂರ ಹೋಗಿದೆ. ಈ ಭಾಷೆಯನ್ನಾಡುವ ಪ್ರಜೆ ಒಟ್ಟು ಒಂದು ಕೋಟಿ ಹತ್ತೂವರೆ ಲಕ್ಷದಷ್ಟು ಇದೆ. ಇದು ಕನ್ನಡವನ್ನು ಮಾತೃಭಾಷೆಯೆಂದು ಹೇಳುವವರ ಸಂಖ್ಯೆ. ಕನ್ನಡದಲ್ಲಿ ಬಳಕೆಯುಳ್ಳ

ಜನರೆಲ್ಲಾ ಇದರಲ್ಲಿ ಸೇರಿಲ್ಲ. ಮೈಸೂರಿನ ಸೀಮೆಯಲ್ಲಿ ಕನ್ನಡವನ್ನರಿಯದ ಜನವೇ ಇಲ್ಲವೆನ್ನಬಹುದು. ತಮಿಳು ತೆಲುಗು ಮಾತೃಭಾಷೆಯೆಂದು ಹೇಳುವ ಅನೇಕರಿಗೆ ಆ ಮಾತೃಭಾಷೆಗಳಿಗಿಂತ ಕನ್ನಡದಲ್ಲೇ ಬಳಕೆ ಹೆಚ್ಚು. ಇದಕ್ಕೆ ಪ್ರತಿಯಾಗಿ ಮಾತೃಭಾಷೆ ಕನ್ನಡವೆಂದರೂ ಮರಾಠಿ, ತೆಲುಗು ಅಥವಾ ತಮಿಳು ಸೀಮೆಯಲ್ಲಿರುವುದರಿಂದ ಆಯಾ ಭಾಷೆಗಳ ಪರಿಚಯವಿದ್ದು ಕನ್ನಡವನ್ನರಿಯದವರ ಸಂಖ್ಯೆಯನ್ನು ನಾವು ಎಣಿಸಬೇಕು. ಕನ್ನಡ ನಾಡಿನಲ್ಲಿ ಸೇರಿ ಬೇರೆ ಮಾತೃಭಾಷೆಯನ್ನು ಮರೆತಿರುವವರನ್ನೂ, ಬೇರೆ ಸೀಮೆಯಲ್ಲಿ ಸೇರಿ ಕನ್ನಡವನ್ನು ಕಲಿಯಲು ಅವಕಾಶವಿಲ್ಲದೆ ಇರುವವರನ್ನೂ ಸುಮಾರು ಸಂಖ್ಯೆಯಲ್ಲಿ ಸರಿಸಮನೆಂದು ಎಣಿಸಿದರೆ ಒಟ್ಟಿನಲ್ಲಿ ಕನ್ನಡವನ್ನಾಡುವ ಅಥವಾ ಅದರಲ್ಲಿ ಮಮತೆಯುಳ್ಳ ಪ್ರಜೆ ಸುಮಾರು ೧೨೦ ಲಕ್ಷ ಆಗುತ್ತದೆ.

ಕರ್ಣಾಟಕದ ಜನರಲ್ಲಿ ಈ ನಾಡಿನ ಇತಿಹಾಸದಿಂದೆಲ್ಲ ವಾಸಿತವಾಗಿರುವ ಸಂಸ್ಕೃತಿಯೊಂದು ಉಂಟಾಗಿದೆ. ದ್ರಾವಿಡ ದೇಶದಲ್ಲಿ ಕರ್ಣಾಟಕವೇ ಮಧ್ಯದೇಶ. ತಮಿಳಿನ ಸಂಸ್ಕೃತಿಯು ಸಂಸ್ಕೃತ ಭಾಷೆಯಿಂದ ಅಷ್ಟಾಗಿ ಬಣ್ಣವನ್ನು ಪಡೆಯಲಿಲ್ಲ; ತೆಲುಗಿನ ಸಂಸ್ಕೃತಿಯು ಸಂಸ್ಕೃತಕ್ಕೆ ಮಾರುಹೋಯಿತು. ಕರ್ಣಾಟಕದ ಸಂಸ್ಕೃತಿಯು ಈ ಎರಡು ಪಕ್ಷವನ್ನೂ ಬಿಟ್ಟು ಮಧ್ಯವರ್ತಿಯಾಗಿ ನಡೆಯಿತು. ಈ ಭಾಷೆಗಳು ಸಂಸ್ಕೃತದ ಮಾತನ್ನು ಉಪಯೋಗಿಸುವ ರೀತಿಯಿಂದಲೇ ಇದನ್ನು ಊಹಿಸಬಹುದು. ತಮಿಳಿನ ಕಾವ್ಯದಲ್ಲಿ ಸಂಸ್ಕೃತದ ಮಾತು ರೂಪು ಮಾರ್ಪಡದೆ ಸಿಕ್ಕುವುದೇ ಇಲ್ಲ; ತೆಲುಗಿನಲ್ಲಿ ರೂಪು ಮಾರ್ಪಟ್ಟು ಇರುವುದು ಕಡಿಮೆ; ಹುಟ್ಟು ಸಂಸ್ಕೃತ ತುಂಬಿರುತ್ತದೆ. ಕನ್ನಡದಲ್ಲಿ ಅರ್ಧ ಹಾಗೆ ಅರ್ಧ ಹೀಗೆ. ಪ್ರಾಯಶಃ ಅನೇಕ ಕವಿಗಳು ಸ್ವಲ್ಪ ಸಂಸ್ಕೃತವನ್ನಿಟ್ಟುಕೊಂಡು ವಿಶೇಷ ಕನ್ನಡ ಪದಗಳನ್ನೇ ಉಪಯೋಗಿಸಿ ಬರೆದಿದಾರೆ. ಈ ರೀತಿಯ ಮಧ್ಯಮಾರ್ಗಾವಲಂಬನವು ಈ ನಾಡಿನ ಸ್ಥಾನದ ಫಲ. ಅಲ್ಲದೆ ಕರ್ಣಾಟಕದ ಬೇರೆ ಬೇರೆ ಭಾಗಗಳು ಆಗಾಗ ಕೆಲವು ತಮಿಳು ರಾಜರುಗಳ ಕೈಯಲ್ಲೂ ಕೆಲವು ಮಹಾರಾಷ್ಟ್ರ ರಾಜರುಗಳ ಕೈಯಲ್ಲೂ ಇದ್ದುವು. ಕರ್ಣಾಟಕದ ಸಂಸ್ಕೃತಿಯು ಇದರಿಂದ ಇತರ ರಾಷ್ಟ್ರಗಳ ಸಂಸ್ಕೃತಿಯನ್ನು ಒಳ

ಗೊಂಡಿತು. ಈ ನಾಡು ದಕ್ಷಿಣ ದೇಶದ ಮೂವರು ಮತಾಚಾರ್ಯರಿಗೂ ಜನ್ಮಭೂಮಿ ಅಥವಾ ಆಶ್ರಯಸ್ಥಾನ. ಅಲ್ಲದೆ ವೀರಶೈವ ಮತ ಪ್ರತಿಷ್ಠಾಪನೆಯ ಕಾರ್ಯರಂಗ. ಇಲ್ಲಿಯದೇ ಒಂದು ಶಿಲ್ಪರೀತಿಯಿದೆ. ಇದನ್ನು ಹೊಯ್ಸಳ ಶಿಲ್ಪ, ಚಾಲುಕ್ಯರ ಶಿಲ್ಪ ಎಂದು ವಿದೇಶೀಯರು ವರ್ಣಿಸಿದಾರೆ. ಮುಖ್ಯ ಇದು ಕರ್ಣಾಟಕದ ಶಿಲ್ಪ. ಗಾನಪದ್ಧತಿಯಲ್ಲಿ ಕರ್ಣಾಟಕದ್ದು ಎಂಬ ಹೆಸರಿನದೊಂದು ಪದ್ಧತಿಯಿದೆ. ಅದು ಈಚೆಗೆ ಬೆಳೆದದ್ದು ಕರ್ಣಾಟಕದವರಿಂದಲ್ಲ. ಆದರೂ ನಮ್ಮ ಹೆಸರುಗಳ ಮುಂದೆ ಹಾಕುವ ಊರ ಹೆಸರುಗಳಂತೆ ಕರ್ಣಾಟಕದ ಸಂಗೀತವೆಂಬ ಈ ಸಂಗೀತ ಪದ್ಧತಿಯು ಈಗ ತಮಿಳರಲ್ಲೇ ಪ್ರಬಲವಾಗಿದ್ದರೂ ಮೂಲದಲ್ಲಿ ಅದು ಕರ್ಣಾಟಕದ್ದು ಎಂದು ಆ ಹೆಸರು ತೋರಿಸುತ್ತದೆ.

ಈ ಸಂಸ್ಕೃತಿ ಬೆಳೆದ ರೀತಿ

ಉತ್ತಮವಾದ ಸಂಸ್ಕೃತಿಯುಳ್ಳ ನಾಡಿನಲ್ಲಿ ಸಂಸ್ಕೃತರಾದವರ ತಿಳಿವು ಅಸಂಸ್ಕೃತರ ಬಾಳಿನಲ್ಲಿ ಅನೇಕ ರೀತಿಯಲ್ಲಿ ಸೇರುತ್ತದೆ. ಸಹಜವಾದ ಬೆಳವಣಿಗೆಯುಳ್ಳ ಜನದಲ್ಲೆಲ್ಲ ಈ ರೀತಿಯ ಜ್ಞಾನ ಪ್ರಸರಣದ ವಿನ್ಯಾಸವು ನಡೆಯುತ್ತಲೇ ಇರುತ್ತದೆ. ಊರಿಗೆ ತಿಳಿದವನು ಒಬ್ಬನೇ ಆದರೂ ಅವನ ನಡೆ ನುಡಿಯನ್ನು ನೋಡಿ ಕೇಳಿ ಸಭ್ಯರಾಗುವವರು ಅನೇಕರು. ಇದು ತಿಳಿವಿನಲ್ಲಿರುವ ಮಹಿಮೆ. ತಿಳಿದವನಿಗೆ ಇಷ್ಟವಿಲ್ಲದೆ ಇದ್ದರೂ ಲೋಭಿ ತನ್ನ ಮನೆಗೆಂದೇ ಬಾಗಿಲಲ್ಲಿಟ್ಟ ದೀಪದ ಬೆಳಕಿನಂತೆ ಅವನ ತಿಳಿವು ಅವನಿಂದ ಇನ್ನೊಬ್ಬನ ಕಡೆಗೆ ಹರಿಯುತ್ತದೆ. ತಿಳಿದವರು ತಿಳಿಯದವರಿಗೆ ಸಹಾಯವಾಗುವಂತೆ ಏರ್ಪಾಡುಗಳನ್ನು ಮಾಡಿದರೆ ಅದು ಹರಡುವುದೆಂದು ಹೇಳಬೇಕಾದದ್ದಿಲ್ಲ. ಹಿಂದೆ ನಮ್ಮ ಜನರು ಇಂತಹ ಅನೇಕ ಏರ್ಪಾಡುಗಳನ್ನು ಮಾಡಿದ್ದರು. ಈ ಕಾರಣದಿಂದ ಜನಾಂಗದ ಜ್ಞಾನದ ಸಾರವು ಜನರಲ್ಲಿ ಊರಿತ್ತು. ನವನಾಗರಿಕತೆಯ ಅನೇಕ ಸಲಕರಣೆಗಳನ್ನು ಕಂಡಿರುವ ನಾವು ನಮ್ಮ ಪೂರ್ವಿಕರು ಜನರ ತಿಳಿವನ್ನು ವೃದ್ಧಿಮಾಡುವುದಕ್ಕೆ ಎಷ್ಟು ಪ್ರಯತ್ನಮಾಡಿದ್ದರೆಂಬುದನ್ನೂ ಜನಾಂಗದ ಸಂಸ್ಕೃತಿಯನ್ನು ಕುರಿತು ಅವರು ಎಷ್ಟು ವಿಚಾರವನ್ನೂ ಊಹೆಯನ್ನೂ ಉಪ

ಯೋಗಿಸಿದ್ದರೆಂಬುದನ್ನೂ ತಿಳಿಯಲಾರದೆ ಇದ್ದೇವೆ. ನಾವು ಈಗ ಜನಕ್ಕೆ ಅಕ್ಷರವನ್ನು ಹೇಳಿಕೊಡುತ್ತೇವೆ; ಅವರು ಏನನ್ನು ಓದುತ್ತಾರೋ ನೋಡು ವುದಿಲ್ಲ. ಹಿಂದಿನವರು ಅಕ್ಷರ ಹೇಳಿಕೊಡದೆ ಇದ್ದರೂ ಊರಲ್ಲಿ ಸಂಜೆಯಲ್ಲಿ ಜೈಮಿನಿ ಭಾರತವನ್ನು ಓದಿಸುತ್ತಿದ್ದರು. ಶ್ರೀ ವಧುವಿಸಂಬಕ ಚಕೋರಕಂ ಪೊರೆಯೆ ಎಂಬ ಮಾತು ಈಗ ಇಪ್ಪತ್ತು ವರುಷಗಳ ಕೆಳಗೆ ಹಳ್ಳಿಹಳ್ಳಿಯಲ್ಲಿಯೂ ಜನಕ್ಕೆ ತಿಳಿದಿತ್ತು. ಇದರಿಂದ ಓದುಬರಹವನ್ನು ಕಲಿಸುವುದು ಅನಾವಶ್ಯಕ ವೆಂದು ನನ್ನ ಅಭಿಪ್ರಾಯವಲ್ಲ. ಅದನ್ನು ಕಲಿಸಬೇಕು; ಆದರೆ ಅದನ್ನು ಕಲಿಸುವುದಷ್ಟೇ ಸಾಲದು. ಜನಕ್ಕೆ ಬೇಕಾದುದು ಮುಖ್ಯವಾಗಿ ತಿಳಿವು; ತಿಳಿವಿನ ಸಾಧನ ಸಾಧ್ಯವಾದರೆ ಅದರ ಜೊತೆಗೆ ಬರಬಹುದು. ಬಾಳನ್ನು ಬೆಳಗಿಸುವ ಮೂಲ ತತ್ತ್ವಗಳು ಮೊದಲು ತಿಳಿಯಬೇಕು; ಅವುಗಳನ್ನು ಹುಡುಕಿ ತಿಳಿಯುವ ದಾರಿ ಸಾಧ್ಯವಾದರೆ ಆಮೇಲೆ ಬರಬಹುದು. ರಸದ ಅನುಭವ ಮೊದಲು ಆಗಬೇಕು; ಅದರ ವಿಮರ್ಶೆ ಸಾಧ್ಯವಾದರೆ ಆಮೇಲೆ ಬರಬಹುದು. ಕಾವ್ಯವು ಮನಮುಟ್ಟುವುದು ಮುಖ್ಯ; ಅದನ್ನು ನಾನೇ ಓದಿ ತಿಳಿಯುತ್ತೇನೆಯೋ ಓದುವವರಿಂದ ಕೇಳಿ ತಿಳಿಯುತ್ತೇನೆಯೋ ಎನ್ನು ವುದರಲ್ಲಿ ಏನಿದೆ? ಸಾಮಾನ್ಯನು ತಾನೇ ಓದಿ ತಿಳಿಯುವುದಕ್ಕಿಂತ ಬುದ್ಧಿ ವಂತನಾದ ಒಬ್ಬನು ಓದಿದ್ದನ್ನು ಕೇಳಿದರೆ ಹೆಚ್ಚು ಸುಖವನ್ನು ಅನು ಭವಿಸುವನು. ಇಂಥ ಏರ್ಪಾಡಿನ ಪ್ರಯೋಜನವೆಷ್ಟೆಂದು ತಿಳಿಯಬೇಕಾ ದರೆ ಈಗ ಸಂಸ್ಕೃತರಾದ ನಾವು ಓದುತ್ತಿರುವ ಗ್ರಂಥಗಳು ಯಾವುವು ಎಂದು ಯೋಚಿಸಿದರೆ ಸಾಕು. ಓದು ಕಲಿತ ನಾವು ಅದರ ಸರಿಯಾದ ಫಲ ವನ್ನ ಪಡೆಯುತ್ತಿಲ್ಲ. ಓದು ಕಲಿಯದೆ ಇದ್ದರೂ ಹಿಂದೆ ನಮ್ಮ ಜನರಿಗೆ ಓದಿನ ಮುಖ್ಯ ಫಲ ತಕ್ಕಮಟ್ಟಿಗೆ ದೊರೆಯುತ್ತಿತ್ತು.

ಇದರಂತೆ ಇತರ ವಿಷಯಗಳನ್ನೂ ಬೇರೆ ಬೇರೆ ಏರ್ಪಾಡುಗಳಿಂದ ಜನರು ಸುಲಭವಾಗಿ ಕಲಿಯುತ್ತಿದ್ದರು. ಪುರಾಣ ಶ್ರವಣವೆನ್ನುವುದು ಇಂತಹದೊಂದು ಏರ್ಪಾಡು. ನಮ್ಮ ಪುರಾಣಗಳು, ಚರಿತ್ರೆ, ಭೂವಿವರಣೆ, ಶಾಸ್ತ್ರ, ಸಾಹಿತ್ಯ, ತತ್ತ್ವ, ಭೂಲೋಕ, ದೇವಲೋಕ, ಸ್ವರ್ಗ, ನರಕ ಮುಂತಾದ ಎಲ್ಲ ವಿಷಯಗಳನ್ನು ಮೊದಲಿಂದ ಕೊನೆಗೆ ವರ್ಣಿಸುತ್ತವೆ. ಇವು ಜನರಿಗೆ ಚೆನ್ನಾಗಿ ತಿಳಿದಿದ್ದುವು. ಇವುಗಳಿಗೆ ಒಂದೊಂದು ಸಂದರ್ಭ

ಬೇರೆ. ಹರಿಕಥೆ ಇಂಥ ಇನ್ನೊಂದು ಏರ್ಪಾಡು. ಸಂಪ್ರದಾಯದ ಪ್ರಕಾರ ಮಾಡುವ ಕಥೆಯಲ್ಲಿ ಒಳ್ಳೆಯ ಉಪನ್ಯಾಸದಲ್ಲಿರುವಂತೆ ಸ್ಪಷ್ಟವಾದ ವಿಷಯ ನಿರೂಪಣೆಯೂ ವಿಚಾರದ ಸೋಪಾನವೂ ಇರುತ್ತವೆ. ಅದರ ಜತೆಗೆ ಕತೆ; ಅದರಲ್ಲಿ ವರ್ಣನೆ; ಅಲ್ಲಲ್ಲಿ ಉಪಕತೆಗಳು; ಅಲ್ಲಲ್ಲಿ ಹಾಸ್ಯ, ಸಂಗೀತ ಬೇರೆ. ಸರಿಯಾದ ಹರಿಕಥೆಯಿಂದ ಜನರಿಗೆ ಉತ್ತಮ ಸಾಹಿತ್ಯ, ಮತದ ಮುಖ್ಯ ತತ್ತ್ವ, ಉದ್ಧಾರವಾಗುವ ಮಾರ್ಗ—ಇವೆಲ್ಲ ಒಟ್ಟಿಗೆ ದೊರಕುತ್ತಿದ್ದುವು. ಇನ್ನು ದೇವಸ್ಥಾನ, ಭಜನೆಯ ಮನೆ ಮುಂತಾದ ಇತರ ಸಂಸ್ಕಾರಕ ಸಂಸ್ಥೆಗಳು. ಮನೆಗಳಲ್ಲಿ ವ್ರತಗಳು. ಆಗಾಗ ಹಬ್ಬ ಹುಣ್ಣಿಮೆ. ಎಲ್ಲದ ರಲ್ಲೂ ದೇವರು ಎಂಬ ಭಾವನೆ ಮನಸ್ಸಿಗೆ ನೆನವಿಗೆ ಬರುವುದಕ್ಕೆ ಏರ್ಪಾಡು. ಇದರಲ್ಲಿ ಒಂದು ವಿಚಾರವನ್ನು ನಾವು ಗಮನಿಸಿ ನೋಡಬೇಕು. ಮನುಷ್ಯ ನಿಗೆ ದೇವರು ಒಬ್ಬನು ಇದಾನೆ ಎಂಬ ಭಾವನೆ ಬರುವುದು ಬಹು ಹಿರಿಯ ವಿಷಯ. ಅವನು ನಮ್ಮ ಸೇವೆಯನ್ನು ಅಪೇಕ್ಷಿಸುತ್ತಾನೆ, ಅವನನ್ನು ನಮ್ಮ ಸೇವೆಯಿಂದ ಮೆಚ್ಚಿಸಬಹುದು, ಮೆಚ್ಚಿಸಬೇಕು ಎನ್ನುವುದು ಅದಕ್ಕಿಂತ ಹಿರಿಯದು. ಇದಕ್ಕಾಗಿ ಎಲ್ಲಾ ನಾಡುಗಳಲ್ಲೂ ದೇವಾಲಯ ವೆನ್ನುವ ಕಟ್ಟಡವೊಂದು ಏರ್ಪಾಡಾಗಿದೆ. ಆದರೆ ನಮ್ಮ ಸೀಮೆಯ ದೇವಾಲಯದಲ್ಲಿ ಒಂದು ವಿಶೇಷ ಗುಣ. ಇಲ್ಲಿ ದೇವಾಲಯಗಳನ್ನು ರಾಜ ನೊಬ್ಬನ ಮನೆಯಂತೆ ನಡೆಯಿಸಿ ಅಲ್ಲಿ ಹೋದವನಿಗೆ ಕಣ್ಣು, ನಾಲಗೆ, ಕಿವಿ, ಮನಸ್ಸು ಎಲ್ಲ ತಣಿಯುವಂತೆ ಮಾಡುವ ಏರ್ಪಾಡು ಇದೆ. ಇದು ದಕ್ಷಿಣದೇಶದಲ್ಲಿ ವಿಶೇಷ. ಈ ವಿಶೇಷ ಗುಣವು ಕರ್ನಾಟಕದ ದೇವಸ್ಥಾನ ಗಳಲ್ಲಿಯೂ ತುಂಬ ಇದೆ. ದೇವಸ್ಥಾನಕ್ಕೆ ಹೋದವರು ಒಳ್ಳೆಯ ಕಟ್ಟಡ ವನ್ನೇ ನೋಡುವರು; ದೇವರ ಕತೆಯನ್ನು ಚಿತ್ರಿಸಿರುವ ಕಲ್ಲುಗಳನ್ನು ನೋಡುವರು; ಪ್ರಸಾದಕ್ಕೆಂದಾದರೂ ಅಲ್ಲಿ ಸ್ವಲ್ಪ ಹೊತ್ತು ಇರುವರು. ಇದಿಷ್ಟನ್ನು ಮಾಡಿದ್ದರಿಂದಲೇ ಎಂತಹವರಲ್ಲಿಯೂ ಸ್ವಲ್ಪ ಸಂಸ್ಕಾರ ಉಂಟಾಗುವುದು; ಬರಿಯ ಮಾತಿಗಾದರೂ ನಾರಾಯಣ ಎನ್ನುವುದು ಜನರಲ್ಲಿ ವಾಡಿಕೆಯಾಗುವುದು. ಇದರಿಂದ ಏನು ಪ್ರಯೋಜನ ಎಂದು ಯಾರಾದರೂ ಕೇಳಬಹುದು. ಪಾಠಶಾಲೆಗೆ ಹೋದವನಿಗೆ ಹೆಸರನ್ನು ಬರೆ ಯುವಷ್ಟನ್ನು ಮಾತ್ರ ಕಲಿವು ಬಂದರೂ ಅದು ವಿದ್ಯಾಭ್ಯಾಸ: ಪಾಠಶಾಲೆಗೆ

ಹೋಗುವುದೇ ಒಬ್ಬನಿಗೆ ಒಂದು ವಿಧವಾದ ಶಿಕ್ಷೆಯನ್ನು ಕೊಡುತ್ತದೆ. ಇದರಂತೆಯೇ ದೇವಸ್ಥಾನಕ್ಕೆ ಹೋಗುವುದೆನ್ನುವುದು ಒಂದು ಶಿಕ್ಷೆ. ಭಕ್ತಿಯೆನ್ನುವುದು ಸಾವಕಾಶವಾಗಿ ಬೆಳೆಯುವ ಪೈರು. ಅದರ ಮೊದಲನ್ನು ಹೀಗೆಂದೇ ಹೇಳುವುದಕ್ಕೆ ಆಗುವುದಿಲ್ಲ. ದೇವರೆಂಬ ಭಾವ ಮನುಷ್ಯನ ಮನಸ್ಸಿನ ಬಾಗಿಲಲ್ಲಿ ಬಹುಕಾಲ ಕಾದು ಕಾದು ಅವನು ವಿಸಾದರೊಂದು ನಷ್ಟ ಅನುಭವಿಸಿದಾಗಲೋ ಕಷ್ಟಕ್ಕೆ ಸಿಕ್ಕಿರುವಾಗಲೋ ಭಗವಂತನ ಸಹಾಯ ಬೇಕೆಂದರೆ ಒಳಹೊಗುತ್ತದೆ. ಆವರೆಗೆ ಅವನು ಅದಕ್ಕೆ ಹೃದಯದ ಬಾಗಿಲನ್ನು ತೆರೆಯುವುದಿಲ್ಲ. ಆದರೆ ಅವನಿಗೆ ಒಳ್ಳೆಯದನ್ನು ಮಾಡಬೇಕೆನ್ನುವವರು ಆ ಭಾವವನ್ನು ಅವನ ಮನಸ್ಸಿನ ಬಾಗಿಲಲ್ಲಿ ಇರಿಸುವುದಕ್ಕೆ ಯತ್ನಮಾಡಬೇಕು. ನಮ್ಮವರು ಹಿಂದೆ ಇದನ್ನು ಮಾಡಿದ್ದರು. ಇದರಂತೆಯೇ ಭಜನೆಯ ಮನೆಗಳಲ್ಲಿ ಭಕ್ತಿಪಂಥದ ಗೀತೆಗಳನ್ನು ಹಾಡುವುದರಲ್ಲಿ ಜನರಿಗೆ ಇದೇ ರೀತಿಯ ಪರಿಪಾಕ ಉಂಟಾಗುತ್ತಿತ್ತು. ಮುಖ್ಯವಾಗಿ ಇವೆಲ್ಲ ಜನಸಾಮಾನ್ಯಕ್ಕೆಂದು ಮಾಡಿದ್ದ ಏರ್ಪಾಡುಗಳೆಂಬುದನ್ನು ನಾವು ಮರೆಯಬಾರದು.

ಈ ಸಂಸ್ಕೃತಿಯಿಂದುಂಟಾದ ಜನತಾ ಶೀಲ

ಇದರಿಂದುಂಟಾದ ಸಂಸ್ಕೃತಿಯನ್ನು ವಿವರಿಸಿ ವರ್ಣಿಸುವುದು ಕಷ್ಟ. ಆದರೆ ಅದರ ಸ್ವರೂಪವನ್ನು ಜನದ ಜೀವನದಿಂದ ತಿಳಿಯಬಹುದು. ನಾನು ಚಿಕ್ಕಂದಿನಲ್ಲಿ ಬೆಳೆದ ಊರಿನಲ್ಲಿ ಒಬ್ಬ ಶ್ಯಾನುಭೋಗರು ಇದ್ದರು. ಅವರ ಮನೆಯಲ್ಲಿ ಒಂದು ಹೊತ್ತಿಗೆ ಅರುವತ್ತು ಎಲೆ ಹಾಕುತ್ತಿದ್ದರು. ತಮ್ಮಂದಿರು, ತಮ್ಮಂದಿರ ಹೆಂಡತಿಯರು, ಮಕ್ಕಳು; ತನ್ನ ಮಕ್ಕಳು, ಅವರ ಹೆಂಡತಿಯರು, ಗಂಡಂದಿರು; ತಮ್ಮಂದಿರ ಅಳಿಯಂದರು; ಅಳಿಯಂದರ ತಮ್ಮಂದಿರು, ಇತ್ಯಾದಿ, ಇತ್ಯಾದಿ. ಇದರಮೇಲೆ ಊರಿಗೆ ಬರುವವರು ಹೋಗುವವರು. ಇಷ್ಟು ಸಂಸಾರವನ್ನೂ ಒಂದು ದಿನ ಗೊಣಗುಟ್ಟದೆ ಒಂದು ದಿನ ಬೇಸರಪಡದೆ ಆತ ಹತ್ತಾರು ವರುಷ ಸಾಕಿದರು. ವೆಚ್ಚವಾಗುತ್ತಿದೆಯೆ? ಆಯವಾದದ್ದು ಹೇಗೆ? ದೇವರು ಕೊಡುತ್ತಾ ಇದಾನೆ; ಖರ್ಚಾಗುತ್ತಾ ಇದೆ; ನಮಗೇಕೆ ಚಿಂತೆ? ಇವರಂತಹವರು

ಅಪೂರ್ವರಲ್ಲ. ಇವರಿಗೆ ತಕ್ಕಂತೆ ಇವರ ತಮ್ಮಂದಿರು; ಇವರಂತೆಯೇ ನಮ್ಮ ಹಳ್ಳಿಯ ಗೌಡರು; ಅವರಂತೆ ನಮ್ಮೂರ ಬಳಿ ಇನ್ನೊಂದು ಹಳ್ಳಿಯಲ್ಲಿ ಇದ್ದ ಗೌಡರು. ನಾನು ಈಗ ಕೆಲವು ವರ್ಷಗಳ ಹಿಂದೆ ಮೈಸೂರ ಬಳಿ ಒಂದುಕಡೆ ಒಬ್ಬ ಗೌಡನನ್ನು ನೋಡಿದೆ. ಮಾರ್ಗಶಿರ ಮಾಸದ ಕೊನೆಕೊನೆಯಲ್ಲಿ ಅವನು ಹಳ್ಳಿಯಿಂದ ಒಂದು ಮೈಲಿ ದೂರದಲ್ಲಿ ಹೊಲದಲ್ಲಿ ಅವರೇಗಿಡಕ್ಕೆ ನೀರುಹಾಕುವುದಕ್ಕೆ ಒಂದು ಬಿಂದಿಗೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಅವನ ಮಗನು ಮನೆಯಲ್ಲಿದ್ದನು. ಸೊಸೆಯೂ ಇದ್ದಳು. ಅವರನ್ನು ಕಳುಹಿಸದೆ ನೀನೇಕೆ ಹೋಗುತ್ತೀಯೆ ಎಂದು ಕೇಳಿದೆ. "ಅವರಿಗೆ ಇಷ್ಟು ದೂರ ಹೋಗಿ ನೀರು ಹೊಯ್ದು ಸಾಕಿ ಅವರೇಕಾಯಿ ತಿಂದು ಆಗುವುದೇನು, ಅಂತ ಅಲಕ್ಷ್ಯ" ಎಂದ. "ನಿನಗೆ ಬಹಳ ಆಸೆಯೇ?" "ಆಸೇನು ಉಂಟು. ಅಲ್ಲದೀರ—ಗಿಡ ಬೆಳೆಯುವಷ್ಟು ದಿನ ಬೆಳಸಿ ಕಾಯಿ ತಕೋಬೇಕು. ಕೊಂಚ ಕಷ್ಟಕ್ಕೆ ಸೋಮಾರಿತನ ಮಾಡಿ ಬರುವ ಫಲ ಬಿಡೋದೆ? ಇನ್ನೊಂದು ತಿಂಗಳಾದಮೇಲೆ ಕಾಯಿ ಬೇಕು ಎಂದರೆ ಸಿಕ್ಯಾತೆ? ಈಗ ನೋಡಿ ಹದಿನೈದು ದಿನದಿಂದ ನಮ್ಮೂರಲ್ಲಿ ಯಾರ ಮನೆಯುಲ್ಲೂ ಅವರೇಕಾಯಿ ಇಲ್ಲ. ನಮ್ಮ ಮನೇಲಿ ದಿನಾ ನಾಲ್ಕು ಕಾಳು ಇದೆ" ಎಂದನು. ನನ್ನ ಬಳಿ ಆಗಾಗ ಒಬ್ಬ ಹರಿದಾಸರು ಬರುತ್ತಾರೆ. ಅರ್ಧಗಂಟೆ ಕುಳಿತು ಆ ಮಾತು ಈ ಮಾತು ಆಡುತ್ತಿರುತ್ತಾರೆ. ಅವರು ಬರುವಾಗ್ಗೆ ನನ್ನ ಮನಸ್ಸಿನಲ್ಲಿ ಏನಾದರೂ ಯೋಚನೆಯಿದ್ದರೆ ಅವರು ಹೋಗುವ ವೇಳೆಗೆ ಅದನ್ನೆಲ್ಲ ಕಳೆದಿರುತ್ತಾರೆ. ನಮ್ಮ ಯೋಚನೆ ಯೇನೆಂದು ನಾವು ಅವರಿಗೆ ಹೇಳಬೇಕಾದದ್ದಿಲ್ಲ. ಹೇಗೋ ಮಾತು ತಿರುಗುತ್ತದೆ. "ನೋಡಿ ಸ್ವಾಮಿ, ನಮ್ಮ ಅಣ್ಣಂದಿರು ನೋಡಿಕೋತ ಇದ್ದರು ಸಂಸಾರಾನ. ನನಗೆ ಅರುವತ್ತು ವರುಷ ಆಗೋತನಕ ಅವರು ನನಗೆ ತಂದೆಯಂತೆ ಇದ್ದರು. ಹೋಗಬೇಕಾದರೆ ಹತ್ತಿರ ಕುಳಿತಿದ್ದೆ. ನನ್ನ ಕಣ್ಣಿನಲ್ಲಿ ನೀರು ಒಂತು. ನೋಡಿ, ನೀನು ಯೋಚನೆ ಮಾಡಬೇಡ, ಇದ ಕ್ಕೆಲ್ಲಾ ಕರ್ತ ಇದಾನೆ, ನೋಡಿಕೊಳ್ಳುತ್ತಾನೆ; ನಿನಗೆ ಭಾರ ಆಗೋದಿಲ್ಲ ಎಂದರು. ದೊಡ್ಡ ಸಂಸಾರ. ಹತ್ತುವರುಷ ಆಯಿತಲ್ಲ; ನೋಡಿ ನಡೆ ಯಿಸಿಬಿಟ್ಟ ದೇವರು. ಸ್ವಾಮಿ, ನಾವು ಮಾಡುತ್ತೇವೆ ಎಂತ ಚಿಂತೆ

ಯಿಟ್ಟುಕೊಳ್ಳಬಾರದು. ನಮ್ಮಿಂದಲೇ ಆಗುತ್ತೆ. ಆದರೆ ಮಾಡುವವರು ನಾವಲ್ಲ. ಅವ ಮಾಡುತ್ತಾನೆ" ಎನ್ನುವರು. ಆಮೇಲೆ "ಅವ ಮಾಡು ತ್ತಾನೆ ಎಂತ ನಾವು ಕೂತಿರಲಾಗದು. ನಮ್ಮಿಂದಲೇ ಆಗೋದು ಅದು, ಅವ ಮಾಡಿಸುತ್ತಾನೆ" ಎನ್ನುವರು. "ಒಳ್ಳೆಯುದನ್ನೇ ಆಗಲಿ ಕೆಟ್ಟದ್ದನ್ನೇ ಆಗಲಿ ಮಾಡೋಕೆ ನಾವು ಸ್ವತಂತ್ರರಲ್ಲ. ನಾನು ಮಾಡಿದೆ ಎಂತ ದೇವರ ಪೂಜೆ ಮಾಡಿದರೂ ಫಲವಿಲ್ಲ. ಅವ ಬುದ್ಧಿಕೊಟ್ಟು ಮಾಡಿಸಿದ. ನಮ್ಮಿಂದ ಆಯಿತು" ಎಂದು ಇದನ್ನು ಸಮರ್ಥಿಸುವುದಕ್ಕೆ ಇವರು ಹರಿಕಥಾಮೃತ ಸಾರದ ಪದ್ಯಗಳನ್ನು ಹೇಳುವರು. ಸಂಸಾರದಲ್ಲಿರುವವರಿಗೆ ಈ ಜ್ಞಾನ ಎಲ್ಲಿ ಬರಬೇಕು ಎಂದರೆ, "ಸ್ವಾಮಿ ಸ್ವಲ್ಪ ಸ್ವಲ್ಪ ಆಗಾಗ ಇದನ್ನು ಅಂದುಕೊಳ್ಳ ಬೇಕು, ಬರುತ್ತೆ. ಸಂಸಾರವೇನು ಸಂನ್ಯಾಸವೇನು ಸ್ವಾಮಿ? ಎಣಿಸಿದಹಾಗೆ ಆಗುತ್ತೆ. ದುಡಿಯುವುದೆಲ್ಲ ದೇವರಿಗಾಗಿ ಎಂದರೆ ಎಲ್ಲಾ ಪೂಜೆಯೇ" ಎಂದು ಸಾಧನದ ಬಗೆಗಾಣಿ ಎನ್ನಬಹುದೇ ಎಂಬ ದೇವರ ನಾಮವನ್ನು ಹೇಳುವರು. "ಮಕ್ಕಳನ್ನ ಮರೀನ ನಮ್ಮದು ಎಂದರೆ ಭಯವಾಗಿ ಹೇಗಪ್ಪ ಎನ್ನಿಸುತ್ತದೆ. ಅವನವು ಅನ್ನಿ ಸಮಾಧಾನವಾಗುತ್ತೆ. ಅವರನ್ನು ಸಾಕೋದು ಅವನ ಕೆಲಸ. ನಮ್ಮನ್ನಿಟ್ಟು ಸಾಕಿಸುತ್ತಾನೆ." "ಸ್ವಾಮಿ ತಿಳಿದವರು ಮಕ್ಕಳನ್ನ ದಾದಿ ಯಜಮಾನನ ಮಕ್ಕಳನ್ನು ಕಾಣೋಹಾಗೆ ಕಾಣಬೇಕು. ಭ್ರಮೆಯಿಂದ ಸಾಕಬೇಕು. ಯಾಕೆ? ತಪ್ಪಿದರೆ ಯಜ ಮಾನ ಕೋಪಿಸುತ್ತಾನೆ. ಆದರೆ ಅದನ್ನು ನನ್ನದು ಅನ್ನಕೂಡದು. ಲಾಲಿಸು ಅಂದರೆ ಲಾಲಿಸಿದೆವು; ಬೇಡವೆಂದರೆ ಬಿಟ್ಟೆವು. ಅವನಿಗೆ ತಿಳಿಯದೇ ಯಾವುದು ಸರಿ ಎಂತ." ನನಗೇನೋ ಈ ಹರಿದಾಸರ ಸಂಗಡ ಅರ್ಧ ಗಂಟೆ ಮಾತನಾಡಿದರೆ ನಾನು ಇದುವರೆಗೆ ಓದಿ ಕೇಳಿ ನೋಡಿ ಕಲಿತ ಕಲಿ ವಿನ ಸಾರವೆಲ್ಲ ಮನಸ್ಸಿನಲ್ಲಿ ಮರಳಿ ಮೂಡುತ್ತದೆ. ನಮ್ಮ ಮಿತ್ರ ರೊಬ್ಬರು ಒಂದು ರಾತ್ರೆ ಬಂಡಿಯಲ್ಲಿ ಮಕ್ಕಳೊಡನೆ ಪ್ರಯಾಣಮಾಡುತ್ತ ಮಳೆಯಲ್ಲಿ ಸಿಕ್ಕಿ ಮುಂದಕ್ಕೆ ಹೋಗಲಾರದೆ ದಾರಿಯಲ್ಲಿ ಒಂದು ಮನೆ ಯನ್ನು ಕಂಡು ಅಲ್ಲಿ ನಿಂತರಂತೆ. ಅದು ಶಿವಾಚಾರದವರ ಒಂದು ಮಠ. ಇವರು ಬಂಡಿಯನ್ನು ನಿಲ್ಲಿಸಿ ಇಲ್ಲಿ ಇಳಿದುಕೊಳ್ಳಬಹುದೆ ಎಂದು ಕೇಳಿದ ರಂತೆ. ಮಠದ ಅಯ್ಯನೂ ಅಲ್ಲಿದ್ದ ಒಬ್ಬ ಮುದುಕಿಯೂ ಮನೆಯವ

ರೆಲ್ಲರೂ ಬಂದು ಬರಬೇಕು ಬರಬೇಕು ಎಂದು ಹೇಳಿ ಆದರದಿಂದ ಇವರನ್ನು ಕರೆದುಕೊಂಡು ಹೋಗಿ ಬ್ರಾಹ್ಮಣರು ನಮ್ಮಲ್ಲಿ ಊಟಮಾಡುವುದಿಲ್ಲ. ಹಣ್ಣು ಹಂಪಲು ತಕ್ಕೊಳ್ಳಿ ಎಂದು ಕೊಟ್ಟು ಮಕ್ಕಳಿಗೆ ಹಾಸಿಕೊಳ್ಳುವುದಕ್ಕೆ ಹೊಸ ಕಂಬಳಿ ಮೊದಲಾದುದನ್ನು ಕೊಟ್ಟು ಅಂದಿನ ರಾತ್ರಿ ಅಲ್ಲಿ ನಿಲ್ಲಿಸಿಕೊಂಡಿದ್ದು ಮಾರನೆಯ ದಿನ ಕಳುಹಿಸಿಕೊಟ್ಟರಂತೆ. ನಾನು ಒಂದುಸಲ ಮಲೆನಾಡಿನಲ್ಲಿ ಸುತ್ತುತ್ತ ಒಂದು ಹಳ್ಳಿಗೆ ಹೋದೆನು. ಆ ಕಾಡು ಹಳ್ಳಿಯಲ್ಲಿ ಮಧ್ಯೆ ಒಂದು ದೊಡ್ಡ ಮನೆ. ಇದು ಯಾರದೆಂದೆ. ಚೆನ್ನೇಗೌಡನದು ಎಂದೋ ಏನೋ ಹೆಸರು ಹೇಳಿದರು. ನಾವು ಮಾತನಾಡುವುದನ್ನು ಕೇಳಿ ಮನೆಯ ಮುದುಕಿ ಹೊರಗೆ ಬಂದರು. ಒಂದೆರಡು ಮಾತಾದಮೇಲೆ "ಇದು ಚೆನ್ನೇಗೌಡರ ಮನೆಯೇ" ಎಂದೆ. "ಹೌದು." "ಚೆನ್ನೇಗೌಡರು ಎಲ್ಲಿ?" "ಶಿವನಪುರಿಗೆ ಹೋಗ್ಯಾರೆ." ನನಗೆ ಅರ್ಥವಾಗಲಿಲ್ಲ. ನಾನು "ಶಿವನಪುರಿ ಎಲ್ಲಿದೆ?" ಎಂದೆ. ಹತ್ತಿರ ಇದ್ದವರು ಚೆನ್ನೇಗೌಡ ತೀರಿಹೋಗಿದ್ದಾರೆಂದು ತಿಳಿಸಿದರು. ನಾನು "ಅಯ್ಯೋ ಪಾಪ" ಎಂದು "ನಿಮ್ಮ ಮಾತು ತಿಳಿಯಲಿಲ್ಲವಮ್ಮಾ" ಎಂದೆ. ಮುದುಕಿ "ಅಯ್ಯೋ ನನ್ನಪ್ಪಾ ಏನು ಮಾತು ತಿಳಿಯೋಕೆ ಬಿಡಿ. ಅವರು ಹೋಗಿ ಹತ್ತುವರುಷ ಆಯಿತು" ಎಂದರು. "ಶಿವನಪುರಿಗೆ ಹೋಗಿದಾರೆ!" ಮತ್ತೆ ನೋಡುವ ಭರವಸೆ ಉಂಟು ಎಂದು ಅರ್ಥ ಕಾಣುತ್ತದೆ. ಈ ಅರ್ಥ ಆಕೆಯ ಮನಸ್ಸಿನಲ್ಲಿತ್ತೆ ಎಂದು ಸಂದೇಹ ಅವಶ್ಯಕವಿಲ್ಲ. ಮಾತು ಹುಟ್ಟಿ ಅರ್ಥ ಬರಲಿಲ್ಲ; ಅರ್ಥವಿದ್ದುದ್ದರಿಂದ ಮಾತು ಬಂತು.

ಈ ಸಂಸ್ಕೃತಿಯ ಫಲವಾದ ಗ್ರಾಮ ಜೀವನ

ಇದೇ ರೀತಿಯ ನಯವನ್ನು ನಮ್ಮ ಗ್ರಾಮಗಳ ಜೀವನದಲ್ಲಿಯೂ ನಾವು ನೋಡಬಹುದು. ನವನಾಗರಿಕತೆಯ ಬಡಿತದಿಂದ ಈಗ ನಮ್ಮ ಊರುಗಳ ಬದುಕಿನ ಕಟ್ಟು ಸಡಿಲವಾಗಿದೆ. ಈಗ ಕೆಲವು ವರುಷಗಳ ಹಿಂದೆ ಅದು ತಕ್ಕಮಟ್ಟಿಗೆ ಭದ್ರವಾಗಿತ್ತು. ನಮ್ಮ ಜನರಲ್ಲಿ ರಾಜ್ಯವೆಂಬ ಭಾವನೆಯು ಹೆಚ್ಚಾಗಿರಲಿಲ್ಲ; ಇದು ನಮ್ಮ ದೇಶದ ಚರಿತ್ರೆಯ ಫಲ; ದಿನಕ್ಕೆ ಒಬ್ಬನು ನಾಯಕನೆಂದರೆ ರಾಮನಿಗೆ ರಾಜ್ಯವಾದರೇನು ರಾವಣನಿಗೆ

ರಾಜ್ಯವಾದರೇನು ರಾಗಿ ಬೀಸುವುದು ತಪ್ಪಲಿಲ್ಲ ಎಂಬ ಭಾವನೆ ಹುಟ್ಟು ವುದು ಸ್ವಭಾವ. ಆದರೆ ಊರೆಂದರೆ ಯಾರೂ ಅಸಡ್ಡೆ ಮಾಡುವಂತಿರಲಿಲ್ಲ. ಜನ ನಾಡಿಗೆ ಅಂಟಿದ್ದಿತು: ಬಡಗ ನಾಡಿನವರು ಸೀರ ನಾಡಿನವರು ಮುಂಡ್ಯ ದವರು ಕೀಳು ನಾಡಿನವರು. ಆದ್ದರಿಂದ ಇವರಿಗೆ ತಮ್ಮ ಹಳ್ಳಿಗಳಲ್ಲಿ ಮಮತೆ ಹೆಚ್ಚು. ಊರ ಜನ ಅದರ ಬಳಿ ತೋಪು ಕೊಳ ಗುಡಿ ಮಂಟಪ ಮುಂತಾದುವನ್ನು ಮಾಡಿಕೊಂಡಿದ್ದರು. ಹತ್ತು ಜನಕ್ಕೆ ಸಹಾಯ ವಾಗುವ ಕೆಲಸವೆಂದರೆ ಪುಣ್ಯವೆಂದು ಭಾವನೆ. ರಂಗಪ್ಪನ ತೋಪು ಗಿರಿಯಪ್ಪನ ಬಾವಿ ಎಂದು ರಂಗಪ್ಪ ಹಾಕಿಸಿದ ತೋಪನ್ನೂ ಗಿರಿಯಪ್ಪನು ಮಾಡಿಸಿದ ಬಾವಿಯನ್ನೂ ಕರೆಯುವರು. ಊರಿನ ಮುಂದೆ ರಚ್ಚೆಗಳು; ದಾರಿಗಳಲ್ಲಿ ಹೊರೇಕಲ್ಲುಗಳು, ಜಲಸಂದ್ರಗಳು; ಬಿಸಿಲ ದಿನದಲ್ಲಿ ಅರವಟ್ಟಿಗೆ ಗಳು. ಊರ ದೇವಾಲಯದಲ್ಲಿ ಉತ್ಸವಕಾಲದಲ್ಲಿ ದಿನ ದಿನವೂ ಒಬ್ಬರಲ್ಲ ದಿದ್ದರೆ ಒಬ್ಬರ ಸೇವೆ. ಕಾಲ ಕಾಲದಲ್ಲಿ ಆಯುಧ ಪೂಜೆ; ಬಿತ್ತುವಂದು ಭೂಮಿಯ ಪೂಜೆ. ಹೊಲ ಗದ್ದೆಗಳ ಕೆಲಸಗಳಲ್ಲಿ ಒಬ್ಬರಿಗೊಬ್ಬರು ನೆರವು. ಊರ ಹುಡುಗರಿಗಾಗಿ ಉಪ್ಪರಪಟ್ಟೆ ಗುಡುಗಿನಾಟ ಮುಂತಾದ ಆಟಗಳು. ಹಬ್ಬಗಳು. ಊರ ಜಗಳದ ನ್ಯಾಯಕ್ಕೆ ಬೇರೆಯವರನ್ನು ಕರೆಯುವುದಿಲ್ಲ. ಊರ ಜನದ ಅಂತಸ್ಸಾಕ್ಷಿಯು ಊರ ಚಾವಡಿಯಲ್ಲಿತ್ತು. ಈಗ ಅದು ನಾಡಿನ ಅಂತಸ್ಸಾಕ್ಷಿಯಲ್ಲಿ ಲೀನವಾಗಿ ನಮ್ಮ ನ್ಯಾಯಸ್ಥಾನಗಳಲ್ಲಿ ಜನರಿಗೆ ಗುರುತು ಸಿಕ್ಕದೆ ಮರೆಯಾಗಿದೆ. ಅದು ಚಾವಡಿಯಲ್ಲಿದ್ದಾಗ ಜನರು ಅದರೆದುರಿಗೆ ಸುಳ್ಳು ಹೇಳುವುದಕ್ಕೆ ಹಿಂಜರಿಯುತ್ತಿದ್ದರು. ಹೀಗೆ ಒಂದೊಂದು ಗ್ರಾಮವೂ ಒಂದೊಂದು ಸಂಸಾರದಂತೆ ಇರುತ್ತಿತ್ತು.

ಈ ಸಂಸ್ಕೃತಿಯಲ್ಲಿ ಕಲೆತ ವಿವಿಧ ಮತಗಳು

ಜನದ ಈ ಸಂಸ್ಕೃತಿಯು ಹಲವು ಮತಗಳ ನೆರವಿನಿಂದ ಬೆಳೆಯಿತು. ಇದರಲ್ಲಿ ಮೊದಲನೆಯದು ನಾವು ಈಗ ಹಿಂದೂಮತವೆನ್ನುವುದರ ಮಧ್ಯ ಭಾಗ. ವಿದೇಶೀಯರು ನಮ್ಮ ಮತಗಳನ್ನು ಕುರಿತು ಚರ್ಚಿಸುವುದರಲ್ಲಿ ಕ್ರೈಸ್ತ ಮತ ಮಹಮ್ಮದೀಯ ಮತಗಳನ್ನು ಬೇರೆಯೆಂದು ಎಣಿಸುವಂತೆ ಸನಾತನ ಧರ್ಮದ ಭಾಗಗಳನ್ನು ಬೇರೆ ಬೇರೆ ಮತಗಳೆಂದು ಎಣಿಸಿ ಬರೆ

ದಿದಾರೆ. ಇದು ತಪ್ಪು ರೀತಿಯ ಭಾವನೆ. ಬೌದ್ಧಮತ ಜೈನಮತಗಳು ಹಿಂದೂಮತದಿಂದ ಬೇರೆಯಲ್ಲ. ಪ್ರೊಟೆಸ್ಟೆಂಟ್ ಕ್ರೈಸ್ತಜನರು ಪ್ರೊಟೆಸ್ಟೆಂಟ ರಾದರೂ ಕ್ರೈಸ್ತರು ಹೇಗೋ ಹಾಗೆ ಬೌದ್ಧರೂ ಜೈನರೂ ಬೌದ್ಧ ಜೈನ ರಾದರೂ ಹಿಂದೂಗಳೇ; ಸನಾತನ ಧರ್ಮದ ಮಧ್ಯ ಕಾಂಡವನ್ನಲ್ಲ, ಶಾಖೆಗಳನ್ನವಲಂಬಿಸಿರುವರು ಅಷ್ಟೇ. ಇತ್ತೀಚೆಗೆ ಕೆಲವರು ವಿದೇಶೀಯರು ವೀರಶೈವ ಮತವನ್ನು ಕೂಡ ಹಿಂದೂಮತದಿಂದ ಬೇರೆ ಎಂಬಂತೆ ಮಾತ ನಾಡಿದಾರೆ. ಹಿಂದೂಮತವನ್ನು ಇವರು "ಬ್ರಾಹ್ಮನಿಕಲ್" ಎಂದರೆ ಬ್ರಾಹ್ಮಣವೆಂದು ಕರೆಯುತ್ತಾರೆ. ಈ ಮಾತು ಬ್ರಾಹ್ಮಣ ಬ್ರಾಹ್ಮಣೇತರರ ವೈಷಮ್ಯಕ್ಕೆ ಕೂಡ ಕಾರಣವಾಗಿದೆಯೆನ್ನಬೇಕು. ಸನಾತನ ಧರ್ಮವು ಯಾವ ಒಂದು ಜಾತಿಗೆ ಸೇರಿದುದೂ ಅಲ್ಲ. ಅದು ಬ್ರಾಹ್ಮನಿಕಲ್ಲೂ ಅಲ್ಲ ಶೂದ್ರಯಿಕಲ್ಲೂ ಅಲ್ಲ; ಅದಕ್ಕೆ ಬೌದ್ಧ ಜೈನ ತತ್ತ್ವಗಳು ವಿರೋಧವಾದು ವಲ್ಲ; ವೀರಶೈವ ಮತವು ಅದರ ಆವರಣದಿಂದ ಹೊರಗಿರತಕ್ಕದ್ದಲ್ಲ. ಹೀಗೆ ಬೌದ್ಧ ಜೈನ ವೀರಶೈವ ಮೊದಲಾದ ಹಲವು ಶಾಖೆಗಳನ್ನೊಳಗೊಂಡ ಈ ಧರ್ಮದಲ್ಲಿ ಮಧ್ಯಭಾಗವೆನ್ನುವುದು ಸಾಂಪ್ರದಾಯಿಕವಾಗಿರುತ್ತ ಸ್ವಲ್ಪ ಸ್ವಲ್ಪ ಮಾರ್ಪಟ್ಟರೂ ಮೊತ್ತದಲ್ಲಿ ಆದಿಯಲ್ಲಿದ್ದ ಅಚ್ಚಿನಲ್ಲೇ ನಡೆದುಬರು ತ್ತಿರುವ ಮತವು. ಇದನ್ನು ನಾವು ಸ್ಮಾರ್ತಮತವೆಂದು ಕರೆಯಬಹುದು. ಕರ್ಣಾಟಕದ ಜನಸಂಸ್ಕೃತಿಯ ಚಿತ್ರಪಟದಲ್ಲಿ ಮೊದಲ ಬಣ್ಣ ಈ ಸ್ಮಾರ್ತ ಮತದ್ದು. ಇದಾದಮೇಲೆ ಬೌದ್ಧಮತದ ಬಣ್ಣ ಸ್ವಲ್ಪ ಸೇರಿರಬೇಕು; ಇದರ ಜೊತೆಯಲ್ಲಿ ಜೈನಮತದ ಬಣ್ಣ ಸ್ವಲ್ಪ ಸೇರಿತು. ಆಮೇಲೆ ಅದರಲ್ಲಿ ವಿಶಿಷ್ಟಾದ್ವೈತ ಮತದ ವರ್ಣ ಒಂದುಕಡೆ ಸೇರಿತು. ಇತ್ತ ಇದು ಸೇರಿರು ತ್ತಿರುವಲ್ಲಿ ಇನ್ನೊಂದುಕಡೆ ಈ ನಾಡಿನ ಉತ್ತರ ಭಾಗದಲ್ಲೇ ಹುಟ್ಟಿದ ವೀರಶೈವ ಮತವೂ ಹರಿದಾಸಪಂಥವೂ ಚಿತ್ರಕ್ಕೆ ಬೇರೆಬೇರೆಯ ತೀವ್ರ ವರ್ಣಗಳನ್ನು ಸೇರಿಸಿದುವು. ಅದರಿಂದಾಚೆಗೆ ಕನ್ನಡ ನಾಡು ಕಷ್ಟಕ್ಕೆ ಸಿಕ್ಕಿ ಪುರೋಗಮನದಲ್ಲಿ ಭಂಗವನ್ನು ಪಡೆಯಿತು. ರಾಜ್ಯದಲ್ಲಿ ನೆಮ್ಮದಿ ಇಲ್ಲದ್ದ ರಿಂದ ಜನ ಒಂದು ಮುಖವಾಗಿ ಬೆಳೆಯುವುದಕ್ಕೆ ಇಲ್ಲದೆಹೋದರೂ ಜನರು ತಮ್ಮ ಹಿರಿಯರಿಂದ ಬಂದ ಧರ್ಮವನ್ನು ಹೇಗೋ ಹಾಗೆ ಕಾಪಾಡಿ ಕೊಂಡುಬಂದರು. ನಮ್ಮ ಜನರ ಸಂಸ್ಕೃತಿಯಲ್ಲಿ ಕಡೆಯಲ್ಲಿ ಬಿದ್ದ ಬಣ್ಣ

ವೀರಶೈವ ಮತದ್ದು, ಮಾಧ್ವ ಮತದ್ದು. ಈಚೆಗೆ ಮಹಮ್ಮದೀಯ ಮತ ಕ್ರೈಸ್ತ ಮತಗಳ ಸಂಪರ್ಕದಿಂದಲೂ ಕೆಲವು ಕೆಲವು ಮಾರ್ಪಾಡುಗಳು ಉಂಟಾಗಿವೆ.

ಸಂಸ್ಕೃತಿಯಲ್ಲಿ ಬೌದ್ಧ ಜೈನ ಮತಗಳ ಅನುಭಾವ

ಕರ್ಣಾಟಕದ ಸಂಸ್ಕೃತಿಯು ಬೌದ್ಧ ಮತದಿಂದ ಯಾವ ವಿಶೇಷ ಗುಣವನ್ನು ಪಡೆದಿರಬಹುದೆಂದು ಹೇಳುವುದಕ್ಕೆ ಅವಕಾಶವಿಲ್ಲ. ಬುದ್ಧ ಮತಾವಲಂಬಿಯಾದ ಅಶೋಕ ಮಹಾರಾಜನ ಶಾಸನಗಳು ಮೂರು ಮೈಸೂರ ಉತ್ತರ ಭಾಗದಲ್ಲಿ ಸಿಕ್ಕಿರುವುದರಿಂದಲೂ, ಬೌದ್ಧರು ತಮ್ಮ ಮತಪ್ರಚಾರಕ್ಕಾಗಿ ಭರತವರ್ಷದಲ್ಲೆಲ್ಲಾ ಪ್ರಯತ್ನಮಾಡಿದರಾದ್ದರಿಂದಲೂ, ಕರ್ಣಾಟಕದಲ್ಲಿಯೂ ಕೆಲಸಮಾಡಿರಬೇಕೆಂದು ಊಹಿಸುವುದಕ್ಕೆ ಕಾರಣವಿದೆ. ಅಜಂತದ ದೇವಾಲಯಗಳೂ ಕನ್ನಡ ನಾಡಿನ ಎಲ್ಲೆಯಲ್ಲಿವೆ. ಬೌದ್ಧ ಶ್ರವಣರು ಕರ್ಣಾಟಕದಲ್ಲಿ ತಮ್ಮ ಮತವನ್ನು ಪ್ರಚಾರಮಾಡಿದ್ದೇನೋ ಇರಬೇಕು. ಆದರೆ ಅದರ ಗುರುತು ಕನ್ನಡ ನಾಡಿನಲ್ಲಿ ಬಹಳವಾಗಿ ಸಿಕ್ಕುವಂತಿಲ್ಲ. ಫಾಹಿಯಾನ್ ಎಂಬ ಚೀನನು ಬೌದ್ಧಮತಗ್ರಂಥಗಳ ಅನ್ವೇಷಣಕ್ಕಾಗಿ ನಮ್ಮ ಸೀಮೆಗೆ ಬಂದವನು ಮಧ್ಯದೇಶದ ಪ್ರಯಾಣ ಮುಗಿಸಿದಮೇಲೆ ನಾವೆಯನ್ನೇರಿ ಸಿಂಹಳದ್ವೀಪಕ್ಕೆ ಹೋದಂತೆ ಅವನ ಪ್ರಯಾಣಕಥೆಯಿಂದ ತಿಳಿಯುತ್ತದೆ. ಕರ್ಣಾಟಕದಲ್ಲಿ ಬೌದ್ಧ ಕ್ಷೇತ್ರಗಳು ಹೆಚ್ಚಾಗಿದ್ದಲ್ಲಿ ಅವನು ಇಲ್ಲಿಗೂ ಪ್ರಾಯಶಃ ಬರುತ್ತಿದ್ದನು. ಎಂದರೆ ಬೌದ್ಧಮತವು ಕರ್ಣಾಟಕದ ಅಂಚನ್ನು ಮುಟ್ಟಿದಷ್ಟು ಮಾತ್ರವೇ ಹೊರತು ಇಲ್ಲಿ ನೆಲಸಲಿಲ್ಲವೆಂದು ತೋರುತ್ತದೆ. ಇದು ಹೇಗಾದರೂ ಶ್ರೀ ಶಂಕರಾಚಾರ್ಯರು ಸನಾತನ ಧರ್ಮ ಸ್ಥಾಪನ ಕಾರ್ಯದಲ್ಲಿ ವಿಮತ ಖಂಡನಮಾಡುತ್ತಾ, ಯಾವುದಾದರೂ ಒಳ್ಳೆಯ ಅಂಶಗಳು ಜನರಲ್ಲಿ ಊರಿದ್ದರೆ ಅವುಗಳನ್ನು ಬಿಡದಂತೆ ಮುಖ್ಯ ಧರ್ಮಕ್ಕೆ ಅವನ್ನು ಸಮನ್ವಯಮಾಡಿ ಬೌದ್ಧಮತವು ಬೇರೆಯ ಮತವಾಗಿ ಜನರಲ್ಲಿ ನಿಲ್ಲಬೇಕಾದ ಆವಶ್ಯಕತೆಯನ್ನು ಕಳೆದರು. ಬೌದ್ಧಮತದ ಉಪಯುಕ್ತ ತತ್ತ್ವಗಳು ಹಲವು ಹೀಗೆ ಸನಾತನ ಧರ್ಮದಲ್ಲಿ ಬೆರೆತುಹೋಗಿರಬೇಕು.

ಜೈನಮತದ ಚಿಹ್ನೆಗಳು ಕರ್ಣಾಟಕದಲ್ಲಿ ಇದಕ್ಕಿಂತ ಸ್ವಲ್ಪ ಸ್ಪಷ್ಟ ವಾಗಿ ಕಾಣುತ್ತವೆ. ಶ್ರವಣಬೆಳಗೊಳವೂ ಕಾರಕಳವೂ ಕರ್ಣಾಟಕದಲ್ಲಿ ರುವ ಜೈನ ಯಾತ್ರಾಸ್ಥಾನಗಳು. ಕನ್ನಡ ಸಾಹಿತ್ಯದ ಆರಂಭಕಾಲದ ಉದ್ದಾಮ ಕವಿಗಳೆಲ್ಲ ಜೈನರೇ. ಕನ್ನಡ ನಾಡಿನಲ್ಲಿ ಜೈನ ಅರಸರು ಅನೇ ಕರು ಆಳಿದರು. ಜೈನರು ಈಗಲೂ ಮನೆಯಲ್ಲಿ ಮದುವೆ ಮುಂಜಿಗಳಲ್ಲಿ ಕನ್ನಡದಲ್ಲಿ ಮಂತ್ರಗಳನ್ನು ಹೇಳುವರಂತೆ. ಕರ್ಣಾಟಕದ ಜೈನರು ಆಡುವ ಮಾತು ಕೂಡ ಅಚ್ಚಗನ್ನಡ. ಸರ್ವಜ್ಞನು ಜೈನಮತವನ್ನು ಹೊಗಳು ತ್ತಾನೆ. ಬೀರೇದೇವರು ಜಿನ್ನೇದೇವರನ್ನು ಬಟ್ಟೆ ಬೇಡಿದಹಾಗೆ ಎನ್ನುವ ನಾಣ್ಣುಡಿಯಿಂದ ಜಿನಮೂರ್ತಿಯು ಜನಕ್ಕೆ ಪರಿಚಿತಮೂರ್ತಿಯಾಗಿತ್ತೆಂದು ವ್ಯಕ್ತವಾಗುತ್ತದೆ. ಆದರೆ ಜೈನರ ಚರಿತ್ರೆಯಲ್ಲೂ ಕೂಡ ಬರಬರುತ್ತ ಹೆಚ್ಚಿನ ಮಾರ್ಪಾಡುಗಳು ಆದುವು. ರಾಮಾನುಜರ ಮತವು ಮೈಸೂರ ನಾಡಿಗೆ ಬಂದು ಜೈನರ ಪ್ರಾಬಲ್ಯ ಕಡಿಮೆಯಾಯಿತು. ಇವರಿಂದಲೂ ಇವರ ಮತದಿಂದಲೂ ಜನದ ಬದುಕಿನಲ್ಲಿ ಯಾವ ಸಂಸ್ಕಾರವುಂಟಾಗಿತ್ತೋ ಅದು ಬೇರೆಯಾಗಿ ಗುರುತು ಸಿಕ್ಕದಂತೆ ಸನಾತನ ಧರ್ಮದಲ್ಲಿ ಸೇರಿ ಹೋಯಿತು. ಈಗ ಹಳ್ಳಿಗಳಲ್ಲಿರುವ ಜೈನರು ಉತ್ತಮ ತರಗತಿಯ ಸನಾತನ ಧರ್ಮಿಗಳಂತೆಯೇ ಕಾಣುವರು. ಮಾತನಾಡಿಸಿ ನೋಡಿದರೂ ಜೈನರಿಗೂ ಹಿಂದೂಗಳಿಗೂ ವ್ಯತ್ಯಾಸವೇನೆಂದು ಕಂಡುಬರುವುದಿಲ್ಲ. ಒಟ್ಟಿ ನಲ್ಲಿ ಮೊದಲಲ್ಲಿ ಪ್ರಾಣಿವಧೆಯು ತಪ್ಪೆಂಬ ಭಾವನೆಯು ಜನರಲ್ಲಿ ಜೈನಮತ ದಿಂದ ಹರಡಿರಬೇಕು.

ಸನಾತನ ಧರ್ಮದ ಅನುಭಾವ

ಬೌದ್ಧ ಜೈನಮತಗಳು ಖಿಲವಾದರೂ ಅವುಗಳ ಉತ್ತಮ ಗುಣ ಗಳನ್ನು ಒಳಗೆ ಸೇರಿಸಿಕೊಂಡು ಹೆಚ್ಚು ಜನರದಾಗಿ ನಿಂತ ಮತವನ್ನು ಮುಖ್ಯಮತ ಸ್ಮಾರ್ತ ಮತ ಎಂದು ಹಿಂದೆ ಕರೆದಿದೆ. ಈ ಮತದಲ್ಲಿ ಇದೊಂದು ವಿಶೇಷ ಗುಣ. ಇದು ಇನ್ನು ಯಾವ ಮತದಿಂದಲೂ ಮರೆ ಯಾಗಿ ಹೋಗಿಲ್ಲ. ಈ ಮತವು ಮನುಷ್ಯ ವರ್ಗದ ಎಲ್ಲಾ ಅವಸ್ಥೆಗಳಿಗೂ ಅನುಕೂಲವಾದ ತತ್ತ್ವಗಳನ್ನು ಒಳಗೊಂಡಿದೆ. ಇದರಲ್ಲಿ ವೇದಾಂತದ

ಕಡೆಯ ಎಲ್ಲೆಯಲ್ಲಿ ಸುಳಿಯುವ ಜ್ಞಾನಿಯಿಂದ ಹಿಡಿದು ಸಾಮಾನ್ಯ ಜೀವನದಲ್ಲಿ ಬೀಳುತ್ತ ಏಳುತ್ತ ದೇವರನ್ನು ಒಬ್ಬ ಮನುಷ್ಯನಂತೆ ಭಾವಿಸಿ ಅವನ ಕೃಪೆಯನ್ನು ಸಂಪಾದಿಸುವುದಕ್ಕೆ ಅವನಿಗೆ ತೆಂಗಿನಕಾಯಿ ಒಡೆಯ ಬೇಕು ಎನ್ನುವ ಸಾಮಾನ್ಯ ಜ್ಞಾನಿಯವರೆಗೆ ಎಲ್ಲ ಮಟ್ಟದ ಸಂಸ್ಕಾರದ ಜನಕ್ಕೂ ಸ್ಥಳವಿದೆ; ಮಾನವ ಹೃದಯದ ಎಲ್ಲ ಭಾಗಕ್ಕೂ ಒಂದು ಅವಕಾಶ ವಿದೆ; ಅಲ್ಲಿಂದ ಮುಂದಕ್ಕೆ ಒಯ್ಯಲು ದಾರಿಯಿದೆ. ಇದರ ತತ್ತ್ವಗಳು ಇಷ್ಟೇ ಎಂದು ಹೇಳುವಂತಿಲ್ಲ. ಆದರಿಂದ ಇದು ಒಂದು ಮತವೇ ಎಂದು ಕೆಲವರು ಪ್ರಶ್ನೆಮಾಡುವಂತೆ ಕೂಡ ಆಗಿದೆ. ಇದು ತತ್ತ್ವ ಕೆಲವನ್ನು ಹೇಳಿ ಅದಕ್ಕೆ ಒಪ್ಪಿದವರೇ ತನ್ನವರೆನ್ನುವುದಿಲ್ಲ. ಬಂದ ಎಲ್ಲಾ ಜನರನ್ನು ತನ್ನವ ರೆಂದು ಅವರ ಬದುಕನ್ನು ವ್ಯವಸ್ಥೆಗೊಳಿಸುವುದಕ್ಕೆ ಏರ್ಪಾಡುಮಾಡಿದೆ. ಇದರಲ್ಲಿ ಸಮಾಜದ ಬೆಳವಣಿಗೆಗೆ ವ್ಯಕ್ತಿಯ ಬೆಳವಣಿಗೆಗೆ ಆವಶ್ಯಕವಾದ ಮುಖ್ಯ ಸೂತ್ರಗಳೆಲ್ಲ ಅಡಕವಾಗಿವೆ; ದಿನದ ಆಚಾರ, ವ್ಯವಹಾರ, ಪೂಜೆ ಪುರಸ್ಕಾರ, ಹಬ್ಬಹುಣ್ಣಿಮೆ, ಇರುವುದು ಹೋಗುವುದು, ಕಷ್ಟ ಸುಖ—ಎಲ್ಲವೂ ಒಂದು ಉಚ್ಚ ನಿಯಮಕ್ಕೆ ವಿಧೇಯವಾಗಿ ನಡೆದುಕೊಳ್ಳುತ್ತವೆ. ಇದು ಜನದ ಜೀವನದಲ್ಲಿ ಗಾಳಿಯಂತೆ ಬೆಳಕಿನಂತೆ ಎಲ್ಲೆಡೆಯನ್ನು ವ್ಯಾಪಿಸಿ ಅದನ್ನು ಸಾಧ್ಯವಾದಲ್ಲೆಲ್ಲ ತಿದ್ದುತ್ತ ಇದ್ದಿದೆ.

ಸ್ಮಾರ್ತ ಮತವು ತಿಳಿವನ್ನೆಲ್ಲ ಜನರಿಂದ ಮರೆಯಿಸಿತ್ತೆಂದೂ ಸಾಮಾನ್ಯ ಜನರನ್ನೆಲ್ಲ ಪುರೋಹಿತ ವರ್ಗಕ್ಕೆ ಅಧೀನವಾಗಿ ಮಾಡಿತ್ತೆಂದೂ ಪಾಶ್ಚಾತ್ಯ ಧರ್ಮಜ್ಞರು ಹೇಳುವುದುಂಟು. ಇತ್ತೀಚೆಗೆ ನಮ್ಮ ಜನರೂ ಈ ಮಾತನ್ನು ಹೇಳುತ್ತಿದಾರೆ. ಜನರಿಗೆಲ್ಲ ಓದುಬರಹ ಕಲಿಸಲು, ಜನರಿಗೆ ಜ್ಞಾನ ಸಂಪಾದನೆಯ ಸಾಧನವನ್ನು ಕೊಡಲು, ಹಿಂದೆ ಸಾಕಾದಷ್ಟು ಪ್ರಯತ್ನ ನಡೆಯಲಿಲ್ಲವೆಂದರೂ ಜನಾಂಗದ ಜ್ಞಾನದ ಸಾರವನ್ನು ಜನರಲ್ಲಿ ಹರಡುವುದಕ್ಕೆ ನಮ್ಮ ಪೂರ್ವಿಕರು ಪ್ರಯತ್ನಮಾಡದೆ ಬಿಡಲಿಲ್ಲವೆಂದು ಈ ಮೊದಲೇ ಸೂಚಿಸಿದೆ. ಈ ಮತವು ಮುಖ್ಯವಾದ ಆಚಾರವನ್ನು ವಿಧಿಸಿ ಬದುಕನ್ನು ತಿದ್ದಿತು. ನಾವು ಈಚೆಗೆ ಕರ್ಮವೆಂದರೆ ಹಾಸ್ಯ ಮಾಡುವುದಕ್ಕೆ ಆರಂಭಮಾಡಿದೇವೆ. ಸಂಧ್ಯಾವಂದನೆಯನ್ನೇಕೆ ಮಾಡ ಬೇಕು? ಎನ್ನುವೆವು. ನಮ್ಮ ತಾತಂದಿರು ಕಟ್ಟುನಿಟ್ಟಾಗಿ ಒಂದು ಗಳಿಗೆ

ಯಾದರೂ ದೇವರನ್ನು ನೆನೆಯುತ್ತಿದ್ದ ಸಂದರ್ಭದಲ್ಲಿ ನಾವು ಒಂದು ಕ್ಷಣ ವಾದರೂ ನೆನೆಯುವುದಿಲ್ಲ. ದೇವರ ಪೂಜೆಗೆ ದೇವಾಲಯಕ್ಕೆ ಏಕೆ ಹೋಗ ಬೇಕು ಎನ್ನುವೆವು; ದೇವಾಲಯಕ್ಕೆ ಹೋಗುವುದೂ ಇಲ್ಲ ಬೇರೆಕಡೆ ದೇವರನ್ನು ಪೂಜಿಸುವುದೂ ಇಲ್ಲ. ಮಾಡಬೇಕಾದದ್ದೆಂದು ನಿರ್ಧಾರವಾದ ಕೆಲಸವನ್ನು ಜನರು ಮಾಡುವರು. ಇಂದು ಅದರ ಅರ್ಥ ತಿಳಿಯದಿದ್ದರೂ ಮುಂದೆ ಅದನ್ನು ಅವರು ತಿಳಿಯಬಹುದು. ಕರ್ಮವನ್ನು ನಿಯಮಿಸು ವುದರ ಉದ್ದೇಶ್ಯ ಇದು. ಅನೇಕ ಸಂದರ್ಭದಲ್ಲಿ ಮೊದಲು ಅರ್ಥ ತಿಳಿದಿದ್ದು ಆಮೇಲೆ ಮರೆಯುವುದೂ ನಿಜ. ಆದರೆ ಅದರಿಂದ ಮೊದಲು ಏರ್ಪಾಡು ಮಾಡಿದವರಮೇಲೆ ತಪ್ಪು ಹೊರಿಸುವುದು ಸರಿಯಲ್ಲ. ಸ್ಮಾರ್ತ ಮತವು ಮೊದಲು ವಿಶೇಷವಾಗಿ ಕರ್ಮವನ್ನು ವಿಧಿಸಿ ಸಾಮಾನ್ಯ ಜನರ ಬಾಳನ್ನು ಸಂಸ್ಕರಿಸಲು ಯತ್ನಮಾಡಿತು. ಬರಿಯ ಕರ್ಮದಿಂದ ಜನ ಉದ್ಧಾರವಾಗ ಲಿಲ್ಲವೆಂದು ಹೊಸ ಮತಗಳು ಏಳಲು ಅವುಗಳ ಉತ್ತಮ ಭಾಗಗಳನ್ನು ಸ್ವೀಕರಿಸಿ ಭಕ್ತಿಮಾರ್ಗವನ್ನು ಜನರಲ್ಲಿ ಪ್ರಚಾರಕ್ಕೆ ತಂದಿತು. ಇತರ ಮತಗಳು ದೇಶಭಾಷೆಗಳ ಸಹಾಯದಿಂದ ನೀತಿಯನ್ನು ಕಲಿಸಬಂದದ್ದನ್ನು ನೋಡಿ ತಾನೂ ದೇಶಭಾಷೆಯ ಸಹಾಯವನ್ನು ತೆಗೆದುಕೊಂಡಿತು. ಕಾಲಾನುಗುಣವಾಗಿ ಹೊಸ ಪದ್ಧತಿಗಳನ್ನು ಅನುಸರಿಸುತ್ತ ತನ್ನ ಕರ್ತವ್ಯವನ್ನು ಸಾಧ್ಯವಾದಷ್ಟು ಮಟ್ಟಿಗೆ ನಡೆಯಿಸುತ್ತ ಬೆಳೆಯಿತು.

ಸ್ಮಾರ್ತ ಮತವು ಸಾಮಾನ್ಯ ಜನರನ್ನು ಮರೆಯಲಿಲ್ಲವೆನ್ನುವುದು ಶಂಕರಾಚಾರ್ಯರ ಮತ್ತು ಅವರ ಶಿಷ್ಯರ ಶ್ಲೋಕಮಂಜರಿಗಳಿಂದ ವ್ಯಕ್ತ ವಾಗುತ್ತದೆ. ಈ ಶ್ಲೋಕಗಳಿಗಿಂತ ಸರಳವಾದ ಭಾಷೆಯಲ್ಲಿ ಇವು ಹೇಳು ವಷ್ಟು ತತ್ತ್ವವನ್ನು ಹೇಳುವ ಶ್ಲೋಕಗಳನ್ನು ಮತ್ತೆ ಯಾವ ಭಾಷೆಯಲ್ಲಿ ಯಾದರೂ ನೋಡುವುದು ದುರ್ಲಭ. ಆ ಶ್ಲೋಕಗಳಲ್ಲಿ ಹೇಳಿರುವ ತತ್ತ್ವ ಗಳಂತೂ ಹಿರಿಯರು ಕಿರಿಯರಿಗೆನ್ನದೆ ಸರ್ವರಿಗೂ ಬೇಕಾದುವಾಗಿವೆ. ಶಾಂಕರ ಮತವು ಜೀವವನ್ನೇ ಪರಮಾತ್ಮನೆಂದು ಹೇಳುತ್ತದೆಂದೂ, ಸೃಷ್ಟಿಯ ನ್ನೆಲ್ಲಾ ಮಾಯೆಯೆಂದು ವರ್ಣಿಸುತ್ತದೆಂದೂ, ಅದರಿಂದ ಮನುಷ್ಯನು ಕೆಲಸ ಮಾಡುವುದಕ್ಕೆ ಕಾರಣವೇ ಇಲ್ಲದೆ ಹೋಗುತ್ತದೆಂದೂ ಒಳ್ಳೆಯತನಕ್ಕೆ ಸಾಕಾದ ಪ್ರಯೋಜನವು ನಾಶವಾಗುತ್ತದೆಂದೂ ಸಾಮಾನ್ಯವಾದ ಭಾವ

ನೆಯು ಕೆಲವು ಜನರಲ್ಲಿ ಹರಡಿದೆ. ಈ ದೋಷಗಳನ್ನು ಈ ಮತದ ವಿರೋಧಿಗಳು ಇದಕ್ಕೆ ಆರೋಪಿಸುವರು. ಇದೆಲ್ಲ ಭ್ರಮೆಯ ಮಾತು. ಶಾಂಕರಮತವನ್ನು ಅನುಸರಿಸುವವರು ಕೂಡ ಅದ್ವೈತವು ಕಷ್ಟಸಾಧ್ಯವೆಂದು ಬಲ್ಲರು. ಆ ಮತವಾಗಲಿ ಮನುಷ್ಯನನ್ನು ಇಷ್ಟಬಂದಹಾಗೆ ಮಾಡೆಂದು ಹೇಳುವುದಿಲ್ಲ; ಶುಷ್ಕ ಮಾಯಾವಾದದಲ್ಲಿ ಬದುಕನ್ನು ಮುಗಿಸು ಎನ್ನುವುದಿಲ್ಲ; ಒಳ್ಳೆಯದರಿಂದ ಪ್ರಯೋಜನವಿಲ್ಲವೆನ್ನುವುದಿಲ್ಲ. ಆಚಾರ್ಯರ ಭಜಗೋವಿಂದಂ ಶ್ಲೋಕಮಂಜರಿಯಲ್ಲಿ ಈ ಮುಖ್ಯ ತತ್ತ್ವವು ಸ್ಪಷ್ಟವಾಗುವುದು. ಗೋವಿಂದನನ್ನು ಭಜಿಸು. ಸಾವು ಬಂದಾಗ ಡುಕೃಂಕರಣೆಯು ರಕ್ಷಿಸುವುದಿಲ್ಲ. ಜ್ಞಾನದ ಸಲಕರಣೆ ಜ್ಞಾನವಲ್ಲ; ಜ್ಞಾನವನ್ನೇ ಸಂಪಾದಿಸು; ಅದರಂತೆ ನಡೆ. ನಾನು ಯಾರು ಎಲ್ಲಿಂದ ಬಂದೆ ಎಲ್ಲಿಗೆ ಹೋಗುತ್ತೇನೆ ಎಂದು ಯೋಚನೆ ಮಾಡು. ಇದು ಬುದ್ಧಿವಂತನ ಲಕ್ಷಣ. ಸಾಮಾನ್ಯನು ಬಾಲ್ಯದಲ್ಲಿ ಆಟದಲ್ಲಿಯೂ ಯೌವನದಲ್ಲಿ ಸುಖದಲ್ಲಿಯೂ ವಾರ್ಧಿಕ್ಯದಲ್ಲಿ ಚಿಂತೆಯಲ್ಲಿಯೂ ಮಗ್ನನಾಗಿರುತ್ತಾನೆ; ಹೀಗಿರಬಾರದು. ಪರವಸ್ತುವಿನ ಸ್ವರೂಪವನ್ನು ಅರಿ. ಅದರ ವಿಶ್ವನಿಯಮಕ್ಕೆ ಅನುಗುಣವಾಗಿ ನಡೆದುಕೋ. ಸರಿಯಾದ ಭಾವದಿಂದ ಗೀತೆಯ ಒಂದು ಮಾತನ್ನು ಪಾಠ ಮಾಡಿದರೂ ಮುಕ್ತಿಯುಂಟು; ಅದಿಲ್ಲದೆ ಗೀತೆಯೆಲ್ಲವನ್ನೂ ಪಾಠಮಾಡಿ ಪ್ರಯೋಜನವಿಲ್ಲ. ವಿಷಯಸುಖವು ಹೇಯವಾದದ್ದು, ಕ್ಷಣಿಕವಾದದ್ದು; ಅದಕ್ಕೆ ಮನಸ್ಸನ್ನು ಕೊಡಬೇಡ. ನಿತ್ಯಸುಖವು ಹಿರಿಯದು; ಅದನ್ನು ಅಪೇಕ್ಷಿಸು; ಅದನ್ನು ಸಂಪಾದಿಸಲು ಯತ್ನಮಾಡು; ಇತ್ಯಾದಿ. ಇತ್ಯಾದಿ. ವೇದಾಂತದ ಸಾರವೇ ಈ ಶ್ಲೋಕಗಳಲ್ಲಿ ಭಟ್ಟಿ ಇಳಿದಿದೆ.

ಅನುಭವಾಮೃತ ಕಾವ್ಯ

ಕಾಲಕ್ರಮದಲ್ಲಿ ಜನದ ಉಪದೇಶಕ್ಕಾಗಿ ಸ್ಮಾರ್ತಮತಾವಲಂಬಿಗಳಿಂದ ಅನೇಕ ಷಟ್ಪದೀ ಕಾವ್ಯಗಳು ಸೃಷ್ಟವಾದುವು. ಬರಬರುತ್ತ ಜ್ಞಾನವು ಮುಖ್ಯವೇ ಹೊರತು ಅದನ್ನು ಕಲಿಯುವುದು ಯಾವ ಭಾಷೆಯಲ್ಲಿ ಎಂಬುದು ಮುಖ್ಯವಲ್ಲ ಎಂಬುದು ಜನರಿಗೆ ತೋರಿತು. ಇದಿಷ್ಟು ಕಷ್ಟವಾದ ವಿಷಯವೇ ಎಂದು ನಾವು ಕೆಲವರು ಕೇಳಬಹುದು. ನಿಜ

ವಾಗಿಯೂ ಇದು ಬಹಳ ಕಷ್ಟ. ಪ್ರಪಂಚದಲ್ಲೆಲ್ಲಾ ಈ ಕಷ್ಟದ ಅನುಭವ ಉಂಟಾಗಿದೆ. ಲ್ಯಾಟಿನ್, ಗ್ರೀಕ್ ಭಾಷೆಗಳಿಂದ ಕ್ರೈಸ್ತ ಬೈಬಲ್ ಗ್ರಂಥವು ಸಾಮಾನ್ಯ ಜನದ ಭಾಷೆಗಳಿಗೆ ಭಾಷಾಂತರವಾಗಬೇಕಾದರೆ ಸಾವಿರದ ಐದುನೂರು ವರ್ಷ ಕಳೆಯಿತು. ಇಂಥಾ ಭಾವನೆ ಇನ್ನೂ ನಮ್ಮಲ್ಲಿ ಹೋಗಿಲ್ಲ. ಸಂಸ್ಕೃತದ ವಿಷಯದಲ್ಲಿ ಸಂಸ್ಕೃತ ಪಂಡಿತರಿಗಿರುವ ಈ ಭಾವನೆಯು ಇಂಗ್ಲೀಷ್ ಭಾಷೆಯ ವಿಷಯದಲ್ಲಿ ಇಂಗ್ಲೀಷನ್ನು ಕಲಿತ ನಮಗೆ ಇದೆ. ಇಂಗ್ಲೀಷಿನಲ್ಲಿ ಇರುವ ವಿಷಯವನ್ನು ಕನ್ನಡದಲ್ಲಿ ಹೇಳುವುದು ಸಾಧ್ಯವೇ ಎಂದು ನಮ್ಮಲ್ಲಿ ಅನೇಕರಿಗೆ ಈಗಲೂ ಸಂದೇಹ. ಕನ್ನಡದ ಜನದ ತಲೆಗೆ ಅಂಟಬಹುದಾದ ಭಾವವೆಲ್ಲಾ ಕನ್ನಡದ ನುಡಿಯಲ್ಲಿ ಹೇಳಲು ಸಾಧ್ಯವಾಗುವುದೆಂದು ನಾವು ಒಮ್ಮೆಗೆ ಒಪ್ಪುವುದಿಲ್ಲ. ಹಿಂದೆ ಈ ಭಾವವು ಬರುವುದು ಹೀಗೆಯೇ ಸಾವಕಾಶವಾಯಿತು. ಬಂದಾಗ್ಯೆ ಕನ್ನಡ ನಾಡಿನ ಜ್ಞಾನಿಗಳು ಜನರಿಂದ ಯಾವುದನ್ನೂ ಬಚ್ಚಿಡಲಿಲ್ಲ. ಅನುಭವಾಮೃತವೆಂಬ ಗ್ರಂಥದಿಂದ ಈ ವಿಷಯ ಸ್ಪಷ್ಟವಾಗುತ್ತದೆ.

ಕನ್ನಡವನ್ನು ಸುಲಿದ ಬಾಳೆಯ ಹಣ್ಣಿನಂದ ಕಳೆದ ಸಿಗುರಿನ ಕಬ್ಬಿನಂದ ಎಂದು ಮೊದಲಾಗಿ ಹೊಗಳುವ ಪದ್ಯವನ್ನು ನಾವೆಲ್ಲಾ ಕೇಳಿರುವೆವು. ಆ ಪದ್ಯದಲ್ಲಿಯ ಉಜ್ವಲ ಭಾಷಾಪ್ರೇಮವು ಈಗ ದೇಶವತ್ಸಲರೆನ್ನಿಸಿಕೊಳ್ಳುವ ನಮ್ಮಲ್ಲಿ ಕೂಡ ಅನೇಕರಿಗೆ ಇರಲಾರದು. ಸಂಸ್ಕೃತದ ಗಂಧವನ್ನೇ ಅರಿಯದವರಾದರೂ ನಾವು ಸಂಸ್ಕೃತದಲ್ಲೇನಿದೆ ಎಂದು ಹೇಳುವುದಕ್ಕೆ ಹಿಂಜರಿಯುತ್ತೇವೆ. ಇಂಗ್ಲೀಷಿನಲ್ಲೇನಿದೆ ಎಂದು ಯಾರೂ ಹೇಳುವ ಸಂದರ್ಭವೇ ಇಲ್ಲ. ಆದರೂ ಹಲವು ಶತಮಾನಗಳ ಹಿಂದೆ ಅನುಭವಾಮೃತ ಗ್ರಂಥವನ್ನು ಬರೆದ ಕವಿಯು ಕನ್ನಡವನ್ನು ಸಾಕೆಂದದ್ದಲ್ಲದೆ ಸಂಸ್ಕೃತದಲ್ಲಿ ಇನ್ನೇನಿದೆ ಎಂದನು. ಇವನ ಕಾವ್ಯದಲ್ಲಿ ಹೇಳಿರುವ ವಿಷಯ ಮುಕ್ತಿ ಸಾಧನೆಯ ಮಾರ್ಗ. ತಿಳಿವನ್ನು ಎಲ್ಲರಿಗೂ ಎರಚುವುದೇ, ಬೇಡಿಬಂದವರಿಗೆ ಮಾತ್ರ ಕೊಡುವುದೇ, ಎಂಬುದು ಚರ್ಚಾರ್ಹವಾದ ವಿಷಯ. ಸಂತೆಯಲ್ಲಿ ತತ್ತ್ವವನ್ನು ಬೋಧಿಸುವುದು ಮೂರ್ಖತನ ಎಂಬ ಸಂಪ್ರದಾಯವಿರುವಲ್ಲಿ ಬೇಕಾದವರು ಓದಲಿ ಎಂದು ಈತನು ಕನ್ನಡದಲ್ಲಿ

ಈ ಗ್ರಂಥವನ್ನು ಬರೆದಿಟ್ಟನು. ಇದನ್ನು ನೋಡಿದರೆ ನಮಗೆ ಈತನ ಔದಾರ್ಯ ಎಷ್ಟು ಹಿರಿಯದೆಂದು ವ್ಯಕ್ತವಾಗುವುದು. ಈ ಗ್ರಂಥವು ಜನದಲ್ಲಿ ಬಹಳ ವಾಡಿಕೆಗೆ ಬಂದಿತು. ದತ್ತಪುತ್ರನಿಗೆ ಪಿತಕ್ಕೆ ಪಿತೃಭಕ್ತಿ ಎಂಬ ರೀತಿಯ ಮಾತುಗಳು ಈ ಗ್ರಂಥದಲ್ಲಿ ಹಲವು ಬರುತ್ತವೆ. ಇಂಥಾ ನಾಣ್ನುಡಿಗಳನ್ನು ಜನಕ್ಕೆ ಈ ಗ್ರಂಥವೇ ಕೊಟ್ಟಿರಬಹುದು. ಸ್ಮಾರ್ತಮತದಿಂದ ಜನರಲ್ಲಿ ಹರಡಿತೆನ್ನುವ ತಿಳಿವಿನ ಲಕ್ಷಣಗಳು ಈ ಗ್ರಂಥದ ಕೆಲವು ಅಧ್ಯಾಯಗಳನ್ನು ನೋಡುವುದರಿಂದ ನಮಗೆ ತಿಳಿದು ಬರುವುದು.

ಮುಕ್ತಿಯೇ ಶಾಶ್ವತವಾದ ಸುಖ. ಅದನ್ನು ಪಡೆಯಲು ಯತ್ನಿಸುವುದೇ ಮಾನವನಿಗೆ ಯೋಗ್ಯ ಕರ್ತವ್ಯ ಎನ್ನುವುದೇ ಈ ಗ್ರಂಥದ ಮೂಲಸೂತ್ರ. ಮುಕ್ತಿ ಎಂದರೆ ಬ್ರಹ್ಮಜ್ಞಾನ. ಬ್ರಹ್ಮಜ್ಞಾನಕ್ಕೆ ಅಧಿಕಾರಿ ಯಾರು ಎಂದು ಹೇಳುವುದರಲ್ಲಿ ಕವಿಯು ಸಜ್ಜನನ ಲಕ್ಷಣಗಳನ್ನು ಹೇಳುತ್ತಾನೆ. ಇಂಥಾ ಮನುಷ್ಯನು ದಾನ ಧರ್ಮದಯಾಸ್ಪಿತನಾಗಿರಬೇಕು; ನಿರ್ಮಾನಮದಮತ್ಸರನಾಗಿರಬೇಕು; ಜ್ಞಾನಸಾಧನ ಶಮದಮಾದಿ ವಿಧಾನ ನಿರತನಾಗಿರಬೇಕು. ದಂಭದರ್ಪಗಳೇನೂ ಇಲ್ಲದ ಶಾಂತನಾಗಿರಬೇಕು. ಬಂದ ಸುಖದುಃಖಗಳು ತನ್ನನ್ನು ಮುಂದುಗೆಡಿಸಲು ನೋಯದುಬ್ಬದೆ ಬಂದುದೆಲ್ಲವೂ ಈಶ್ವರಾಜ್ಞೆ ಎನ್ನುತ್ತಾ ಧೈರ್ಯವನ್ನು ತಂದು ಮನದಲ್ಲಿ ದೃಢ ವಿರಕ್ತಿಯ ಹೊಂದಿ ಭೋಗಭ್ರಾಂತಿಯುಳಿದರೆ ಅಂದು ಮನುಜನು ಮುಕ್ತನೆನಿಸುವನು. ಇಂಥವನು ತರುಣಿಯರು ತನ್ನಿದಿರೊಳೆಸೆದಿರೆ ಕುರುಡನಂತಿರುವನು. ಅನ್ಯರು ಪರರ ನಿಂದೆಯನೊರೆಯಲು ಬಧಿರನಂದದಿ ಕೇಳನದನೊಲಿದು; ಕರವಿಕಲನಂದದಲಿ ಹಿರಿದಾದರೂ ಪರಧನವನು ಹಿರಿಯನು. ದುಷ್ಟರು ತನ್ನನ್ನು ಜರಿಯೆ ಮರಳಿ ಜರಿಯ. ಎಡರಿನಲಿ ಎದೆಗುಂದದುಬ್ಬದೆ ಪೊಡವಿಗಧಿಪತಿಯಾಗೆ ಹಿಗ್ಗದೆ ಬಡತನದಿ ಕಂಗೆಡದೆ ವಿತ್ತವ ಗಳಿಸಿ ಗರ್ವಿಸದೆ ಮಡದಿ ಮನೆ ಮನೆವಾರ್ತೆ ಮಕ್ಕಳ ಗೊಡವಿಯಲಿ ಕಡು ಮಮತೆ ಇಲ್ಲದೆ ದೃಢವಿರಕ್ತಿಯಲಿರಲು ಮನುಷ್ಯನು ಮೋಕ್ಷ ಪಡೆಯುವನು. ಈ ದಾರಿಗೆ ಮನಸ್ಸನ್ನು ಕೊಡದೆ ಸಂಸಾರದಲ್ಲೇ ಮನಸ್ಸಿಟ್ಟವನು ಕೆಟ್ಟುಹೋಗುವನು. ಮಾಯೆ ಮೊದಲೇ ಮುಚ್ಚಿದೆ. ಅದರಮೇಲೆ

ಸಂಸಾರಕ್ಕೆ ಸೋತರೆ ಮರುಳು ಹಿಡಿದವನು ಮದ್ದು ಗುಳಿಕೆಯನು ತಿಂದಂತಾಯಿತು. ಇಂಥಾ ಮನುಷ್ಯನಿಗೆ ಬರಬರುತ್ತಾ ಸಂಸಾರದ ತೊಡರು ಹೆಚ್ಚುವುದೇ ಹೊರತು ಕಡಿಮೆಯಾಗಲಾರದು. ತೆರಳೆಯ ಹುಳು ನಡೆದಂತೆಲ್ಲಾ ಅದರ ಭಾರ ಹೆಚ್ಚುವಂತೆ ಇವನ ಸ್ಥಿತಿ. ಇಂಥವರಿಗೆ ಸಂಸಾರದಲ್ಲಿ ಸಿದ್ಧವಾದ ಜರೆ ಮರವು ಮರಣವೆಂಬ ದುಃಖವು ತಪ್ಪಿದ್ದಲ್ಲ. ಒರಳಲ್ಲಿ ತಲೆಯಿಟ್ಟವನಿಗೆ ಒನಕೆಯ ಪೆಟ್ಟು ತಪ್ಪಿದ್ದೆ? ಭವಕ್ಕೆ ಸಿಕ್ಕಿದ ಮೇಲೆ ಅದರ ಕಷ್ಟ ಸಿದ್ಧ. ಕೊರಳಿಗೆ ಸುತ್ತಿದ ಹಾವು ಕಚ್ಚದೆ ಮರಳು ವುದೆ? ಇಂಥವನು ಮೋಕ್ಷದ ಮಾತನ್ನು ನೆನೆದರೂ ಪ್ರಯೋಜನವಿಲ್ಲ. ಕಣ್ಣು ಕಾಣದವನಿಗೆ ಕನ್ನಡಿಯೇಕೆ? ನಪುಂಸಕನಿಗೆ ರಾಣಿಯೇಕೆ? ಇಷ್ಟಕ್ಕೆ ಅವನು ಅದನ್ನು ಲಕ್ಷಿಸಲೂ ಆರನು. ಕತ್ತೆ ಕತ್ತುರಿಯನ್ನರಿವುದೇ? ದತ್ತಾಗಿ ಹೋದ ಮಗನಿಗೆ ಹೆತ್ತ ತಂದೆಯಮೇಲೆ ಭಕ್ತಿ ಹೇಗೆ ಬರಬೇಕು? ಅವನು ಬೇರೆಯ ಜನಕ್ಕೆ ಸೇರಿದನು. ಸಂಸಾರಕ್ಕೆ ಮಾರುಹೋದವನಿಗೆ ಪರತತ್ತ್ವದ ಮಾತೇಕೆ. ಇಂಥವನು ವೇದಾಂತದ ಲಾಂಛನವನ್ನು ಧರಿಸಿದರೂ ವೇದಾಂತಿಯಾಗಲಾರನು. ಎತ್ತಿಗೆ ಲಿಂಗಮುದ್ರೆ ಹಾಕಿದರೆ ಅದು ಬಸವ ನಾಗುವುದು. ಕತ್ತೆಗೆ ಲಿಂಗಮುದ್ರೆ ಹಾಕಿದರೆ ಕತ್ತೆಯಲ್ಲದೆ ಬಸವ ನಾಗಲಾರದು. ಅಧಿಕಾರವಿಲ್ಲದವನು ನನಗೇಕೆ ಎಂದು ಬಿಡುವುದಕ್ಕೂ ಇಲ್ಲ. ಅಧಿಕಾರವನ್ನು ಸಂಪಾದಿಸುವುದಕ್ಕೆ, ಅದಕ್ಕೆ ಬೇಕಾದ ಜ್ಞಾನವನ್ನು ಸಂಪಾದಿಸುವುದಕ್ಕೆ, ಯತ್ನಮಾಡಬೇಕು. ಜ್ಞಾನವನ್ನು ಸಂಪಾದಿಸದವನ ಬದುಕು ವ್ಯರ್ಥ. ನಿಜವಾದ ಜ್ಞಾನವನ್ನು ಪಡೆಯುವುದು ಸುಲಭವಲ್ಲ. ಬರಿಯ ದಾರಿಯನ್ನರಿತ ಮಾತ್ರದಿಂದ ಅದು ಬರುವುದೂ ಇಲ್ಲ. ಮೀನು ನೀರಿನಲ್ಲಿದ್ದರೆ ಅದಕ್ಕೆ ಸ್ನಾನವಾಯಿತೆ? ಬಕ ಧ್ಯಾನದಲ್ಲಿದ್ದೇನು? ಮರ್ಕಟ ಕಾನನದಲ್ಲಿದ್ದೇನು? ಕೋಗಿಲೆ ಮೌನದಲ್ಲಿದ್ದೇನು? ಇವು ಏನನ್ನೂ ಸಾಧಿಸಲಾರವು. ಹೀಗೆಯೇ ಬರಿಯ ತಪದಿಂದ ಫಲವಿಲ್ಲ. ಹುತ್ತ ಬಡಿದರೆ ಹಾವು ಸಾವುದೇ? ಮೈಯನ್ನು ಬಣಗಿಸಿದರೆ ಆಸೆ ಬತ್ತುವುದೇ? ಮುಖ್ಯ ಮನುಷ್ಯನಿಗೆ ಮನಸ್ಸಿನಲ್ಲೆ ಸಂಸಾರವು ಅಸಾರವೆಂಬ ಜ್ಞಾನವು ಹುಟ್ಟ ಬೇಕು. ಆಗ ಅವನು ಬೇರೆಯಾದ ನಿತ್ಯಸುಖವನ್ನು ಅಪೇಕ್ಷಿಸುವನು. ಸಂಸಾರವು ಅಸಾರವೆಂಬುದು ಸ್ವಲ್ಪ ಯೋಚಿಸಿದರೆ ತಿಳಿಯುತ್ತದೆ. ಮನು

ಷ್ಯನು ಹುಟ್ಟುತ್ತ ತಾನೊಬ್ಬ ಸಾಯುವಾಗ ತಾನೊಬ್ಬ ಮಧ್ಯೆ ಬಂಧುಗಳ ಸಂಸರ್ಗ. ದಾರಿಯಲ್ಲಿ ನಡೆಯುವ ಮನುಜರು ಅರವಟ್ಟಿಗೆಯಲ್ಲಿ ಸೇರಿ ದಾಹವನ್ನು ಕಳೆದುಕೊಂಡು ಆಮೇಲೆ ತಮ್ಮ ತಮ್ಮ ದಾರಿಯಲ್ಲಿ ಹೋಗು ವಂತೆ ಸಂಸಾರ. ಮರದಮೇಲೆ ಸೂರಾರು ಹಕ್ಕಿಗಳು ಸೇರಿ ಗಜಿಬಿಜಿ ಮಾಡಿ ಸ್ವಲ್ಪ ಹೊತ್ತುಹೋದನಂತರ ತಮ್ಮ ತಮ್ಮ ಕಡೆಗೆ ನಡೆಯುವಂತೆ ಸಂಸಾರ. ಮನುಷ್ಯನಿಗೆ ಸ್ಥಿರವಾದ ನಂಟು ಒಂದೂ ಇಲ್ಲ. ಒಂದೊಂದು ವಯಸ್ಸಿನಲ್ಲಿ ಒಬ್ಬೊಬ್ಬರು ರಕ್ಷಕರು. ದೇಹವು ನೀರಮೇಲಣ ಗುಳ್ಳೆಯಂತೆ. ಅದನ್ನು ಉಳಿಸಿಕೊಳ್ಳುವೆನೆಂಬ ಪ್ರಯತ್ನ ನೀರ ಗುಳ್ಳೆಗೆ ಹಾಕುವ ಲೋಹದ ಕಟ್ಟು. ಮೃತ್ಯುವಿಗೆ ಸೇರಿದ ಮೈಯನ್ನು ಮನುಷ್ಯನು ಮುದ್ದಿ ಸುವುದು ಜಾರೆಯಾದ ಹೆಂಡತಿಯ ಮಗುವನ್ನು ತನ್ನದೆಂದು ಭ್ರಮಿಸು ವಂತೆ. ಹಿಂಸೆಗೆಂದು ಜನಿಸಿರುವ ನಾವು ಏನೋ ಸ್ವಲ್ಪ ಸುಖದ ಕಡೆ ನೋಡು ತ್ತೇವೆ; ಹರಕೆಗೆ ತಂದ ಕುರಿ ತೋರಣದ ಚಿಗುರನ್ನು ತಿಂದಂತೆ. ಸರ್ಪದ ಬಾಯಲ್ಲಿರುವ ಕಪ್ಪೆ ಹತ್ತಿರಬಂದ ನೊಣವನ್ನು ಕಬಳಿಸುವುದಕ್ಕೆ ನೋಡು ವಂತೆ, ಕೇಡಿಗೆ ಉದ್ದಿಷ್ಟರಾದ ನಾವು ಇತರರಿಗೆ ಕೇಡನ್ನು ಬಗೆಯುವೆವು. ಧನವಿರಲು ನಂಟರು, ಇಲ್ಲದಿದ್ದರೆ ಯಾರೂ ಇಲ್ಲ. ಇತರರಿಗೆ ಅನ್ಯಾಯ ಮಾಡಿ ತನ್ನವರನ್ನು ಸಾಕುವುದೂ ಬೇರೆಯವರನ್ನೆಲ್ಲಾ ಬಿಟ್ಟು ತನ್ನ ಹೆಂಡತಿ ಮಕ್ಕಳೆಂದು ಅವರನ್ನೆಲ್ಲಾ ಸಾಕುವುದೂ ಪಾಪಕ್ಕೆ ದಾರಿ. ಎಲ್ಲರೂ ಕಾಲವಶರು. ಎಲ್ಲವೂ ಕರ್ಮಾಧೀನ. ಜಗದ ಕೆಲಸವೆಲ್ಲಾ ನಿಯಮವನ್ನನುಸರಿಸಿ ನಡೆಯುತ್ತಿದೆ. ಇದನ್ನು ತಿಳಿದು ನಾವು ಇದೆಲ್ಲಾ ಈಶ್ವರಾಜ್ಞೆಯೆನ್ನಬೇಕು. ಇದು ತಿಳಿಯದಿದ್ದರೆ ಮನುಷ್ಯನು ಉದ್ಧತ ನಾಗುವನು. ಕೋಪ ಕೆಟ್ಟುದು; ಕಾಮ ಕೆಟ್ಟುದು; ನೋಡಿದರೆ ಸ್ತ್ರೀಸಂಗ ಅಸಹ್ಯಕರ. ಒಂದೊಂದೇ ಇಂದ್ರಿಯವು ಕೇಡಿಗೆ ಕಾರಣ. ಇಂಥದ ರಲ್ಲಿ ನಾವು ಅನೇಕ ಇಂದ್ರಿಯಗಳಿಗೆ ಮನಗೊಟ್ಟರೆ ಗತಿಯೇನು? ಆದ್ದ ರಿಂದ ಮನುಷ್ಯನು ಮುಕ್ತಿಯೆಂಬ ನಿತ್ಯ ಸುಖದ ದಾರಿಯನ್ನು ನೋಡ ಬೇಕು. ಅದಿಲ್ಲದಿದ್ದರೆ ಇಲ್ಲಿಯ ಕ್ಷಣಿಕ ಸುಖ ಸ್ವರ್ಗದ ಕಲ್ಪದ ಸುಖ ಇದನ್ನು ಕಷ್ಟದೊಂದಿಗೆ ಬೆರಸಿ ಅನುಭವಿಸುತ್ತಾ ಸಂಸಾರ ಚಕ್ರದಲ್ಲಿ ಸುಮ್ಮನೆ ಸುತ್ತುವುದಾಗುತ್ತದೆ.

ತಿಳಿವು; ತಿಳಿವಿನ ಆಭಾಸ

ಅನುಭವಾಮೃತ ಕಾವ್ಯದ ಒಂದೆರಡು ಅಧ್ಯಾಯಗಳ ಈ ಸಾರಾಂಶ ಶ್ರವಣದಿಂದ ಈ ಗ್ರಂಥದಲ್ಲಿ ಎಷ್ಟು ಗಹನವಾದ ವಿಷಯವು ಎಷ್ಟು ಲಲಿತವಾಗಿ ಸರ್ವರಿಗೂ ಸಿಕ್ಕುವಂತೆ ಹೇಳಲ್ಪಟ್ಟಿತೆಂದು ತೋರುತ್ತದೆ. ಇದಿಷ್ಟು ವಿಷಯವೂ ಜನರಿಗೆಲ್ಲ ಸರಿಯಾಗಿಯೇ ತಿಳಿದಿತ್ತೆಂದಾಗಲಿ ಅಥವಾ ತಿಳಿದಿದ್ದರೂ ಎಲ್ಲರ ಜೀವನದಲ್ಲೂ ಅದು ಅನುಷ್ಠಾನಕ್ಕೆ ಬಂದಿತೆಂದಾಗಲಿ ಯಾರೂ ಹೇಳುವಂತಿಲ್ಲ. ಮುಖ್ಯವಾಗಿ ತಿಳಿವು ಎನ್ನುವುದನ್ನು ಜೀವನದಲ್ಲಿ ಸಾಧನೆಗೆ ತರುವುದು ವ್ಯಕ್ತಿಗಳಿಗೇ ಕಷ್ಟಸಾಧ್ಯ. ಇನ್ನು ಜನಾಂಗದ ಮಾತೇನು? ಮನುಷ್ಯನಿಗೆ ಬಹು ಜನ್ಮಗಳ ಸಂಸ್ಕಾರದಿಂದ ಜ್ಞಾನ ಲಭಿಸುವುದೆಂದು ಗೀತೆಯಿಂದ ತಿಳಿಯುತ್ತದೆ. ಇನ್ನು ಒಂದು ಜನ್ಮದಲ್ಲೇ ಒಳ್ಳೆಯದು ಸಿದ್ಧಿಗೆ ಬರುವುದೆಂದು ಯಾರು ಹೇಳಿಯಾರು? ಅಲ್ಲದೆ ಚಿನ್ನಕ್ಕೆ ಕಾಗೆಯ ಬಂಗಾರದಂತೆ ಒಳ್ಳೆಯದಾದ ಎಲ್ಲ ವಸ್ತುವಿಗೂ ಒಂದು ಆಭಾಸ ರೂಪವುಂಟು. ವೇದಾಂತಿಯ ಸಹನೆಯನ್ನು ಅನುಕರಿಸಹೋಗಿ ಸಾಮಾನ್ಯನು ಹೇಡಿಯಾಗಬಹುದು. ಎಲ್ಲರೂ ಸಮನೆಂದು ಕಾಣಬೇಕೆಂದು ಕಲಿತ ಮನುಷ್ಯನು ಯಾವ ಜೀವವೂ ಸಣ್ಣದಲ್ಲವೆಂದು ನಿಕೃಷ್ಟ ಜೀವಕ್ಕೂ ಒಂದು ಕನಿಕರವನ್ನು ತೋರುವ ಬದಲು ತನ್ನ ಗುರುವನ್ನೂ ರಾಜನನ್ನೂ ತನಗಿಂತ ಹಿರಿಯರಲ್ಲವೆಂದು ಭಾವಿಸುವುದರಲ್ಲಿ ಮುಗಿಯಬಹುದು. ನಮ್ಮ ಸೀಮೆಯಲ್ಲಿ ವೇದಾಂತದಿಂದ ಇಂಥ ವಿಕಾರ ಫಲಗಳು ಉಂಟಾಗಲಿಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಅದು ವೇದಾಂತದ ದೋಷವೂ ಅಲ್ಲ; ಅದನ್ನು ಸಾಮಾನ್ಯರಿಗೆ ಸುಲಭವಾಗಿ ಮಾಡಿದವರ ದೋಷವೂ ಅಲ್ಲ. ವೇದಾಂತದ ಸಾರವನ್ನು ಜನರ ಮುಂದಿಟ್ಟು ಜನರೇ ಅಧಿಕಾರವನ್ನು ಸಂಪಾದಿಸು ಎಂದೂ ಗುರುವಿನ ಮೂಲಕ ಜ್ಞಾನವನ್ನು ಸಂಪಾದಿಸು ಎಂದೂ ಹೇಳಿದರು. ಗುರುವಿಂದ ಕಲಿ ಎನ್ನುವುದರಲ್ಲಿ ಉದ್ದೇಶ ಅನುಷ್ಠಾನದ ದಾರಿಯು ಸರಿಯಾಗಿ ತಿಳಿಯಲಿ ಎನ್ನುವುದೇ. ಇಲ್ಲದಿದ್ದರೆ ವೇದಾಂತದ ಆಭಾಸಾಭ್ಯಾಸದಿಂದ ಬರುವ ದುಷ್ಪರಿಣಾಮವನ್ನು ಭಾವಿಸಬಹುದು. ನಿಜವಾದ ವೈರಾಗ್ಯಕ್ಕೆ ಬದುಕನ್ನು ಬಿಡುವುದು ಆವಶ್ಯಕವಲ್ಲ. ಆಸೆಯನ್ನು ಬಿಟ್ಟವನು ಏನನ್ನಾದರೂ

ಕಟ್ಟಿಕೊಳ್ಳಬಹುದು ; ಅವನು ಮುಕ್ತನು. ಆಸೆಯನ್ನಿಟ್ಟುಕೊಂಡವನು ಏನನ್ನು ಬಿಟ್ಟರೂ ಮುಕ್ತನಲ್ಲ. ವೈರಾಗ್ಯಬೋಧೆಯ ಉದ್ದೇಶವು ಕ್ಷಣಿಕವಾದ ಅಲ್ಪವಾದ ಸುಖವನ್ನು ಅಪೇಕ್ಷಿಸಬೇಡ, ನಿತ್ಯಸುಖವನ್ನು ಅಪೇಕ್ಷಿಸು, ಅದಕ್ಕಾಗಿ ವ್ಯವಸಾಯಮಾಡು ಎಂದಿತ್ತು. ಆದರೆ ಜನರಲ್ಲಿ ಈ ಎರಡನೇ ಮೆಟ್ಟಲು ಅಷ್ಟು ವಾಡಿಕೆಗೆ ಬರಲಿಲ್ಲ. ಬದುಕಿನಲ್ಲೇನಿದೆ ಎಂದು ಎಂಥವನೂ ಹೇಳಬಹುದು ; ಅದು ಮೋಕ್ಷಕ್ಕೆ ಸಾಧನವಾಗುತ್ತದೆ ಎಂದು ಹೇಳುವುದು ತಿಳಿದವರಿಗೆ ಮಾತ್ರ ಸಾಧ್ಯ.

ಸ್ಮಾರ್ತಮತದ ವೈರಾಗ್ಯ ಬೋಧೆಯು ಆಭಾಸದಿಂದ ಜನದಲ್ಲಿ ತಾಮಸ ವೈರಾಗ್ಯವಾದಂತೆ ಅದರ ಕರ್ಮ ವಿಧಿಯು ಜನರಲ್ಲ ಒಂದು ತಾಮಸ ರೀತಿಯಲ್ಲಿ ಪ್ರಚುರಕ್ಕೆ ಬಂದಿತು. ಕರ್ಮವೆನ್ನುವುದು ಜನರಲ್ಲಿ ಸ್ಥಿರವಾದ ಎಲ್ಲ ಮತಗಳಲ್ಲಿಯೂ ಒಂದು ಕಟ್ಟುಪಾಡಿಗೆ ಬರಲೇ ಬರುತ್ತದೆ. ಸನಾತನ ಧರ್ಮದಲ್ಲಿ ಆರಂಭದಲ್ಲಿ ಸಾಮಾನ್ಯವಾಗಿದ್ದ ಯಜ್ಞಗಳು ಬರ ಬರುತ್ತ ಬಹಳ ಹೆಚ್ಚಿಕೊಂಡು ಬೌದ್ಧ ಧರ್ಮದಲ್ಲಿ ಯಜ್ಞಗಳು ತಿರಸ್ಕಾರಕ್ಕೆ ಗುರಿಯಾದುವು. ಬೌದ್ಧಮತದಿಂದ ವಿನಿವರ್ತಿಯಾಗುವುದರಲ್ಲಿ ಸ್ಮಾರ್ತ ಮತವು ಪ್ರಾಯಶಃ ಕರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕಾಗಿ ಬಂದಿತು. ನಾನು ಈ ಮೊದಲು ಉದಾಹರಿಸಿರುವ ಜವರೇಗೌಡನು ಆ ಮಾತು ಈ ಮಾತು ಆಡುತ್ತಾ "ನಾವೇನು ಬ್ರಾಹ್ಮಣರೇ ಸ್ವಾಮಿ, ಇತ್ತಲಾಗಿ ಪಾಪಮಾಡಿ, ಇತ್ತಲಾಗಿ ಸಂಧ್ಯಾವಂದನೆ ಮಾಡಿ ಅದನ್ನು ಕಳೆದು ಕೊಳ್ಳುವುದಕ್ಕೆ" ಎಂದನು. ಇದೀಗ ಕರ್ಮಕಾಂಡದ ವಿಪರೀತಾವಸ್ಥೆ. ತಪ್ಪು ಮಾಡಿದವನಿಗೆ ಬೇಡಿದಲ್ಲಿ ಭಗವಂತನಲ್ಲಿ ಕ್ಷಮೆಯುಂಟು. ಆದರೆ ಬೇಡುವ ಎಂದೇ ಮನಸ್ಸು ಮಾಡಿಕೊಂಡು ತಪ್ಪುಮಾಡಿದರೆ? ಮನುಷ್ಯನು ಪತಿತ ನಾಗುವನು. ಆದರೆ ಜನರಲ್ಲಿ ಈ ಭಾವನೆ ಹುಟ್ಟಿರುವುದು ನಿಜ. ಹೀಗೆಂದ ಮಾತ್ರಕ್ಕೆ ಇಂಥ ಕುತರ್ಕ ನಮ್ಮ ಸೀಮೆಗೆ ವಿಲಕ್ಷಣವಾದದ್ದೆಂದು ತಿಳಿಯ ಬಾರದು. ರಷ್ಯಾ ರಾಜ್ಯದಲ್ಲಿ ರ್‍ಯಾಸ್‌ಪುಟಿನ್ ಎಂಬಾತನು ಮುಕ್ತಿಗೆ ಪಶ್ಚಾತ್ತಾಪ ಆವಶ್ಯಕವೆಂಬ ಕ್ರೀಸ್ತನ ಉಪದೇಶವನ್ನು ಇದೇ ರೀತಿಯಲ್ಲಿ ವಿಪರೀತ ರೂಪಕ್ಕೆ ಇಳಿಸಿದನಂತೆ. ಪಶ್ಚಾತ್ತಾಪಪಡಬೇಕಾದರೆ ತಪ್ಪು ಮಾಡಿರಬೇಕಲ್ಲವೆ? ಆದ್ದರಿಂದ ರ್‍ಯಾಸ್‌ಪುಟಿನ್ "ತಪ್ಪುಮಾಡದೆ ಇದ್ದರೆ

ಪಶ್ಚಾತ್ತಾಪ ಸಾಧ್ಯವಿಲ್ಲ; ಪಶ್ಚಾತ್ತಾಪವಿಲ್ಲದೆ ಮುಕ್ತಿಯಿಲ್ಲ; ಆದ್ದರಿಂದ ತಪ್ಪುಮಾಡದೇ ಇದ್ದವನಿಗೆ ಮುಕ್ತಿಯಿಲ್ಲ. ಆದ್ದರಿಂದ ಜನರೆಲ್ಲ ತಪ್ಪು ಮಾಡಿ ಬದುಕಿ'' ಎಂದನಂತೆ. ರ್‍ಯಾಸ್‌ಪುಟಿನ್ ಹೀಗೆ ಹೇಳದೆ ಇದ್ದರೂ ಅನೇಕ ಜನರು ಹೀಗೆ ತಿಳಿದುಕೊಂಡದ್ದೇನೋ ಉಂಟು. ಇಂಥಾ ಆಭಾಸ ಎಲ್ಲಾ ತತ್ತ್ವಪ್ರಚಾರದ ಉದ್ಯಮಗಳಿಗೂ ಸಹಜವಾದ ಒಂದು ಪರಿಣಾಮ.

ಕರ್ಮವು ಜೀವನದಲ್ಲಿ ಈ ಸ್ಥಿತಿಗೆ ಬಂದಾಗ್ಗೆ ಅದರ ಸುಧಾರಣೆಯು ಒಡನೆಯೇ ಬರುತ್ತದೆ. ಕರ್ಮದಲ್ಲಿ ಬಾಹ್ಯ ವ್ಯಾಪಾರ ಮುಖ್ಯವಲ್ಲ; ಅದನ್ನು ಯಾವ ಭಾವನೆಯಿಂದ ಮಾಡುವೆವೆನ್ನುವುದು ಮುಖ್ಯ. ಎಂದರೆ ಶೀಲ ವಿನಯ ಭಕ್ತಿಗಳು ಮುಖ್ಯ. ಶೀಲವೇ ವಿನಯವೇ ಭಕ್ತಿಯೇ ಮುಖ್ಯ ವೆಂಬ ಭಾವನೆಯು ಯಾವ ಒಂದು ಮತದ ಆಸ್ತಿಯಲ್ಲ. ಅದು ಎಲ್ಲ ಮತದಲ್ಲಿಯೂ ಅಡಗಿದೆ. ಆದರೆ ಕಾಲದಿಂದ ಕಾಲಕ್ಕೆ ಅದು ಮರೆತು ಹೋಗಿ ಮತ್ತೆ ಉದ್ಬೋಧನೆಯು ಅವಶ್ಯವಾಗುತ್ತದೆ. ಸಂಧ್ಯಾವಂದನೆ ಯೆಂದರೆ ಕುಳಿತು ಬೆರಳೆಣಿಸುವುದೂ ತುಟಿಯನ್ನು ಪಿಟಪಿಟ ಅಲುಗಿಸು ವುದೂ ಹೊರಕ್ಕೆ ಕಾಣುತ್ತವೆ. ಅನೇಕರು ಸಂಧ್ಯಾವಂದನೆ ಮಾಡುವಾಗ ಮಾಡುವ ಕರ್ಮ ಅಷ್ಟೇ; ಅದರ ಅರ್ಥ ಅವರಿಗೆ ತಿಳಿದಿರುವುದಿಲ್ಲ. ತಿಳಿ ದಿದ್ದರೂ ಅವರು ಅದನ್ನು ಆಗ ನೆನೆಯುವುದಿಲ್ಲ. ಕರ್ಮವು ಈ ರೀತಿಯಲ್ಲಿ ಶುಷ್ಕವಾದಾಗಲೇ ದೇಶದಲ್ಲೆಲ್ಲ ಭಕ್ತಿ ಪಂಥಗಳ ಗುಂಪುಗಳು ಎದ್ದು ನಿಂತವು.

ವೀರಶೈವ ಮತ

ಇಂಥ ಮತಗಳಲ್ಲಿ ವೀರಶೈವ ಮತವು ಒಂದು ಮುಖ್ಯವಾದ ಮತ. ದ್ರಾವಿಡ ದೇಶದಲ್ಲಿ ಶೈವ ಸಂಪ್ರದಾಯವು ಅನೇಕ ಶತಮಾನಗಳಿಂದ ಇದ್ದಿದೆ. ಕರ್ಣಾಟಕದ ಈ ಸಂಪ್ರದಾಯವು ಆ ಸಂಪ್ರದಾಯದ ಜೊತೆಯ ಸಂಪ್ರದಾಯವೋ ಅಥವಾ ಅಲ್ಲಿಂದ ಇಲ್ಲಿಗೆ ಬಂದದ್ದೋ ಎಂಬುದನ್ನು ಸಂಪ್ರದಾಯಗಳ ಚರಿತ್ರಕಾರರು ಹೇಳಬೇಕು. ಅಂತು ವೀರಶೈವ ಮತಕ್ಕೆ ಕರ್ಣಾಟಕದ ಮಹನೀಯನೊಬ್ಬನು ಪ್ರತಿಷ್ಠಾಪಕನಾದನು. ಈ ಮಹನೀ

ಯನ ಚರಿತ್ರೆ ತಿಳಿದಿರುವುದು ಸ್ವಲ್ಪ ಮಾತ್ರ. ಆ ಸ್ವಲ್ಪ ಎಲ್ಲರಿಗೂ ತಿಳಿದೇ ಇದೆ. ಈತನು ಬ್ರಾಹ್ಮಣ ಕುಲದಲ್ಲಿ ಜನಿಸಿ ಕುಲವೆಂದೂ ಕರ್ಮವೆಂದೂ ಹೆಮ್ಮೆಪಡುತ್ತಿದ್ದ ತನ್ನ ಸುತ್ತಣ ಸಮುದಾಯವನ್ನು ನೋಡಿ ಬೇಸರದಿಂದ ಬ್ರಾಹ್ಮಣ ಸಮುದಾಯವನ್ನು ಬಿಟ್ಟು ವೀರಶೈವಾಚಾರವನ್ನು ಅನುಸರಿಸಿದನೆನ್ನುವುದು ಅದರ ಮುಖ್ಯಾಂಶ. ಇವನು ಹೀಗೆ ಮಾಡುವ ಮೊದಲೇ ದೇಶದಲ್ಲಿ ಕರ್ಮವೆನ್ನುವುದರ ವಿಷಯದಲ್ಲೂ ಕುಲವೆನ್ನುವುದರ ವಿಚಾರದಲ್ಲೂ ಬಹಳ ಬೇಸರ ಹುಟ್ಟಿರಬೇಕು. ಬಸವಣ್ಣನವರು ಪ್ರಾಪ್ತವಯಸ್ಕರಾಗಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಪದವಿಗೆ ಬಂದರು; ವೀರಶೈವ ಮತದ ತತ್ತ್ವವನ್ನು ಜನಗಳಲ್ಲಿ ಹರಡಿದರು; ಅದಕ್ಕೆ ಒಂದು ಹಿರಿಯ ಸ್ಥಾನವನ್ನು ಸಂಪಾದಿಸಿದರು; ಅದರ ತತ್ತ್ವಗಳನ್ನು ಪ್ರಚಾರಗೊಳಿಸುವುದಕ್ಕೆ ಜಂಗಮರ ಸಂಸ್ಥೆಯನ್ನು ಉಪಯೋಗಿಸಿದರು. ಕಡೆಗೆ ವೀರಶೈವ ಮತವು ರಾಜ್ಯಗಳನ್ನು ಎಬ್ಬಿಸಿ ರಾಜ್ಯಗಳನ್ನು ಉರುಳಿಸುವ ಪ್ರಬಲ ಶಕ್ತಿಯಿಂದ ತುಂಬಿತು. ಆಗಿನ ಕಾಲದಲ್ಲಿ ಇಂಥ ಪಂಥಗಳು ಯಾವ ರೀತಿಯಲ್ಲಿ ಹಬ್ಬುತ್ತಿದ್ದುವೆಂಬುದು ನಮಗೆ ಈಗ ಊಹೆಗೆ ಕೂಡ ಸಿಕ್ಕದಂತೆ ಆಗಿದೆ. ಉತ್ತರ ಕರ್ಣಾಟಕದಲ್ಲೆಲ್ಲ ವೀರಶೈವ ಮತವು ಒಂದೇ ಸಮನೆ ಹರಡಿತು. ಎಲ್ಲೆಲ್ಲೂ ಮಠಗಳು; ಎಲ್ಲೆಲ್ಲೂ ಜಂಗಮರು; ವೀರಶೈವ ಮತದ ತತ್ತ್ವಗಳನ್ನು ಇವರು ಪದ್ಯಗಳಾಗಿ, ವಚನಗಳಾಗಿ, ಗೀತೆಗಳಾಗಿ ಜನರಲ್ಲೆಲ್ಲಾ ಪ್ರಚಾರಕ್ಕೆ ತಂದರು. ಹೀಗೆ ವೀರಶೈವ ಮತವು ಬ್ರಾಹ್ಮಣ ಮತಕ್ಕೂ ಕ್ರೈಸ್ತಮತಕ್ಕೂ ಎಲ್ಲ ಒಳ್ಳೆಯದೆಂಬ ಮತಕ್ಕೂ ಆಧಾರವಾದ ಮೂಲ ತತ್ತ್ವಗಳನ್ನೇ ಕರ್ಣಾಟಕದಲ್ಲಿ ಸರ್ವಸುಲಭವಾಗಿ ಮಾಡಿತು. ಕರ್ಣಾಟಕದಲ್ಲಿ ಈಗ ಈ ಮತದ ಅನುಯಾಯಿಗಳು ಸುಮಾರು ಮೂವತ್ತು ಲಕ್ಷದಷ್ಟು ಇದಾರೆ. ಇವರ ಭಾವನೆಯೆಲ್ಲ ವೀರಶೈವ ಮತವು, ವೀರಶೈವ ವಚನಗಳದು. ಈ ಕಾರಣದಿಂದ ಈ ವಚನಗಳ ಸ್ವರೂಪವನ್ನು ಸ್ವಲ್ಪಮಟ್ಟಿಗೆ ವರ್ಣಿಸುವುದು ಆವಶ್ಯಕ. ಅದರಲ್ಲಿ ವೀರಶೈವ ಮತದ ಉತ್ತಮವಾದ ಲಕ್ಷಣಗಳು ತೋರಿಬರುವುದಲ್ಲದೆ ಅದು ಜನಸಾಮಾನ್ಯದ ಸಂಸ್ಕೃತಿಯ ಸಾಧಕ ಕಾರಣವೂ ಫಲವೂ ಆಯಿತೆನ್ನುವುದು ವ್ಯಕ್ತವಾಗುವುದು.

[ಸಶೇಷ]

2261-31. ಬೆಂಗಳೂರು ಪ್ರೆಸ್.



೧. ಡಾಮೂಲಾ. (೧೮,೬೯೯ ಅಡಿ)

ಶ್ರೀ ಕೈಲಾಸವೂ ಮಾನಸ ಸರೋವರವೂ

[ಲೇಖಕರು:—ಮ|| ಬಿ. ಎಚ್. ಶ್ರೀನಿವಾಸಯ್ಯ, ಎಂ. ಎಸ್ ಸಿ.,
ಅಸಿಸ್ಟೆಂಟ್ ಮಿಾಟಿಯೊರಾಲಜಿಸ್ಟ್, ಆಗ್ರಾ.]

ಮಹಾ ಪವಿತ್ರವಾದ ಕ್ಷೇತ್ರಗಳೆಂದೂ ಭಗವಂತನ ಲೀಲಾ ಸ್ಥಾನಗಳೆಂದೂ ಅನಾದಿಯಾಗಿ ಪ್ರಖ್ಯಾತವಾಗಿರುವ ಶ್ರೀ ಕೈಲಾಸ ಮತ್ತು ಮಾನಸ ಸರೋವರಗಳ * ಹೆಸರನ್ನು ಕೇಳದಿರುವವರು ನಮ್ಮ ಜನಾಂಗದಲ್ಲಿ ಅತಿ ವಿರಳ. ಮೊನ್ನೆ ಮೊನ್ನೆ ತಾನೇ ನಮ್ಮ ಮೈಸೂರು ಮಹಾರಾಜರು ಈ ಪವಿತ್ರ ಸ್ಥಳಗಳ ಯಾತ್ರೆಯನ್ನು ಪೂರೈಸಿಕೊಂಡು ಬಂದರು. ಮೈಸೂರು ವೃತ್ತಾಂತ ಪತ್ರಿಕೆಯ ೧೩—೮—೧೯೩೧ ರ ಸಂಚಿಕೆಯಲ್ಲಿ ಶ್ರೀಮನ್ಮಹಾರಾಜರ ಈ ತೀರ್ಥಯಾತ್ರೆಯ ವಿಷಯವಾಗಿ ಪ್ರಕಟವಾಗಿರುವ ಲೇಖನದಿಂದ, ಈ ಯಾತ್ರೆಗೆ ಸಂಬಂಧಿಸಿದ ಪ್ರಯಾಣವು ಎಷ್ಟು ಕಷ್ಟಸಾಧ್ಯವಾದುದೆಂಬುದೂ ಮತ್ತು ಈ ಕ್ಷೇತ್ರಗಳನ್ನೊಳಗೊಂಡಿರುವ ದೇಶದ ಬಗ್ಗೆ ಕೆಲವು ವಿಷಯಗಳೂ ತಿಳಿಯುತ್ತವೆ. ಯಾತ್ರಿಕರು ವರ್ಷೇ ವರ್ಷೇ ಈ ಸ್ಥಳಗಳಿಗೆ ಹೋಗುತ್ತಿದ್ದಾರೆಯಾದರೂ, ಯಾರೂ ಈ ದೇಶದ ವಿಷಯಗಳನ್ನು ಜನರಿಗೆ ತಿಳಿಯಪಡಿಸುವ ಉದ್ದೇಶದಿಂದ ಬರೆದಿಟ್ಟಿಲ್ಲ. ನೂರರಲ್ಲಿ ತೊಂಬತ್ತೊಂಬತ್ತು ಜನರು ಈ ಯಾತ್ರೆಯನ್ನು ಸಾಧಿಸಲು ಸಮರ್ಥರಲ್ಲ; ಹೀಗೆ ಪ್ರತ್ಯಕ್ಷತಃ ನೋಡಲು ಕಷ್ಟಸಾಧ್ಯವಾದ ಈ ಮನೋಹರ ಪ್ರದೇಶಗಳ ಪರಿಚಯವನ್ನು ಚಿತ್ರಗಳ ಮೂಲಕ ವಾಚಕರಿಗೆ ಮಾಡಿಕೊಟ್ಟು, ಈ ಕ್ಷೇತ್ರಗಳ ಬಗ್ಗೆ ಕೆಲವು ಮುಖ್ಯ ವಿಷಯಗಳನ್ನು ಸೂಚಿಸುವುದೇ ಈ ಸಣ್ಣ ಲೇಖನದ ಉದ್ದೇಶ.

ಈ ಲೇಖನದೊಡನೆ ಮುದ್ರಿತವಾಗಿರುವ ಛಾಯಾಚಿತ್ರಗಳನ್ನು ತೆಗೆದವರು ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಸಸ್ಯ ಶಾಸ್ತ್ರಾಧ್ಯಾಪಕರಾಗಿ

---

* ಕೆಲವರು ಮಾನಸರೋವರವೆಂದು ಬರೆಯುವುದುಂಟು.

ರುವ ಮ॥ ಎಸ್. ಆರ್. ಕಶ್ಯಪರು. ಇವರು ಬರುವ ಜನವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ಸೇರುವ ಅಖಿಲ ಭಾರತ ವಿಜ್ಞಾನ ಸಮ್ಮೇಳನದ (Indian Science Congress) ಅಧ್ಯಕ್ಷತೆಯನ್ನು ವಹಿಸುವರು. ಇವರು ಭರತ ಖಂಡದಲ್ಲಿನ ಹಿರಿಯ ಶಾಸ್ತ್ರಜ್ಞರ ಪಂಕ್ತಿಗೆ ಸೇರಿದವರು. ೧೯೨೨ ಮತ್ತು ೧೯೨೬ನೆಯ ಇಸವಿ ಜುಲೈ ಆಗಸ್ಟ್ ತಿಂಗಳುಗಳಲ್ಲಿ ಪಶ್ಚಿಮ ಟಿಬೆಟ್ ದೇಶದಲ್ಲಿ ಸಂಚರಿಸಿ, ದುರ್ಗಮವಾದ ಅನೇಕ ಪ್ರದೇಶಗಳನ್ನು ಹೊಕ್ಕು ಭೂಗೋಳ ಶಾಸ್ತ್ರಕ್ಕೆ ಬಹು ಅಮೂಲ್ಯವಾದ ಅನೇಕ ಹೊಸ ವಿಷಯ ಗಳನ್ನು ಸಂಗ್ರಹಿಸಿರುವರು. ಪಶ್ಚಿಮ ಟಿಬೆಟ್ ದೇಶದ ಬಗ್ಗೆ ಹಿಂದಿನ ಸಂಚಾರಕರು ಬರೆದಿಟ್ಟಿರುವ ಅನೇಕ ಅಂಶಗಳನ್ನು ತಿದ್ದುವ ಉದ್ದೇಶ ದಿಂದಲೂ, ಹಿಂದಿನವರು ಬರೆಯದೆ ಇದ್ದ ಅಥವಾ ಕಾಣದೆ ಇದ್ದ ವಿಷಯ ಗಳನ್ನು ಹೊರಗೆಡಹುವುದಕ್ಕಾಗಿಯೂ ಬಂಗಾಳಾ ಏಷಿಯಾಟಿಕ್ ಸೊಸೈಟಿ ಪತ್ರಿಕೆಯ ೧೯೩೦ನೇ ಏಪ್ರಿಲ್ ಸಂಚಿಕೆಯಲ್ಲಿ ಸಚಿತ್ರ ಲೇಖನವೊಂದನ್ನು ಬರೆದಿರುವರು. ಇಲ್ಲಿ ಸೂಚಿತವಾದ ಅಂಶಗಳಿಗೆಲ್ಲಾ ಅವರ ಆ ಲೇಖನವೇ ಮೂಲ. ಚಿತ್ರಗಳನ್ನು ಇಲ್ಲಿ ಮುದ್ರಿಸುವುದಕ್ಕೂ ಕನ್ನಡದಲ್ಲಿ ಈ ಲೇಖನವನ್ನು ಬರೆಯುವುದಕ್ಕೂ ಅವಕಾಶ ಕೊಟ್ಟುದಕ್ಕಾಗಿಯೂ, ಚಿತ್ರ ಗಳ ಪಡಿಯಚ್ಚುಗಳನ್ನು ಎರವಾಗಿ ಕೊಟ್ಟುದಕ್ಕಾಗಿಯೂ ಏಷಿಯಾಟಿಕ್ ಸೊಸೈಟಿಯವರಿಗೆ ನಾವು ಕೃತಜ್ಞರಾಗಿದ್ದೇವೆ. ಪ್ರೊಫೆಸರ್ ಕಶ್ಯಪರು ತೆಗೆದಿರುವ ಮನೋಹರವಾದ ಚಿತ್ರಗಳನ್ನು ನೋಡುವುದರಿಂದ, ಈ ದೇಶದಲ್ಲಿ ದುರ್ಗಮವಾಗಿರುವ ಅನೇಕ ಪ್ರದೇಶಗಳ ಅಪೂರ್ವ ದೃಶ್ಯ ಗಳೂ, ಕ್ಷೇತ್ರಗಳ ಚಿತ್ತಾಕರ್ಷಕವಾದ ಸೌಂದರ್ಯವೂ ವಾಚಕರ ಕಣ್ಮನ ಗಳನ್ನು ತೃಪ್ತಿಗೊಳಿಸುವುವೆಂದು ನಂಬಿದ್ದೇವೆ. ಪ್ರೊಫೆಸರ್ ಕಶ್ಯಪರ ಲೇಖನವು ಬಹಳ ವಿಸ್ತಾರವಾಗಿಯೂ ಅನೇಕ ಸೂಕ್ಷ್ಮ ವಿಷಯಗಳನ್ನೊಳ ಗೊಂಡುದಾಗಿಯೂ ಇದೆ; ಈ ಲೇಖನವು ಅತಿ ವಿಸ್ತೃತವಾಗಬಹುದೆಂಬ ಭಯದಿಂದ ಕೆಲವಂಶಗಳನ್ನು ಇದರಲ್ಲಿ ಬಿಟ್ಟಿದ್ದೇವೆ.

ಪಶ್ಚಿಮ ಟಿಬೆಟ್ ದೇಶವು ಹಿಮಾಲಯ ಪರ್ವತದ ಉತ್ತರ ಭಾಗ ದಲ್ಲಿ ಸಟ್ಲೆಜ್ (ಶುತುದ್ರಿ ಅಥವಾ ಶತದ್ರು) ಸಿಂಧೂ ಮತ್ತು ಇವುಗಳ ಉಪನದಿಗಳನ್ನು ಅನುಸರಿಸಿ, ಸಟ್ಲೆಜ್ ಬ್ರಹ್ಮಪುತ್ರಾ ನದಿಗಳ ಮಧ್ಯದ

೩. ಮಾನಸ ಸರೋವರದ ತೀರ ಮತ್ತು ಜಿಯುಗೊಂಪ.

ದಿಣ್ಣೆಯಿಂದ ಪಶ್ಚಿಮಕ್ಕೆ, ಬಶಾರ್ ಸಂಸ್ಥಾನದ ಕುನಾವರ್ ಎಂಬ ಸ್ಥಳದ ವರೆಗೆ ಹರಡಿದೆ; ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವೆಂದು ಹೆಸರುಗೊಂಡ ಕೆಲವು ಪ್ರದೇಶಗಳನ್ನೊಳಗೊಂಡುದಾಗಿಯೂ, ಅತಿ ಕಠಿಣವಾದ ವಾಯುಗುಣವುಳ್ಳುದಾಗಿಯೂ ಇದೆ. ಇಲ್ಲಿನ ಚಳಿ ತಡೆಯಲಾಗದಂತಹುದು; ಗಾಳಿಯು ಬಹು ರಭಸವಾಗಿ ಬೀಸುವುದಲ್ಲದೆ ಕೊರೆಯುವಷ್ಟು ಶೀತವಾಗಿರುತ್ತದೆ. ವಾತಾವರಣದಲ್ಲಿ ಜಲಾಂಶ ಬಹು ಕಡಮೆ. ಹಿಮಾಲಯ ಪರ್ವತವು ದೊಡ್ಡ ಗೋಡೆಯಂತೆ ದಕ್ಷಿಣ ಭಾಗದಲ್ಲಿ ಹಬ್ಬಿರುವುದರಿಂದ ಮುಂಗಾರಿನಂತಹ ಮಳೆಯನ್ನು ತರುವ ಗಾಳಿಗಳು ದೇಶದೊಳಕ್ಕೆ ಪ್ರವೇಶಿಸಲು ಅಡ್ಡವಾಗಿದೆ; ಆದುದರಿಂದ ಮಳೆ ಹೆಚ್ಚಾಗಿ ಬೀಳಲು ಅವಕಾಶವಿಲ್ಲ. ಚಳಿಗಾಲದಲ್ಲಿ ಮಂಜು ಕೂಡ—ಈ ದೇಶದ ಯೋಗ್ಯತೆಗೆ—ಕಡಮೆಯೆಂದೇ ಹೇಳಬಹುದು. ಉಷ್ಣಾಂಶ ಮಾತ್ರ ತೀರ ಕಡಮೆಯಾಗಿ ಚಳಿ ವಿಪರೀತ ಹೆಚ್ಚುತ್ತದೆ. ಈ ಕಾರಣದಿಂದ ಸಸ್ಯ ಮತ್ತು ಪ್ರಾಣಿ ಜಾತಿಗಳು ಕಣ್ಣಿಗೆ ಬೀಳುವುದು ಸ್ವಲ್ಪ ಮಾತ್ರವೇ; ಕಣ್ಣಿಗೆ ಬೀಳುವುವೆಲ್ಲಾ ವಿಚಿತ್ರ ಸ್ವಭಾವಗಳನ್ನು ತೋರ್ಪಡಿಸುತ್ತವೆ.

ಮೇಲೆ ಹೇಳಿದ ವಿಚಿತ್ರ ಸ್ಥಿತಿಗಳೇ ಭೂಗೋಳ ದೃಷ್ಟಿಯಿಂದ ಈ ದೇಶವನ್ನು ಮುಖ್ಯವಾದುದಾಗಿ ಮಾಡಲು ಸಾಕು; ಈ ಪ್ರಾಮುಖ್ಯತೆಯನ್ನು ಮತ್ತಷ್ಟು ಹೆಚ್ಚಿಸಲು ಬಲವಾದ ಇನ್ನೆರಡು ಕಾರಣಗಳುಂಟು. ಮೊದಲನೆಯದು, ಕೈಲಾಸ ಶಿಖರವೂ ಮಾನಸ ಸರೋವರವೂ ಈ ದೇಶದಲ್ಲಿರುವುದು; ಈ ಎರಡು ಸ್ಥಳಗಳೂ ಹಿಂದೂಜನರಿಂದ ಮಾತ್ರವಲ್ಲದೆ ಬೌದ್ಧರಿಂದಲೂ ಅತಿ ಪವಿತ್ರವಾದವುಗಳೆಂದು ಎಣಿಸಲ್ಪಟ್ಟಿವೆ. ಎರಡನೆಯ ಕಾರಣವೆಂದರೆ, ಮಾನಸ ಸರೋವರದ ಸುತ್ತಮುತ್ತ ನಾಲ್ಕು ದೊಡ್ಡ ನದಿಗಳ ಜನ್ಮಸ್ಥಾನವಿರುವುದು. ಉತ್ತರಕ್ಕೆ ಸಿಂಧೂನದಿಯೂ, ಪೂರ್ವಕ್ಕೆ ಬ್ರಹ್ಮಪುತ್ರಾ ನದಿಯೂ, ದಕ್ಷಿಣಕ್ಕೆ ಕರ್ನಾಲಿಯೂ, ಪಶ್ಚಿಮಕ್ಕೆ ಸಟ್ಲೆಜ್ ನದಿಯೂ ಹುಟ್ಟುವುವು.

ಮೇಲೆ ಸೂಚಿಸಿರುವ ಕಾರಣಗಳಿಂದಲೂ, ಎಲ್ಲಕ್ಕಿಂತ ಮೇಲಾಗಿ ಇದರ ದುರ್ಗಮತ್ವದ ಸಲುವಾಗಿಯೂ, ಶೋಧನಾಸಕ್ತಿಯುಳ್ಳ ಸಂಚಾರಕರಿಗೆ ಬಹು ಚಿತ್ತಾಕರ್ಷಕವಾದ ದೇಶವಿದು. ಆದರೂ, ಇಲ್ಲಿನ ಕಠಿಣ

ವಾಯುಗುಣ, ಮರುಭೂಮಿಯ ಹಾಗಿರುವ ಭೂಗುಣ, ತಿನ್ನುವ ಪದಾರ್ಥಗಳು ಮತ್ತು ಸೌದೆ ಸಹ ಸಿಕ್ಕದಿರುವಿಕೆ ಮುಂತಾದ ಅನೇಕ ತೊಂದರೆಗಳ ದೆಸೆಯಿಂದ ಈ ದೇಶದಲ್ಲಿ ಸುತ್ತುವುದು ಪ್ರಯಾಸಕರವೂ ಕಷ್ಟತಮವೂ ಆದಕಾರಣ ಅನ್ಯದೇಶೀಯರಾದವರಲ್ಲಿ ಎಲ್ಲೋ ಕೆಲವರು ಮಾತ್ರ ಈ ದೇಶವನ್ನು ಹೊಗಲು ಪ್ರಯತ್ನಿಸಿದ್ದಾರೆ. ಹಿಮಾಲಯ ಪರ್ವತ ಪ್ರದೇಶಗಳಲ್ಲಿಯೇ ವಾಸಮಾಡುವ ಜನರು ಸಹ, ತಿಬೆಟ್ ದೇಶದ ಸಂತೆಗಳಿಗೆ ವ್ಯಾಪಾರಕ್ಕಾಗಿ ಹೋಗಬೇಕಾದರೂ ಬೇಸಗೆಯೆನಿಸಿಕೊಳ್ಳುವ ಒಂದೆರಡು ತಿಂಗಳುಗಳಲ್ಲಿ ಮಾತ್ರ ಹೋಗುತ್ತಾರೆ. ಮಿಕ್ಕ ಋತುಗಳಲ್ಲಿ ಕಣಿವೆಹಾದಿಗಳನ್ನು ಪ್ರವೇಶಿಸುವುದೇ ಅಸಾಧ್ಯ. ಆದ್ದರಿಂದ ಸಂತೆಗಳು ಕೂಡ ಬೇಕಾದರೂ ಇಲ್ಲಿ ವರ್ಷಕ್ಕೆ ಎರಡು ತಿಂಗಳು ಮಾತ್ರವೇ!

ಪ್ರೊಫೆಸರ್ ಕಶ್ಯಪರು ೧೯೩೫ರಲ್ಲಿ ಲಿಪುಲೇಖ ಕಣಿವೆಯ (ಎತ್ತರ ೧೬೭೮೦ ಅಡಿಗಳು) ಮಾರ್ಗವಾಗಿ ಬಿಯಾರ್ಸ್ ಎಂಬ ಸ್ಥಳದಿಂದ ಪಶ್ಚಿಮ ತಿಬೆಟ್ ದೇಶವನ್ನು ಪ್ರವೇಶಿಸಿದರು. ಅಲ್ಲಿಂದ ತಾಕ್ಲಾಕಾಟವೆಂಬ ಸಂತೆ ಸೇರುವ ಸ್ಥಳಕ್ಕೂ, ಮುಂದಕ್ಕೆ ರಕ್ಷಸ್ಥಳ ಮಾನಸ ಸರೋವರಗಳೆಂಬ ಪವಿತ್ರ ಸರಸ್ಸುಗಳಿಗೂ, ಅಲ್ಲಿಂದ ಮುಂದಕ್ಕೆ ಸ್ವಲ್ಪ ಉತ್ತರಕ್ಕಿರುವ ಶ್ರೀ ಕೈಲಾಸಕ್ಕೂ ಹೋಗಿ ಕೈಲಾಸವನ್ನು ಪ್ರದಕ್ಷಿಣೆಮಾಡಿ ಅನಂತರ ಪಶ್ಚಿಮ ದಿಕ್ಕಿನಲ್ಲಿರುವ ಗ್ಯಾನಿಮ ಎಂಬ ಇನ್ನೊಂದು ಸಂತೆಯ ಊರಿಗೂ, ಇದಾದ ಮೇಲೆ ಪಶ್ಚಿಮ ತಿಬೆಟ್ಟಿನಲ್ಲೆಲ್ಲಾ ದೊಡ್ಡದಾದ ತೋಲಿಂಗ್ ಎಂಬ 'ವಿಹಾರ'ಕ್ಕೂ ಹೋಗಿ ೧೭೮೯೦ ಅಡಿ ಎತ್ತರದಲ್ಲಿರುವ ಮಾನ ಕಣಿವೆಯ ಮಾರ್ಗದಿಂದ ಹಿಮಾಲಯವನ್ನು ತಿರುಗಿ ದಾಟಿ ಬದರೀನಾಥಕ್ಕೆ ತಲಪಿದರು. ಇಷ್ಟರಲ್ಲಿ ಇವರು ಪೂರ್ವ ಪಶ್ಚಿಮವಾಗಿ ೫೫೦ ಮೈಲಿಗಳ ದೂರವನ್ನು ತಿರುಗಿದ್ದಲ್ಲದೆ, ಐದು ವಾರಗಳ ಕಾಲವನ್ನು ಈ ಪ್ರದೇಶದಲ್ಲಿ ಕಳೆದಹಾಗಾಯಿತು.

೧೯೩೬ರಲ್ಲಿ ಸಂಚರಿಸಿದಾಗ ಪ್ರೊ॥ ಕಶ್ಯಪರು ಧರ್ಮಕಣಿವೆಯನ್ನು ದಾಟಿ ಲಿಪುಲೇಖದ ಮಾರ್ಗವಾಗಿ ತಿಬೆಟ್ಟನ್ನು ಹೊಕ್ಕರು. ಧರಾಚಲಕ್ಕೆ ಸ್ವಲ್ಪಮೇಲೆ ಧರ್ಮಕಣಿವೆಯನ್ನು ಪ್ರವೇಶಿಸಿ, ಧರ್ಮಗಂಗೆಯನ್ನೇ ಅನುಸರಿಸಿ ಆ ನದಿಯ ಮೂಲದ ಕಡೆಗೆ ಸ್ವಲ್ಪ ನಡೆದು ಜೋಲಿಂಗ್ ಕಾಂಗ್

೪. ಮಾನಸ ಸರೋವರದ ವಾಯುವ್ಯಮೂಲೆಯಲ್ಲಿರುವ ಬಿಡುಗಂಡಿ.

ಕಣಿವೆ ಮೂಲಕ ಕಾಳೀ ಕಣಿವೆಯನ್ನು ಪ್ರವೇಶಿಸಿದರು. ಜೋಲಿಂಗ್ ಕಾಂಗ್ ಎನ್ನುವುದು ಅತಿ ಕಡಿದಾದ ಕಣಿವೆ. ಇದನ್ನು ದಾಟುವುದೇ ಬಹಳ ಪ್ರಯಾಸವಾದುದು. ಕಾಳೀ ಕಣಿವೆಯನ್ನು ದಾಟಿದನಂತರ ತಾಕ್ಲಾ ಕಾಟದ ಮಾರ್ಗವಾಗಿ ರಕ್ಷಸ್ಥಳ ಮಾನಸ ಸರೋವರಗಳನ್ನು ನೋಡಿ ಕೊಂಡು, ಅನಂತರ ಕೈಲಾಸವನ್ನು ಬಳಸಿ, ಸಾಧಾರಣವಾಗಿ ಜನರು ಹೋಗದೆ ಇರತಕ್ಕ ಡೋಲ್ಛು ಮತ್ತು ತೀರ್ಥಪುರಿ ಎಂಬ ಸ್ಥಳಗಳನ್ನು ನೋಡಿಕೊಂಡು ಗ್ಯಾನಿಮಕ್ಕೆ ತಲಪಿದರು. ಇಲ್ಲಿಂದ ಆಲ್ಮೋರ ಜಿಲ್ಲೆಗೆ ಸೇರಿದ ಜೋಹರ್ ಎಂಬ ಸ್ಥಳಕ್ಕೆ, ಕುಂಗ್ರಿಬಿಂಗ್ರಿ ಜಯಂತಿ ಮತ್ತು ಅಂತಧುರಗಳೆಂಬ ಕಣಿವೆಗಳ ಮೂಲಕ ಹಿಮಾಲಯವನ್ನು ಒಂದೇ ದಿನ ದಲ್ಲಿ ದಾಟಿ, ತಲಪಿದರು. ಇವರು ಕಂಡ ಮುಖ್ಯ ವಿಷಯಗಳನ್ನು ಕೆಳಗೆ ವಿವರಿಸಲಾಗಿದೆ.

೧. ಮಾನಸ ರಕ್ಷಸ್ಥಳ ಸರೋವರಗಳು. ಸಟ್ಲೆಜ್ ನದೀಮೂಲ.

ಮಾನಸ ರಕ್ಷಸ್ಥಳ ಸರೋವರಗಳು ೧೫೦೦೦ ಅಡಿ ಎತ್ತರದಲ್ಲಿ ಒಂದರ ಮಗ್ಗುಲಲ್ಲಿ ಒಂದಿರುವಂತೆ ಇವೆ. ಪೂರ್ವದಿಕ್ಕಿನಲ್ಲಿರುವುದೇ ಮಾನಸ ಸರೋವರ; ಇದಕ್ಕೆ ತಿಬೆಟ್ ಭಾಷೆಯಲ್ಲಿ 'ಮಾಬಾಂಗ್' ಎಂದು ಹೆಸರು; ಪಶ್ಚಿಮ ಭಾಗದಲ್ಲಿರುವ ಸರೋವರವೇ ರಕ್ಷಸ್ಥಳ; ತಿಬೆಟ್ ಭಾಷೆ ಯಲ್ಲಿ ಇದನ್ನು 'ಲಾಗಾಂಗ್' ಎನ್ನುತ್ತಾರೆ. ಇವೆರಡು ಸರೋವರಗಳಿಗೂ ನಡುವೆ ಸಾಮಾನ್ಯವಾದ ದಿಣ್ಣೆಯೊಂದಿದೆ.

ಮಾನಸ ಸರೋವರವು ದೀರ್ಘವರ್ತುಳಾಕಾರವಾಗಿಯೂ, ವಾಯುವ್ಯ ಮೂಲೆಯಲ್ಲಿ ವಿನಾ ಮಿಕ್ಕೆಡೆಗಳಲ್ಲೆಲ್ಲಾ ಪರ್ವತಾವೃತವಾಗಿಯೂ ಇದೆ. ವಾಯುವ್ಯ ಮೂಲೆಯಲ್ಲಿ ಪರ್ವತ ಶ್ರೇಣಿಯಲ್ಲಿ ಒಂದು ಕಂಡಿ ಇದೆ. ಈ ಕಂಡಿ ಪ್ರಾರಂಭವಾಗುವ ಕಡೆ, ಅದರ ಉತ್ತರ ಭಾಗದಲ್ಲಿ, 'ಜಿಯು ಗೊಂಪ' ವೆಂಬ ಆಶ್ರಮವಿದೆ. (ಚಿತ್ರ ೩.) ಇದನ್ನು ದೊಡ್ಡಬಂಡೆಯ ಮೇಲೆ ಕಟ್ಟಿದ್ದಾರೆ.

ಮಾನಸ ರಕ್ಷಸ್ಥಳ ಸರೋವರಗಳಿಗೆ ಪರಸ್ಪರ ಸಂಬಂಧವುಂಟೇ ಎಂಬ ಬಗ್ಗೆ ಬಹುಕಾಲದಿಂದ ವಿವಾದವಿದೆ. ಕೆಲವು ಯಾತ್ರಿಕರು ಈ

ಎರಡು ಸರಸ್ಸುಗಳನ್ನು ಸೇರಿಸುವ ಜಲಭರಿತವಾದ ನಾಲೆಯನ್ನು ನೋಡಿದ ಹಾಗೂ, ಇನ್ನು ಕೆಲವರು ಅಂತಹ ನಾಲೆಯಾವುದೂ ಇಲ್ಲವೆಂತಲೂ, ಮತ್ತೆ ಕೆಲವರು ನಾಲೆಯೇನೋ ಇದ್ದರೂ ಅದರಲ್ಲಿ ನೀರಿರುವುದಿಲ್ಲ ವೆಂತಲೂ ನಾನಾವಿಧವಾಗಿ ಬರೆದಿಟ್ಟಿರುತ್ತಾರೆ. ಪ್ರೊ॥ ಕಶ್ಯಪರು ವಿಚಾರಿ ಸಿದ್ದರಲ್ಲಿ, ಬಿಯರ್ಾಸಿಗೆ ಸೇರಿದ ನಂಬಿಕೆಗರ್ಹರಾದ ಕೆಲವು ಭೂತಿಯಾ ಜನರು ಮಾನಸ ಸರೋವರದಿಂದ ರಕ್ಷಸ್ಥಳಕ್ಕೆ ನೀರು ಹರಿಯುತ್ತದೆಂದೂ, ಇನ್ನು ಕೆಲವರು ಸ್ವತಃ ತಾವೇ ತುಂಬಿ ಹರಿಯುತ್ತಿದ್ದ ಈ ಹಳ್ಳವನ್ನು ಹಾದಿರುವುದಾಗಿಯೂ ಹೇಳಿರುತ್ತಾರೆ. ೧೯೨೮ರಲ್ಲಿ ಲಾಹೋರಿನ ಪ್ರೊಫೆ ಸರರಾದ ಡಿ. ಪಿ. ರಾಯ್ ಎಂಬುವರು ಈ ಹಳ್ಳದಲ್ಲಿ ಮೂರಡಿ ಆಳ ನೀರಿದ್ದುದನ್ನು ನೋಡಿರುವುದಾಗಿ ತಿಳಿಸುತ್ತಾರೆ. ಈ ವಿವಾದವನ್ನು ನಿರ್ಧರಿಸುವುದಕ್ಕಾಗಿ ಪ್ರೊ॥ ಕಶ್ಯಪರು ೧೯೩೨ ಮತ್ತು ೨೬ರಲ್ಲಿ ಈ ಪ್ರದೇಶ ವನ್ನು ಚೆನ್ನಾಗಿ ಸುತ್ತಿ ಶೋಧಿಸಿರುವರು. ಈ ಸರೋವರಗಳೆರಡರ ನಡುವೆ ನೀರು ಹರಿಯಬಹುದಾದ ಪಾತ್ರವಿದೆಯೆಂದು ಇವರ ಶೋಧನ ದಿಂದ ಗೊತ್ತಾಗಿದೆ. ಈ ಹಳ್ಳವು ಮಾನಸ ಸರೋವರದ ವಾಯವ್ಯ ಮೂಲೆಯ ಬಳಿಯಿಂದ ಆರಂಭಿಸುವುದು. ಆರಂಭವಾಗುವ ಎಡೆಯಲ್ಲಿ ಸರೋವರದ ತೀರದಲ್ಲಿ ಜಲ್ಲಿ ಕಲ್ಲು ಯಥೇಷ್ಟವಾಗಿರುವುದು. ಹಳ್ಳದ ಪಾತ್ರದಲ್ಲಿ ಅಲ್ಲಲ್ಲಿ ಸಣ್ಣ ಕೊಳಗಳೂ ಕಂಡುಬಂದುವು; ವಾಯವ್ಯ ಮೂಲೆಯ ಬಳಿ ಸರೋವರವು ಆಳವಾಗಿಯೂ ಇರಲಿಲ್ಲ. ಮತ್ತು, ಸರೋ ವರದ ನೀರು ಇನ್ನು ೬ ಅಂಗುಲಗಳು ಮಾತ್ರವೇ ಹೆಚ್ಚಿದರೂ, ಅಲ್ಲಿಂದ ಹಳ್ಳದಲ್ಲಿ ಕಂಡುಬಂದ ಮೊದಲನೆಯ ಕೊಳಕ್ಕೆ, ಅಲ್ಲಿಂದ ಮುಂದಿನ ಕೊಳಕ್ಕೆ, ಈ ರೀತಿಯಾಗಿ ಅವಿಚ್ಛಿನ್ನವಾಗಿ ಪಾತ್ರದಲ್ಲಿ ನೀರು ಹರಿಯು ವುದು ಸ್ವಾಭಾವಿಕವೆಂದು ಪ್ರೊ॥ ಕಶ್ಯಪರು ನಿರ್ಣಯಿಸಿದರು.

ರಕ್ಷಸ್ಥಳ ಸರೋವರದಿಂದ ಹೊರಕ್ಕೆ ನೀರು ಹರಿಯುತ್ತದೆಯೋ ಎನ್ನುವುದಕ್ಕೆ ಬಹುಕಾಲದಿಂದ ಸಾಕ್ಷ್ಯವೇನೂ ಇಲ್ಲ. ಆದರೆ ಪೂರ್ವದ ಸರೋವರದಿಂದ ಪಶ್ಚಿಮದ ಸರೋವರಕ್ಕೂ ಅಲ್ಲಿಂದ ಸಟ್ಲೆಜ್ ನದಿಯ ಆದಿಭಾಗವಾದ ತೊರೆಗೂ ಗುಪ್ತಮಾರ್ಗದಲ್ಲಿ ನೀರು ಹರಿಯುತ್ತಿರುವ ಸಂಭವವುಂಟು. ಗುರ್ಲ ಮಾಂಧಾತವೇ ಮುಂತಾದ ಸುತ್ತಮುತ್ತಣ



೫. ದಕ್ಷಸ್ಥಳದಿಂದ ಕಾಣಬರುವ ಕೈಲಾಸಶ್ರೇಣಿಯ ದಕ್ಷಿಣಭಾಗ. ಮಧ್ಯೆ ಎದ್ದು ಕಾಣುವುದೇ

ಪರ್ವತಗಳಿಂದ ಮಾನಸ ಸರೋವರಕ್ಕೆ ವಿಪರೀತ ನೀರು ಬಂದು ಬೀಳುತ್ತದೆ. ಅನೇಕ ವರ್ಷಗಳಲ್ಲಿ ಈ ಸರೋವರದಿಂದ ರಕ್ಷಸ್ಥಳಕ್ಕೆ ಕಂಡ ಹಾಗೆ ನೀರು ಹರಿಯುವುದಿಲ್ಲವೆನ್ನುವುದು ಅನುಭವ ಸಿದ್ಧವಾಗಿದೆ ; ಆದರೆ ಸರೋವರದೊಳಕ್ಕೆ ಬಂದ ಹೆಚ್ಚಿಗೆ ನೀರೆಲ್ಲಾ ಆವಿಯ ರೂಪವಾಗಿ ಹೋಯಿತೆನ್ನುವುದೂ ಅಸಂಭವ. ಈ ಕಾರಣಗಳಿಂದ, ಹೆಚ್ಚಾದ ನೀರು ಮಾನಸ ಸರೋವರದಿಂದ ಗುಪ್ತಗಾಮಿನಿಯಾಗಿ ಸದಾ ಹರಿಯುತ್ತಿರಬೇಕೆಂದು ಊಹಿಸಬಹುದು. ಈ ಊಹೆಯನ್ನು ಸಮರ್ಥಿಸಲು ಇನ್ನೊಂದು ಸಾಧನವೇನೆಂದರೆ, ಈ ಎರಡು ಸರೋವರಗಳನ್ನು ಸೇರಿಸುವ ಹಳ್ಳದ ಪಾತ್ರದಲ್ಲಿ ಯಾವಾಗಲೂ ನಿಂತ ನೀರಿರುತ್ತದೆ. ರಕ್ಷಸ್ಥಳದಿಂದ ಪಶ್ಚಿಮಕ್ಕಿರುವ ಲಲಿಂಗ್ತವೆಂಬ ಸ್ಥಳದಲ್ಲಿ ಪಶ್ಚಿಮ ವಾಹಿನಿಯಾದ ಒಂದು ತೊರೆಯು ದೊಡ್ಡ ಕೊಳವಾಗಿ ಪರಿಣಮಿಸಿದೆ. ಆದರೆ ಕೊಂಚ ದೂರದಲ್ಲಿಯೇ ಇದರ ಗುರುತೇ ಇಲ್ಲದಂತೆ ಅಡಗಿ ಹೋಗಿದೆ. ಇದರಿಂದಲೇ ಈ ಸರೋವರದಿಂದಾಚೆಗೂ ಗುಪ್ತವಾಹಿನಿಯಾಗಿ ನೀರು ಹರಿಯುತ್ತದೆಂದು ನಿರ್ಧರವಾಗುತ್ತದೆ. ೧೯೨೬ರಲ್ಲಿ ಪ್ರೊ॥ ಕಶ್ಯಪರು ನೋಡಿದ್ದರಲ್ಲಿ, ಕೈಲಾಸಕ್ಕೆ ೨೦ ಮೈಲಿ ದೂರದಲ್ಲಿರುವ ಡೋಲ್ಚು ಎಂಬ ಸ್ಥಳದ ಮೇಲುಭಾಗದಲ್ಲಿ, ಈ ಪಾತ್ರದಲ್ಲಿ ನೀರು ಹರಿಯುತ್ತಿರಲಿಲ್ಲ. ರಕ್ಷಸ್ಥಳ ಡೋಲ್ಚು ಈ ಸ್ಥಳಗಳ ಮಧ್ಯೆ ಈ ಪಾತ್ರದಲ್ಲಿ ಆಗಾಗ್ಯೆ ನೀರಿರುವುದುಂಟು, ಇಲ್ಲದಿರುವುದೂ ಉಂಟು ಎಂದು ಅಲ್ಲಿಯ ಜನಗಳು ಒತ್ತಿ ಹೇಳುವರು. ಡೋಲ್ಚುವಿನಲ್ಲಿ ಸಟ್ಲೆಜ್ ನದಿಯು ದೊಡ್ಡತೊರೆಯಾಗಿ ಅಲ್ಲಿಂದ ಮುಂದಕ್ಕೆ ಅವಿಚ್ಛಿನ್ನವಾದ ಹೊಳೆಯಾಗಿ ಹರಿಯುತ್ತದೆ. ಈ ಎಲ್ಲಾ ಅಂಶಗಳನ್ನೂ ಪರೀಕ್ಷಿಸಿದರೆ, ರಕ್ಷಸ್ಥಳದಿಂದ ಹೊರಕ್ಕೂ ಗುಪ್ತಮಾರ್ಗದಲ್ಲಿ ನೀರು ಹರಿಯುವುದೆಂದೂ ಸಟ್ಲೆಜ್ ನದಿಗೆ ಈ ನೀರೇ ಮೂಲವೆಂದೂ ತಿಳಿಯುವುದು. ಡೋಲ್ಚುವಿನ ಹತ್ತಿರ ಒಂದು ಸಣ್ಣ ಊಟೆ ಇದೆ. ಇದರಿಂದ ಸ್ವಲ್ಪ ಮೇಲಕ್ಕಿರುವ ಒಂದು ದೊಡ್ಡ ಊಟೆಯೇ, ದೃಷ್ಟಿಗೋಚರವಾಗಿರುವ ಸಟ್ಲೆಜ್ ನದಿಯ ಧ್ರುವಮೂಲ ಮತ್ತು ಮಾನಸ ಸರೋವರದ ಸುತ್ತಣ ಪ್ರದೇಶದಲ್ಲಿ ಬಿದ್ದ ನೀರೆಲ್ಲಾ ಸಟ್ಲೆಜ್ ನದಿಗೆ ಆಧಾರ.

೨. ಕೈಲಾಸ ಪ್ರದಕ್ಷಿಣೆ.

ಶ್ರೀ ಕೈಲಾಸ ಶಿಖರವು ಶಿವನ ವಾಸಸ್ಥಾನವಾದುದರಿಂದ ಈ ಸ್ಥಳಕ್ಕೆ ಹೋಗುವುದೂ, ಅದನ್ನು ದರ್ಶಿಸಿ ಪ್ರದಕ್ಷಿಣೆ ಮಾಡುವುದೂ ಬಹಳ ಪುಣ್ಯಕೆಲಸಗಳೆಂದೂ ಮೋಕ್ಷಸಾಧಕಗಳೆಂದೂ ಯಾತ್ರಿಕರು ನಂಬುತ್ತಾರೆ. ಈ ಪ್ರದಕ್ಷಿಣೆಯನ್ನು ಬರಿಯ ಕಾಲಲ್ಲಿ ಮಾಡುತ್ತಾರೆ. ಸಾಧುಗಳೂ, ಅನೇಕ ಭಕ್ತರೂ ಹೆಜ್ಜೆ ನಮಸ್ಕಾರಗಳನ್ನು ಹಾಕುತ್ತ, ಮತ್ತು ಉರುಳಿಕೊಂಡು ಸಹ, ಪರ್ವತವನ್ನು ಬಳಸುವುದುಂಟು. ಬೆಟ್ಟವನ್ನು ಸುತ್ತುವುದು ಸಾಧಾರಣವಾಗಿ ೨-೩ ದಿನ ಹಿಡಿಯುತ್ತದೆ. ತಿಬೆಟ್ ದೇಶದಲ್ಲಿ ಅನೇಕರು ಈ ಪ್ರದಕ್ಷಿಣೆಯನ್ನು ೧೦-೧೨ ಸಾರಿ ಮಾಡಿರುವರು. ಬಳಸುವ ಹಾದಿ ಕಲ್ಲುಮಯವಾಗಿಯೂ ಬಹು ಒರಟಾಗಿಯೂ ಇರುವುದರಿಂದಲೂ, ದೇಶದ ಅತ್ಯಂತ ಶೈತ್ಯದಿಂದಲೂ, ಮಂಜುಗಡ್ಡೆ ಬೀಳುವುದರಿಂದಲೂ ಈ ಪ್ರದಕ್ಷಿಣೆಯು ಬಹು ಕಷ್ಟಸಾಧ್ಯವಾದುದು.

ಕೈಲಾಸ ಶಿಖರವು ಶಂಕುವಿನ ಆಕಾರದಲ್ಲಿ ೨೧೮೦೦ ಅಡಿ ಎತ್ತರದಲ್ಲಿದೆ. ಶಿಖರವು ಸರ್ವದಾ ಹಿಮಮಯವಾಗಿ ಬೆಳ್ಳಗೆ ಕಾಣುತ್ತದೆ. ಬಾರ್ಖಾ ಎಂಬ ಸ್ಥಳದಿಂದ ಈ ಶಿಖರದ ನೋಟವು ಬಹು ಸೊಗಸು. (೬ನೆಯ ಚಿತ್ರವನ್ನು ನೋಡಿ.) ಪರ್ವತದ ಕೆಳಭಾಗವು ಗೋಡೆಗಳಂತೆ ಒಂದೇ ಸಮನೆ ನೆಲದಿಂದ ನೇರವಾಗಿ ಎದ್ದಿವೆ. ಕೈಲಾಸ ಶಿಖರವು ವಾಡಿಕೆಯಲ್ಲಿ ಕೈಲಾಸ ಶ್ರೇಣಿಯೆಂದು ಕರೆಯಲ್ಪಡುವ ಪರ್ವತಗಳ ಮೇಲಿಲ್ಲ; ಇದಕ್ಕಿಂತ ಸ್ವಲ್ಪ ದಕ್ಷಿಣಕ್ಕಿದೆ. ಈ ಶ್ರೇಣಿಗೂ, ಶಿಖರವು ಇರುವ ಪರ್ವತಕ್ಕೂ ನಡುವೆ ದೊಡ್ಡ ದಿಣ್ಣೆಯಿದೆ. ಈ ದಿಣ್ಣೆಯ ಅತಿ ತಗ್ಗಾದ ಭಾಗವು ಕನಿಷ್ಠಪಕ್ಷ ೧೮೬೦೦ ಅಡಿಗಳ ಎತ್ತರದಲ್ಲಿದೆ. ಕೈಲಾಸವನ್ನು ಸುತ್ತುವವರು ಅವಶ್ಯವಾಗಿ ಈ ದಿಣ್ಣೆಯನ್ನು ದಾಟಲೇಬೇಕು. ಪ್ರೊ॥ ಕಶ್ಯಪರು ಎರಡಾವೃತ್ತಿ ಇದರ ಸುತ್ತ ಹೋಗಿಬಂದು ಅದು ೨೯ ಮೈಲಿಗಳಾಗುವುದೆಂದು ಅಭಿಪ್ರಾಯ ಪಡುತ್ತಾರೆ.

ಕೈಲಾಸ ಪ್ರದಕ್ಷಿಣೆಯನ್ನು ಬೆಟ್ಟದ ದಕ್ಷಿಣ ಪಾರ್ಶ್ವದಿಂದ ಆರಂಭಿಸುತ್ತಾರೆ. ಪರ್ವತದ ನಾಲ್ಕುಕಡೆಗಳಲ್ಲಿಯೂ ನಾಲ್ಕು ವಿಹಾರಗಳನ್ನು ಕಟ್ಟಿದ್ದಾರೆ; ಸುತ್ತು ಹೋಗುವಾಗ ಈ ಆಶ್ರಮಗಳು ಸಿಗುವುವು. ಪ್ರದಕ್ಷಿಣೆ



೬. ಬಾರ್ಖಾ ಎಂಬ ಸ್ಥಳದಿಂದ ಕೈಲಾಸ ಶಿಖರದ ರಮ್ಯನೋಟ. (೨೧೮೦೦ ಅಡಿ)

ಯನ್ನು ಆರಂಭಮಾಡುವುದು ಧರಾಚನವೆಂಬ ಸ್ಥಳದಿಂದ. ಇಲ್ಲಿಂದ ಒಂದು ಮೈಲಿ ದೂರದೊಳಗೇ ಕಿಯಾಂಗ್ಡು ಅಥವಾ ಗ್ಯಾಂಗ್ಟವೆಂಬ ಹೆಸರುಳ್ಳ ಆಶ್ರಮವು ಇರುವುದು. (ಚಿತ್ರ ೭.) ಆದರೆ ಸಾಮಾನ್ಯವಾಗಿ ಅನೇಕರು ಈ ಆಶ್ರಮಕ್ಕೆ ಹೋಗಿ ನೋಡುವುದಿಲ್ಲ. ಬೆಟ್ಟದ ಸುತ್ತಲೂ ಇರುವ ಇನ್ನು ಮೂರು ಮಠಗಳ ಹೆಸರು ನ್ಯಾಂಧಿಪು ಗೊಂಪ, ದಿಥಿಪು ಗೊಂಪ ಮತ್ತು ಸುಂಟು ಗೊಂಪ. ಈ ನಾಲ್ಕರಲ್ಲಿ ಎಲ್ಲಕ್ಕಿಂತ ಮಜಬೂತಾಗಿ ಉಚ್ಚಸ್ಥಾನದಲ್ಲಿ ಕಟ್ಟಿರತಕ್ಕದ್ದು ಕಿಯಾಂಗ್ಡು. ಮಿಕ್ಕ ಮೂರು ಮಠಗಳೂ ಪರ್ವತದ ಮಗ್ಗುಲಲ್ಲಿ ಸಾಮಾನ್ಯವಾಗಿ ಕಟ್ಟಲ್ಪಟ್ಟಿವೆ. ಕಿಯಾಂಗ್ಡು ಮಠವು ಉತ್ಕೃಷ್ಟವಾದ ಸಾಧನಗಳಿಂದ ಸಜ್ಜುಗೊಳಿಸಲ್ಪಟ್ಟಿದೆ. ಪೂರ್ವಕಾಲದ ಯುದ್ಧಕವಚಗಳು, ಇತರ ಯುದ್ಧಸಾಮಗ್ರಿಗಳು ಇವುಗಳನ್ನು ಇಲ್ಲಿ ಕಾಣಬಹುದು.

ಪ್ರದಕ್ಷಿಣೆ ಹೊರಟು ಧರಾಚನದಿಂದ ೪ ಮೈಲಿ ಮುಂದೆ ಸರಿದರೆ ನ್ಯಾಂಧಿಪು ವಿಹಾರವು ಸಿಗುತ್ತದೆ. ಇಲ್ಲಿಗೆ ಹೋಗುವ ರಸ್ತೆಯು ಮೊದಲು ೨ ಮೈಲಿ ವಾಯುವ್ಯಕ್ಕೆ ನಡೆದು ಅನಂತರ ಉತ್ತರ ದಿಕ್ಕಿಗೆ ತಿರುಗುವುದು. ನ್ಯಾಂಧಿಪು ಗೊಂಪವನ್ನು ಒಂದು ದೊಡ್ಡ ಬಂಡೆಯ ಕಡಿದಾದ ಭಾಗದಲ್ಲಿ ಕಟ್ಟಿರುವರು ; ಇದಿರುವ ಸ್ಥಳವು ಬಹಳ ಅಪಾಯಕ್ಕೊಳಗಾಗಿದೆ. ಮೇಲಿನಿಂದ ಬಂಡೆಗಳು ಉರುಳಿ ಬೀಳುವ ಭಯವು ಸಂಪೂರ್ಣವಾಗಿದೆ. ಕೆಲವು ವರ್ಷಗಳ ಹಿಂದೆ ದೊಡ್ಡ ಬಂಡೆಯೊಂದು ಜಾರಿಬಿದ್ದು ಕಟ್ಟಡದ ಭಾಗವೊಂದನ್ನು ಹಾಳುಮಾಡಿತಂತೆ. ನ್ಯಾಂಧಿಪು ವಿಹಾರದಲ್ಲಿ ದೊಡ್ಡದಾದ ಎರಡು ಆನೆಯ ದಂತಗಳಿವೆ.

ವಿಹಾರದ ಮುಂದಿನ ದೊಡ್ಡ ಹೆಬ್ಬಾಗಿಲನ್ನು ದಾಟಿ ಮುಂದೆ ಹೊರಟು, ಕೆಲವು ದೂರ ಕಲ್ಲುಹಾದಿಯ ಮೇಲೆ ನಡೆಯಬೇಕು. ದಾರಿಯಲ್ಲಿ ದಕ್ಷಿಣ ವಾಹಿನಿಯಾದ ಒಂದು ಹೊಳೆಯೂ ಅದರ ಮೇಲೆ ಕಟ್ಟಿರುವ ಎರಡು ಸಣ್ಣ ಮರದ ಸೇತುವೆಗಳೂ ಸಿಕ್ಕುತ್ತವೆ. ಈ ಭಾಗದ ಹಾದಿಯು ಅಷ್ಟೇನೂ ಇಕ್ಕಟ್ಟಾಗಿಲ್ಲವಾದರೂ ಎರಡು ಪಕ್ಕಗಳಲ್ಲಿಯೂ ನೀಳವಾಗಿ ಕಡಿದಾಗಿರುವ ಬಂಡೆಗಳ ಮಧ್ಯೆ ಹೋಗಿದೆ. ಈ ಬಂಡೆಗಳ ಮೇಲೆ ನೀರು ಹರಿದು, ಅಲ್ಲಲ್ಲಿ ಧುಮುಕಿ, ಸಣ್ಣ ಜಲಪಾತಗಳಂತೆ ಕಾಣ:

ತ್ತದೆ; ಬಂಡೆಗಳಾದರೂ ಚಿತ್ರವಿಚಿತ್ರವಾದ ಆಕಾರಗಳನ್ನು ಹೊಂದಿವೆ. ಕೆಲವು ಬಂಡೆಗಳು ಕೋಟೆ ಕೊತ್ತಲಗಳಂತೆ ಕಾಣುವುವು. ನ್ಯಾಂಧಿಪು ವಿಹಾರದಿಂದ ಐದು ಮೈಲಿ ದೂರ ರಸ್ತೆಯು ಉತ್ತರಕ್ಕೆ ಸಾಗುವುದು; ಪರ್ವತದ ಈ ಭಾಗದಲ್ಲಿ ಹೋಗುವಾಗ, ಕೈಲಾಸ ಶಿಖರದ ಪಶ್ಚಿಮ ಮುಖವು ಹಿಮದಿಂದ ತುಂಬಿ ರಮ್ಯವಾಗಿರುವ ನೋಟವನ್ನೂ, ಮೇಲ್ಭಾಗ ದಲ್ಲಿ ಶ್ವೇತಚ್ಛತ್ರಿಯ ಅಂಚಿನೋಪಾದಿಯಲ್ಲಿ ಮುಂದಕ್ಕೆ ಚಾಚಿಕೊಂಡಿ ರುವ ರಚನೆ (Formation) ಯನ್ನೂ ಕಾಣಬಹುದು.

ಮೇಲೆ ನಿರ್ದಿಷ್ಟವಾದ ದಕ್ಷಿಣವಾಹಿನಿಯಾದ ತೊರೆಯನ್ನು ದಾಟಿದ ನಂತರ ರಸ್ತೆಯು ಪೂರ್ವಕ್ಕೆ ತಿರುಗಿ, ಕೈಲಾಸದ ಉತ್ತರ ಪಾರ್ಶ್ವಕ್ಕೆ ನಮ್ಮನ್ನು ಒಯ್ಯುತ್ತದೆ. ಪೂರ್ವದಿಕ್ಕಿಗೆ ಒಂದು ಮೈಲಿಯಷ್ಟು ದೂರ ಸಾಗಿದನಂತರ ದಿಧಿಪುಗೊಂಪವೆಂಬ ಆಶ್ರಮವು ಸಿಕ್ಕುವುದು. ಕೈಲಾಸದ ಉತ್ತರ ಭಾಗದಲ್ಲಿ ಪರ್ವತವು ಅತ್ಯಂತ ಕಡಿದಾಗಿಯೂ ಕರಿಯ ಬಂಡೆ ಗಳಿಂದ ರಚಿತವಾದುದಾಗಿಯೂ ಇದೆ. ಆದರೆ ಶಿಖರದ ಉತ್ತರ ಮುಖ ದಲ್ಲಿ ಹಿಮವು ಅಷ್ಟು ಹೆಚ್ಚಾಗಿಲ್ಲ. ವಿಹಾರದ ಕೆಳಭಾಗದ ಬಳಿ ಒಂದು ದೊಡ್ಡಬಂಡೆಯ ಮೇಲೆ "ಓಂ ಮಣಿ ಪದ್ಮೇಹಂ" ಎಂಬ ತಿಬೆಟ್ ಜನರ ಪ್ರಾರ್ಥನೆಯು ಕೆತ್ತಲ್ಪಟ್ಟಿದೆ. ಈ ಬಂಡೆಯ ಬಳಿಯಿಂದ ಶಿಖರದ ಮೇಲಣ ಹಿಮವೂ, ಅದರ ಕೆಳಗಡೆ ಕಪ್ಪಾಗಿರುವ ತಪ್ಪಲೂ, ಅಲ್ಲಲ್ಲಿ ಹಿಮದ ಗೆರೆಗಳೂ ಕಾಣಬರುತ್ತವೆ. ಈ ಭಾಗದ ಸುತ್ತಮುತ್ತ ಶಂಕುವಿನ ಆಕಾರದ ಹಿಮಮಯವಾದ ಒಂದೆರಡು ಗುಡ್ಡಗಳೂ, ಅನೇಕ ತೊರೆ ಗಳೂ ಇವೆ.

ದಿಧಿಪುವಿನಿಂದ ಮುಂದಿನ ಮಜಲು ಸುಂಟು ಅಥವಾ ಸುಟುಲ್ಫು ವಿಹಾರ; ಕೈಲಾಸಶಿಖರವನ್ನೂ ಕೈಲಾಸ ಶ್ರೇಣಿಯನ್ನೂ ಸಂಬಂಧಿಸುವ ದಿಣ್ಣೆಯಮೇಲೆ ಹಾಯುವ ಡಾಮಾಲಾ (ಡಾಲ್ಮಾಲಾ) ದಾರಿಯಲ್ಲಿ ೧೩ ಮೈಲಿ ದೂರವಾಗುತ್ತದೆ. ಡಾಮಾಲಾಹಾದಿಯು ೧೮೫೯೯ ಅಡಿಗಳ್ಳ ಎತ್ತರದಲ್ಲಿದೆ. ದಿಧಿಪುವಿನಿಂದ ಹೊರಟರೆ ಮೊದಲು ೧ ಮೈಲಿ ಪೂರ್ವಕೆ ಕಡಿದಾದ ದಾರಿಯಲ್ಲಿ ಹತ್ತಿ, ಅನಂತರ ೧ ಮೈಲಿ ಸಮದಾರಿಯಲ್ಲಿ ಅದೇ ದಿಕ್ಕಿಗೆ ನಡೆದು, ಅನಂತರ ಈಶಾನ್ಯಕ್ಕೆ ಕಠಿಣವಾದ 'ಛಡಾವು' ದಾರಿ

೭. ಕೈಲಾಸ ಪ್ರದಕ್ಷಿಣೆಯಲ್ಲಿ ಧರಾಚನದಿಂದ ಸ್ವಲ್ಪ ಮೇಲೆ ಸಿಕ್ಕುವ
ಮೊದಲನೆಯ ವಿಹಾರ.



೮. ಧಿಥಿಪುಗೊಂಪದಿಂದ ಕಂಡುಬರುವ ಕೈಲಾಸ ಶಿಖರದ
ಉತ್ತರಮುಖ.

ಯನ್ನು ಅನುಸರಿಸಿ 'ಡಾಮಾಲಾ' ವನ್ನು ತಲಪಬೇಕು. ದಕ್ಷಿಣವಾಹಿನಿ ಯಾದ ಹೊಳೆಯ ಬಲದಡದಲ್ಲಿಯೇ ಹಾದಿ ಸಾಗಿ, ದಿಧಿಪುವಿನಿಂದ ಕಂಡು ಬರುವ ಎತ್ತರವಾದ ಪ್ರದೇಶವನ್ನು ಬಳಸಿಕೊಂಡುಹೋಗಿರುತ್ತದೆ. ೪ ಮೈಲಿ ಕಳೆದನಂತರ ಸಸ್ಯಜಾತಿಗಳು ತೀರ ಕಡಿಮೆಯಾಗುವುವು ; ದಾರಿ ಯಂತೂ ಬರೀಕಲ್ಲು. ದಾರಿಯಲ್ಲೇ ಅಲ್ಲಲ್ಲಿ ಸಣ್ಣ ಬಂಡೆಗಳು ಉರುಳಿ ಬಿದ್ದಿವೆ. ತಗ್ಗಿನಲ್ಲಿ ಹೊಳೆಯ ದಡದಲ್ಲಿ ಮಾತ್ರ ದಟ್ಟವಾದ ಹಸುರು ಹುಲ್ಲು ಬೆಳೆದಿರುತ್ತದೆ.

ಡಾಮಾಲಾ ಹಾದಿಯ ಮೇಲ್ಭಾಗವನ್ನು ತಲುಪಿದರೆ, ದೊಡ್ಡ ಬಂಡೆಯೊಂದು ಕಣ್ಣಿಗೆ ಕಾಣುತ್ತದೆ. ಈ ಬಂಡೆಯ ಇಬ್ಭಾಗಗಳಲ್ಲಿಯೂ ದೊಡ್ಡದಂಡಗಳನ್ನು ನೆಟ್ಟಿರುವರು. ಬಂಡೆಯಮೇಲೂ ಒಂದು ದಂಡ ವಿದೆ. ಈ ದಂಡಗಳನ್ನು ಪರಸ್ಪರ ಹಗ್ಗದಿಂದ ಕಟ್ಟಿದ್ದಾರೆ. ಈ ಹಗ್ಗ ದಿಂದ ಸಣ್ಣಸಣ್ಣ ಬಟ್ಟೆಯ ಚೂರುಗಳೂ ಉಣ್ಣೆಯ ಚೂರುಗಳೂ ನೇತಾಡುತ್ತಿವೆ. ಬೆಟ್ಟದ ಕಣಿವೆ ದಾರಿಗಳಲ್ಲೆಲ್ಲಾ ಈ ಪದ್ಧತಿಯು ಆಚರಣೆ ಯಲ್ಲಿದೆ. ಈ ಕಲ್ಲಿನಿಂದಾಚೆಗೆ ೧೭೫ ಅಡಿಗಳವರೆಗೆ, ಎಂದರೆ ಕಣಿವೆಯ ತುದಿಯವರೆಗೂ, ರಸ್ತೆ ಸಮನಾಗಿದೆ. ಕಣಿವೆ ದಾರಿಯ ಕೊನೆಯ ಕೆಳಗೆ ಸರಿಯಾಗಿ ಗೌರೀಕುಂಡವೆಂಬ ಸರೋವರವಿದೆ. (ಚಿತ್ರ ೯.) ದಿಧಿಪು ಗೊಂಪಕ್ಕೂ ಡಾಮಾಲಾಕ್ಕೂ ೪ತ್ತಿ ಮೈಲಿ; ಡಾಮಾಲಾ ಕಣಿವೆಗೂ ಗೌರೀ ಕುಂಡಕ್ಕೂ ೬೦೦ ಅಥವಾ ೭೦೦ ಅಡಿಗಳು.

ಡಾಮಾಲಾದಿಂದ ನೋಡಿದರೆ ಗೌರೀಕುಂಡವು ಚತುಷ್ಕೋಣವಾಗಿ ಕಾಣುತ್ತದೆ; ಬೇರೆಕಡೆಗಳಿಂದ ನೋಡಿದರೆ ದೀರ್ಘವರ್ತುಳಾಕಾರವಾಗಿರು ವುದು. ಕುಂಡವು ಪಶ್ಚಿಮ ಪಾರ್ಶ್ವದಲ್ಲಿ ಅಗಲವಾಗಿಯೂ ಪೂರ್ವಭಾಗದಲ್ಲಿ ಕಿರಿದಾಗಿಯೂ ಇದೆ. ಪಾರ್ಶ್ವಗಳು ನೇರವಾಗಿಲ್ಲ; ಅಲ್ಲಲ್ಲಿ ಸೊಟ್ಟ ಸೊಟ್ಟಾ ಗಿವೆ. ದಕ್ಷಿಣ ಪಾರ್ಶ್ವವು ಪೂರ್ವದಿಗ್ಭಾಗದಲ್ಲಿ ಚಾಚಿಕೊಂಡಿದೆ. ಸರೋ ವರದ ದಕ್ಷಿಣದಲ್ಲಿ, ವಾಯುವ್ಯದಿಂದ ಆಗ್ನೇಯಕ್ಕೆ ಹಬ್ಬಿರುವ ದಿಣ್ಣೆ ಯೊಂದಿದೆ; ಕುಂಡವು ಈ ದಿಣ್ಣೆಯನ್ನು ಅನುಸರಿಸಿ ಪ್ರಸರಿಸಿದೆ. ದಿಣ್ಣೆಯ ಮಧ್ಯಭಾಗವು ಪುಟಾಕಾರ (Concave) ವಾಗಿದೆ ಮತ್ತು ಊರ್ಧ್ವ ಮುಖವಾಗಿ ತೀರ ಕಡಿದಾಗಿದೆ. ದಿಣ್ಣೆಯ ನೆತ್ತಿಮೇಲೆ ಸದಾ ಹಿಮದ

ಗಡ್ಡೆಯುಂಟು. ಗೌರೀಕುಂಡದ ಉತ್ತರತೀರವು ದೊಡ್ಡ ಮತ್ತು ಸಣ್ಣ ಕಲ್ಲುಗಳ ರಾಶಿಯಿಂದ ರಚಿತವಾಗಿದೆ ; ಈ ತೀರವೂ ಪುಟಾಕಾರವಾಗಿದೆ. ಸರೋವರದ ದಕ್ಷಿಣತೀರವನ್ನು ತಲಪುವುದು ಸಾಧ್ಯವಲ್ಲ ; ಅಲ್ಲಿ ಯಾವಾಗಲೂ ಹಿಮದಗಡ್ಡೆಗಳೂ ಕಲ್ಲುಗಳೂ ಮೇಲಿಂದ ಉರುಳುತ್ತಿರುತ್ತವೆ. ಕುಂಡವು ಉತ್ತರ ತೀರದಲ್ಲಿ ಹೆಚ್ಚು ಆಳವಿಲ್ಲ ; ದಕ್ಷಿಣದಲ್ಲಿ ಆಳ ಹೆಚ್ಚು. ಹಿಮ ಬೀಳುವುದು ದಕ್ಷಿಣದಲ್ಲಿ ಹೆಚ್ಚು ; ಉತ್ತರದಲ್ಲಿ ಕಡಮೆ. ಪ್ರೊ॥ ಕಶ್ಯಪರ ಜತೆಯಲ್ಲಿದ್ದ ಇಬ್ಬರು ಸೇವಕರು, ೧೮೫೦೦ ಅಡಿ ಎತ್ತರದಲ್ಲಿ, ಕೆಲವು ಹಿಮದ ಹಲಗೆಗಳನ್ನು ಒತ್ತರಿಸಿ, ಈ ಕುಂಡದಲ್ಲಿ ಸ್ನಾನಮಾಡಿದರಂತೆ! ಗೌರೀಕುಂಡದ ಸುತ್ತಳತೆ ಸುಮಾರು ೩/೪ ಮೈಲಿಯಾಗಬಹುದು.

ಈ ಸರೋವರದಿಂದಾಚೆಗೆ ಗುಡ್ಡಗಳು ಗಿಡ್ಡವಾಗುತ್ತ ಹೋಗುತ್ತವೆ. ರಸ್ತೆ ಎರಡು ಮೈಲಿವರೆಗೆ ಬಹುಕಲ್ಲು. ಪೂರ್ವದಿಕ್ಕಿಗೆ ಎರಡು ಮೈಲಿವರೆಗೆ ಇಳಿಜಾರಾದ ಹಾದಿ ; ಅನಂತರ ಉತ್ತರದಿಂದ ಬರುವ ಇನ್ನೊಂದು ಕಣಿವೆ ಸಿಗುವುದು. ಇಲ್ಲಿ ದಕ್ಷಿಣವಾಹಿನಿಯಾದ ಹೊಳೆಯು ಹರಿಯುತ್ತದೆ. (ಈ ಹೊಳೆಯ ಮೂಲದಕಡೆಗೆ ಹೋದರೆ ಸಿಂಧೂಕಣಿವೆಯು ಸಿಕ್ಕುತ್ತದೆ.) ಈ ಹೊಳೆಯನ್ನೇ ಅನುಸರಿಸಿ ದಕ್ಷಿಣಕ್ಕೆ ಪ್ರಯಾಣಮಾಡಿದರೆ ಪೂರ್ವ ಪಶ್ಚಿಮವಾಗಿ ಹೋಗುವ ಮತ್ತೊಂದು ಕಣಿವೆಯು ಸಿಕ್ಕುತ್ತದೆ. ಈ ಪಾರ್ಶ್ವದಲ್ಲಿ ಪ್ರದಕ್ಷಿಣೆಯನ್ನು ಮಾಡುವಾಗ, ರಸ್ತೆಯು ದಕ್ಷಿಣಕ್ಕೆ ತಿರುಗಿದ ಭಾಗದಿಂದ ೧ ಮೈಲಿ ಇರುವ ಸ್ಥಳದಿಂದ ಮಾತ್ರ ಕೈಲಾಸಶಿಖರವು ಕಾಣುತ್ತದೆ.

ಪೂರ್ವಪಶ್ಚಿಮವಾಗಿ ಹೋಗುವ ಕಣಿವೆ ಸಿಕ್ಕಿದನಂತರ ರಸ್ತೆಯು ಪಶ್ಚಿಮಕ್ಕೆ ತಿರುಗುತ್ತದೆ. ಒಂದುಮೈಲಿ ಪಶ್ಚಿಮಕ್ಕೆ ಹೋದರೆ ಸುಂಟು ವಿಹಾರವನ್ನು ತಲಪುತ್ತೇವೆ. ಸುಂಟುಗೊಂಪದಿಂದ ಪಶ್ಚಿಮಕ್ಕೆ ೬ ಮೈಲಿ ಹೋದರೆ, ಪ್ರದಕ್ಷಿಣೆಯು ಪೂರಯಿಸಿ, ಧರಾಚನವು ಸಿಕ್ಕುತ್ತದೆ.

೩. ತೀರ್ಥಪುರಿಯಲ್ಲಿರುವ ಬಿಸಿನೀರಿನ ಊಟೆಗಳು.

ಕೈಲಾಸವನ್ನು ಬಳಸಿದನಂತರ ಪ್ರೊ॥ ಕಶ್ಯಪರು ಗ್ಯಾನಿಮವೆಂಬ ಸಂತೆಸೇರುವ ಊರಿಗೆ ಪ್ರಯಾಣಮಾಡಿದರು. ಧರ್ಚಾನದಿಂದ ಗ್ಯಾನಿಮಕ್ಕೆ ಲಲಿಂಗ್ತವೆಂಬ ಸ್ಥಳದಮೇಲೆ ನೇರವಾದ ಹಾದಿ ಇದೆ. ಲಲಿಂಗ್ತದಲ್ಲಿ

೯. ಗೌರೀಕುಂಡ. (೧೮೫೦೦ ಅಡಿ)

ಕೆಲವು ಊಟೆಗಳಿವೆ. ಈ ಊಟೆಗಳಿಗೂ ರಕ್ಷಸ್ಥಳ ಸರೋವರಕ್ಕೂ ಅಂತರ್ಭೂಮಿಯಾಗಿ ಸಂಬಂಧವಿದೆ. ಗ್ಯಾನಿಮಕ್ಕೆ ತಲಪುವ ದಾರಿಯಲ್ಲಿ ಡೋಲ್ಚು ಮತ್ತು ತೀರ್ಥಪುರಿಗಳಲ್ಲಿ ಪ್ರೊ॥ ಕಶ್ಯಪರು ಅನೇಕ ಹೊಸ ವಿಷಯಗಳನ್ನು ಕಂಡುಹಿಡಿದಿರುವರು.

ಡೋಲ್ಚುವಿನಿಂದ ತೀರ್ಥಪುರಿಯು ವಾಯುವ್ಯ ದಿಕ್ಕಿನಲ್ಲಿ ಸುಮಾರು ೨೦ ಮೈಲಿ ದೂರದಲ್ಲಿದೆ. ಅನೇಕ ದಿಣ್ಣೆಗಳೂ, ಕೈಲಾಸವೇ ಮೊದಲಾದ ಸುತ್ತುಮುತ್ತಣ ಬೆಟ್ಟಗುಡ್ಡಗಳಿಂದ ಹುಟ್ಟಿ ಹರಿವ ಅನೇಕ ತೊರೆಗಳೂ ಸಿಗುತ್ತವೆ. ಡೋಲ್ಚುವಿನ ಹತ್ತಿರ ಕೆಲವು ಊಟೆಗಳಿವೆ. ಈ ಲೇಖನದ ಆರಂಭದಲ್ಲಿ ಹೇಳಿದಂತೆ ಈ ಊಟೆಗಳೇ ಸಟ್ಲೆಜ್‌ನದಿಗೆ ಮೂಲವೆಂದು ಕೆಲವರ ಅಭಿಪ್ರಾಯ. (ಚಿತ್ರ ೧೧.)

ಡೋಲ್ಚುವಿನಲ್ಲಿ ಸಟ್ಲೆಜ್‌ನದಿಯ ಪಾತ್ರವು ಬಹಳ ಕಿರಿದಾಗಿದೆ; ದಡದಿಂದ ದಡಕ್ಕೆ ಸುಲಭವಾಗಿ ಹಾರಿಬಿಡಬಹುದು. ನದಿ ಹರಿಯುತ್ತಿರುವ ಭೂಮಿಯು ಹಸುರು ಹುಲ್ಲಿನಿಂದ ತುಂಬಿದೆ. ಎರಡುಮೈಲಿ ಹರಿಯುವಷ್ಟರಲ್ಲಿ ನದಿಯು ೪ ಫರ್ಲಾಂಗ್ ಉದ್ದ ೨ ಫರ್ಲಾಂಗ್ ಅಗಲವುಳ್ಳ ಸರೋವರವಾಗಿ ಪರಿಣಮಿಸುತ್ತದೆ. ಇಲ್ಲಿಂದ ಮುಂದಕ್ಕೆ ಪ್ರವಹಿಸಿದ ಮೇಲೆ ಒಂದು ಉಪನದಿ ಬಂದು ಸೇರುತ್ತದೆ.

ಈ ಸ್ಥಳದಿಂದ ಮುಂದಕ್ಕೆ ಭೂಮಿಯು ಶಿಲಾಮಯವಾಗುತ್ತದೆ. ಏಳೆಂಟು ಮೈಲಿಗಳನಂತರ, ಎರಡು ಕಡೆಗಳಲ್ಲಿಯೂ ಸೊಟ್ಟು ಸೊಟ್ಟಾದ ಹಳದಿ ಬಣ್ಣದ ಬಂಡೆಗಳಿರುವ ಕಂಡಿಯೊಂದರಲ್ಲಿ ಹೊಳೆಯು ನುಗ್ಗಿ, ಅನಂತರ ವಿಸ್ತಾರವಾದ ಕಣಿವೆಯೊಂದರಿಂದ ಬರುವ ಇನ್ನೊಂದು ತೊರೆಯೊಂದಿಗೆ ಸಂಗಮವಾಗುತ್ತದೆ. ಈ ಸ್ಥಳದಿಂದ ತೀರ್ಥಪುರಿಗೆ ಹೋಗುವವರೆಗೂ ನದಿಯ ಪಾತ್ರವು ಬಹಳ ಕಿರಿದಾಗಿದೆ. ಹಾದಿಯು ನದಿಯ ಬಲಭಾಗದಲ್ಲಿ ತುಂಬ ಎತ್ತರವಾಗಿ ಹೋಗಿ, ಒಂದರಮೇಲೊಂದು ಅಂತಸ್ತು ಅಂತಸ್ತುಗಳಂತಿರುವ ಮೂರು ಭೂಪ್ರದೇಶಗಳನ್ನು ದಾಟುತ್ತದೆ. ಮೂರನೆಯ ಅಂತಸ್ತನ್ನು ಹತ್ತಿದನಂತರ ತಿರುಗಿ ಕೆಳಕ್ಕಿಳಿದು, ಇನ್ನೊಂದು ದಕ್ಷಿಣವಾಹಿನಿಯಾದ ಹೊಳೆಯನ್ನು ದಾಟಿ ಮತ್ತೆ ಪುನಃ ಅಂತಸ್ತುಗಳಂತಿರುವ ಅನೇಕ ಭೂ ಪ್ರದೇಶಗಳನ್ನು ದಾಟಿ, ಐದುಮೈಲಿ

ಉದ್ದವಾದ ಮೈದಾನವನ್ನು ಹಾಯ್ದು ತೀರ್ಥಪುರಿಯನ್ನು ಸೇರಬಹುದು. (ಚಿತ್ರ ೧೦.) ಈ ಸ್ಥಳವನ್ನು ತಲಪುವುದರೊಳಗೆ ರಸ್ತೆಯು ತಿರುಗಿ ನದಿಯ ದಡದ ಸಮಕ್ಕೆ ಇಳಿದಿರುತ್ತದೆ.

ತೀರ್ಥಪುರಿ ವಿಹಾರವನ್ನು ತಲಪುವುದಕ್ಕೆ ೨ ಮೈಲಿ ಮೊದಲು ದಾರಿಯಲ್ಲಿ ಗುಂಡಾದ ದೊಡ್ಡ ಗುಂಡಿಯೊಂದು ಸಿಕ್ಕುವುದು. ಈ ಗುಂಡಿಯ ಸುತ್ತಲೂ ಮತ್ತು ಮಧ್ಯದಲ್ಲಿಯೂ ಕಲ್ಲುಗಳ ಗುಡ್ಡೆಗಳನ್ನು ಕಾಣಬಹುದು. ಈ ಸ್ಥಳವು ದೇವತೆಗಳ ಆಟದ ಬಯಲೆಂದು ಇಲ್ಲಿಯ ಜನಗಳ ನಂಬಿಕೆ. ತಿಬೆಟ್ಟಿನ ಜನಗಳಲ್ಲಿ ಯಾರಾದರೂ ಈ ಸ್ಥಳಕ್ಕೆ ಬಂದರೆ, ಅಲ್ಲಿ ಸ್ವಲ್ಪ ಹೊತ್ತು ಕುಳಿತು ಪ್ರಾರ್ಥನೆಯನ್ನು ಮಾಡದೆ ಮುಂದೆ ಕಾಲಿಡಲಾರರು.

ವಿಹಾರವು ಸಿಗುವುದಕ್ಕೆ ಮುಂಚೆ ಎರಡು ಒಣಗಿದ ನದೀ ಪಾತ್ರಗಳು ಸಿಗುತ್ತವೆ. ತೀರ್ಥಪುರಿಯನ್ನು ದಾಟಿದನಂತರ ಸಟ್ಲೆಜ್ ನದಿಯು ಅನೇಕ ಶಾಖೆಗಳಿಂದ ಕೂಡಿದ ನದಿಯಾಗಿ ಪ್ರವಹಿಸುತ್ತದೆ.

ವಿಹಾರಕ್ಕಿಂತ ಕೊಂಚ ಮುಂದೆ, ನದಿಯ ಬಲದಡದ ಮೇಲ್ಭಾಗದಲ್ಲಿ ಬಿಸಿನೀರಿನ ಊಟೆಗಳಿವೆ. (ಚಿತ್ರ ೧೪.) ಮೊದಲನೆಯದರಲ್ಲಿ ಒಂದು ದೊಡ್ಡ ತೂತಿನಿಂದಲೂ ಮೂರು ಸಣ್ಣ ರಂಧ್ರಗಳಿಂದಲೂ ಬಿಸಿನೀರು ಹೊರಕ್ಕೆ ಚಿಮ್ಮುತ್ತದೆ. ಇನ್ನು ಸ್ವಲ್ಪ ಆಚೆಗೆ ಮತ್ತೊಂದು ದೊಡ್ಡ ರಂಧ್ರವೂ ಕೆಲವು ಸಣ್ಣ ರಂಧ್ರಗಳೂ ಇವೆ. ಈ ಎರಡು ಮುಖ್ಯ ಊಟೆಗಳ ಉಷ್ಣಾಂಶವೂ ಒಂದೇ ಸಮನಾಗಿರುವುದೂ, ಬದಲಾಯಿಸದೆ ಇರುವುದೂ ತುಂಬಾ ವಿಸ್ಮಯವನ್ನುಂಟು ಮಾಡುವುದಾಗಿದೆ.

ಈ ಊಟೆಗಳ ಸುತ್ತಮುತ್ತಣ ಭೂಮಿಯ ಮೇಲೆ ಸುಣ್ಣವು ಸಂಗ್ರಹೀತವಾಗಿದೆ. (ಚಿತ್ರ ೧೫.) ಸುತ್ತಲಿರುವ ಮರಗಿಡಗಳ ಕೊಂಬೆಗಳು, ಅವಕ್ಕೆ ಬಿಗಿಯಲ್ಪಟ್ಟಿರುವ ಹಗ್ಗಗಳು ಮುಂತಾದುವೆಲ್ಲಾ ಸುಣ್ಣದಿಂದ ಮುಚ್ಚಿಹೋಗುವ ಹಾಗೆ ಬಳಿಯಲ್ಪಟ್ಟವೆ. ಇನ್ನು ಸ್ವಲ್ಪ ಮೇಲ್ಗಡೆ ಹೋದರೆ ಅಲ್ಲಿಯೂ ಸುಣ್ಣದ ಸಂಗ್ರಹವು ಕಣ್ಣಿಗೆ ಬೀಳುತ್ತದೆ; ಎಂದರೆ ಊಟೆಗಳು ಮೊದಲು ಇನ್ನೂ ಮೇಲಿದ್ದುವೆಂದು ಇದರಿಂದ ಊಹಿಸ



೧೦. ತೀರ್ಥಪುರಿಯ ವಿಹಾರ.

ಬಹುದು. ವಿಹಾರದಿಂದ ಮೇಲೆ ಅದಕ್ಕಿಂತ ಎತ್ತರದಲ್ಲಿರುವ ಒಂದು ಪ್ರದೇಶದಿಂದ ನೀರು ಉದ್ಭವವಾಗುತ್ತಿತ್ತೆಂದು ಜನರು ನಂಬಿ, ಪರ್ವತದ ಈ ಭಾಗವನ್ನು ಪವಿತ್ರವೆಂದೆಣಿಸಿ ಅದನ್ನು ಪ್ರದಕ್ಷಿಣೆ ಮಾಡುತ್ತಾರೆ. ಊಟಿಗಳ ಹತ್ತಿರ ಒಂದು ಕೆರೆ ಇದೆ. ಇದರ ನೀರಿನಲ್ಲಿ ಜನರು ಸುಖವಾಗಿ ಸ್ನಾನಮಾಡಬಹುದು.

ತೀರ್ಥಪುರಿಯಿಂದ ಗ್ಯಾನಿಮಕ್ಕೆ ತಲಪಿ ಅನಂತರ ಆಲ್ಮೋರ ಜಿಲ್ಲೆಗೆ ಸೇರಿದ ಜೋಹರ್ ಎಂಬ ಸ್ಥಳಕ್ಕೆ ಪ್ರೊ॥ಕಶ್ಯಪರು ಪ್ರಯಾಣ ಮಾಡಿದರು. ಈ ಪ್ರಯಾಣದಲ್ಲಿಯೇ ಕುಂಗ್ರಿಬಿಂಗ್ರಿ ಜಯಂತಿ ಮತ್ತು ಅಂತಧುರವೆಂಬ ಮೂರು ಕಣಿವೆಗಳನ್ನು ಒಂದೇ ದಿನದಲ್ಲಿ ಅವರು ದಾಟಬೇಕಾಯಿತು. ಹಾದಿಯಂತೂ ಹೇಳಲಾರದಷ್ಟು ಕಷ್ಟವಾದುದು.

ಈ ಕಣಿವೆಗಳಲ್ಲಿ ಜಯಂತಿ ಕಣಿವೆಯೇ ಎಲ್ಲಕ್ಕಿಂತ ಎತ್ತರವಾದದ್ದೆಂದು ಸ್ವತಃಸಿದ್ಧವಾಗಿ ಕಾಣುತ್ತಿತ್ತು. ಇದರ ನಿಜಾಂಶವನ್ನು ಪರೀಕ್ಷಿಸಲೋಸುಗ ಪ್ರೊ॥ ಕಶ್ಯಪರು ಈ ಮೂರು ಸ್ಥಳಗಳಲ್ಲಿಯೂ ನೀರು ಹಬೆಯಾಗುವ ಉಷ್ಣಾಂಶಗಳನ್ನು ಕಂಡು ಹಿಡಿದು, ಜಯಂತಿಯು ಕುಂಗ್ರಿಬಿಂಗ್ರಿಗಿಂತ ೨೦೦ ಅಡಿ ಎತ್ತರವಾದುದೆಂದು ನಿಶ್ಚಿಯಿಸಿದ್ದಾರೆ.

P. T. O.

ಚಿತ್ರಗಳ ವಿವರ

೧. ಡಾಮಾಲಾ.

೨. ಗೊಸಲ್ ವಿಹಾರದಿಂದ ಮಾನಸ ಸರೋವರದ ದೃಶ್ಯ. (ಮುಖ ಚಿತ್ರ.) ದೂರದಲ್ಲಿ ಕಾಣುವುದು 'ಮಯೂಂಲಾ.'

೩. ಮಾನಸ ಸರೋವರದ ತೀರ, ಮತ್ತು ಜಿಯುಗೊಂಪ. ಎರಡು ಗುಡ್ಡಗಳ ನಡುವಣ ಹಳ್ಳವನ್ನು ನೋಡಿ.

೪. ಮಾನಸ ಸರೋವರದ ವಾಯುವ್ಯ ಮೂಲೆಯಲ್ಲಿರುವ ಬಿಡು ಗಂಡಿ.

೫. ರಕ್ಷಸ್ಥಳದಿಂದ ಕಾಣಬರುವ ಕೈಲಾಸಶ್ರೇಣಿಯ ದಕ್ಷಿಣಭಾಗ. ಮಧ್ಯೆ ಎದ್ದು ಕಾಣುವುದೇ ಕೈಲಾಸ ಶಿಖರ.

೬. ಬಾರ್ಖಾ ಎಂಬ ಸ್ಥಳದಿಂದ ಕೈಲಾಸ ಶಿಖರದ ರಮ್ಯನೋಟ.

೭. ಕೈಲಾಸ ಪ್ರದಕ್ಷಿಣೆಯಲ್ಲಿ ಧರಾಚನದಿಂದ ಸ್ವಲ್ಪ ಮೇಲೆ ಸಿಕ್ಕುವ ಮೊದಲನೆಯ ವಿಹಾರ.

೮. ದಿಧಿಪುಗೊಂಪದಿಂದ ಕಂಡುಬರುವ ಕೈಲಾಸ ಶಿಖರದ ಉತ್ತರ ಮುಖ.

೯. ಗೌರೀಕುಂಡ.

೧೦. ತೀರ್ಥಪುರಿಯ ವಿಹಾರ.

೧೧. ಸಟ್ಲಿಜ್‌ನದಿಯ ಮೂಲದ ಹತ್ತಿರವಿರುವ ಊಟಿ.

೧೨. ಡೋಲ್ಚು ವಿಹಾರ.

೧೩. ತೀರ್ಥಪುರಿಯ ಬಳಿ ಸಟ್ಲೇಜ್‌ನದಿ. 'ಓಂ ಮಣಿಪದ್ಮೇಹಂ' ಎಂಬ ಶಿಲಾಲೇಖನ.

೧೪. ತೀರ್ಥಪುರಿಯಲ್ಲಿರುವ ಬಿಸಿನೀರಿನ ಊಟಿಗಳು.

೧೫. ತೀರ್ಥಪುರಿಯಲ್ಲಿರುವ ಸುಣ್ಣದ ಸಂಗ್ರಹ. 'ಓಂ ಮಣಿ ಪದ್ಮೇಹಂ' ಎಂಬ ಶಿಲಾಲೇಖನ.

೧೧. ಸಟ್ಲೆಜ್ ನದಿಯ ಮೂಲದ ಹತ್ತಿರವಿರುವ ಊಟೆ. ನಿಂತಿರುವವನು ಲಾಮಾ ಎಂಬ

೧೨. ಡೋಲ್ಮ ವಿಹಾರ.





ಇಲ್ಲಿಂದ ಯಾತ್ರಿಕರು ಆಗ್ನೇಯಕ್ಕೆ ತಿರುಗಿ, ಸಹಸ್ರಾರು ಸಂನ್ಯಾಸಿಗಳಿಂದಿಡಿದ ಸಂಘಾರಾಮಗಳ ಸಾಲುಗಳನ್ನು ಹಾದು, ಮಥುರೆಗೆ ಬಂದರು. ಯಮುನೆಯ ದಡದಲ್ಲಿಯೆ ನಡೆದು, ಅದರ ಎಡಬಲದ ಇಪ್ಪತ್ತು ಸಂಘಾರಾಮಗಳಲ್ಲಿ ಮೂರುಸಾವಿರ ಸಂನ್ಯಾಸಿಗಳನ್ನು ಕಂಡರು. ಇಲ್ಲಿಯೂ ಬೌದ್ಧಧರ್ಮವುಕ್ಕುತ್ತಿತ್ತು. ಮರಳುಗಾಡಿನಿಂದಾಚೆಯ ಪಶ್ಚಿಮ ಹಿಂದೂದೇಶದ ರಾಜರೆಲ್ಲ ಬೌದ್ಧಧರ್ಮಾನುಯಾಯಿಗಳು. ಆಚಾರ್ಯರಿಗೆ ಪೂಜೆ ಮಾಡುವಾಗ ಇವರು ತಮ್ಮ ಕಿರೀಟಗಳನ್ನು ಕೆಳಗಿಳಿಸಿ, ಇಷ್ಟಮಿತ್ರರೊಡನೆ ತಾವೇ ಅವರ ಸೇವೆಗೆ ನಿಲ್ಲುತ್ತಾರೆ. ಇದಾದ ಮೇಲೆ, ದೊರೆಯು, ಹಾಸಿದ ಕಂಬಳಿಯ ಮೇಲೆ ಆಚಾರ್ಯರ ಮುಖಂಡನ ಸಮುಖದಲ್ಲಿ ಕೂರುತ್ತಾನೆ. ಅವರೆದುರಾಗಿ ಅವನು ಉಚ್ಚಾಸನದಲ್ಲಿ ಕೂರಲಾಗದು. ಹಿಂದೆ ದೊರೆಗಳು ಬುದ್ಧನಿಗೆ ಪೂಜೆಮಾಡಿದ ರೀತಿನೀತಿಗಳು ಈಗಲೂ ನಡೆದು ಬಂದಿವೆ.

ಮಧ್ಯದೇಶ

ಇದರ ದಕ್ಷಿಣಕ್ಕಿರುವುದೆಲ್ಲ ಮಧ್ಯದೇಶ. ಇಲ್ಲಿ ಬಿಸಿ ಚಳಿಗಳು ಸಮತೂಕವಾಗಿವೆ; ಮಂಜುಹಿಮಗಳ ಗೊಂದಲವಿಲ್ಲ. ಜನಸಂಖ್ಯೆ ಹೆಚ್ಚು. ಎಲ್ಲರೂ ಸುಖಿಗಳು— ಇವರಿಗೆ ಆಡಳಿತದ ಕಟ್ಟಾಜ್ಞೆಗಳ ನಿಯತಿಯಿಲ್ಲ. ರಾಜನ ಭೂಮಿಯನ್ನು ಸಾಗುವಳಿ ಮಾಡುವವರು ಮಾತ್ರ ರಾಜಾದಾಯವನ್ನು ಕೊಡಬೇಕು. ಅವರು ಬೇಕಾದರೆ ಇರಬಹುದು, ಇಷ್ಟವಿಲ್ಲದಿದ್ದರೆ ಹೋಗಬಹುದು—ಯಾರ ಅಡ್ಡಿಯೂ ಇಲ್ಲ. ರಾಜ್ಯದಲ್ಲಿ ಗಲ್ಲು ಮುಂತಾದ ತೀವ್ರಶಿಕ್ಷೆಗಳಿಲ್ಲ. ತಪ್ಪುಮಾಡಿದವರಿಗೆ ದೋಷಕ್ಕನುಗುಣವಾದ ದಂಡವುಂಟು. ದಂಗೆಕೋರರಿಗೆ ಕೂಡ ಬಲಗೈ ಕತ್ತರಿಸುವುದೊಂದುಳಿದು ಬೇರೆ ಶಿಕ್ಷೆಯಿಲ್ಲ. ದೊರೆಯ ಅಂಗರಕ್ಷಕರಿಗೆನಿಯತವಾದ ಸಂಬಳವುಂಟು. ಇಡೀ ನಾಡಿನಲ್ಲಿ, ಚಂಡಾಲರುಳಿದು, ಯಾರೂ ಪ್ರಾಣಿವಧೆ ಮಾಡರು, ಮದ್ಯಪಾನ ಮಾಡರು, ಈರುಳ್ಳಿ ಬೆಳ್ಳುಳ್ಳಿಗಳನ್ನು ತಿನ್ನರು. ಚಂಡಾಲರು ಮಂದಿಯಿಂದ ಬೇರಾಗಿ ವಾಸಿಸುವರು. ಪೇಟೆ ಕೋಟೆಗಳಿಗೆ ಹೋಗಬೇಕಾದಾಗ ತಮ್ಮ ಬರವನ್ನು ಸೂಚಿಸಲು ಒಂದು ಮರದ ತುಂಡನ್ನು ಸದ್ದುಮಾಡುತ್ತಾರೆ; ಇದರಿಂದ ಜನರು ತಿಳಿದು

ದೂರಸಾಗುತ್ತಾರೆ. ಇಲ್ಲಿ ಹಂದಿಕೋಳಿಗಳನ್ನು ಸಾಕರು, ಹಸುವನ್ನು ಮಾರರು. ಇಲ್ಲಿ ಕಟುಕರ ಅಂಗಡಿಗಳಿಲ್ಲ. ಪೇಟೆಗಳಲ್ಲಿ ಹೆಂಡದಂಗಡಿಯಿಲ್ಲ. ಇಲ್ಲಿ ಕವಡೆಗಳ ಚಲಾವಣೆಯುಂಟು. ಚಂಡಾಲರು ಮಾತ್ರ ಬೇಟೆಯಾಡುತ್ತಾರೆ, ಮೀನು ಹಿಡಿಯುತ್ತಾರೆ.

ಬುದ್ಧನು ಭೂಮಿಯಿಂದ ವೈಗರೆದ ಮೇಲೆ, ದೊರೆಗಳು ದೊಡ್ಡವರು ಮೊದಲಾದವರು ಆಚಾರ್ಯರಿಗೆ ವಿಹಾರಗಳನ್ನಾಗಿಸಿ, ಮನೆ ಹೊಲ ತೋಟ ಆಳುಕಾಳುಗಳನ್ನು ಬಿಟ್ಟುಕೊಟ್ಟರು. ಇದಕ್ಕಾಗಿ ದಾನಶಾಸನಗಳಾದುವು. ಅವು ಈಗಲೂ ಪರಂಪರೆಯಾಗಿ ದೊರೆಯಿಂದ ದೊರೆಗೆ ನಡೆದು ಬರುತ್ತಿವೆ. ಅವನ್ನು ಯಾರೂ ಮೀರರು.

ವಿಹಾರದವರ ಕೆಲಸವೆಂದರೆ ಕರ್ಮಕ್ಷಯ, ಸೂತ್ರಪಠನ ಮತ್ತು ಧ್ಯಾನ. ಬಂದ ಯಾತ್ರಿಕರನ್ನು ಇಲ್ಲಿಯ ನಿವಾಸಿಗಳು ಆದರಿಸಿ ಕರೆ ತಂದು, ಅವರ ಬಟ್ಟೆಬರೆ ಭಿಕ್ಷಾಪಾತ್ರೆಗಳನ್ನು ತಾವೇ ಹೊತ್ತುಕೊಂಡು, ಕಾಲಿಗೆ ನೀರಿತ್ತು, ಅಭ್ಯಂಗನಕ್ಕೆ ಎಣ್ಣೆಕೊಟ್ಟು 'ವಿಕಾಲದ' ಆಹಾರವನ್ನಿಕ್ಕುತ್ತಾರೆ. ಯಾತ್ರಿಕನ ಶ್ರಮವಾರಿದನಂತರ ಅವನ ಸಂನ್ಯಾಸವೆಂದು ಮೊದಲಾಯಿತೆಂದು ಕೇಳಿ ತಿಳಿದು, ಅದಕ್ಕನುಸಾರವಾಗಿ ಹಾಸು ಹೊದಿಕೆಗಳನ್ನೂ ಮಲಗಲೆಡೆಯನ್ನೂ ನೀಡುತ್ತಾರೆ. ಎಲ್ಲವೂ ಧರ್ಮಾನುಸಾರವಾಗಿ ನಡೆಯುತ್ತವೆ.

ಪ್ರತಿ ಸಂಘಾರಾಮದ ಬಳಿಯೂ ಸಾರಿಪುತ್ರ ಮಹಾಮೌದ್ಗಲ್ಯಾಯನ ಆನಂದರಿಗೆ ಮಾತ್ರವಲ್ಲದೆ, ಅಭಿಧರ್ಮ ವಿನಯ ಸೂತ್ರಗಳಿಗಾಗಿಯೂ ಗೋಪುರವೆತ್ತಿದ್ದಾರೆ. ಪ್ರತಿ ವರ್ಷದ ಒಂದು ತಿಂಗಳ ಮತ ಧರ್ಮನಿಯತವಾದ ವಿಶ್ರಾಂತಿಯಾಗಲು, ಆಸ್ತಿಕರೆಲ್ಲ ಕೂಡಿ ಆಚಾರ್ಯರ ಪೂಜಾದ್ರವ್ಯಗಳನ್ನು ಹೊಂದಿಸಿ, ಅವರಿಗೆ ವಿಕಾಲದ ಆಹಾರವನ್ನಿಕ್ಕುತ್ತಾರೆ. ಆಚಾರ್ಯರು ನೆರೆದ ಸಭೆಯಲ್ಲಿ ಧರ್ಮವನ್ನುಪದೇಶಿಸುತ್ತಾರೆ. ಇದಾದ ಮೇಲೆ ಸಾರಿಪುತ್ರನ ಗೋಪುರಕ್ಕೆ ಪೂಜೆ ಸಲಿಸಿ, ವಿವಿಧ ಪುಷ್ಪ ಧೂಪಗಳ ನೈವೇದ್ಯಮಾಡುತ್ತಾರೆ. ರಾತ್ರಿಯೆಲ್ಲ ದೀಪಗಳು ಉರಿಯುತ್ತವೆ. ವಾದ್ಯಗಳ ಘೋಷಣೆಯುಂಟು.

ಸಾರಿಪುತ್ರನು ಮೊದಲು ಬ್ರಾಹ್ಮಣನಾಗಿದ್ದನು. ಒಂದು ಸಲ ಇವನು ಬುದ್ಧನನ್ನು ಕಂಡು, ಸಂಸಾರದೂರನಾಗಿ ಭಿಕ್ಷುವಾಗಲೆಳಸಿದ. ಮಹಾ ಮುದ್ಗಲನೂ ಮಹಾ ಕಾಶ್ಯಪನೂ ಹೀಗೆಯೆ ಮಾಡಿದರು.

ಭಿಕ್ಷುಣಿಯರು ಬಹುವಾಗಿ ಪೂಜಿಸುವುದು ಆನಂದನ ಗೋಪುರವನ್ನು; ಏಕೆಂದರೆ ಹೆಂಗಸರು ಸಂಸಾರದೂರರಾಗಿ ಸಂನ್ಯಾಸಕ್ಕರ್ಹರಾಗಲನುಗ್ರಹಿಸುವಂತೆ ಲೋಕಪೂಜ್ಯನನ್ನು ಬೇಡಿದವನು ಆನಂದ. ಸವಣರು ರಾಹುಳನನ್ನು ಬಹುವಾಗಿ ಪೂಜಿಸುವರು. ಅಭಿಧರ್ಮದವರು ಅಭಿಧರ್ಮಕ್ಕೂ, ವಿನಯದವರು ವಿನಯಕ್ಕೂ ಪೂಜೆ ಸಲಿಸುತ್ತಾರೆ. ಈ ಪೂಜೆಗಾಗಿ ಪ್ರತಿ ಪಂಗಡಕ್ಕೂ ವರ್ಷಕ್ಕೊಂದು ದಿನ ಗೊತ್ತುಂಟು. ಮಹಾಯಾನದವರು ಪ್ರಜ್ಞಾಪಾರಮಿತ, ಮಂಜುಶ್ರೀ, ಅವಲೋಕಿತೇಶ್ವರರನ್ನು ಪೂಜಿಸುತ್ತಾರೆ.

ಆಚಾರ್ಯರಿಗೆ ಸುಗ್ಗಿಯಲ್ಲಿ ಸಲ್ಲತಕ್ಕ ಭಾಗವನ್ನು ಸಲಿಸಿ, ವೈಶ್ಯರು ಬ್ರಾಹ್ಮಣರು ಇವರ ಮುಖಂಡರು ಆಚಾರ್ಯರಿಗೆ ಬೇಕಾದ ಬಟ್ಟೆಬರೆಗಳನ್ನು ಹಂಚುತ್ತಾರೆ. ಆಚಾರ್ಯರು ಅದನ್ನು ತಮ್ಮತಮ್ಮಲ್ಲಿ ಹಂಚಿಕೊಳ್ಳುತ್ತಾರೆ. ಬುದ್ಧನ ನಿರ್ವಾಣದಿಂದ ಇದುವರೆಗೂ ಆಚಾರ್ಯರ ನಡೆವಳಿಗಳು ಸ್ವಲ್ಪವೂ ಬದಲಾಗದಿವೆ.

ಯಾತ್ರಿಕರು ಸಿಂಧುವನ್ನು ದಕ್ಷಿಣಹಿಂದೂದೇಶಕ್ಕಾಗಿ ಹಾಯ್ದಲ್ಲಿಂದ ದಕ್ಷಿಣಸಮುದ್ರದ ವರೆಗೆ, ಎಂದರೆ ನಲವತ್ತು ಐವತ್ತು ಸಾವಿರ ಲೈ ದೂರ, ಎಲ್ಲ ಸಮಭೂಮಿ. ಇಲ್ಲಿ ದೊಡ್ಡದೊಡ್ಡ ಪರ್ವತಗಳಿಲ್ಲ, ಝರಿಗಳಿಲ್ಲ; ಸಣ್ಣಸಣ್ಣ ಹೊಳೆಗಳು ಮಾತ್ರ.

ಶಂಕಾಸ್ಯ

ಯಾತ್ರಿಕರು ಇಲ್ಲಿಂದ ಆಗ್ನೇಯಕ್ಕೆ ಎಂಟು ಯೋಜನ ನಡೆದು ಶಂಕಾಸ್ಯವೆಂಬ ರಾಜ್ಯಕ್ಕೆ ಬಂದರು.

ಬುದ್ಧನು ತನ್ನ ತಾಯಿಗೆ ಮೂರುತಿಂಗಳು ಧರ್ಮವನ್ನುಪದೇಶಿಸಿ, ತ್ರಯಸ್ತ್ರಿಂಶ ಸ್ವರ್ಗದಿಂದ ಭೂಮಿಗಿಳಿದುದಿಲ್ಲಿಯೆ. ಬುದ್ಧನು ತನ್ನ

ಶಿಷ್ಯರಿಗೆ ಗೊತ್ತಿಲ್ಲದಂತೆ ತನ್ನ ದಿವ್ಯಶಕ್ತಿಯಿಂದ ಅಲ್ಲಿಗೆ ಹೋಗಿದನು. ಮೂರುತಿಂಗಳು ಮುಗಿಯುವುದಕ್ಕೆ ಏಳು ದಿನವಿರುವಾಗ ಬುದ್ಧನು ಅನಿರುದ್ಧನ ದಿವ್ಯಚಕ್ಷುಗಳಿಗೆ ಮೈದೋರಿದನು. ಅನಿರುದ್ಧನು ಲೋಕಪೂಜ್ಯನನ್ನು ಕಂಡೊಡನೆ ಮಹಾಮುದ್ಗಲನನ್ನು ಕುರಿತು "ಹೋಗಿ ಲೋಕಪೂಜ್ಯನಿಗೆ ನಮಸ್ಕರಿಸು" ಎಂದನು. ಮುದ್ಗಲನು ಬುದ್ಧನ ಪಾದದಲ್ಲಿ ತಲೆಯಿಟ್ಟನು. ಒಬ್ಬರನ್ನೊಬ್ಬರು ವಿಚಾರಿಸಿದಮೇಲೆ ಬುದ್ಧನು ಮುದ್ಗಲನನ್ನು ಕುರಿತು "ಇನ್ನು ಏಳುದಿನ ಕಳೆದು ಜಂಬೂದ್ವೀಪಕ್ಕೆ ಹೋಗುವೆನು" ಎಂದನು. ಮುದ್ಗಲನು ಮರಳಿದನು. ಆಗ, ಬುದ್ಧನನ್ನು ಬಹುಕಾಲದಿಂದ ಕಾಣದಿದ್ದ ಎಂಟುದೇಶದ ದೊರೆಗಳೂ ತಮ್ಮ ಪರಿವಾರಗಳೊಡನೆ ಲೋಕಪೂಜ್ಯನ ಬರವನ್ನು, ಚಕೋರಗಳಂತೆ ಎದುರು ನೋಡುತ್ತ, ಈ ನಾಡಿಗೆ ಮುಗಿಲುಗಳಂತೆ ಮುತ್ತಿದರು.

ಆಗ ಉತ್ಪಲೆಯೆಂಬ ಭಿಕ್ಷುಣಿಯು "ಇಂದು ದೊರೆಗಳು ಮಂತ್ರಿಗಳು ಅವರ ಪರಿವಾರವೆಲ್ಲ ಬುದ್ಧನನ್ನು ಕಾಣುವರು. ನಾನು ಹೆಂಗಸು ಮಾತ್ರದವಳು ಅವನನ್ನು ಮೊದಲು ಕಾಣುವುದೆಂತು?" ಎಂದು ದುಃಖಿತೆಯಾಗಿರಲು, ಬುದ್ಧನು ತನ್ನ ದಿವ್ಯಶಕ್ತಿಯಿಂದ ಅವಳನ್ನು ಪವಿತ್ರ ಚಕ್ರೇಶನನ್ನಾಗಿ ಮಾರ್ಪಡಿಸಿದನು. ಎಲ್ಲರಿಗೂ ಮುಂದಾಗಿ ಅವಳೇ ತನ್ನ ಭಕ್ತಿದೋರಿದಳು.

ಬುದ್ಧನು ತ್ರಯಸ್ತ್ರಿಂಶ ಸ್ವರ್ಗದಿಂದ ಭೂಮಿಗಿಳಿವಾಗ ಮೂರು ಸಾಲು ಅನರ್ಘ್ಯವಾದ ಮೆಟ್ಟಲುಗಳು ಕಾಣಿಸಿಕೊಂಡುವು. ಮಧ್ಯದ ಸಪ್ತರತ್ನಗಳ ಮೆಟ್ಟಲ ಮೇಲೆ ಬುದ್ಧನಿಳಿಯುತ್ತಿದ್ದ. ಬಲಗಡೆಯ ಬಿಳಿಯ ಮೆಟ್ಟಲ ಮೇಲೆ ಬ್ರಹ್ಮನು ಬಿಳಿಯ ಚಾಮರವಿಕ್ಕುತ್ತಿದ್ದ. ದೇವಾಧಿಪನಾದ ಶಕ್ರನು ಎಡಗಡೆಯ ಚಿಂಬೊನ್ನಿನ ಹಂತದಲ್ಲಿ ಸಪ್ತರತ್ನಗಳ ಛತ್ರದ ಊಳಿಗಮಾಡುತ್ತಿದ್ದ. ಬುದ್ಧನ ಹಿಂದೆ ಲೆಕ್ಕಕ್ಕೆ ಸಿಗದ ದೇವಗಡಣವಿತ್ತು. ಬುದ್ಧನು ಕೆಳಗಿಳಿದ ಮೇಲೆ ಮೂರುಹಂತಗಳೂ ಮರೆಯಾಗಿ, ಮಧ್ಯದ ಏಳು ಮೆಟ್ಟಲು ಮಾತ್ರ ಮಿಕ್ಕಿತು.

ಕಾಲಕಳೆದ ಮೇಲೆ ಅಶೋಕ ಮಹಾರಾಜನು ಅವುಗಳ ಮೂಲವನ್ನು ಕಾಣಬೇಕೆಂದು ಅಗೆಯಿಸಿದನು. ಭೂಮಿಯ ಕೊನೆ ಮುಟ್ಟಿದರೂ

ಮೆಟ್ಟಲ ಕೊನೆ ಮುಟ್ಟಲಿಲ್ಲ. ಇದರಿಂದ ಅಶೋಕನ ಆಸ್ತಿಕ್ಯವು ಹೊಂಗಿ, ಅವನು ಅಲ್ಲೊಂದು ವಿಹಾರವನ್ನಾಗಿಸಿ, ಮೆಟ್ಟಲಿಗಭಿಮುಖವಾಗಿ ಹದಿನಾರು ಅಡಿಯೆತ್ತರದ ಬುದ್ಧನ ನಿಂತಿರುವ ವಿಗ್ರಹವನ್ನು ಪ್ರತಿಷ್ಠಿಸಿದನು. ವಿಹಾರದ ಹಿಂದೆ ಒಂದು ಕಲ್ಲು ಕಂಬ ನೆಡಿಸಿದನು. ಅದರ ಎತ್ತರ ಐವತ್ತು ಅಡಿ. ಅದರ ಮೇಲೊಂದು ಸಿಂಹವಿದೆ. ಕಂಬದ ನಾಲ್ಕು ಕಡೆಗಳಲ್ಲಿಯೂ ಗಾಜಿನಂತೆ ಮಿರುಗುವ ಬುದ್ಧನ ನಾಲ್ಕು ಪ್ರತಿಮೆಗಳಿವೆ. ಕೆಲವರು ಪಾಷಂಡಿಗಳು ಇಲ್ಲಿಯ ಸವಣರೊಡನೆ ಈ ಸ್ಥಳಕ್ಕಾಗಿ ವಾಗ್ವಾದಮಾಡಿದರು. ಸವಣರು ತಾವು ಸೋಲುವಂತಾಗಲು, ಸ್ಥಳವು ತಮ್ಮದಾದರೆ ಅಲ್ಲಿ ಒಂದು ದಿವ್ಯ ನಡೆಯುವುದೆಂದು ಪ್ರತಿಜ್ಞೆ ಮಾಡಿದರು. ಪ್ರತಿಜ್ಞೆ ಮಾಡಿದುದು ತಡ, ಕಂಬದ ಮೇಲಿನ ಸಿಂಹವು ಗರ್ಜಿಸಿತು. ಪಾಷಂಡಿಗಳು ಹೆದರಿ ಆ ತೀರ್ಮಾನಕ್ಕೆ ತಲೆವಾಗಿ ಹಿಂದಿರುಗಿದರು.

ಬುದ್ಧನು ಸ್ವರ್ಗದಲ್ಲಿ ಮೂರು ತಿಂಗಳು ಭುಜಿಸಿದನಾಗಿ, ಅವನ ದೇಹವು ಅಸಾಮಾನ್ಯವಾದ ದಿವ್ಯವಾದ ಕಂಪು ಕುಡುತ್ತಿತ್ತು. ಬುದ್ಧನು ತತ್‌ಕ್ಷಣ ಮಿಂದನು. ಕಾಲಕಳೆದ ಮೇಲೆ ಅವನು ಮಿಂದಲ್ಲಿ ಕಟ್ಟಿದ ಸ್ನಾನ ಗೃಹವು ಈಗಲೂ ನಿಂತಿದೆ. ಭಿಕ್ಷುಣಿ ಉತ್ಪಲೆಯು ಬುದ್ಧನಿಗೆ ತನ್ನ ಭಕ್ತಿದೋರಿದಲ್ಲಿ ಒಂದು ಗೋಪುರವಿದೆ. ಬುದ್ಧನು ಭೂಮಿಯಲ್ಲಿರುವಾಗ ತನ್ನ ಕೂದಲು ಉಗುರುಗಳನ್ನು ಕತ್ತರಿಸಿದಲ್ಲಿ ಗೋಪುರಗಳೆದ್ದಿವೆ. ಶಾಕ್ಯಮುನಿ ಬುದ್ಧನೂ ಅವನ ಹಿಂದಿನ ಮೂವರು ಬುದ್ಧರೂ ಕುಳಿತಲ್ಲಿ ಗೋಪುರಗಳಾಗಿವೆ. ಅವರು ನಡೆದಲ್ಲಿ, ಅವರ ಮೂರ್ತಿಗಳು ತಯಾರಾದಲ್ಲಿ ಕೂಡ, ಗೋಪುರಗಳೆದ್ದಿವೆ. ಈಗಲೂ ಈ ಗೋಪುರಗಳಿವೆ. ಶಕ್ರಬ್ರಹ್ಮರು ಬುದ್ಧನನ್ನು ತ್ರಯಸ್ತ್ರಿಂಶ ಸ್ವರ್ಗದಿಂದ ಹಿಂಬಾಲಿಸಿದಲ್ಲಿಯೂ ಗೋಪುರಗಳನ್ನು ಕಟ್ಟಿದ್ದಾರೆ. ಇಲ್ಲಿಯ ಭಿಕ್ಷುಗಳೂ ಭಿಕ್ಷುಣಿಯರೂ ಕೂಡಿ ಸಾವಿರವಿರಬಹುದು. ಕೆಲವರು ಮಹಾಯಾನದವರು, ಕೆಲವರು ಹೀನಯಾನದವರು. ಎಲ್ಲರಿಗೂ ಒಂದೇ ಸಮವಾದ ಊಟ.

ಈ ಸಂಘಾರಾಮದಲ್ಲಿ ಮಹಾಸರ್ಪವೊಂದಿದೆ. ಅದರ ಕಿವಿ ಬಿಳುಪು. ಅದು, ನಾಡಿನಲ್ಲಿ ಸುಗ್ಗಿಯಾಗುವಂತೆ ಕಾಲಕ್ಕೆ ತಕ್ಕ ಮಳೆಯಾಗಿಸಿ, ಬಂದ

ತೊಂದರೆಗಳನ್ನು ನಿವಾರಿಸಿ ಇವರ ದಾನಪತಿಯಾಗಿರುವುದರಿಂದ ಈ ಸವಣರಿಗೆ ಕೊರತೆಯೇನಿಲ್ಲ. ಇದಕ್ಕಾಗಿ ಅವರು ಅದಕ್ಕೊಂದು ಮನೆಕಟ್ಟಿ, ಕುಳ್ಳಿರಲು ಕಂಬಳಿ ಹಾಸಿ, ಪುಷ್ಟವಾದ ಆಹಾರಹಾಕುತ್ತಾರೆ. ಪ್ರತಿ ದಿನವೂ ಅವರಲ್ಲಿ ಮೂವರು ಅದರ ಮನೆಗೆ ಹೋಗಿ ಊಟಮಾಡುತ್ತಾರೆ. ಬೇಸಗೆಯ ಮತಧರ್ಮನಿಯತ ವಿಶ್ರಾಂತಿ ಕಳೆಯಲು, ಈ ಮಹಾಸರ್ಪವು ಇದ್ದಕ್ಕಿದ್ದಂತೆ ಸಣ್ಣ ಹಾವಾಗುತ್ತದೆ. ಅದರ ಕಿವಿಗಳು ಎರಡು ಬಿಳಿಯ ಚುಕ್ಕಿಗಳಾಗುತ್ತವೆ. ಇದನ್ನು ಕಂಡು ಆಚಾರ್ಯರು, ನೊರೆ ಹಾಲು ತುಂಬಿದ ತಾಮ್ರದ ಪಾತ್ರೆಯಲ್ಲಿ ಹಾವನ್ನಿಟ್ಟು, ಎಲ್ಲರ ಎದುರಿಗೂ ಉತ್ಸವಮಾಡುತ್ತಾರೆ. ಅದು ಎಲ್ಲರಿಗೂ ನಮಸ್ಕರಿಸುವಂತೆ ಕಾಣುತ್ತದೆ. ಒಂದು ಪ್ರದಕ್ಷಿಣವಾದ ಮೇಲೆ ಅದು ಮೈಗರೆಯುತ್ತದೆ. ಹೀಗಾಗುವುದು ವರ್ಷಕ್ಕೊಮ್ಮೆ.

ಈ ನಾಡು ಬಹಳ ಫಲವತ್ತಾದುದು. ಜನರು ಐಶ್ವರ್ಯವಂತರು. ಅವರ ಸುಖ ವರ್ಣಿಸಿ ತೀರದು. ಬೇರೆ ನಾಡವರು ಬಂದರೆ, ಅವರನ್ನು ಬಹುವಾಗಿ ಆದರಿಸಿ, ಅವರಿಗೆ ಬೇಕಾದುದನ್ನೆಲ್ಲ ಸಲಿಸುತ್ತಾರೆ.

ಅಗ್ನಿಸೀಮಾ

ಇಲ್ಲಿಂದ ಉತ್ತರಕ್ಕೆ ಐವತ್ತು ಯೋಜನ ದೂರದಲ್ಲಿ ಅಗ್ನಿಸೀಮಾ ಎಂಬ ಸಂಘಾರಾಮವಿದೆ. ಇಲ್ಲಿ ಅಗ್ನಿಸೀಮಾ ಎಂಬ ಭೂತಕ್ಕೆ ಬುದ್ಧನು ಉತ್ತಮಗತಿದೋರಿದನು. ಅಲ್ಲಿ ಒಂದು ವಿಹಾರವೆದ್ದಿತು. ಈ ವಿಹಾರವನ್ನು ಅರ್ಹತನೊಬ್ಬನಿಗೆ ಅರ್ಘ್ಯಪೂರ್ವಕವಾಗಿ ಅರ್ಪಿಸುವಾಗ ಕೆಲವು ಜಲಬಿಂದುಗಳು ಕೆಳಗುರುಳಿದುವು. ಇನ್ನೂ ಅವು, ಎಷ್ಟು ತೊಡೆದರೂ, ಎದ್ದು ಕಾಣಿಸುವುವು.

ಇಲ್ಲಿ ಬುದ್ಧನ ಹೆಸರಿನಲ್ಲಿ ಇನ್ನೊಂದು ಗೋಪುರವಿದೆ. ಒಂದು ಪ್ರೇತವು ಅದನ್ನು ದಿನವೂ ಗುಡಿಸಿ ಸಾರಿಸುತ್ತದೆ. ಪಾಷಂಡಿಯೊಬ್ಬನು "ಪ್ರತಿದಿನವೂ ಈ ಪ್ರೇತವು ಮನುಷ್ಯ ಸಹಾಯವಿಲ್ಲದೆ ಗುಡಿಸುತ್ತದೆಯೋ! ಮಹಾ ಸೇನೆಯೊಂದನ್ನು ಇಲ್ಲಿ ಇಳಿಸುತ್ತೇನೆ. ಕಸಕುಪ್ಪೆಯು ರಾಶಿಯಾಗಲಿ. ಹೇಗೆ ಗುಡಿಸುವುದೋ ನೋಡೋಣ!'' ಎಂದನು. ಪ್ರೇತವು

ಬಿರುಗಾಳಿಯನ್ನೆಬ್ಬಿಸಿತು; ಕಸವೆಲ್ಲಾ ಹಾರಿಹೋಗಿ ಸ್ಥಳವು ಸ್ವಚ್ಛವಾಯಿತು.

ಇಲ್ಲಿ ಇನ್ನೂ ನೂರಾರು ಗೋಪುರಗಳಿವೆ; ದಿನವೆಲ್ಲ ಎಣಿಸಿದರೂ ಲೆಕ್ಕಸಿಕ್ಕುವುದಿಲ್ಲ. ಅವುಗಳ ಸಂಖ್ಯೆಯನ್ನು ತಿಳಿಯಲೇಬೇಕಾದರೆ ಪ್ರತಿ ಗೋಪುರದ ಬಳಿ ಒಬ್ಬೊಬ್ಬನನ್ನು ನಿಲ್ಲಿಸಬೇಕು. ಆ ಮೇಲೆ ಈ ಜನರನ್ನು ಎಣಿಸಿದರೆ ಗೋಪುರದ ಎಣಿಕೆ ಸಿಕ್ಕುವುದು. ಹಾಗಾದರೂ ಸರಿಯೆ, ಎಷ್ಟುಮಂದಿ ಬೇಕಾದೀತೆಂದು ತಿಳಿಯಲು ಕಷ್ಟ.

ಇಲ್ಲಿ, ಪ್ರತ್ಯೇಕ ಬುದ್ಧನೊಬ್ಬ ಊಟಮಾಡುತ್ತಿದ್ದ ಎಡೆಯಲ್ಲಿರುವ ಸಂಘಾರಾಮದಲ್ಲಿ ಸುಮಾರು ೬೦೦-೭೦೦ ಭಿಕ್ಷುಗಳಿದ್ದಾರೆ. ಇವನು ನಿರ್ವಾಣಪಡೆದು ಭಸ್ಮೀಭೂತನಾದ ಸ್ಥಲವು ರಥಚಕ್ರದಗಲವಿದೆ; ಸುತ್ತೆಲ್ಲ ಹಸುರು ಹುಲ್ಲು ಬೆಳೆದಿದ್ದರೂ ಇಲ್ಲಿ ಮಾತ್ರ ಏನೂ ಇಲ್ಲ. ಆತನು ತನ್ನ ಬಟ್ಟೆಗಳನ್ನು ಒಣಗಿಸಿದಲ್ಲಿ ಕೂಡ ಹುಲ್ಲು ಬೆಳೆಯದು. ಅವನ ಬಟ್ಟೆಗಳ ಗುರುತು ಈಗಲೂ ಅಲ್ಲಿದೆ.

ಕನ್ಯಾಕುಬ್ಜ

ಗ್ರೀಷ್ಮವು ಕಳೆಯುವವರೆಗೂ ಫಾಹಿಯಾನನು ಮಹಾಸರ್ಪವಿಹಾರದಲ್ಲಿ ತಂಗಿದ್ದು, ಆಗ್ನೇಯದೆಡೆ ಏಳು ಯೋಜನ ನಡೆದು, ಗಂಗಾತೀರದ ಕನ್ಯಾಕುಬ್ಜಕ್ಕೆ ಬಂದನು. ಅಲ್ಲಿ ಎರಡು ಹೀನಯಾನಾನುಯಾಯಿಗಳ ಮಠವಿದ್ದುವು. ಈ ಪಟ್ಟಣದ ಪಶ್ಚಿಮಕ್ಕೆ ಆರೇಳು ಲೈ ದೂರದಲ್ಲಿ, ಗಂಗಾನದಿಯ ಉತ್ತರದಲ್ಲಿ, 'ಜೀವನದ ಏರುತಗ್ಗುಗಳು ನಶ್ವರವೆಂದೂ, ದೇಹವು ನೀರು ಗುಳ್ಳೆಗೆ ಸಮವೆಂದೂ' ಬುದ್ಧನು ಶಿಷ್ಯರಿಗೆ ತತ್ತ್ವೋಪದೇಶಗೈದ ಸ್ಥಲ ಉಂಟು; ಇಲ್ಲಿ ಎತ್ತಿದ ಗೋಪುರವು ಇನ್ನೂ ನಿಂತಿದೆ.

ಅರಿಜಕಾವನ

ಗಂಗೆಯನ್ನು ದಾಟಿ, ದಕ್ಷಿಣಕ್ಕೆ ಮೂರುಯೋಜನ ನಡೆದು, ಯಾತ್ರಿಕರು ಅರಿಜಕಾವನವೆಂಬ ಕಾಡಿಗೆ ಬಂದರು. ಇಲ್ಲಿ ಬುದ್ಧನು ಧರ್ಮೋಪದೇಶಗೆಯ್ದ, ಕುಳಿತ, ನಡೆದ, ಸ್ಥಳಗಳುಂಟು. ಅಲ್ಲೆಲ್ಲ ಗೋಪುರಗಳೆದ್ದಿವೆ.

ಅಯೋಧ್ಯೆ

ಇಲ್ಲಿಂದ ಆಗ್ನೇಯಕ್ಕೆ ಹತ್ತುಯೋಜನ ನಡೆದು, ಯಾತ್ರಿಕರು ಅಯೋಧ್ಯೆಯೆಂಬ ಹಿರಿಯ ರಾಜ್ಯವನ್ನು ಸೇರಿದರು. ಅಯೋಧ್ಯೆಯ ದಕ್ಷಿಣ ದಿಡ್ಡಿಯಿಂದ ಹೊರಬಿದ್ದು, ರಸ್ತೆಯ ಪೂರ್ವದಲ್ಲಿ ಬುದ್ಧನು ದಂತ ಕಾಷ್ಠವನ್ನು ಅಗಿದು ನೆಲದಲ್ಲಿ ನೆಟ್ಟಲ್ಲಿಗೆ ಬಂದರು. ಆ ಕಡ್ಡಿಯು, ನೆಟ್ಟಲ್ಲಿ ಏಳುಮೊಳ ಎತ್ತರವಾಗಿ ಅಂದಿನಿಂದ ಎತ್ತರವಾಗದೆ ಅಷ್ಟೇ ಎತ್ತ ರವಿದೆ. ವಿರುದ್ಧ ಧರ್ಮಾನುಯಾಯಿಗಳಾದ ಬ್ರಾಹ್ಮಣರು ಇದನ್ನು ಕಂಡು ಕುಪಿತರಾಗಿ ಹೊಟ್ಟೆಯಕಿಚ್ಚಿನಿಂದ ಕೆಲವುಸಲ ಮರವನ್ನು ಕಡಿಸಿ ದರು; ಕೆಲವುಸಲ ಕೀಳಿಸಿ ದೂರ ಬಿಸಾಡಿಸಿದರು; ಆದರೂ ಅದು ಎಂದಿನಂತೆ ಅದೇ ಸ್ಥಾನದಲ್ಲಿ ಬೆಳೆಯುತ್ತಿತ್ತು. ಇಲ್ಲಿ ಕೂಡ ನಾಲ್ವರು ಬುದ್ಧರೂ ನಡೆದು ನಿಂತ ಎಡೆಯಿದೆ. ಅಲ್ಲಿ ಕಟ್ಟಿದ ಗೋಪುರಗಳು ಇನ್ನೂ ನಿಂತಿವೆ.

ಶ್ರಾವಸ್ತಿ

ಯಾತ್ರಿಕರು ಇಲ್ಲಿಂದ ದಕ್ಷಿಣಕ್ಕೆ ಎಂಟುಯೋಜನ ನಡೆದು ಕೋಸಲ ರಾಜ್ಯದಲ್ಲಿನ ಶ್ರಾವಸ್ತೀನಗರಿಗೆ ಬಂದರು. ಇಲ್ಲಿ ನಿವಾಸಿಗಳು ಅತಿ ವಿರಳ. ಸುಮಾರು ಇನ್ನೂರು ಸಂಸಾರಗಳಿರಬಹುದು. ಎಲ್ಲರೂ ದೂರದೂರ ವಾಗಿದ್ದಾರೆ.

ಈ ನಗರದಲ್ಲಿ ಪ್ರಸೇನಜಿತ್ ಮಹಾರಾಜನಾಳಿದನು. ಇಲ್ಲಿ, ಮಹಾಪ್ರಜಾಪತಿಯ ಹಳೆಯ ವಿಹಾರವಿದ್ದಲ್ಲಿ, ಸುದತ್ತನ ಮನೆಯ ಗೋಡೆ ಮತ್ತು ಬಾವಿಯು ಇರುವೆಡೆಯಲ್ಲಿ, ಅಂಗುಳಿಮಾಲ್ಯನು ಅರ್ಹತ ನಾಗಿ ಪರಿನಿರ್ವಾಣವಡೆದು ಭಸ್ಮೀಭೂತನಾದಲ್ಲಿ ಎತ್ತಿದ ಗೋಪುರಗಳು ಇಂದಿಗೂ ನಿಂತಿವೆ. ವಿರುದ್ಧಧರ್ಮಾನುಯಾಯಿಗಳಾದ ಬ್ರಾಹ್ಮಣರು ದ್ವೇಷಾಸೂಯೆಗಳಿಂದ ಇವುಗಳನ್ನು ನಾಶಗೊಳಿಸಬೇಕೆಂದು ಯತ್ನಿಸಲು, ಮೇಲಿಂದೆರಗಿದ ಸಿಡಿಲಿನ ಹೊಡೆತದಲ್ಲಿ, ಮಿಂಚಿನ ಎಸೆತದಲ್ಲಿ, ಅವರ ಯತ್ನವು ವಿಫಲವಾಯಿತು.

ಜೇತವನ ವಿಹಾರ

ನಗರದ ದಕ್ಷಿಣದಿಡ್ಡಿಯಿಂದ ಹೊರಬಿದ್ದು ೧೨೦೦ ಹೆಜ್ಜೆ ದೂರದಲ್ಲಿ, ಸುದತ್ತನು ಕಟ್ಟಿಸಿದ ವಿಹಾರವು ದಕ್ಷಿಣಕ್ಕೆ ತಿರುಗಿರುವುದನ್ನು ಯಾತ್ರಿಕರು ಕಂಡರು. ಬಾಗಿಲಿನ ಎರಡು ಕಡೆಗಳಲ್ಲೂ ಕಲ್ಲುಕಂಬಗಳಿದ್ದುವು. ಎಡಗಡೆಯುದರ ಮೇಲೆ ಒಂದು ರಥಚಕ್ರವಿತ್ತು; ಬಲಗಡೆಯದರ ಮೇಲೆ ವೃಷಭವಿತ್ತು. ಕಟ್ಟಡದ ಎಡಬಲದ ಕೊಳಗಳಲ್ಲಿ ನೀರು ಸ್ವಚ್ಛವಾಗಿತ್ತು. ಗಿಡಗಳ ಗುಂಪು ಹೇರಳವಾಗಿತ್ತು. ವಿವಿಧ ಬಣ್ಣದ ವಿವಿಧ ಕುಸುಮಸಂಚಯದ ನೋಟವು ರಮಣೀಯವಾಗಿತ್ತು. ಇದೇ ಜೇತವನ ವಿಹಾರ.

ಬುದ್ಧನು ತನ್ನ ತಾಯಿಗೆ ಧರ್ಮವನ್ನುಪದೇಶಿಸಲೆಂದು, ಮೂರು ತಿಂಗಳು ತ್ರಯಸ್ತ್ರಿಂಶ ಸ್ವರ್ಗದಲ್ಲಿ ಕಣ್ಮರೆಯಾದಾಗ, ಪ್ರಸೇನಜಿತನು ದರ್ಶನೋತ್ಸುಕನಾಗಿ, ಅವನ ಮೂರ್ತಿಯನ್ನು ಗೋಶೀರ್ಷಚಂದನದಲ್ಲಾಗಿಸಿ, ಅವನು ಕೂರುತ್ತಿದ್ದ ಎಡೆಯಲ್ಲಿಟ್ಟನು. ಬುದ್ಧನು ವಿಹಾರಕ್ಕೆ ಮರಳಿದಾಗ, ಗೋಶೀರ್ಷ ಚಂದನಮೂರ್ತಿಯು ಎದ್ದು ಅವನಿಗೆದುರಾಯಿತು. "ನಿನ್ನ ಆಸನಕ್ಕೆ ಮರಳು. ನನ್ನ ಪರಿನಿರ್ವಾಣಾನಂತರ ನನ್ನ ನಾಲ್ಕು ಶಿಷ್ಯವರ್ಗಕ್ಕೂ ನೀನು ಮಾದರಿಯಾಗಿರುವೆ" ಎಂದು ಬುದ್ಧನಾಜ್ಞಾಪಿಸಲು ಮೂರ್ತಿಯು ಸ್ವಸ್ಥಾನಕ್ಕೆ ತಿರುಗಿತು. ಬುದ್ಧನ ಮೂರ್ತಿಗಳಲ್ಲೆಲ್ಲ ಇದೆ ಮೊದಲನೆಯದು. ಆಮೇಲೆ ಬಂದವೆಲ್ಲ ಇದರ ಪ್ರತಿಗಳು. ಬುದ್ಧನು ಅಲ್ಲಿಂದ ಹೊರಟು, ಮೂರ್ತಿಯಿದ್ದ ವಿಹಾರದ ದಕ್ಷಿಣಕ್ಕೆ ಇಪ್ಪತ್ತು ಹೆಜ್ಜೆ ದೂರದ ಬೇರೊಂದು ವಿಹಾರಕ್ಕೆ ನಡೆದನು.

ಜೇತವನ ವಿಹಾರಕ್ಕೆ ಮೊದಲು ಏಳು ಅಂತಸ್ತುಗಳಿದ್ದುವು. ಇದಕ್ಕೆ ರೇಶಿಮೆ ಬಾವುಟಗಳನ್ನೆತ್ತಿ ಚಪ್ಪರ ಹಾಕುವುದು, ಹೂವೆರಚುವುದು, ಧೂಪಹಾಕುವುದು ಇಂತಹ ಪೂಜೆಗಳಲ್ಲಿ, ಸುತ್ತಿನ ದೊರೆಗಳೂ ನಾಡಿಗರೂ ಒಬ್ಬರನ್ನೊಬ್ಬರು ಮೀರಿಸಲು ಹೋರುತ್ತಿದ್ದರು. ಹತ್ತಿಸುತ್ತಿದ್ದ ಬೆಳಕುಗಳಲ್ಲಿ ರಾತ್ರಿ ಹಗಲಾಗುತ್ತಿತ್ತು. ಎಡೆಬಿಡದೆ ಪ್ರತಿದಿನವೂ ಹೀಗೆ ನಡೆಯುತ್ತಿತ್ತು. ಹೀಗಿರಲು ಒಂದು ಸಲ ಇಲಿಯೊಂದು ದೀಪದ

ಬತ್ತಿಯನ್ನು ಬಾಯಲ್ಲಿ ಕಚ್ಚಿಕೊಂಡು ಹೋಗುತ್ತ ಒಂದು ಬಾವುಟಕ್ಕೆ ತಾಕಿಸಿತು. ಇಡೀ ವಿಹಾರಕ್ಕೆ ಉರಿತಾಕಿ, ಏಳು ಅಂತಸ್ತುಗಳೂ ಸುಟ್ಟು ಹೋದುವು. ದೊರೆಗಳೂ ಇತರರೂ ಚಂದನದ ಮೂರ್ತಿಯು ನಾಶವಾಯಿತೆಂದು ಸಂಕಟದಿಂದ ಗೋಳಿಟ್ಟರು. ಆದರೆ ನಾಲ್ಕೈದು ದಿನಗಳ ನಂತರ ಪಕ್ಕದ ಸಣ್ಣ ವಿಹಾರದ ಪೂರ್ವದ್ವಾರವನ್ನು ತೆರೆಯಲು, ಮೂರ್ತಿಯು ಅಲ್ಲಿತ್ತು! ಎಲ್ಲರೂ ಸಂತೋಷಪಟ್ಟು, ವಿಹಾರದ ಜೀರ್ಣೋದ್ಧಾರಕ್ಕೆ ಕೈಯಿಕ್ಕಿ, ಎರಡು ಅಂತಸ್ತುಗಳನ್ನು ಪೂರ್ತಿಮಾಡಿ ಮೂರ್ತಿಯನ್ನು ಮರಳಿಸಿದರು.

ಫಾಹಿಯಾನನೂ ಟಾಒ-ಛಿಂಗನೂ ಜೇತವನ ವಿಹಾರಕ್ಕೆ ಬಂದು, ಲೋಕಪೂಜ್ಯನು ಅಲ್ಲಿ ಇಪ್ಪತ್ತೈದು ವರುಷಗಳಿದ್ದುದನ್ನು ನೆನೆದರು. ಅವರ ಮನದಲ್ಲಿ ಸಂಕಟಕರವಾದ ನೆನಪುಗಳೆದ್ದುವು. ಗಡಿನಾಡಿನಲ್ಲಿ ಹುಟ್ಟಿ, ಸಂಗಡಿಗರು ಹಲವರೊಡನೆ ಅನೇಕ ರಾಜ್ಯಗಳನ್ನು ಸುತ್ತಿದ್ದರು; ಅವರಲ್ಲಿ ಕೆಲವರು ಸ್ವದೇಶಕ್ಕೆ ಹಿಂದಿರುಗಿದ್ದರು, ಕೆಲವರು ಜೀವನದ ನಶ್ವರತೆಯನ್ನು ತೋರುವಂತೆ ಪ್ರಾಣಬಿಟ್ಟಿದ್ದರು; ಈಗ, ಬುದ್ಧನು ಹಿಂದೆ ಇದ್ದಲ್ಲಿ ಇಂದು ಇಲ್ಲದುದನ್ನು ಕಂಡರು. ಅವರು ಹೀಗೆ ವ್ಯಥೆಗೊಂಡಿರಲು, ಸಂನ್ಯಾಸಿಗಳ ಗುಂಪೊಂದು ಹೊರಬಂದು, ಅವರ ಬರವು ಎಲ್ಲಿಂದ ಎಂದು ಕೇಳಿದರು. ಯಾತ್ರಿಕರು "ಚೈನದಿಂದ ಬಂದವರು" ಎನ್ನಲು, ಸಂನ್ಯಾಸಿಗಳು ಉಸಿರ್ಗರೆದು "ಗಡಿನಾಡಿನವರು ಧರ್ಮವನ್ನರಸುತ್ತ ಇಷ್ಟು ದೂರ ಬರುವುದಾಶ್ಚರ್ಯ" ಎಂದು, "ನಮ್ಮ ಗುರುಗಳಾಗಲಿ, ನಮ್ಮ ಗುರುಗಳ ಗುರುಗಳಾಗಲಿ ನಮ್ಮ ಧರ್ಮವನ್ನರಸುತ್ತ ಬಂದ ಚೈನದವರನ್ನು ಕಂಡುದಿಲ್ಲ" ಎಂದು ಅಚ್ಚರಿಗೊಂಡರು.

ಜೇತವನ ವಿಹಾರಕ್ಕೆ ಎರಡು ಬಾಗಿಲುಗಳು—ಒಂದು ಪೂರ್ವದಲ್ಲಿ, ಇನ್ನೊಂದು ಉತ್ತರದಲ್ಲಿ. ಈ ವಿಹಾರವಿರುವ ವನವನ್ನು ಚಿನ್ನದ ನಾಣ್ಯಗಳಿಂದ ಹಾಸಿ ಸುದತ್ತನು ಕೊಂಡುಕೊಂಡನು. ಬುದ್ಧನು ಮಿಕ್ಕೆಡೆ ನಿಂತುದಕ್ಕಿಂತ ಹೆಚ್ಚುಕಾಲ ಇಲ್ಲಿದ್ದು ಧರ್ಮವನ್ನು ಉಪದೇಶಿಸಿದನು. ಅವನು ನಡೆದಲ್ಲಿ, ಕುಳಿತಲ್ಲಿ, ಎತ್ತಿದ ಗೋಪುರವೊಂದೊಂದಕ್ಕೂ ಬೇರೆ ಬೇರೆ ಹೆಸರಿದೆ.

ಜೇತವನದ ಸುತ್ತಿನ ಕ್ಷೇತ್ರಗಳು

ಈ ವಿಹಾರದ ವಾಯುವ್ಯಕ್ಕೆ ನಾಲ್ಕುಲೈ ದೂರದಲ್ಲಿ ಆತ್ಮಾಕ್ಷಿವನವೆಂಬ ವಿಹಾರವಿದೆ. ಇಲ್ಲಿ ಮೊದಲು ಐನೂರು ಮಂದಿ ಕುರುಡರು, ವಿಹಾರದ ಸಮೀಪದಲ್ಲಿರಬೇಕೆಂದು, ವಾಸವಾಗಿದ್ದರು. ಬುದ್ಧನು ಅವರಿಗೆ ಧರ್ಮ ವನ್ನುಪದೇಶಿಸಲು ಅವರು ಕಣ್ಣುಗಳನ್ನು ಪಡೆದರು. ಅವರು ಸಂತೋಷಾ ಧಿಕ್ಯದಿಂದ ತಮ್ಮ ಊರುಗೋಲುಗಳನ್ನು ನೆಲಕ್ಕೆ ಕುಕ್ಕಿ, ಬುದ್ಧನಿಗೆ ಸಾಷ್ಟಾಂಗಪ್ರಣಾಮವನ್ನಾಚರಿಸಿದರು. ಆ ಕೋಲುಗಳು ಆಗಲೇ ಬೆಳೆದು ದೊಡ್ಡ ಮರಗಳಾದುವು. ಜನರಿಗೆ ಅವುಗಳಲ್ಲಿ ಗೌರವ ಹುಟ್ಟಿ ಅದನ್ನು ಕತ್ತರಿಸಲು ಹೆದರಿದರು; ಅದೇ ದೊಡ್ಡ ವನವಾಯಿತು. ಇದ ರಿಂದ ಅದಕ್ಕೆ ಆತ್ಮಾಕ್ಷಿವನವೆಂಬ ಹೆಸರಾಯಿತು. ಜೇತವನದ ಭಿಕ್ಷು ಗಳು, ಮಧ್ಯಾಹ್ನದ ಊಟವಾದ ಮೇಲೆ ಈ ವನಕ್ಕೆ ಬಂದು ಧ್ಯಾನಮಾ ಡುತ್ತಿದ್ದರು.

ಜೇತವನದ ಈಶಾನ್ಯಕ್ಕೆ ಆರೇಳು ಲೈ ದೂರದಲ್ಲಿ ತಾಯಿವೈಶಾ ಖೆಯು ವಿಹಾರವೊಂದನ್ನು ಕಟ್ಟಿ ಬುದ್ಧನನ್ನೂ ಅವನ ಶಿಷ್ಯಸಂಘವನ್ನೂ ಆಹ್ವಾನಿಸಿದಳು. ಈ ವಿಹಾರವೀಗಲೂ ಇದೆ.

ಜೇತವನದ ಬಳಿ ಸುಂದರವೆಂಬ ಗೋಪುರವಿದೆ. ಇಲ್ಲಿ, ಸುಂದರ ನೆಂಬ ಪಾಷಂಡಿಯು ಒಬ್ಬ ಹೆಂಗುಸನ್ನು ಕೊಂದು ಬುದ್ಧನನ್ನು ದೂರಿದನು.

ಜೇತವನದ ಪೂರ್ವದ್ವಾರದಾಚೆ, ಉತ್ತರಕ್ಕೆ ಎಪ್ಪತ್ತು ಹೆಜ್ಜೆ ದೂರದಲ್ಲಿ, ರಸ್ತೆಯ ಪಶ್ಚಿಮದಲ್ಲಿ, ನೆರೆದ ರಾಜರೆದುರಿನಲ್ಲಿ ತೊಂಬ ತ್ತಾರು ವಿವಿಧ ಪಾಷಂಡ ಮತಗಳನ್ನು ಬುದ್ಧನು ಖಂಡಿಸಿದೆಡೆಯಿದೆ. ಅಲ್ಲಿ, ಪಾಷಂಡಮತದ ಚಂಚಮನ ಎಂಬವಳು ದ್ವೇಷದಿಂದ ಹೊಟ್ಟೆಗೆ ಬಟ್ಟೆಸುತ್ತಿಕೊಂಡು ಬಸುರಿಯಂತೆ ಬಂದು, ನೆರೆದ ಸಭೆಯಲ್ಲಿ ಬುದ್ಧನ ಮೇಲೆ ಕಲಂಕವೆಸೆದಳು. ಇದಕ್ಕಾಗಿ ಶಕ್ರನೂ ಇತರ ದೇವತೆಗಳೂ ಬಿಳಿಯಿಲಿಗಳಾಗಿ ಬಂದು, ಅವಳ ಕಟಿಸೂತ್ರಗಳನ್ನು ತುಂಡರಿಸಲು ಸುತ್ತಿಕೊಂಡಿದ್ದ ಬಟ್ಟೆಗಳು ಜಾರಿದುವು. ಅದೇ ಕಾಲದಲ್ಲಿ ಭೂಮಿ

ಬಾಯಿ ತೆರೆಯಲು, ಅವಳು ಜೀವದೊಡನೆ ನರಕಕ್ಕಿಳಿದಳು. ದೇವದತ್ತನು ವಿಷಲಿಪ್ತನಖಗಳಿಂದ ಬುದ್ಧನನ್ನು ಕೊಲ್ಲಲು ಯತ್ನಿಸಿ, ಜೀವ ಸಹಿತ ನರಕಕ್ಕಿಳಿದ ಎಡೆ ಇದೇಯೆ. ಜನರು ಈ ಸ್ಥಳಗಳನ್ನು ತಿಳಿಯುವಂತೆ ಬೇರೆಬೇರೆ ಗುರುತುಗಳನ್ನು ನಿಲ್ಲಿಸಿರುವರು.

ಮೇಲಾಗಿ, ಪಾಷಂಡಮತ ಖಂಡನವಾದೆಡೆಯಲ್ಲಿ, ಜನರು ಅರುವತ್ತು ಮೊಳಕ್ಕಿಂತ ಎತ್ತರವಾದ ವಿಹಾರವನ್ನೆತ್ತಿ, ಅಲ್ಲಿ ಪೀಠಸ್ಥ ಬುದ್ಧನ ಮೂರ್ತಿಯನ್ನು ಪ್ರತಿಷ್ಠಿಸಿದರು.

ದಾರಿಯ ಪೂರ್ವಕ್ಕೆ 'ಛಾಯಾನಿಭೃತ' ವೆಂಬ ಪಾಷಂಡಧರ್ಮದ ದೇವಾಲಯವಿದೆ. ಇದು ವಾಗ್ವಾದ ನಡೆದಲ್ಲಿ ವಿಹಾರಕ್ಕೆ ಎದುರಾಗಿದೆ. ಮಧ್ಯೆ ರಸ್ತೆ ಮಾತ್ರವಿದೆ. ಇದರ ಎತ್ತರ ಅರುವತ್ತು ಮೊಳಕ್ಕೆ ಮೀರಿದೆ. ಈ ದೇವಾಗಾರಕ್ಕೆ 'ಛಾಯಾನಿಭೃತ.' ವೆಂಬ ಹೆಸರು ಬರಲು ಕಾರಣವುಂಟು : ಸೂರ್ಯನು ಪಶ್ಚಿಮದಲ್ಲಿದ್ದಾಗ, ವಿಹಾರದ ನೆರಳು ದೇವಾಲಯದ ಮೇಲೆ ಬೀಳುವುದು ; ಆದರೆ ಸೂರ್ಯನು ಪೂರ್ವದಲ್ಲಿರುವಾಗ ದೇವಾಲಯದ ನೆರಳು ಉತ್ತರಕ್ಕೆ ಬೀಳುವುದೇ ಹೊರತು, ವಿಹಾರದ ಮೇಲೆ ಬೀಳದು.

ಪಾಷಂಡಿಗಳು ತಮ್ಮ ದೇವಾಲಯವನ್ನು ಕಾದು, ಗುಡಿಸಿ, ಸಾರಿಸಿ, ಧೂಪವಿಟ್ಟು, ದೀಪ ಹತ್ತಿಸಲು ಜನರನ್ನು ನೇಮಿಸುತ್ತಿದ್ದರು. ಆದರೆ ಬೆಳಗಾಗುವ ವೇಳೆಗೆ ದೀಪಗಳೆಲ್ಲವೂ ಬುದ್ಧನ ವಿಹಾರದಲ್ಲಿರುತ್ತಿದ್ದುವು. ಬ್ರಾಹ್ಮಣರು ಕುಪಿತರಾಗಿ "ಈ ಹಾಳು ಸವಣರು ನಮ್ಮ ದೀಪಗಳನ್ನು ತಮ್ಮ ಬುದ್ಧನಿಗಾಗಿ ಹೊರುತ್ತಾರೆ. ಆದರೆ ನಾವು ಬಾಗುವೆವೇನು!" ಎಂದು ಒಂದು ರಾತ್ರಿ ತಾವೇ ಕಾವಲಿಗೆ ನಿಂತರು. ರಾತ್ರಿಯಲ್ಲಿ, ತಮ್ಮ ದೇವತೆಗಳೇ ದೀಪವನ್ನು ಹೊತ್ತು ಬುದ್ಧನನ್ನು ಮೂರಾವರ್ತಿ ಪ್ರದಕ್ಷಿಣೆಗೈದು ವೈಗರೆದುದನ್ನು ಕಂಡು, ಬ್ರಾಹ್ಮಣರು ಬುದ್ಧನ ಆತ್ಮಶಕ್ತಿಯ ಮಹಿಮೆಯನ್ನರಿತು ಸಂಸಾರದೂರರಾಗಿ ಸಂನ್ಯಾಸಿಗಳಾದರು. ಇದು ನಡೆದ ಕಾಲದಲ್ಲಿ ಜೇತವನದ ಸುತ್ತಿನ ೯೮ ಸಂಘಾರಾಮಗಳ ೯೭ರಲ್ಲಿ ಭಿಕ್ಷುಗಳಿದ್ದರಂತೆ.

ಈ ಮಧ್ಯದೇಶದಲ್ಲಿ ೯೬ ಪಾಷಂಡ ಮತಗಳಿವೆ. ಇವು ಇಹಪರಗಳನ್ನೂ ಅವುಗಳ ಸಂಬಂಧವನ್ನೂ ನಂಬುತ್ತವೆ. ಪ್ರತಿಯೊಂದರ ಅನಂತ ಅನುಯಾಯಿಗಳೂ ಭಿಕ್ಷೆ ತೆಗೆದರೂ, ಅವರಲ್ಲಿ ಭಿಕ್ಷಾಪಾತ್ರೆಯಿಲ್ಲ. ಇವರು ಕೂಡ ದಾರಿಯ ಪಕ್ಕದಲ್ಲಿ ಪ್ರಯಾಣಿಕರಿಗಾಗಿ ಗುಡಿಸಲುಗಳನ್ನು ಕಟ್ಟಿ, ಬಂದವರಿಗೆ ಧರ್ಮಕ್ಕಾಗಿ ಹಿಟ್ಟುಬಟ್ಟೆ ಕೊಡುತ್ತಾರೆ. ಬುದ್ಧನ ಅನುಯಾಯಿಗಳಿಗೂ ಅವರ ಆಚರಣೆಗನುಸಾರವಾದ ಆತಿಥ್ಯವುಂಟು.

ದೇವದತ್ತನ ಶಿಷ್ಯರು ಇನ್ನೂ ಹಲವರಿದ್ದಾರೆ. ಅವರಲ್ಲಿ ಶಾಕ್ಯಮುನಿ ಬುದ್ಧನಿಗೆ ಪೂಜೆಯಿಲ್ಲ; ಅವನ ಹಿಂದಿನ ಮೂವರಿಗೂ ಉಂಟು.

ಶ್ರಾವಸ್ತಿಯ ಸುತ್ತಿನ ಕ್ಷೇತ್ರಗಳು

ಶ್ರಾವಸ್ತಿಯಿಂದ ಆಗ್ನೇಯಕ್ಕೆ ನಾಲ್ಕು ಲೈ ದೂರದಲ್ಲಿ, ಕಪಿಲವಸ್ತುವನ್ನು ನಾಶಮಾಡಲು ಹೋಗುತ್ತಿದ್ದ ವಿರೂಧಕನನ್ನು ಬುದ್ಧನು ಸಂಧಿಸಿದೆಡೆಯಲ್ಲಿ, ಒಂದು ಗೋಪುರವನ್ನೆತ್ತಿದ್ದಾರೆ.

ಶ್ರಾವಸ್ತಿಯ ಪಶ್ಚಿಮಕ್ಕೆ ಐವತ್ತು ಲೈ ದೂರದಲ್ಲಿ ಕಾಶ್ಯಪ ಬುದ್ಧನ ಜನ್ಮಸ್ಥಳವಾದ ಟೂ-ವೀ ಪಟ್ಟಣವು ಸಿಕ್ಕಿತು. ಅಲ್ಲಿ, ಅವನೂ ಅವನ ತಂದೆಯೂ ಸಂಧಿಸಿದಲ್ಲಿ, ಮತ್ತು ಅವನು ಪರಿನಿರ್ವಾಣವಡೆದಲ್ಲಿ, ಗೋಪುರಗಳು ಕಟ್ಟಲಾಗಿವೆ. ಅವನ ಸಮಾಧಿಯ ಮೇಲೆಯೂ ದೊಡ್ಡ ಗೋಪುರವೊಂದನ್ನೆತ್ತಿದ್ದಾರೆ.

ಶ್ರಾವಸ್ತಿಯಿಂದ ಆಗ್ನೇಯಕ್ಕೆ ಹನ್ನೆರಡು ಯೋಜನ ನಡೆದು, ಕ್ರಕುಚಂಡ ಬುದ್ಧನ ಜನ್ಮಸ್ಥಲವಾದ ನಾಭಿಗ ಎಂಬಲ್ಲಿಗೆ ಯಾತ್ರಿಕರು ಬಂದರು. ಅಲ್ಲಿ, ಅವನೂ ಅವನ ತಂದೆಯೂ ಸಂಧಿಸಿದಲ್ಲಿ, ಮತ್ತು ಅವನು ಪರಿನಿರ್ವಾಣವಡೆದಲ್ಲಿ, ಗೋಪುರಗಳು ಕಟ್ಟಲಾಗಿವೆ.

ಇಲ್ಲಿಂದ ಉತ್ತರಕ್ಕೆ ಸುಮಾರು ಒಂದು ಯೋಜನ ಸಾಗಿ ಕನಕಮುನಿ ಬುದ್ಧನ ಜನ್ಮಭೂಮಿಗೆ ಬಂದರು. ಇಲ್ಲಿ ಕೂಡ, ಅವನೂ ಅವನ ತಂದೆಯೂ ಸಂಧಿಸಿದಲ್ಲಿ, ಅವನು ಪರಿನಿರ್ವಾಣವಡೆದಲ್ಲಿ, ಗೋಪುರಗಳನ್ನೆತ್ತಿರುವರು.

ಕಪಿಲವಸ್ತು-ಅದರ ಸುತ್ತಿನ ಕ್ಷೇತ್ರಗಳು

ಇಲ್ಲಿಂದ ಪೂರ್ವಕ್ಕೆ ಒಂದು ಯೋಜನಕ್ಕಿಂತ ಕಡಮೆ ನಡೆದು, ಯಾತ್ರಿಕರು ಕಪಿಲವಸ್ತುವಿಗೆ ಬಂದರು. ಇಲ್ಲಿ ರಾಜನಿಲ್ಲ, ಪ್ರಜೆಗಳಿಲ್ಲ. ಸುತ್ತೆಲ್ಲವೂ ಹಾಳುಬಿದ್ದಿದೆ. ಅಲ್ಲಿನ ನಿವಾಸಿಗಳೆಂದರೆ ಕೆಲವರು ಭಿಕ್ಷುಗಳು, ಇಪ್ಪತ್ತು ಅಥವಾ ನಲವತ್ತು ಸಂಸಾರಗಳು. ಶುದ್ಧೋದನನ ಹಳೆಯ ಅರಮನೆಯಿದ್ದಲ್ಲಿ, ಅವನ ಜ್ಯೇಷ್ಠಪುತ್ರ ಮತ್ತು ಅವನ ತಾಯಿಯ ಮೂರ್ತಿಗಳು ಪ್ರತಿಷ್ಠಿತವಾಗಿವೆ. ಆ ಮಗನು ಬಿಳಿಯ ಆನೆಯನ್ನೇರಿ ತಾಯ ಬಸಿರನ್ನು ಹೊಕ್ಕಂತೆ ಕಾಣಿಸಿಕೊಂಡೆಡೆಯಲ್ಲಿ; ಅವನು ಪಟ್ಟಣದ ಪೂರ್ವದ್ವಾರದಿಂದ ಹೊರಟು, ಮಾರ್ಗದಲ್ಲಿನ ರೋಗಿಯನ್ನು ಕಂಡು ಹಿಂದಿರುಗಿದೆಡೆಯಲ್ಲಿ; ಆ ಮಗುವಿನ ಮೈಮೇಲೆ ಬುದ್ಧನ ಚಿಹ್ನೆಗಳನ್ನು ಅಸಿತನು ಕಂಡಲ್ಲಿ ; ನಂದನೊಡನೆ ಇದ್ದಾಗ, ದೇವದತ್ತನು ಆನೆಯನ್ನು ಕೆಡಹಲು, ಬುದ್ಧನು ಅದನ್ನು ತೆಗೆದೆಸೆದಲ್ಲಿ ; ಬುದ್ಧನೆಸೆದ ಕಣೆಯು ಆಗ್ನೇಯಕ್ಕೆ ಮುವ್ವತ್ತು ಲೈ ಹಾರಿ ನೆಲವನ್ನು ಭೇದಿಸಿ ಚಿಲುಮೆಯೊಂದನ್ನಾಗಿಸಿದಲ್ಲಿ ; ಬುದ್ಧನಾದಮೇಲೆ ಮರಳಿ ಬಂದು ತನ್ನ ತಂದೆಯನ್ನು ಸಂಧಿಸಿದಲ್ಲಿ ; ಆರು ಸಲ ಭೂಕಂಪವಾಗುತ್ತಿರಲು ಐನೂರು ಶಾಕ್ಯರು ಬಂದು ಉಪಾಲಿಯನ್ನು ಪೂಜಿಸಿದಲ್ಲಿ ; ಬುದ್ಧನ ತಂದೆಗೆ ಕೂಡ ಪ್ರವೇಶವಿಲ್ಲದಂತೆ ಕಟ್ಟುನಿಟ್ಟಾಗಿ ನಾಲ್ಕು ದೇವತೆಗಳು ನಾಲ್ಕು ಬಾಗಿಲುಗಳನ್ನು ಕಾಯುತ್ತಿದ್ದ ಸಭೆಯಲ್ಲಿ ದೇವತೆಗಳಿಗೆ ಧರ್ಮವನ್ನು ತಿಳಿಸಿದಲ್ಲಿ ; ಬುದ್ಧನು ಪೂರ್ವಾಭಿಮುಖನಾಗಿ ನ್ಯಗ್ರೋಧಮರದಡಿ ಕುಳಿತಿರಲು, ಮಹಾಪ್ರಜಾಪತಿಯು ಅವನಿಗೆ ಸಂಘಾತಿಯನ್ನೊಪ್ಪಿಸಿದಲ್ಲಿ ; ವೈಡೂರ್ಯರಾಜನ ಕೈಲಿ ಮಡಿದ ಶಾಕ್ಯರಮಣಿಯರು ಶೋಕಾಪನ್ನರಾದಲ್ಲಿ ; ಈ ಎಲ್ಲೆಡೆಗಳಲ್ಲಿಯೂ ಎತ್ತಿದ ಗೋಪುರಗಳು ಈಗಲೂ ಇವೆ.

ಇಲ್ಲಿಂದ ಈಶಾನ್ಯಕ್ಕೆ ಅನೇಕ ಲೈ ದೂರದಲ್ಲಿ ದೊರೆಯ ಭೂಮಿಯಿದೆ. ಇಲ್ಲಿಯೆ ಸಿದ್ಧಾರ್ಥನು ಮರದಡಿ ಕುಳಿತು ಉಳುವವರನ್ನು ಕಂಡುದು.

ನಗರದಿಂದ ಪೂರ್ವಕ್ಕೆ ೫೦ ಲೈ ದೂರದಲ್ಲಿ ಲುಂಬಿಣಿ ಎಂಬ ವನವಿದೆ. ಇಲ್ಲಿನ ಸರಸಿಯಲ್ಲಿ ಶುದ್ಧೋದನನರಸಿಯು ಮಿಂದು, ಮುವ್ವತ್ತು

ಹೆಜ್ಜೆ ನಡೆದು, ಮರವೊಂದರ ಕೊಂಬೆಯನ್ನು ನೆಮ್ಮಿ, ಪೂರ್ವಾಭಿಮುಖ ವಾಗಿದ್ದು ಸಿದ್ಧಾರ್ಥಕುಮಾರನನ್ನು ಪ್ರಸವಿಸಿದಳು. ಜನಿಸಿದಾಗಲೇ ಕುಮಾರನು ಏಳುಹೆಜ್ಜೆ ನಡೆದನು. ಎರಡು ಘಟಸರ್ಪ ಚಕ್ರವರ್ತಿಗಳು ಅವನ ಮೈತೊಳೆದುವು. ಈ ಸ್ಥಳದಲ್ಲಿ ಒಂದು ಬಾವಿಯಾಯಿತು. ಇದರಿಂದಲೂ, ರಾಣಿಯು ಮಿಂದ ಕೊಳದಿಂದಲೂ ಭಿಕ್ಷುಗಳು ಈಗಲೂ ನೀರುತೆಗೆದು ಕುಡಿಯುತ್ತಾರೆ.

ಈ ಬುದ್ಧರೆಲ್ಲರ ವಿಚಾರವಾಗಿ ನಾಲ್ಕುಸ್ಥಾನಗಳು ಸ್ಮರಣೀಯವಾದುವು: ಅವರು ಬುದ್ಧರಾದೆಡೆಯೊಂದು; ಅವರು ಧರ್ಮವನ್ನು ಉಪದೇಶಿಸಿದೆಡೆಯೊಂದು; ಅವರು ಧರ್ಮವನ್ನೆತ್ತಿ ಪಾಷಂಡಿಗಳನ್ನು ಖಂಡಿಸಿದೆಡೆಯೊಂದು; ಅವರು ತಮ್ಮ ತಾಯಂದಿರಿಗೆ ಧರ್ಮವನ್ನುಪದೇಶಿಸಲು ತ್ರಯಸ್ತ್ರಿಂಶಸ್ಸ್ವರ್ಗಕ್ಕೆ ಹೋಗಿ ಅಲ್ಲಿಂದ ಮರಳಿದೆಡೆಯೊಂದು. ಇನ್ನಿತರ ಸ್ಥಳಗಳೂ ಅಲ್ಲಿ ನಡೆದ ಘಟನೆಗಳಿಗನುಸಾರವಾಗಿ ಗುರುತಿಸಲಾಗಿವೆ.

ಕಪಿಲವಸ್ತುವು ಹಾಳುಬಿದ್ದ ನಾಡಾಗಿದೆ. ಜನವಸತಿ ಬಹಳ ಕಡಮೆ; ದಾರಿಯಲ್ಲಿ ಬಿಳಿಯ ಆನೆಗಳೂ ಸಿಂಹಗಳೂ ಸಿಗುವುದರಿಂದ ಪ್ರಯಾಣಿಕರು ಜಾಗರೂಕರಾಗಿರಬೇಕು.

ಯಾತ್ರಿಕರು ಬುದ್ಧನ ಜನ್ಮಸ್ಥಲದಿಂದ ಪೂರ್ವಕ್ಕೆ ಐದು ಯೋಜನ ದೂರದಲ್ಲಿರುವ ರಾಮಗ್ರಾಮಕ್ಕೆ ನಡೆದು ಬಂದರು. ಈ ದೇಶದ ದೊರೆಯು ಬುದ್ಧನ ಅವಶೇಷದಲ್ಲಿ ಕ್ಕಿ ನೆಯ ಪಾಲನ್ನು ಪಡೆದು ಅದರ ಮೇಲೆ ರಾಮಗೋಪುರವೆಂಬ ಗೋಪುರವನ್ನೆತ್ತಿದನು. ಇದರ ಪಕ್ಕದಲ್ಲಿನ ಕೊಳದಲ್ಲಿರುವ ಘಟಸರ್ಪವು ಈ ಗೋಪುರವನ್ನು ನಿರಂತರವಾಗಿ ಕಾಪಾಡುತ್ತ ಅದನ್ನು ರಾತ್ರಿ ಹಗಲು ಪೂಜಿಸುತ್ತಿರುತ್ತದೆ. ಅಶೋಕನು ಎಂಟು ಗೋಪುರಗಳನ್ನೂ ಕೆಡವಿ ಅವುಗಳ ಬದಲು ೮೪೦೦೦ ಗೋಪುರಗಳನ್ನೆತ್ತಬೇಕೆಂದಾಶಿಸಿ, ಮಿಕ್ಕ ಏಳನ್ನು ಕೆಡವಿ ಕೊನೆಗೆ ಇದರ ಬಳಿ ಬಂದ. ಇದನ್ನೂ ಕೆಡವಲಿರುವಾಗ, ಆ ಘಟಸರ್ಪವು ಕಾಣಿಸಿಕೊಂಡು, ಅವನನ್ನು ತನ್ನ ಅರಮನೆಗೊಯ್ದು, ತಾನು ಸಜ್ಜುಗೊಳಿಸಿದ್ದ ಪೂಜಾದ್ರವ್ಯಗಳನ್ನು ಕಾಣಿಸಿ “ ನೀನು ಇದಕ್ಕಿಂತ ಹೆಚ್ಚಿನ ಪೂಜಾದ್ರವ್ಯಗಳನ್ನು

ಸಜ್ಜುಗೊಳಿಸುವೆಯಾದರೆ ಗೋಪುರವಿದನ್ನುರುಳಿಸಬಹುದು. ನಿನ್ನೊಡನೆ ನಾನು ಹೋರೆನು'' ಎಂದಿತು. ಅಶೋಕನು ಅಂತಹ ಪೂಜಾದ್ರವ್ಯಗಳು ಭೂಮಿಯಲ್ಲೆಲ್ಲಿಯೂ ಸಿಗವೆಂದರಿತನಾಗಿ, ಕಾರ್ಯವನ್ನು ಸಫಲಗೊಳಿಸದೆಯೆ ಹಿಂದಿರುಗಿದ. ಆಮೇಲೆ, ಸುತ್ತಲೂ ಸೊಪ್ಪುಸೆದೆ ಬೆಳೆದುಕೊಂಡು, ಆ ಗೋಪುರವನ್ನು ಗುಡಿಸಿ ಸಾರಿಸಲು ಯಾರೂ ಇಲ್ಲವಾಯಿತು. ಆದರೆ ಆನೆಗಳ ಹಿಂಡೊಂದು ಪ್ರತಿದಿನವೂ ತಪ್ಪದೆ ಬಂದು, ಸೊಂಡಿಲಿನಲ್ಲಿ ತಂದ ನೀರಿನಿಂದ ನೆಲವನ್ನು ಸಾರಿಸಿ, ವಿವಿಧ ಪುಷ್ಪಗಳಿಂದಲೂ ಧೂಪದಿಂದಲೂ ಗೋಪುರಕ್ಕೆ ಪೂಜೆ ಸಲಿಸುತ್ತಿತ್ತು. ಒಂದು ಸಲ ಪರರಾಜ್ಯದ ಭಕ್ತನೊಬ್ಬನು ಈ ಗೋಪುರಕ್ಕೆ ಬಂದು, ಆನೆಗಳ ಭೀತಿಯಿಂದ, ಮರದ ಹಿಂದೆ ಅವಿತುಕೊಂಡ; ಆದರೆ ಅವು ನಿಯತವಾದ ಮಾರ್ಗದಲ್ಲಿ ಪೂಜೆ ಮಾಡುವುದನ್ನು ಕಂಡು, ಸುತ್ತ ಯಾವ ಸಂಘಾರಾಮವೂ ಇಲ್ಲದೆ ಆನೆಗಳು ಗುಡಿಸಿ ಸಾರಿಸಬೇಕಲ್ಲ ಎಂಬ ವ್ಯಥೆಯಿಂದ ತನ್ನ ಕರ್ತವ್ಯಗಳನ್ನು ಮೂಲೆಗೊತ್ತಿ ಶ್ರಮಣೇರನಾದನು. ಆಗಿ, ಹಬ್ಬಿದ್ದ ಸೊಪ್ಪುಸೆದೆಗಳನ್ನು ತಾನೇ ಕಿತ್ತು, ಸ್ಥಳವನ್ನು ಚೊಕ್ಕಟವಾಗಿಯೂ ಪವಿತ್ರವಾಗಿಯೂ ಮಾಡಿದನು. ಆ ದೇಶದ ದೊರೆಯ ಸಹಕಾರದಿಂದ ಸಂಘಾರಾಮವೊಂದನ್ನು ಸ್ಥಾಪಿಸಿ ತಾನೇ ಮುಖ್ಯಸ್ಥನಾಗಿ ನಿಂತನು. ಇದು ಇತ್ತೀಚೆಗೆ ನಡೆದುದು. ಈಗ ಅಲ್ಲಿ ಬಹುಮಂದಿ ಭಿಕ್ಷುಗಳಿರುವರು.

ಇಲ್ಲಿಂದ ಪೂರ್ವಕ್ಕೆ ನಾಲ್ಕು ಯೋಜನ ನಡೆದು, ಯಾತ್ರಿಕರು, ರಾಜಕುಮಾರನು ಚಂಡಕನೊಡನೆ ತನ್ನ ಶ್ವೇತಾಶ್ವವನ್ನು ಹಿಂದಿರುಗಿಸಿದಲ್ಲಿರುವ ಗೋಪುರಕ್ಕೆ ಬಂದರು.

ಯಾತ್ರಿಕರು ಇಲ್ಲಿಂದ ಪೂರ್ವಕ್ಕೆ ನಾಲ್ಕು ಯೋಜನ ಸಾಗಿ, ಭಸ್ಮಗೋಪುರಕ್ಕೆ ಬಂದರು. ಇಲ್ಲಿ ಕೂಡ ಮಠವೊಂದುಂಟು.

ಇನ್ನೂ ಪೂರ್ವಕ್ಕೆ ಹನ್ನೆರಡು ಯೋಜನ ಸಾಗಿ ಕುಶನಗರಕ್ಕೆ ಬಂದರು. ಇದರ ಉತ್ತರದಲ್ಲಿ, ಎರಡು ಮರಗಳ ನಡುವೆ, ಎಂದರೆ ನಿರಂಜನಾ ನದಿಯ ದಡದ ಮೇಲೆ ಲೋಕಪೂಜ್ಯನು ಉತ್ತರಕ್ಕೆ ತಲೆಯಿಟ್ಟು ಪರಿನಿರ್ವಾಣ ಪಡೆದ ಸ್ಥಳವುಂಟು. ಇಲ್ಲಿಯೇ ಬುದ್ಧನ ಕಡೆಯ

ಮ್ಯಾಕ್‌ಬೆತ್

ಡನ್‌ಕನ್ ಎಂಬಾತನು ಸ್ಕಾಟ್ಲೆಂಡ್ ದೇಶದ ಅರಸನಾಗಿದ್ದಾಗ ಆತನ ಆಸ್ಥಾನದಲ್ಲಿ ಮ್ಯಾಕ್‌ಬೆತ್ ಎಂಬ ಒಬ್ಬ ಶ್ರೀಮಂತನಿದ್ದನು. ಅವನು ಅರಸಿಗೆ ಸಮೀಪ ಬಂಧುವಾಗಿಯೂ, ತನ್ನ ಪರಾಕ್ರಮದಿಂದಲೂ ಯುದ್ಧವಿದ್ಯಾನಿಪುಣತೆಯಿಂದಲೂ ಪ್ರಖ್ಯಾತಿ ಪಡೆದು ಆಸ್ಥಾನದಲ್ಲಿ ವಿಶೇಷ ಸನ್ಮಾನಗಳಿಗೆ ಪಾತ್ರನಾಗಿಯೂ ಇದ್ದನು.

ಇವನು ಈಚೆಗೆ ಒಂದುಸಾರಿ ನಾರ್ವೇ ದೇಶೀಯರ ಅಪಾರವಾದ ದಂಡಿನ ಸಹಾಯ ಪಡೆದಿದ್ದ ಒಂದು ಅರಾಜಕ ಪಂಗಡದ ದಂಡನ್ನು ಸೋಲಿಸಿ ತನ್ನ ಜೊತೆಯ ಅಧಿಕಾರಿಯಾದ ಬ್ಯಾಂಕೋವಿನೊಡನೆ ರಾಜಧಾನಿಗೆ ಬರುತ್ತಿದ್ದನು. ಅವರು ಒಂದು ಗಹನವಾದ ಕಾಡಿನಲ್ಲಿ ಹಾದು ಬರಬೇಕಾಗಿತ್ತು. ಆ ಹಾದಿಯಲ್ಲಿ ಸ್ವಲ್ಪದೂರ ಬರುತ್ತಲೇ ಅವರು ಸ್ತ್ರೀಯಾಕೃತಿಯ ಮೂರು ವಿಚಿತ್ರ ವ್ಯಕ್ತಿಗಳನ್ನು ಕಂಡು ಸ್ತಂಭೀಭೂತರಾದರು. ಆ ಆಕೃತಿಗಳನ್ನು ಸ್ತ್ರೀವ್ಯಕ್ತಿಗಳೆಂದು ಹೇಳುವಂತಿದ್ದರೂ ಅವುಗಳಿಗೆ ಗಡ್ಡಗಳು ಬೆಳೆದಿದ್ದುವು. ಕಳೆಗುಂದಿದ ಸುಕ್ಕು ಹಿಡಿದ ಆ ದೇಹವನ್ನೂ ವಿಕಾರವಾದ ಅವರ ಉಡುಗೆಯನ್ನೂ ನೋಡಿದರೆ ಅವುಗಳು ಈ ಲೋಕದ ಯಾವ ಪ್ರಾಣಿಯಂತೆಯೂ ಕಾಣುತ್ತಿರಲಿಲ್ಲ.

ಮ್ಯಾಕ್‌ಬೆತನೇ ಅವರನ್ನು ಮೊದಲು ಮಾತನಾಡಿಸಿದನು. ಇದರಿಂದ ಅವರು ಅಸಮಾಧಾನಪಟ್ಟವರಂತೆ ತೋರಿಸಿಕೊಂಡು, ತಮ್ಮ ಸೋಟು ಬೆರಳನ್ನು ಒಣಕಲ ತುಟಿಯಮೇಲಿಟ್ಟು, ಮೌನವನ್ನು ಸೂಚಿಸಿ ಹೀಗೆಂದರು:—

ಮೊದಲನೆಯ ವ್ಯಕ್ತಿ—"ಮ್ಯಾಕ್‌ಬೆತ್, ಗ್ಲಾಮಿಸ್‌ನ ಒಡೆಯಾ, ನಿನಗೆ ಸಮಸ್ತ ಸನ್ಮಂಗಳಗಳೂ ಉಂಟಾಗಲಿ."

ಎರಡನೆಯ ವ್ಯಕ್ತಿ— "ಮ್ಯಾಕ್‌ಬೆತ್, ಕಾಡರ್‌ನ ಪ್ರಭುವೇ, ನಿನಗೆ ಸಮಸ್ತ ಸನ್ಮಂಗಳಗಳೂ ಉಂಟಾಗಲಿ."

ಈ ಪದವಿಗಳಿಗೆ ಇವನಿಗೆ ಯಾವ ಬಾಧ್ಯತೆಯೂ ಇರಲಿಲ್ಲವಾದುದರಿಂದ ಇವನ ಮುಖದಲ್ಲಿ ಸ್ವಲ್ಪ ವಿಕಾಸವೂ ವೈವರ್ಣ್ಯವೂ ಉಂಟಾದುವು.

ಮೂರನೆಯ ವ್ಯಕ್ತಿ—"ಉತ್ತರೋತ್ತರ ಅರಸನಾಗುವ ಮ್ಯಾಕ್‌ಬೆತ್‌ನೇ, ನಿನಗೆ ಸಮಸ್ತ ಸನ್ಮಂಗಳಗಳೂ ಉಂಟಾಗಲಿ."

ಮ್ಯಾಕ್‌ಬೆತ್‌ನು ಈ ಮಾತಿನಿಂದ ಬೆಚ್ಚಿ ಬೆಂಡಾದನು. ಅರಸನ ಮಕ್ಕಳು ಜೀವಂತರಾಗಿರುವಲ್ಲಿ ತನಗೆ ಅರಸುತನವು ದೊರೆಯುವುದು ಅಸಂಭವ. ಆದ್ದರಿಂದ ಭವಿಷ್ಯೋಕ್ತಿಯಂತಿದ್ದ ಈ ಮಾತನ್ನು ಕೇಳಿ ಅವನು ಬೆಚ್ಚಿ ಬೆರಗಾದದ್ದು ಏನೂ ಆಶ್ಚರ್ಯವಲ್ಲ.

ಅನಂತರ ಆ ವ್ಯಕ್ತಿಗಳು ಬ್ಯಾಂಕೋವಿನ ಕಡೆಗೆ ತಿರುಗಿ, ಒಂದು ಬಗೆಯ ಸಮಸ್ಯೆಯಂತೆ "ನೀನು ಮ್ಯಾಕ್‌ಬೆತ್‌ಗಿಂತ ನಿಕೃಷ್ಟನಾದರೂ ಉತ್ಕೃಷ್ಟ. ಅಷ್ಟು ಸುಖಿಯಲ್ಲವಾದರೂ ಅಧಿಕ ಸುಖಿ. ನೀನು ಅರಸನಾಗದಿದ್ದರೂ ನಿನ್ನ ವಂಶೀಯರು ನಿನ್ನ ಅನಂತರ ಸ್ಕಾಟ್‌ಲೆಂಡ್ ದೊರೆಗಳಾಗುವರು. ನಿನಗೆ ಜಯವಾಗಲಿ." ಎಂದು ಅಂತರ್ಧಾನವಾದರು. ಇದನ್ನು ನೋಡಿದ ಆ ಸೇನಾನಾಯಕರು ಇವರನ್ನು ವಿಧಿವ್ಯಕ್ತಿಗಳು ಅಥವಾ "ಮಂತ್ರಗಾತಿಯರು" ಎಂದು ತಿಳಿದುಕೊಂಡರು.

ಈ ವಿಚಿತ್ರ ಸಂದರ್ಭವನ್ನು ಕುರಿತು ಇವರು ಯೋಚಿಸುತ್ತಿರುವ ವೇಳೆಗೆ, ರಾಜನಿಂದ ಅಧಿಕೃತರಾದ ಕೆಲವು ರಾಜದೂತರು ಬಂದು ಮ್ಯಾಕ್‌ಬೆತ್‌ನನ್ನು ಕುರಿತು "'ಕಾಡರ್‌ನ ಪ್ರಭು' ಎಂಬ ಪದವಿಯನ್ನೂ ಸಂಭಾವನೆಯನ್ನೂ ರಾಜನು ತಮಗೆ ಅನುಗ್ರಹಿಸಿರುವನು" ಎಂದರು. ಈ ವಿದ್ಯಮಾನವು ಆ ಮಂತ್ರಗಾತಿಯರು ಹೇಳಿದ ಭವಿಷ್ಯೋಕ್ತಿಗೆ ಅನುಗುಣವಾಗಿತ್ತು. ಇದರಿಂದ ಮ್ಯಾಕ್‌ಬೆತ್‌ನು ಆನಂದಾಶ್ಚರ್ಯಪರವಶನಾಗಿ, ಆ ರಾಜದೂತರಿಗೆ ಏನೊಂದು ಉತ್ತರ

ವನ್ನೂ ಹೇಳಲಾರದೆ ಸ್ತಂಭದಂತೆ ನಿಂತುಬಿಟ್ಟನು. ಆ ಕ್ಷಣದಲ್ಲಿಯೇ ಮೂರನೆಯ ಮಂತ್ರವಾದಿನಿಯು ಹೇಳಿದ ಭವಿಷ್ಯವೂ ನೆರವೇರಬಹು ದೆಂದೂ, ತಾನು ಒಂದು ದಿನ ಸ್ಕಾಟ್ಲೆಂಡಿನ ರಾಜನಾಗಬಹುದೆಂದೂ ಆಸೆಯು ಅವನಲ್ಲಿ ಉಕ್ಕಿಉಕ್ಕಿ ಬರುತ್ತಿತ್ತು.

ಆಗ ಮ್ಯಾಕ್‌ಬೆತ್‌ನು ಬ್ಯಾಂಕೋವಿನ ಕಡೆಗೆ ತಿರುಗಿಕೊಂಡು, "ಆ ಮಂತ್ರಗಾತಿಯರು ನನಗೆ ಹೇಳಿದ ಭವಿಷ್ಯವು ಹೀಗೆ ಬಹು ಆಶ್ಚರ್ಯಕರವಾಗಿ ನಡೆದಿರುವುದರಿಂದ ಮುಂದೆ ಈ ರಾಜ್ಯಕ್ಕೆ ನಿನ್ನ ಮಕ್ಕಳು ರಾಜರಾಗುವರೆಂದು ನಿನಗೆ ಆಸೆಯುಂಟಾಗಿಲ್ಲವೇ?" ಎಂದನು. ಬ್ಯಾಂಕೋವು "ಆ ಆಸೆಯು ನಿನ್ನನ್ನು ಸಿಂಹಾಸನದ ಸಂಪಾದನೆಗೆ ಉತ್ತೇಜನಗೊಳಿಸಬಹುದು. ಆದರೆ ಈ ತಾಮಸೀ ಮಂತ್ರಗಾತಿಯರು ಅನೇಕವೇಳೆ ನಮ್ಮನ್ನು ಮಹತ್ಪರಿಣಾಮಗಳುಳ್ಳ ಕಾರ್ಯಗಳಲ್ಲಿ ಸಿಕ್ಕಿಸಲೋಸುಗ ಅಲ್ಪ ವಿಚಾರಗಳಲ್ಲಿ ನಿಶ್ಚಯವನ್ನೇ ಹೇಳುವರು" ಎಂದನು. ಮ್ಯಾಕ್‌ಬೆತ್‌ನ ಹೃದಯದಲ್ಲಿ ಆ ನೀಚ ಮಂತ್ರಗಾತಿಯರು ಹೇಳಿದ ಭವಿಷ್ಯವಾದವು ಬೇರೂರಿಬಿಟ್ಟಿತ್ತು. ಆದ್ದರಿಂದ ಗುಣವಂತನಾದ ಬ್ಯಾಂಕೋವು ಹೇಳಿದ ವಿವೇಕವೂ ಎಚ್ಚರಿ ಕೆಯ ಮಾತುಗಳೂ ಅವನ ಮನಸ್ಸಿಗೆ ಹಿಡಿಯಲಿಲ್ಲ. ಅಂದುಮೊದಲು "ಸ್ಕಾಟ್‌ಲೆಂಡ್ ಸಿಂಹಾಸನವನ್ನು ಪಡೆದುಕೊಳ್ಳುವುದಕ್ಕೇನು ಮಾಡ ಬೇಕು?" ಎಂಬುದೇ ಅವನ ಆಲೋಚನೆಯಾಯಿತು.

ಮ್ಯಾಕ್‌ಬೆತ್‌ನು ತನ್ನ ಮಡದಿಗೆ ಆ ಮಂತ್ರಗಾತಿಯರು ತಿಳಿಸಿದ ಅಪೂರ್ವ ಭವಿಷ್ಯೋಕ್ತಿಯನ್ನೂ, ಅವುಗಳಲ್ಲಿ ಸ್ವಲ್ಪ ಭಾಗವು ನೆರವೇ ರಿದುದನ್ನೂ ಸಮಗ್ರವಾಗಿ ಹೇಳಿದನು. ಇವಳು ಅತಿ ನೀಚಸ್ವಭಾವ ದವಳು. ದುರಾಶಾಪರಳು. ತಾನೂ ತನ್ನ ಪತಿಯೂ ಉನ್ನತ ಪದ ವಿಗೆ ಬರುವುದಾದರೆ, ಕಾರ್ಯಸಾಧನೆಯ ಮಾರ್ಗವು ಹೇಗಾದರೂ ಇರಲಿ ಅದನ್ನು ಲಕ್ಷ್ಯಮಾಡತಕ್ಕವಳಾಗಿರಲಿಲ್ಲ. ಆದ್ದರಿಂದ ಮ್ಯಾಕ್ ಬೆತ್‌ನು ಹಿಂದುಮುಂದು ನೋಡುತ್ತ ಅನುಮಾನಪಡುತ್ತ ಇದ್ದ ಕೆಲಸವನ್ನು ಮುಂದುಮಾಡಿದಳು; ಭವಿಷ್ಯವಾಣಿಯು ಸಿದ್ಧಿಸಬೇಕಾ

ದರೆ ರಾಜನನ್ನು ಕೊಲ್ಲಬೇಕೆಂದೂ, ಅದು ಅತ್ಯವಶ್ಯಕವೆಂದೂ, ಸಂತತವಾಗಿ ಬೋಧಿಸತೊಡಗಿದಳು. ಆದರೆ, ಕೊಲೆಯೆಂದರೆ ಮ್ಯಾಕ್‌ಬೆತ್‌ನು ಹಿಂತೆಗೆಯುತ್ತಿದ್ದನು. ಅವನ ಅಂತರಾತ್ಮವು ಖತಿಗೊಂಡು ಕೊರಗುತ್ತಿತ್ತು.

ಡರ್ಕನ್ ರಾಜನು ತನ್ನ ಆಸ್ಥಾನದ ಮುಖ್ಯ ಶ್ರೀಮಂತರ ಮನೆಗೆ ಆಗಾಗ್ಗೆ ಹೋಗಿಬರುವ ಪದ್ಧತಿಯನ್ನಿಟ್ಟುಕೊಂಡಿದ್ದನು. ಹಾಗೆಯೇ ಒಂದು ದಿನ ಆತನು ಹಿಂದೆ ನಡೆದ ಯುದ್ಧಗಳಲ್ಲಿ ಮ್ಯಾಕ್‌ಬೆತ್‌ನಿಗೆ ಉಂಟಾದ ವಿಜಯಕ್ಕಾಗಿ ಅವನನ್ನು ಗೌರವಿಸಬೇಕೆಂಬ ಕುತೂಹಲದಿಂದ ಪುತ್ರ ಪರಿವಾರ ಸಹಿತನಾಗಿ, ಮ್ಯಾಕ್‌ಬೆತ್‌ನ ಭವನಕ್ಕೆ ಹೋದನು.

ಮ್ಯಾಕ್‌ಬೆತ್‌ನ ಭವನವು ಬಹಳ ರಮ್ಯವಾದ ಸ್ಥಳದಲ್ಲಿತ್ತು. ಅದರ ಸುತ್ತಲೂ ವಾಯುವು ಪರಿಶುದ್ಧವಾಗಿಯೂ, ಮನೋಹರವಾಗಿಯೂ ಇತ್ತು. ಆ ಭವನದ ಸೂರು, ಸಂದು, ಚಿತ್ರ, ಗೋಪುರ ಮುಂತಾಗಿ ಅವಕಾಶವಿರುವ ಕಡೆಗಳಲ್ಲೆಲ್ಲಾ ಬಾನಹಕ್ಕಿಗಳು ಗೂಡು ಮಾಡಿಕೊಂಡಿದ್ದುವು. ಇವು ಹೆಚ್ಚಾಗಿ ಇರುವ ಕಡೆ ವಾಯುಗುಣವು ಬಲು ಚೆನ್ನಾಗಿರುವುದೆಂದು ಹೇಳುತ್ತಾರೆ. ಇಂಥ ಸ್ಥಳಕ್ಕೆ ಬರುತ್ತಿದ್ದಹಾಗೇ ಅರಸನಿಗೆ ಬಹು ಸಂತೋಷವಾಯಿತು. ಮನೆಯ ಯಜಮಾನಿಯು ಮಾಡಿದ ಆದರೋಪಚಾರಗಳಿಂದ ಅದು ಅಧಿಕವಾಯಿತು. ಆದರೆ ಆಕೆಯು ಮಹಾ ಕುಟಿಲೆ; ದ್ರೋಹಿ; ತನ್ನ ದ್ರೋಹವನ್ನು ಮುಗುಳುನಗೆಗಳಲ್ಲಿ ಮುಚ್ಚಿ, ಕುಸುಮದ ಹಿಂದೆ ಇದ್ದ ಕೀಟದಂತೆ, ಪ್ರಸನ್ನಳಾಗಿ ಕಾಣಿಸಿಕೊಳ್ಳುತ್ತಿದ್ದಳು.

ರಾಜನು ಈ ಪ್ರಯಾಣದ ಆಯಾಸದಿಂದ ಬಳಲಿದ್ದಕಾರಣ ಜಾಗ್ರತೆಯಾಗಿ ನಿದ್ರೆಮಾಡುವುದಕ್ಕಾಗಿ ಹೊರಟನು. ವಾಡಿಕೆಯಂತೆ ಇವನು ಮಲಗುವ ಮನೆಯಲ್ಲಿ ಇಬ್ಬರು ಆಳುಗಳು ಮಲಗಿಕೊಂಡರು. ಅರಸನು ಆದರದಿಂದಲೂ ಅಟ್ಟಹಾಸದಿಂದಲೂ ಉಪಚಾರಗೊಂಡಿದ್ದಕಾರಣ ತನ್ನ ಸಾಮಾಜಿಕರಲ್ಲಿಯೂ ಪರಿವಾರದವರಲ್ಲಿಯೂ

ಸುಪ್ರೀತನಾಗಿ ತಾನು ಮಲಗುವುದಕ್ಕೆ ಹೋಗುವುದಕ್ಕೆ ಮುಂಚೆ, ಅವರಿಗೆಲ್ಲಾ ಅಪಾರವಾದ ಬಹುಮಾನಗಳನ್ನು ಕೊಟ್ಟನು. ಮನೆಯ ಯಜಮಾನಿಗೆ ಅಮೌಲ್ಯವಾದ ರತ್ನಾಭರಣವನ್ನು ಕೊಟ್ಟು, ಆಕೆಯನ್ನು ಅತ್ಯಂತ ದಯಾಪರಳಾದ ಅತಿಥಿಪೂಜಕಳೆಂದು ಕೊಂಡಾಡಿದನು.

ಆ ವೇಳೆಗೆ ಸಮರಾತ್ರಿಯಾಯಿತು. ಶಬ್ದಮಯವಾದ ಭಗವತ್ಸೃಷ್ಟಿಯಲ್ಲಿ ಅರ್ಧಕ್ಕೆ ಮೇಲ್ಪಟ್ಟ ಭಾಗವು ಮೃತಪ್ರಾಯವಾದಂತೆ ನಿಶ್ಶಬ್ದವಾಯಿತು. ಇದೇ, ದುಸ್ಸ್ವಪ್ನಗಳಿಂದ ಮನುಷ್ಯನ ಮನಸ್ಸು ಕಳವಳಗೊಳ್ಳುವ ಕಾಲ. ಇದೇ, ತೋಳನಿಗೂ ಕೊಲೆಪಾತಕಿಗೂ ಜಾಗರಣೆಯ ಸಮಯ. ಇದೇ ಕಾಲವೇ ಮ್ಯಾಕ್‌ಬೆತ್‌ನ ಹೆಂಡತಿಯು ನಿದ್ರಾವಶನಾದ ರಾಜನನ್ನು ಕೊಲೆಮಾಡುವುದಕ್ಕಾಗಿ ಅಣಿಮಾಡಿದ ಕಾಲ. ಸ್ತ್ರೀಜಾತಿಗೆ ಅತ್ಯಸಹ್ಯಕರವಾದ ಇಂತಹ ಉದ್ಯಮದಲ್ಲಿ ಇವಳು ಪ್ರವೇಶಿಸುತ್ತಿರಲಿಲ್ಲ. ಆದರೆ ತನ್ನ ಗಂಡನು ಕೈಯಾರ ಕೊಲೆಮಾಡಲು ಒಡಂಬಡಲಾರದಂಥ ದಯಾಸ್ವಭಾವದವನಾಗಿದ್ದನು. ಆಶಾಪರವಶನಾಗಿದ್ದರೂ ಅಕಾರ್ಯಕ್ಕೆ ಅಳುಕುವವನಾಗಿದ್ದನು. ಮಹತ್ವಾಕಾಂಕ್ಷೆಯು ಸಾಮಾನ್ಯವಾಗಿ ಘೋರಪಾತಕದಲ್ಲಿಯೇ ಪರಿಣಾಮಗೊಳ್ಳುವುದು; ಆದರೆ ಅವನು ಇನ್ನೂ ಇಂಥ ಘೋರ ಕಾರ್ಯಕ್ಕೆ ಸಿದ್ಧನಾಗಿರಲಿಲ್ಲ.

ಅರಸನನ್ನು ಕೊಲ್ಲುವ ವಿಷಯದಲ್ಲಿ ಅವಳು ತನ್ನ ಪತಿಯನ್ನು ಒಪ್ಪಿಸಿದ್ದಳು. ಆದರೂ ಅವನಿಗೆ ಅದರಲ್ಲಿ ಸ್ಥಿರಪ್ರತಿಜ್ಞೆಯುಂಟೋ, ಇಲ್ಲವೋ, ಎಂದು ಅವಳು ಸಂಶಯಪಡುತ್ತಿದ್ದಳು. ತನ್ನ ಪ್ರಕೃತಿಗಿಂತ ಮೃದುತರವಾದ ಪ್ರಕೃತಿಯುಳ್ಳ ತನ್ನ ಪತಿಯ ಸ್ವಭಾವವು ತನ್ನ ಸಂಕಲ್ಪಕ್ಕೆ ಎಲ್ಲಿ ಭಂಗವನ್ನುಂಟುಮಾಡುವುದೋ, ಎಂದು ಭಯಪಡುತ್ತಿದ್ದಳು.

ಈ ಕಾರಣದಿಂದ ಅವಳೇ ಭರ್ಜಿಯನ್ನು ತೆಗೆದುಕೊಂಡು ನಿದ್ರೆಮಾಡುತ್ತಿದ್ದ ಅರಸಿನ ಹಾಸಿಗೆಯ ಬಳಿಗೆ ಹೋದಳು. ಅವನ ಕೊಟ

ಡಿಯಲ್ಲಿ ಮಲಗಿದ್ದ ಆಳುಗಳಿಗೆ ಇವಳು ಮೊದಲೇ ಮೈಮರೆಯುವಂತೆ ಮದ್ಯಪಾನ ಮಾಡಿಸಿದ್ದಳು. ರಾಜನು ಪ್ರಯಾಣದ ಆಯಾಸದಿಂದ ಬಳಲಿದ್ದಕಾರಣ, ಗಾಢನಿದ್ರೆಯಲ್ಲಿದ್ದನು. ಅವನನ್ನು ಲಕ್ಷ್ಯವಿಟ್ಟು ನೋಡಲಾಗಿ, ಅವಳಿಗೆ ನಿದ್ರಾವಶನಾದ ಆ ರಾಜನಲ್ಲಿ ತನ್ನ ತಂದೆಯ ಮುಖಭಾವವು ತೋರಿಬಂತು. ಮುಂದಿನ ಕಾರ್ಯವನ್ನು ನೆರವೇರಿಸಲು ಧೈರ್ಯ ಸಾಲದುದಾಯಿತು.

ಅನಂತರ ತನ್ನ ಪತಿಯೊಡನೆ ಯೋಚಿಸುವುದಕ್ಕಾಗಿ ಹೋದಳು. ಅವನ ಮನಸ್ಸು ಡೋಲಾಯಮಾನವಾಯಿತು. ಅವನು ಈ ಕಾರ್ಯವನ್ನು ಮಾಡುವುದಕ್ಕೆ ಇದ್ದ ಅನೇಕ ಪ್ರಬಲವಾದ ಆಕ್ಷೇಪಣೆಗಳನ್ನು ಎಣಿಸತೊಡಗಿದನು. ಮೊದಲನೆಯದಾಗಿ ಆತನು ಅರಸ, ತಾನು ಪ್ರಜೆ. ಅಷ್ಟೇ ಅಲ್ಲದೆ, ತಾನು ಆತನಿಗೆ ಸಮೀಪ ಬಂಧು, ಆ ದಿನ ಆತನು ಅತಿಥಿ. ಅತಿಥಿಯು ಮನೆಗೆ ಬಂದರೆ, ಅವನನ್ನು ದೇವರಂತೆ ಪೂಜಿಸುವುದೂ, ಅವನಿಗೆ ಯಾವ ಅಪಾಯವೂ ಆಗದಂತೆ ನೋಡಿಕೊಳ್ಳುವುದೂ ಗೃಹಸ್ಥ ಧರ್ಮ. ಹೀಗಿರಲು ತಾನೇ ಅವನ ಮೇಲೆ ಕತ್ತಿಯೆತ್ತುವುದು ಅಧರ್ಮ. ಅಲ್ಲದೆ ಡಂಕನ್ ಪ್ರಭುವು ಅಪಾರ ದಯಾಶಾಲಿ, ಕ್ಷಮಾಶೀಲ, ತನ್ನ ಸಾಮಾಜಿಕರಲ್ಲಿ—ಅದರಲ್ಲಿಯೂ ತನ್ನಲ್ಲಿ—ಅಪಾರವಾದ ಪ್ರೀತಿವಾತ್ಸಲ್ಯಗಳುಳ್ಳವನು ಇವೇ ಮುಂತಾದ ಆತನ ಗುಣಗಳೂ ಉಪಕಾರಗಳೂ ಜ್ಞಾಪಕಕ್ಕೆ ಬಂದುವು. "ಇಂತಹ ಅರಸರು ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾದವರು. ಅವರು ಕೊಲೆಯಾದರೆ ಪ್ರಜೆಗಳು ಒಂದಕ್ಕೆರಡಾದ ಆಗ್ರಹದಿಂದ ಮೇಲೆ ಬೀಳುವರು. ಅಲ್ಲದೆ ಅವನ ಅಪಾರವಾದ ಕೃಪೆಯಿಂದಲೇ, ತಾನು ಸಮಸ್ತ ಪ್ರಜಾಸಮೂಹದಲ್ಲಿಯೂ ಗಣ್ಯತೆಯನ್ನು ಹೊಂದಿರುವುದು! ಇಂತಹ ಖ್ಯಾತಿಯನ್ನು ಒದಗಿಸಿಕೊಟ್ಟವನನ್ನು ಈ ನೀಚ ಕೊಲೆಯಿಂದ ಕೊನೆಗಾಣಿಸಿ ಕಳಂಕಿತನಾಗುವುದು ಸರ್ವಥಾ ಅನುಚಿತವಾದುದು" ಎಂದು ಮೊದಲಾಗಿ ಯೋಚಿಸಿಕೊಂಡನು.

ಹೀಗೆ ಮ್ಯಾಕ್‌ಬೆತ್‌ನು ತನ್ನ ಅಂತರಂಗದೊಡನೆ ಹೋರಾಡಿ

ಕೊಂಡು ಸದಸದ್ವಿವೇಚನೆಮಾಡುತ್ತ ಸನ್ಮಾರ್ಗದ ಕಡೆಗೆ ಮನಸ್ಸು ಕೊಟ್ಟು, ಕೊಲೆಯ ಚಿಂತೆಯನ್ನು ಬಿಟ್ಟುಬಿಡಬೇಕೆಂದು ನಿಶ್ಚಯ ಮಾಡಿಕೊಂಡದ್ದು ಅವನ ಹೆಂಡತಿಗೆ ತಿಳಿಯಿತು. ಅವಳು ತಾನು ಚಿಂತಿಸಿದ್ದ ದುಸ್ಸಂಕಲ್ಪವನ್ನು ಸುಲಭವಾಗಿ ಬಿಡುವಂತವಳಲ್ಲ. ಆದ್ದರಿಂದ ಗಂಡನಿಗೆ ಉಪದೇಶಮಾಡುವುದಕ್ಕೆ ಮೊದಲುಮಾಡಿ, ತನ್ನ ಧೈರ್ಯ ದಾರ್ಢ್ಯಗಳನ್ನು ಅವನಲ್ಲಿಯೂ ಸ್ವಲ್ಪ ತುಂಬಿ, ಹಿಡಿದ ಕೆಲಸವನ್ನು ಸಾಧಿಸಲೇಬೇಕೆಂಬುದಕ್ಕೆ ಒಂದರಮೇಲೆ ಮತ್ತೊಂದರಂತೆ ಕಾರಣಗಳನ್ನು ಕೊಡುತ್ತ ಬಂದಳು. ಈ ಕಾರ್ಯವು ಬಹು ಸುಲಭವೆಂತಲೂ, ಜಾಗ್ರತೆಯಾಗಿ ಮುಗಿದುಹೋಗುವುದೆಂತಲೂ, ಒಂದು ರಾತ್ರಿ ಸ್ವಲ್ಪ ಹೊತ್ತಿನಲ್ಲಿ ನಡೆಸಿದ ಕಾರ್ಯವು ಮುಂದೆ ಕಾಲಾನುಕಾಲಕ್ಕೂ ತಮಗೆ ಸಾಮ್ರಾಜ್ಯಪದವಿಯನ್ನೂ ಅಧಿಕಾರವನ್ನೂ ಒದಗಿಸಿ ಕೊಡುವುದೆಂತಲೂ ಹೇಳತೊಡಗಿದಳು. ಕೈಕೊಂಡ ಕಾರ್ಯವನ್ನು ನೆರವೇರಿಸಲಾರದ ಚಂಚಲ, ಹೇಡಿ ಎಂದು ಅವನನ್ನು ಹಳಿದಳು. "ನಾನು ಮಕ್ಕಳನ್ನು ಹೊತ್ತು ಹೆತ್ತು ಸಾಕಿದ ಹೆಂಗಸು. ಮಗು ಹಾಲುಕುಡಿಯುತ್ತಿರಲು ಅದನ್ನು ಅಂತಃಕರಣದಿಂದ ಮುದ್ದಿಸಿದವಳು. ಆದರೂ ಈ ಕೊಲೆ ಮಾಡಲು ಪ್ರತಿಜ್ಞೆ ಮಾಡಿರುವಂತೆ, ಆ ಮಗುವಿನ ಕೊಲೆಗೂ ನಾನು ಪ್ರತಿಜ್ಞೆ ಮಾಡಿದ್ದರೆ, ನನ್ನ ಮುಖ ನೋಡಿ ನಗುತ್ತಿರುವ ಹಾಗೆಯೇ ಅದನ್ನು ಎದೆಯಿಂದ ಕಿತ್ತು ತಲೆಯೊಡೆದು ಛಿದ್ರವಾಗುವಂತೆ ಬಡಿದು ಬಿಡುತ್ತಿದ್ದೆ. ಇಷ್ಟರಮೇಲೆ ಈ ಕೃತ್ಯಕ್ಕೆ ನಾವು ಜವಾಬುದಾರರಾಗಬೇಕಾಗಿಯೂ ಇಲ್ಲ. ಮೈಮೇಲೆ ಜ್ಞಾನವಿಲ್ಲದಂತೆ ಕುಡಿದುಬಿದ್ದಿರುವ ಅವನ ಆಳುಗಳ ಮೇಲೆ ಹಾಕಿಬಿಡಬಹುದು" ಎಂದಳು. ಹೀಗೆ ಹಿಂದುಮುಂದು ನೋಡುತ್ತಿದ್ದ ಮ್ಯಾಕ್‌ಬೆತ್‌ನನ್ನು ಅವನ ಹೆಂಡತಿಯು ತನ್ನ ವಾಕ್‌ಪ್ರತಾಪದಿಂದ ಉತ್ತೇಜನಗೊಳಿಸಲು ಅವನು ಮತ್ತೊಮ್ಮೆ ಈ ಭಯಂಕರವಾದ ಕೊಲೆಯನ್ನು ಮಾಡಲು ಧೈರ್ಯ ತಂದುಕೊಂಡನು.

ಅನಂತರ ಅವನು ಆಯುಧಪಾಣಿಯಾಗಿ ಸದ್ದಿಲ್ಲದಂತೆ ಕತ್ತಲೆ

ಯಲ್ಲಿ ರಾಜನು ಮಲಗಿದ್ದ ಕೊಟಡಿಯೊಳಕ್ಕೆ ನುಸುಳಿಹೋದನು. ಹೋಗುತ್ತ ಆಕಾಶದಲ್ಲಿ ತನ್ನ ಕಡೆಗೆ ತಿರುಗಿಕೊಂಡಿದ್ದ ಒಂದು ಭರ್ಜಿಯು ಕಂಡಿತು. ಅದರ ಬಾಯಿಯಿಂದಲೂ ತುದಿಯಿಂದಲೂ ರಕ್ತವು ತೊಟ್ಟಿಕ್ಕುತ್ತಿತ್ತು. ಆ ಭರ್ಜಿಯನ್ನು ಹಿಡಿದುಕೊಳ್ಳುವುದಕ್ಕಾಗಿ ಅವನು ಕೈನೀಡಲು, ಅಲ್ಲಿ ಏನೂ ಇರಲಿಲ್ಲ. ಅದು ಬರಿಯ ಚಿತ್ತಭ್ರಮಣೆ. ಕ್ರೂರಕಾರ್ಯವನ್ನು ಕೈಕೊಂಡು ಕಳವಳಹೊಂದಿದ ಅವನ ಮನಸ್ಸಿನ ಪರಿಣಾಮ. ಅಷ್ಟೇಯೆ.

ಮ್ಯಾಕ್‌ಬೆತ್‌ನು ಈ ಕಳವಳದಿಂದ ಹೇಗೋ ಮುಕ್ತನಾಗಿ, ನಿದ್ರೆಯಲ್ಲಿದ್ದ ಅರಸನನ್ನು ತನ್ನ ಆಯುಧದ ಒಂದೇ ಇರಿತದಿಂದ ಕೊಂದುಬಿಟ್ಟನು. ಈ ಕೊಲೆಯಾದ ಕೂಡಲೇ, ಅಲ್ಲಿ ಮಲಗಿದ್ದ ಆಳುಗಳಲ್ಲಿ ಒಬ್ಬನು ನಿದ್ರೆಮಾಡುತ್ತಲೇ ನಕ್ಕನು. ಮತ್ತೊಬ್ಬನು "ಕೊಲೆ!" ಎಂದು ಕೂಗಿದನು. ಈ ಶಬ್ದದಿಂದ ಇಬ್ಬರೂ ಎಚ್ಚೆತ್ತರು. ಒಬ್ಬನು "ಭಗವಂತ, ಕಾಪಾಡು!" ಎಂದು ಸೂಕ್ಷ್ಮವಾಗಿ ಪ್ರಾರ್ಥಿಸಿದನು. ಮತ್ತೊಬ್ಬನು "ತಥಾಸ್ತು" ಎಂದನು. ಆದರೆ ಯಾರೂ ಏಳಲಿಲ್ಲ. ಮತ್ತೆ ನಿದ್ರೆ ಹೋಗಿಬಿಟ್ಟರು. ಇವರು ಮಾತನಾಡಿಕೊಳ್ಳುತ್ತಿರುವಾಗ್ಗೆ ಮ್ಯಾಕ್‌ಬೆತ್‌ನು ಅಲ್ಲಿಯೇ ನಿಂತಿದ್ದನು. ಒಬ್ಬನು ದೇವರನ್ನು ಪ್ರಾರ್ಥಿಸಿದಮೇಲೆ ಮತ್ತೊಬ್ಬನು "ತಥಾಸ್ತು" ಎಂದು ಹೇಳಿದನಷ್ಟೆ; ಈ ಸಂದರ್ಭದಲ್ಲಿ ತನಗೂ ಭಗವದನುಗ್ರಹವು ಅತ್ಯಾವಶ್ಯಕವಾಗಿದ್ದುದರಿಂದ ಮ್ಯಾಕ್‌ಬೆತ್‌ನೂ "ತಥಾಸ್ತು" ಎಂದು ಹೇಳಲು ಪ್ರಯತ್ನಿಸಿದನು. ಆದರೆ ಆ ಮಾತು ಗಂಟಲಿನಲ್ಲಿಯೇ ಸಿಕ್ಕಿಕೊಂಡಿತು. ಉಸಿರು ಹೊರಡಲಿಲ್ಲ. ಆಗ "ಇನ್ನು ನಿದ್ರೆಯಿಲ್ಲ. ನಿರಪರಾಧಿನಿಯೂ ಪ್ರಾಣಪೋಷಿಣಿಯೂ ಆದ ನಿದ್ರಾದೇವಿಯನ್ನು ಮ್ಯಾಕ್‌ಬೆತ್‌ನು ಕೊಲೆಮಾಡಿದನು. ಗ್ಲಾಮಿಸ್‌ನು ನಿದ್ರೆಯನ್ನು ಕೊಲೆಮಾಡಿಬಿಟ್ಟನು. ಆದುದರಿಂದ ಕಾಡರ್‌ನು ಇನ್ನು ನಿದ್ರಿಸುವ ಹಾಗಿಲ್ಲ. ಮ್ಯಾಕ್‌ಬೆತ್‌ನು ನಿದ್ರಿಸುವ ಹಾಗಿಲ್ಲ" ಎಂದು ಯಾರೋ ಕೂಗಿ ಕೂಗಿ ಹೇಳಿದಂತಾಯಿತು.

ಇಂತಹ ಭಯಂಕರವಾದ ಭಾವನೆಗಳಲ್ಲಿ ತೊಳಲುತ್ತ ಮ್ಯಾಕ್‌ಬೆತ್‌ನು ತನ್ನ ಮಡದಿಯ ಬಳಿಗೆ ಹೋದನು. ಅವಳು ಅವನ ಭಯಭ್ರಾಂತಸ್ಥಿತಿಯನ್ನು ಕಂಡು, ಹಿಡಿದ ಕೆಲಸ ಹೇಗೋ ಕೆಟ್ಟುಹೋಗಿರಬೇಕೆಂದು ನೆನೆದಳು. ನಿಜಸ್ಥಿತಿ ತಿಳಿದ ಮೇಲೆ ರಕ್ತಕಲೆಯನ್ನು ತೊಳೆದುಕೊಂಡು ಬರುವಂತೆ ಗಂಡನನ್ನು ಕಳುಹಿಸಿ, ಈ ಅಪರಾಧವು ಆಳುಗಳ ಮೇಲೆ ಹೊರುವಂತೆ ಅವರ ಕಪೋಲಗಳನ್ನು ರಕ್ತಮಯವಾಗಿ ಮಾಡಲು ಭರ್ಜಿಯನ್ನು ತೆಗೆದುಕೊಂಡು ಆ ಕೊಟಡಿಗೆ ಹೋದಳು.

ಸೂರ್ಯೋದಯವಾಯಿತು. ಒಡನೆಯೇ ಕೊಲೆಯೂ ಗೊತ್ತಾಗಿಹೋಯಿತು. ಕೊಲೆಯನ್ನು ಗುಟ್ಟುಮಾಡಿಟ್ಟುಕೊಳ್ಳುವುದಕ್ಕಾಗುತ್ತದೆಯೆ? ಮ್ಯಾಕ್‌ಬೆತ್‌ನೂ, ಅವನ ಹೆಂಡತಿಯೂ, ಅಪರಿಮಿತವಾದ ವ್ಯಥೆಯನ್ನು ಅನುಭವಿಸುವಂತೆ ನಟನೆ ಮಾಡಿದರು. ಭರ್ಜಿಯೂ ಕಪೋಲಗಳ ಮೇಲಿನ ರಕ್ತಕಲೆಯೂ ಆಳುಗಳೇ ಕೊಲೆಪಾತಕಿಗಳೆಂದು ಹೇಳುವುದಕ್ಕೆ ಪ್ರಬಲಸಾಧನಗಳಾಗಿದ್ದುವು. ಆದರೂ ಅನುಮಾನವೆಲ್ಲಾ ಮ್ಯಾಕ್‌ಬೆತ್‌ನ ಮೇಲೇ ಬಂದು ಬಿದ್ದಿತು. ಏಕೆಂದರೆ ಇಂಥ ಘೋರಕೃತ್ಯವನ್ನೆಸಗುವುದಕ್ಕೆ ಅವಸಿಗಿದ್ದ ಫಲಾಭಿಸಂಧಿಗಳು ಆ ನಿರ್ಭಾಗ್ಯ ಸೇವಕರಿಗೆ ಇರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ಆದ್ದರಿಂದ ಡರ್ಕನ ಇಬ್ಬರು ಮಕ್ಕಳೂ ಓಡಿಹೋದರು. ಹಿರಿಯವನಾದ ಮ್ಯಾಲ್ಕೋಂನು ಇಂಗ್ಲೆಂಡಿನ ಆಸ್ಥಾನದಲ್ಲಿ ಆಶ್ರಯಹೊಂದಿದನು. ಕಿರಿಯವನಾದ ಡೋನಾಲ್ಡ್‌ಬೇನನು ಐರ್ಲೆಂಡಿಗೆ ಹೋಗಿ ತಲೆಮರಸಿಕೊಂಡನು.

ಡರ್ಕನ್ನಿನ ಅನಂತರ ಪಟ್ಟಾಭಿಷಿಕ್ತರಾಗಬೇಕಾಗಿದ್ದ ಅವನ ಮಕ್ಕಳು ಈರೀತಿಯಲ್ಲಿ ತಲೆತಪ್ಪಿಸಿಕೊಂಡು ಹೋದಕಾರಣ ಅರಸಿನ ಸಮೀಪಬಂಧುವಾದ ಮ್ಯಾಕ್‌ಬೆತ್‌ನು ಸಿಂಹಾಸನಕ್ಕೆ ಬಂದನು. ಹೀಗೆ ಆ ಮಂತ್ರವಾದಿನಿಯರ ಭವಿಷ್ಯವು ಅಕ್ಷರಶಃ ನಿಜವಾಗಿ ಪರಿಣಮಿಸಿತು.

ಮ್ಯಾಕ್‌ಬೆತ್‌ನೂ ಅವನ ಹೆಂಡತಿಯೂ ಹೀಗೆ ಉನ್ನತಪದವಿಯನ್ನು ಪಡೆದಾಗ್ಯೂ ಆ ಮಂತ್ರವಾದಿನಿಯರ ಮಾತಿನಂತೆ ತಮ್ಮ

ಅನಂತರ ಬ್ಯಾಂಕೋವಿನ ಮಕ್ಕಳು ಅರಸರಾಗುವರೇ ವಿನಾ ತಮ್ಮ ಮಕ್ಕಳು ಅರಸರಾಗುವುದಿಲ್ಲವೆಂಬುದನ್ನು ಮರೆಯಲಾರದೆ, ಮನದಲ್ಲಿಯೇ ಕುದಿಯುತ್ತಿದ್ದರು. ಇಂತಹ ಮಹಾ ಕ್ರೂರವಾದ ಕೆಲಸವನ್ನು ಮಾಡಿ, ತಮ್ಮ ಕೈಗಳನ್ನು ರಕ್ತಮಾಡಿಕೊಂಡುದು ಇನ್ನೊಬ್ಬನ ಶ್ರೇಯಸ್ಸಾಧನೆಗೆ ಕಾರಣವಾಯಿತಲ್ಲಾ, ಅವನ ಮಕ್ಕಳಿಗೆ ಸಿಂಹಾಸನ ದೊರೆಯುವಂತಾಯಿತಲ್ಲಾ ಎಂದು ಹೊಟ್ಟೆ ಕಿವಿಚಿಕೊಂಡರು. ಮತ್ತು ಆ ಮಂತ್ರಗಾತಿಯರ ಮಾತು ತಮ್ಮ ವಿಚಾರದಲ್ಲಿ ಅಕ್ಷರಶಃ ನಿಜವಾಗಿ ಪರಿಣಮಿಸಿದ್ದರೂ, ಅವರ ಭವಿಷ್ಯೋಕ್ತಿಯಲ್ಲಿ ಮಿಕ್ಕ ಭಾಗವನ್ನು ಸುಳ್ಳುಮಾಡುವೆವೆಂಬ ಭ್ರಾಂತಿಯಿಂದ ಬ್ಯಾಂಕೋವನ್ನೂ ಅವನ ಮಕ್ಕಳನ್ನೂ ಕೊಂದುಬಿಡಬೇಕೆಂದು ನಿಶ್ಚಯಿಸಿದರು.

ಈ ಉದ್ದೇಶವನ್ನು ನೆರವೇರಿಸಿಕೊಳ್ಳಲು ಅವರು ಆಸ್ಥಾನದ ಸಮಸ್ತ ಶ್ರೀಮಂತರನ್ನೂ ಔತಣಕ್ಕೆಂದು ಕರೆಸಿದರು. ಅವರಲ್ಲಿ ಬ್ಯಾಂಕೋ ಮತ್ತು ಅವನ ಮಗ ಫ್ಲಿಯನ್ಸ್‌ರನ್ನು ಅತ್ಯಾದರ ಗೌರವಗಳಿಂದ ಕರೆದಿದ್ದರು. ಅವರು ಆ ರಾತ್ರಿ ಅರಮನೆಗೆ ಬರುವ ಹಾದಿಯಲ್ಲಿ ಮ್ಯಾಕ್‌ಬೆತ್‌ನು ಕೊಲೆಗಾರರನ್ನು ನಿಲ್ಲಿಸಿದ್ದನು. ಅವರು ಬ್ಯಾಂಕೋವನ್ನು ಕಂಡಕೂಡಲೆ ಇರಿದು ಕೊಂದರು. ಫ್ಲಿಯನ್ಸನು ಏಟು ಬೀಳುವಷ್ಟರಲ್ಲಿ ತಪ್ಪಿಸಿಕೊಂಡು ಓಡಿಹೋದನು. (ಮುಂದೆ ಇವನ ಸಂತತಿಯವರು ಸ್ಕಾಟ್ಲೆಂಡ್ ಸಿಂಹಾಸನವನ್ನೇರಿದರು. ಅವರಲ್ಲಿ ಒಬ್ಬನಾದ ಆರನೆಯ ಜೇಮ್ಸನು ಇಂಗ್ಲೆಂಡಿಗೆ ಒಂದನೆಯ ಜೇಮ್ಸ್ ಎಂಬ ಹೆಸರಿನಲ್ಲಿ ಅರಸನಾದನು. ಇವನ ಆಳಿಕೆಯಲ್ಲಿ ಈ ಎರಡು ರಾಜ್ಯಗಳೂ ಒಂದಾದುವು.)

ಭೋಜನದ ವೇಳೆಯಲ್ಲಿ ರಾಣಿ-ಮ್ಯಾಕ್‌ಬೆತ್‌ನ ರೀತಿಯು ಬಹು ಗಂಭೀರವಾಗಿಯೂ, ರಾಜಠೀವಿಯುಳ್ಳುದಾಗಿಯೂ ಇತ್ತು. ಅವಳು ಅತಿಥಿಸತ್ಕಾರಪರತೆಯೂ ದಯಾಪರೆಯೂ ಆದ ಗೃಹಿಣಿಯಂತೆಯೇ ತೋರುತ್ತಿದ್ದಳು.

ಮ್ಯಾಕ್‌ಬೆತ್‌ನು ತನ್ನ ಅತಿಥಿಗಳೊಡನೆ ಸರಸವಾಗಿಯೂ, ಆದರ ಪುರಸ್ಸರವಾಗಿಯೂ ಮಾತನಾಡುತ್ತ, "ಈ ನಮ್ಮ ಸ್ಕಾಟ್‌ಲೆಂಡಿನಲ್ಲಿರುವ ಶ್ರೇಷ್ಠ ಶ್ರೀಮಂತರೆಲ್ಲರೂ ಈಗ ನನ್ನ ಮನೆಯನ್ನಲಂಕರಿಸಿರುವರು. ಆದರೆ ನನ್ನ ಗೆಳೆಯನಾದ ಬ್ಯಾಂಕೋವೂ ಅವನ ಮಗನೂ ಇಲ್ಲಿಲ್ಲದಿರುವುದು ಒಂದು ದೊಡ್ಡ ಕೊರತೆಯಾಗಿದೆ. ಅವರು ನಮ್ಮ ಮನ್ನಣೆಯನ್ನು ಪರಿಗ್ರಹಿಸಲಿಲ್ಲವೇಕೆಂದು ಚಿಂತಿಸುತ್ತಿದ್ದೇನೆ. ಅವರು ಏನೋ ಅನಿವಾರ್ಯದಿಂದ ಬರದಿರಬಹುದು; ಅಂತು ಅವರು ಸುಖವಾಗಿದ್ದರೆ ಸಂತೋಷ" ಎಂದನು.

ಮ್ಯಾಕ್‌ಬೆತ್‌ನು ಈ ಮಾತುಗಳನ್ನು ಆಡುತ್ತಿರುವ ವೇಳೆಗೆ ಇವನ ಏರ್ಪಾಟಿನಂತೆ ಬ್ಯಾಂಕೋವು ಕೊಲೆಗೆ ಈಡಾಗಿದ್ದನು. ಅವನ ಪ್ರೇತವು ಆ ಭೋಜನಶಾಲೆಗೆ ಪ್ರವೇಶಿಸಿ, ಮ್ಯಾಕ್‌ಬೆತ್‌ನು ಕುಳಿತುಕೊಳ್ಳಬೇಕೆಂದಿದ್ದ ಪೀಠದ ಮೇಲೆ ಕುಳಿತುಕೊಂಡಿತು. ಮ್ಯಾಕ್‌ಬೆತ್‌ನು ಬಹಳ ಧೈರ್ಯಶಾಲಿ; ಎಂತಹ ಭೂತ ಭೇತಾಳಗಳನ್ನಾದರೂ ಸ್ವಲ್ಪವೂ ಭೀತನಾಗದೆ ಎದುರುಗೊಂಡು ಮಾತನಾಡುವವನು. ಆದರೂ ಈ ಭಯಂಕರವಾದ ನೋಟದಿಂದ ಅವನ ಮುಖವು ಕಳೆಗುಂದಿತು. ಕೆನ್ನೆಗಳು ಬಿಳುಪೇರಿದುವು. ತುಟಿಗಳು ನಡುಗಿದುವು. ಶರೀರವು ರೋಮಾಂಚಿತವಾಯಿತು. ಅವನು ಸ್ತಂಭೀಭೂತನಾಗಿ ಆ ಭೂತವನ್ನು ಬಿರುಗಣ್ಣಿಂದ ನೋಡುತ್ತ ನಿಂತನು.

ಇವನ ರಾಣಿಯೂ ಅತಿಥಿಗಳೂ ಇವನು ಬರಿಯ ಪೀಠವನ್ನು ನೆಡುಗಣ್ಣಿಂದ ನೋಡುತ್ತ ನಿಂತಿರುವುದನ್ನು ಕಂಡರು. ಅವರಿಗೆ ಏನೂ ತಿಳಿಯಲಿಲ್ಲ. ಆದುದರಿಂದ ಅವರು ಇದನ್ನು ಒಂದು ಬಗೆಯ ಮಾನಸಿಕ ವ್ಯಾಧಿಯೆಂದು ತಿಳಿದರು. ಆದರೆ ರಾಣಿಯು "ಡಂಕನನ್ನು ಕೊಲೆಮಾಡಲು ಹೋದಾಗ ಆಕಾಶದಲ್ಲಿ ನಿನ್ನ ಕಡೆಗೆ ತಿರುಗಿದ್ದ ಆಯುಧವನ್ನು ನೋಡಿದಂತೆಯೇ, ಇದೂ ಒಂದು ಬಗೆಯ ಭ್ರಮೆ. ಭ್ರಮೆಯನ್ನು ಬಿಡು!" ಎಂದು ರಾಜನಿಗೆ ಕಿವಿಯಲ್ಲಿ ಹೇಳಿದಳು. ಆದರೂ ಮ್ಯಾಕ್‌ಬೆತ್‌ನು ಭೂತವನ್ನು ನೋಡುತ್ತ ಅದರೊ

ಡನೆ ಏನೇನೋ ಮಾತನಾಡುತ್ತ ನಿಂತಿದ್ದನು. ಮಿಕ್ಕವರು ಆಡುವ ಮಾತುಗಳು ಅವನಿಗೆ ಕೇಳಿಬರುತ್ತಲೇ ಇರಲಿಲ್ಲ. ಅವನ ಮಾತುಗಳು ಅಸ್ಫುಟವಾಗಿದ್ದುವು. ಆದರೂ ಭಯಂಕರವಾದ ತಮ್ಮ ಅಂತರಂಗವು ಬಹಿರಂಗವಾದೀತೆಂದು ರಾಣಿಯು ಭಯಪಡುವಮಟ್ಟಿಗೆ ಸ್ಪಷ್ಟವಾಗಿದ್ದುವು. ಆದರಿಂದ ಆಕೆಯು, "ಮಹನೀಯರಾದ ಅತಿಥಿಗಳಿರಾ, ಆಗಾಗ್ಗೆ ರಾಜನು ಈ ವಿಧವಾದ ಬುದ್ಧಿಭ್ರಮಣೆಗೆ ಗುರಿಯಾಗುತ್ತಿರುವನು. ಆದುದರಿಂದ ಇಂದಿಗೆ ತಾವೆಲ್ಲರೂ ವ್ಯವಧಾನ ತೆಗೆದುಕೊಳ್ಳಬಹುದು" ಎಂದು ನೆಪವನ್ನು ಕಲ್ಪಿಸಿ ಹೇಳಿ, ತನ್ನ ಅತಿಥಿಗಳನ್ನು ಸಾಗಕಳುಹಿಸಿದಳು.

ಇಲ್ಲಿಂದ ಮುಂದಕ್ಕೆ ಮ್ಯಾಕ್‌ಬೆತ್‌ನು ಈ ವಿಧವಾದ ಭಯಂಕರ ಮನೋವೃತ್ತಿಯುಳ್ಳವನಾದನು. ಅವನ ಮತ್ತು ಅವನ ರಾಣಿಯ ನಿದ್ರೆಯು ಭಯಂಕರವಾದ ಕನಸುಗಳಿಂದ ಉಪಹತಿಗೊಳ್ಳುತ್ತಿತ್ತು. ಬ್ಯಾಂಕೋವಿನ ಮರಣವಿಚಾರವೇನೂ ಇವರನ್ನು ವಿಶೇಷವಾಗಿ ತೊಂದರೆಗೊಳಿಸಲಿಲ್ಲ. ಆದರೆ ಪಲಾಯನ ಮಾಡಿದ ಫ್ಲಿಯಾರ್ನ್ಸನ ವಿಚಾರವು ಇವರ ವ್ಯಥೆಗೆ ಕಾರಣವಾಗಿದ್ದಿತು. ಏಕೆಂದರೆ, ಆ ಮಂತ್ರಗಾತಿಯರಾದ ಸಹೋದರಿಯರ ಭವಿಷ್ಯದಂತೆ ಅವನ ಸಂತತಿಯವರು ಮುಂದೆ ಸ್ಕಾಟ್‌ಲೆಂಡಿನ ದೊರೆಗಳಾಗುವರಲ್ಲವೆ! ಇಂತಹ ಅಸಹ್ಯ ವೇದನೆಗಳಿಗೆ ಒಳಗಾದ ಇವರಿಗೆ ಮನಶ್ಶಾಂತಿಯು ದೂರವಾಯಿತು. ಆದ್ದರಿಂದ ಮ್ಯಾಕ್‌ಬೆತ್‌ನು ಆ ಮಂತ್ರಗಾತಿಯರನ್ನು ಹುಡುಕಬೇಕೆಂದೂ ತನಗುಂಟಾಗುವ ಉತ್ತರೋತ್ತರ ಹಾನಿಯನ್ನು ಅವರಿಂದ ತಿಳಿಯಬೇಕೆಂದೂ ಯೋಚಿಸಿಕೊಂಡನು.

ಇವನು ಅವರನ್ನು ಹಿಂದೆ ನೋಡಿದ್ದ ಕಾಡಿನಲ್ಲಿಯೇ, ಒಂದು ಗವಿಯಲ್ಲಿ ಕಂಡನು. ಕಾಲಜ್ಞಾನಮಹಿಮೆಯಿಂದ ಇವನ ಬರುವಿಕೆಯನ್ನು ಅವರು ತಿಳಿದು, ಭವಿಷ್ಯ ಸಂಘಟನೆಯನ್ನು ತಮಗೆ ತಿಳಿಸುವಂತಹ ನಾರಕ ಪಿಶಾಚಗಳನ್ನು ಆಮಂತ್ರಿಸುವುದಕ್ಕಾಗಿ ಭಯಂಕರವಾದ ಕ್ರಿಯಾಕಲಾಪಕ್ಕೆ ಅಣಿಮಾಡುತ್ತಿದ್ದರು. ಕಪ್ಪೆ, ಕಪಟ,

ಹಾವು, ಹಲ್ಲಿಯ ಕಣ್ಣು, ನಾಯಿಯ ನಾಲಗೆ, ಹೆಂಟೇಗೊದ್ದನ ಕಾಲು, ಗೂಗೆಯ ರೆಕ್ಕೆ, ಘಟಸರ್ಪದ ಪೊರೆ, ತೋಳನ ಹಲ್ಲು, ತಿಮಿಂಗಿಲದ ಕಿಬ್ಬೊಟ್ಟೆ, ಮಾಟಗಾತಿಯ ಶವ, ವಿಷದ್ರವ್ಯವಾದ ಹೆಂಲಾಕ್ ಬೇರು, ಆಡಿನ ಪಿತ್ತರಸ, ಯೆಹೂದಿಯ ಯಕೃತ್ತು, ಸಮಾಧಿಯೊಳಕ್ಕೆ ಬೇರು ಬಿಟ್ಟುಕೊಂಡ ಯೂ ಮರದ ಚೆಕ್ಕೆ, ಸತ್ತ ಮಗುವಿನ ಕೈಬೆರಳು ಮೊದಲಾದ ಪದಾರ್ಥಗಳನ್ನು ಒಂದು ದೊಡ್ಡ ಗುಡಾಣದಲ್ಲಿ ಹಾಕಿ ಕುದಿಸಿದರು. ಕಾವು ಹೆಚ್ಚಾದಾಗ ಕಾಡುಕೋತಿಯ ರಕ್ತ, ತನ್ನ ಮರಿಗಳನ್ನು ತಾನೇ ತಿಂದ ಹಂದಿಯ ರಕ್ತಗಳನ್ನು ಬೆರೆಸಿದರು. ಈ ಕಲಾಪದಿಂದ ನರಕಲೋಕದ ಪಿಶಾಚಿಗಳು ಇವರ ಸ್ವಾಧೀನವಾಗಿ ಇವರ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುತ್ತಿದ್ದವು. ಈಗ ಅವರು ಮ್ಯಾಕ್‌ಬೆತ್‌ನನ್ನು ಕುರಿತು "ನಿನಗೆ ಉಂಟಾಗಿರುವ ಸಂದೇಹಗಳನ್ನು ನಾವು ಪರಿಹರಿಸೋಣವೇ ಅಥವಾ ನಮ್ಮ ಒಡೆಯರಾದ ಭೂತಗಳು ಪರಿಹರಿಸೋಣವೋ?" ಎಂದರು. ಮ್ಯಾಕ್‌ಬೆತ್‌ನು ಸ್ವಲ್ಪವೂ ಹೆದರದೆ "ಅವರೆಲ್ಲಿರುವರು? ಅವರನ್ನು ನನಗೆ ತೋರಿಸಿ" ಎಂದನು. ಅವರು ಆ ಭೂತಗಳನ್ನು ಕೂಗಿದರು. ಮೊದಲನೆಯ ಭೂತವು ರಣಗುಲಾವಿಯನ್ನು ಧರಿಸಿದ ಯೋಧನ ತಲೆಯಂತೆ ಗುಡಾಣದಿಂದ ಮೇಲಕ್ಕೆದ್ದು, "ಮ್ಯಾಕ್‌ಬೆತ್, ಫೈಫ್‌ನ ನಾಯಕನ ವಿಚಾರದಲ್ಲಿ ಜಾಗರೂಕನಾಗಿರು!" ಎಂದು ಹೇಳಿತು. ಈ ರೀತಿಯಾದ ಮುಂಜಾಗ್ರತೆಯನ್ನು ಹೇಳಿದುದಕ್ಕಾಗಿ, ಮ್ಯಾಕ್‌ಬೆತ್‌ನು ಆ ಭೂತಕ್ಕೆ ತನ್ನ ಕೃತಜ್ಞತೆಯನ್ನು ತಿಳಿಸಿದನು. ಮ್ಯಾಕ್‌ಡಫ್ ಎಂಬ ಹೆಸರಿನ ಫೈಫ್‌ನ ನಾಯಕನು ತನಗೆ ಅಹಿತನೆಂದು ಮ್ಯಾಕ್‌ಬೆತ್‌ಸಿಗೆ ಸಂಶಯವಿದ್ದ ಕಾರಣ ಅವನಲ್ಲಿ ಇವನಿಗೆ ಮೊದಲೇ ಕ್ರೋಧವಿತ್ತು.

ಎರಡನೆಯ ಭೂತವು ರಕ್ತಮಯವಾದ ಮಗುವಿನಂತೆ ಗೋಚರಿಸಿ, "ಮ್ಯಾಕ್‌ಬೆತ್, ಭಯಪಡಬೇಡ. ಮನುಷ್ಯ ಶಕ್ತಿಯನ್ನು ಅಲ್ಲಗಳೆದು ನಗುವವನಾಗು. ಹೆಂಗಸಿನ ಹೊಟ್ಟೆಯಲ್ಲಿ ಹುಟ್ಟಿ ಬಂದವನು ಯಾವನೂ ನಿನ್ನನ್ನು ತೊಂದರೆಪಡಿಸಲಾರನು. ಧೈರ್ಯಶಾಲಿ

ಯಾಗಿರು. ಸ್ಥಿರಪ್ರತಿಜ್ಞನಾಗಿರು!" ಎಂದು ಹೇಳಿತು. ಈ ಮಾತನ್ನು ಕೇಳಿದುದರಿಂದ ಮ್ಯಾಕ್‌ಬೆತ್‌ನು, "ಮ್ಯಾಕ್‌ಡಫ್‌ನೇ, ಹಾಗಾದರೆ ಬದುಕು; ನಿನ್ನಿಂದ ನನಗೆ ಭಯವೇನೂ ಇಲ್ಲ. ಆದರೂ, ನಾನು ಈ ಭರವಸೆಯನ್ನು ಸ್ಥಿರಮಾಡಿಕೊಳ್ಳಬೇಕು. ಕೂಡದು! ಕೂಡದು! ನೀನು ಬದುಕಿರಕೂಡದು. ನಿನ್ನ ಭಯವು ಸ್ವಪ್ನದಲ್ಲಿಯೂ ಇರಕೂಡದು. ಸಿಡಿಲು ಎರಗುವಂತಿದ್ದರೂ ನಾನು ನಿಶ್ಚಿಂತನಾಗಿ ನಿದ್ರಿಸುವಂತಾಗಬೇಕು" ಎಂದುಕೊಂಡನು. ಮೂರನೆಯ ಭೂತವು ಕೈಯಲ್ಲಿ ಒಂದು ಮರದಕೊಂಬೆ ಸಹಿತವಾಗಿ ಕಿರೀಟವುಳ್ಳ ಮಗುವಿನಂತೆ ಗುಡಾಣದಿಂದ ಮೇಲಕ್ಕೆ ಎದ್ದು "ಮ್ಯಾಕ್‌ಬೆತ್, ಧೈರ್ಯಶಾಲಿಯಾಗಿರು. ಯಾರು ಅಸಮಾಧಾನಪಡುವರು, ಯಾರು ಪಿತೂರಿ ನಡೆಸುವರು, ಯಾರು ದ್ರೋಹಚಿಂತೆಯನ್ನು ಮಾಡುತ್ತಿರುವರು, ಎಂಬಿವುಗಳಿಗೆ ಮನಗೊಡಬೇಡ. ಡೆಸಿನೇನ್ ಬೆಟ್ಟಕ್ಕೆ ಬರ್ನಂ ಕಾಡು ದಂಡೆತ್ತಿ ಬರುವವರೆಗೆ ನಿನಗೆ ಪರಾಜಯವಿಲ್ಲ" ಎಂದು ಹೇಳಿ ಅಂತರ್ಧಾನವಾಯಿತು.

ಮ್ಯಾಕ್‌ಬೆತ್‌ನು "ಇದೇನೋ ಶುಭಸೂಚನೆಯೇ! ಏಕೆಂದರೆ, ಆ ಕಾಡನ್ನು ಜರುಗಿಸುವವರು ಯಾರು? ಭೂಮಿಯಲ್ಲಿ ಬೇರುಸಹಿತವಾದ ವೃಕ್ಷಸಮೂಹವನ್ನು ಜರುಗಿಸುವವರು ಯಾರು? ಮನುಷ್ಯನಿಗೆ ವಿಧಿವಿಹಿತವಾದ ಆಯುಷ್ಯವು ಇರುವಷ್ಟುಕಾಲ ನಾನೂ ಬದುಕಿರುವೆನು; ಹಗೆಗಳ ಕೈಯಿಂದ ಗತಪ್ರಾಣನಾಗಿ ಅಕಾಲಮರಣ ಹೊಂದುವುದಿಲ್ಲ ಎಂದಾಯಿತು. ಆದರೂ ನನ್ನ ಹೃದಯವು ಒಂದು ವಿಚಾರವನ್ನು ತಿಳಿಯಲು ಬಹಳ ಕುತೂಹಲಪಡುತ್ತಿರುವುದು. ಬ್ಯಾಂಕೋವಿನ ಸಂತತಿಯವರು ಈ ರಾಜ್ಯವನ್ನು ಆಳುವರೇ? ಇದನ್ನು ನಿಮ್ಮ ವಿದ್ಯೆಯಿಂದ ಅರಿಯಬಲ್ಲಿರಾದರೆ ಹೇಳಿ" ಎಂದನು. ಒಡನೆಯೇ ಆ ಪಾತ್ರೆಯು ಭೂಮಿಯೊಳಕ್ಕೆ ಕುಸಿದುಹೋಯಿತು. ಸಂಗೀತ ಧ್ವನಿಯು ಕೇಳಿಬಂತು. ಅರಸುಗಳಂತೆ ತೋರುವ ಎಂಟು ಛಾಯೆಗಳು ಮ್ಯಾಕ್‌ಬೆತ್‌ನ ಮುಂದೆ ಹಾದುಹೋದುವು. ಕೊನೆ

ಯಲ್ಲಿ ಬ್ಯಾಂಕೋವು ಕೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡು, ತನ್ನ ಮುಂದೆ ಬಂದಂತೆ ಆಯಿತು. ಆ ಕನ್ನಡಿಯಲ್ಲಿ ಇನ್ನೂ ಅನೇಕ ರೂಪಗಳು ಕಾಣಬಂದುವು. ಬ್ಯಾಂಕೋವು ಪೂರ್ತಿಯಾಗಿ ರಕ್ತಾಚ್ಛಾದಿತನಾಗಿ ಮ್ಯಾಕ್‌ಬೆತ್‌ನನ್ನು ನೋಡಿ ನಗುತ್ತ, ಆ ರೂಪಗಳನ್ನು ತೋರಿಸುತ್ತಿರುವಂತೆ ಕಂಡುಬಂದಿತು. ಇವರೇ ತನ್ನ ಅನಂತರ ಸ್ಕಾಟ್‌ಲೆಂಡನ್ನು ಆಳುವವರೆಂದು ಮ್ಯಾಕ್‌ಬೆತ್‌ನು ಇದರಿಂದ ತಿಳಿದನು.

ಅನಂತರ ಆ ಮಾಟಗಾತಿಯರು ಅರಸಿಗೆ ಮರ್ಯಾದೆ ಮಾಡುವುದಕ್ಕಾಗಿಯೋ ಎಂಬಂತೆ ಮೃದುವಾಗಿ ಹಾಡುತ್ತ ಕುಣಿಯುತ್ತ ಅಂತರ್ಧಾನವಾದರು. ಇಲ್ಲಿಂದ ಮುಂದೆ ಮ್ಯಾಕ್‌ಬೆತ್‌ನ ಆಲೋಚನೆಗಳು ಇನ್ನೂ ಭಯಂಕರವಾದುವು. ಅವನು ರಕ್ತದಾಹವುಳ್ಳವನಾದನು. ರಾಜಧಾನಿಗೆ ಹಿಂದಿರುಗುತ್ತಿದ್ದಹಾಗೆಯೇ, ಫೈಫ್‌ನ ನಾಯಕನಾದ ಮ್ಯಾಕ್‌ಡಫ್‌ನು ಇಂಗ್ಲೆಂಡಿಗೆ ಓಡಿಹೋದನೆಂದೂ, ತನ್ನನ್ನು ತಳ್ಳಿ ಮ್ಯಾಲ್ಕೋಂನನ್ನು ಸಿಂಹಾಸನದಲ್ಲಿ ಕುಳ್ಳಿರಿಸಲು ಅನುವಾಗುತ್ತಿದ್ದ ಸೇನೆಯೊಡನೆ ಸೇರಿಕೊಂಡಿದ್ದನೆಂದೂ, ವರ್ತಮಾನ ಬಂತು. ಇದರಿಂದ ಮ್ಯಾಕ್‌ಬೆತ್‌ನ ಕ್ರೋಧಾಗ್ನಿಯು ಉಜ್ವಲವಾಯಿತು. ಅವನು ಮ್ಯಾಕ್‌ಡಫ್‌ನ ಭವನದಮೇಲೆ ನುಗ್ಗಿ, ಅವನ ಹೆಂಡತಿ ಮಕ್ಕಳನ್ನು ಸಂಹರಿಸಿದನು. ಈ ಕೃತ್ಯವು ಇಷ್ಟಕ್ಕೇ ನಿಲ್ಲದೆ, ಮ್ಯಾಕ್‌ಡಫ್‌ನ ಅತಿ ದೂರ ಬಂಧುಗಳವರೆಗೂ ವ್ಯಾಪಿಸಿತು.

ಇದರಿಂದಲೂ ಮತ್ತು ಇಂತಹ ಅನೇಕ ಇತರ ಕೃತ್ಯಗಳಿಂದಲೂ ರಾಜಸದಸ್ಯರು ಪರಿವಾರದವರು ಮೊದಲಾದವರಿಗೆ ಇವನಲ್ಲಿ ಜುಗುಪ್ಸೆಯು ಹುಟ್ಟಿತು. ಅನುಕೂಲವಿದ್ದವರು ಇಂಗ್ಲೆಂಡಿಗೆ ಓಡಿಹೋಗಿ, ಪ್ರಬಲತರವಾದ ಸೈನ್ಯದೊಡನೆ ಮುಂಬರಿಯುತ್ತಿದ್ದ ಮ್ಯಾಲ್‌ಕೋಂ ಮತ್ತು ಮ್ಯಾಕ್‌ಡಫ್‌ರ ಕಡೆ ಸೇರಿಕೊಂಡರು. ಅನುಕೂಲವಿಲ್ಲದವರು ಮ್ಯಾಕ್‌ಬೆತ್‌ಗೆ ಭೀತರಾಗಿ, ಹೊರಗೆ ಅವನಿಗಾಗಿ ಕಾದುವವರಂತೆ ಕಾಣಿಸಿಕೊಳ್ಳುತ್ತ ಅಂತರಂಗದಲ್ಲಿ, ಮ್ಯಾಲ್‌ಕೋಂ ಮ್ಯಾಕ್‌ಡಫ್‌ರ ಸೈನ್ಯಕ್ಕೆ ಜಯವಾಗಲೆಂದು ಹಾರೈಸುತ್ತಿದ್ದರು.

ಮ್ಯಾಕ್‌ಬೆತ್‌ನ ಸೇನಾಸನ್ನಾಹವು ಮಂದಗತಿಗೆ ಬಿದ್ದಿತು. ಈ ಕ್ರೂರಾಧಿಪತಿಯನ್ನು ಎಲ್ಲರೂ ಶಪಿಸತೊಡಗಿದರು. ಪ್ರತಿಯೊಬ್ಬರಿಗೂ ಇವನಲ್ಲಿ ಸಂಶಯವೇ. ಭಕ್ತಿಯೆಂಬುದು ಲೇಶವಾದರೂ ಇರಲಿಲ್ಲ. ಎಲ್ಲರೂ ಇವನ ಕ್ರೌರ್ಯಕ್ಕೆ ಹೆದರಿ ಮೇಲೆಮೇಲೆ ಮನ್ನಿಸುವರು. ಅವನ ಸ್ಥಿತಿಯು ಎಷ್ಟು ಶೋಚನೀಯವಾಯಿತೆಂದರೆ, ತಾನು ಕೈಯಾರ ದ್ರೋಹದಿಂದ ಕೊಂದ ಡಂಕನೇ ತನಗಿಂತ ಸುಖಿಯೆಂಬ ಹಾಗಾಯಿತು. ಏಕೆಂದರೆ, ಅವನು ಈಗ ಶಾಂತನಾಗಿ ಸಮಾಧಿಯಲ್ಲಿದ್ದನು ; ಆಯುಧವಾಗಲಿ, ಪಾಷಾಣವಾಗಲಿ, ಗೃಹಚ್ಛಿದ್ರವಾಗಲಿ, ಪರರಾಜ್ಯದ ಸೈನ್ಯವಾಗಲಿ, ಅವನಿಗೇನೂ ಉಪಹತಿಯನ್ನುಂಟುಮಾಡುವಂತಿರಲಿಲ್ಲ.

ಹೀಗಿರಲು, ಇವನ ದುರ್ವೃತ್ತಿಗಳಿಗೆಲ್ಲ ಮುಖ್ಯ ಭಾಗಿನಿಯೂ ಪ್ರೇರಕಳೂ ಆಗಿದ್ದ ಇವನ ಹೆಂಡತಿಯು ಮಡಿದಳು. ಇದುವರೆಗೆ ಅವನು ಅವಳಲ್ಲಿ ತನ್ನ ದೆಸೆಯನ್ನು ಹೇಳಿಕೊಳ್ಳುತ್ತ, ಪ್ರತಿರಾತ್ರಿಯೂ ಉಭಯತರೂ ಅನುಭವಿಸುತ್ತಿದ್ದ ಭಯಂಕರವಾದ ದುಸ್ವಪ್ನಗಳ ಸಂತಾಪವನ್ನು ಸ್ವಲ್ಪ ಶಮನಮಾಡಿಕೊಳ್ಳುತ್ತಿದ್ದನು. ಅವಳು ತನ್ನ ಅಪರಾಧಗಳ ದೆಸೆಯಿಂದ ಹುಟ್ಟಿದ ಸಂತಾಪದಿಂದಲೂ ಲೋಕನಿಂದೆಯಿಂದಲೂ ಮನನೊಂದು ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡಳೆಂದು ತೋರುತ್ತದೆ. ಅಂತು ಅವಳ ಮರಣದಿಂದ ಇವನನ್ನು ಪ್ರೀತಿಸುವಂತಹವರಾಗಲಿ, ಪೋಷಿಸುವಂತಹವರಾಗಲಿ, ದುರ್ಮಂತ್ರಗಳನ್ನು ಕೇಳುವಂತಹವರಾಗಲಿ ಯಾರೂ ಇಲ್ಲವಾಯಿತು.

ಆದ್ದರಿಂದ ಇವನಿಗೆ ತನ್ನ ಬಾಳಿನಲ್ಲಿ ಬೇಸರಿಕೆ ಹುಟ್ಟಿ ಸಾವು ಬಂದರೆ ಸಾಕೆನ್ನುವಹಾಗಾಯಿತು. ಆದರೂ ಮ್ಯಾಲ್‌ಕೋಂನ ಸೈನ್ಯವು ಸನ್ನಿಹಿತವಾಗುತ್ತಿದೆಯೆಂಬ ಮಾತನ್ನು ಕೇಳಿದುದರಿಂದ ಅವನ ಪೂರ್ವ ಪರಾಕ್ರಮವು ಮತ್ತೆ ಉತ್ತೇಜಿತವಾಯಿತು. ಆಗ ಅವನು "ಸಾಯುವುದಾದರೆ ಆಯುಧಪಾಣಿಯಾಗಿ ಕದನದಲ್ಲಿ ಕಾದಿ ಸಾಯುವೆನು" ಎಂದುಕೊಂಡನು. ಈ ಮಧ್ಯೆ ಆ ಮಾಟಗಾತಿಯರು ಹೇಳಿದ್ದ

"ಹೆಂಗಸಿನಿಂದ ಹುಟ್ಟಿ ಬಂದ ಯಾವನೂ ನಿನ್ನನ್ನು ಕೊಲ್ಲಲಾರನು" ಎಂಬ ಭರವಸೆಯ ಮಾತೂ, "ಬರ್ನಂ ಕಾಡು ಡನ್ಸಿನೇನ್ ಬೆಟ್ಟಕ್ಕೆ ಬಂದಲ್ಲದೆ ಭಯವಿಲ್ಲ"ವೆಂಬ ಭರವಸೆಯ ಮಾತೂ, ಅವನ ಮನಸ್ಸಿಗೆ ಧೈರ್ಯ ಕೊಡುತ್ತಿದ್ದುವು. ಅಂತು ಆ ಮಾತುಗಳಲ್ಲಿ ವೃಥಾ ನಂಬಿಕೆಯಿಟ್ಟು, ಅಭೇದ್ಯವಾದ ತನ್ನ ದುರ್ಗದಲ್ಲಿ ಅಡಗಿಕೊಂಡನು.

ಅಲ್ಲಿ ಅವನು ಸಿಡಿಮಿಡಿಗುಟ್ಟುತ್ತ, ತನ್ನ ಪ್ರತಿಕಕ್ಷಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದನು. ಹೀಗಿರಲು ಒಂದು ದಿನ ಒಬ್ಬ ದೂತನು ಭಯದಿಂದ ಗಡಗಡನೆ ನಡುಗುತ್ತ, ಬಿಳುಪೇರಿದ ಮುಖವುಳ್ಳವನಾಗಿ, ತಾನು ಕಂಡುದನ್ನು ಹೇಳುವುದಕ್ಕೂ ಕೈಲಾಗದೆ, ತಬ್ಬಿಬ್ಬಾಗಿ ಇವನೆದುರಿಗೆ ಬಂದು ನಿಂತನು. ಏನೆಂದು ಕೇಳಲು, ಆ ಆಳು ತಾನು ಬೆಟ್ಟದಮೇಲೆ ಕಾವಲುಕೊಡುವ ಮನೆಯ ಮೇಲ್ಭಾಗದಿಂದ ನೋಡುತ್ತಿರಲು, ಬರ್ನಂ ಕಾಡು ತನ್ನ ಕಡೆಗೆ ಬರುವುದಕ್ಕೆ ಆರಂಭವಾಯಿತೆಂದು ಹೇಳಿದನು. ಮ್ಯಾಕ್‌ಬೆತ್‌ನು ಅಪ್ರತಿಭನಾಗಿ "ಸುಳ್ಳುಗಳ್ಳು ಹೇಳಿಯೆ ಗುಲಾಮ! ನೀನೇನಾದರೂ ಸುಳ್ಳು ಹೇಳಿದ್ದರೆ ನಿನ್ನನ್ನು ಆ ಮರಕ್ಕೆ ನೇಣುಹಾಕಿಸುವೆನು. ನಿನ್ನ ಶರೀರವು ಅಲ್ಲಿಯೇ ಗಳಿತವಾಗಿ ಹೋಗುವ ವರೆಗೆ ಇರಬೇಕಾದೀತು. ನೀನು ಹೇಳಿದುದು ನಿಜವಾದರೆ ಚಿಂತೆಯಿಲ್ಲ.—ನನ್ನ ಅವಸ್ಥೆಯೂ ಅಲ್ಲಿಗೇ ಬಂದೀತು!" ಎಂದು ಹೇಳಿದನು. ಅವನ ಸಿದ್ಧಾಂತಗಳು ಈಗ ಸಡಿಲಿದುವು. ಆ ಭೂತಗಳು ಹೇಳಿದ ಮಾತುಗಳಿಗೆ ದ್ವಂದ್ವಾರ್ಥವುಂಟೋ ಎಂದು ಅವನು ಅನುಮಾನಪಡತೊಡಗಿದನು. ಬರ್ನಂ ಕಾಡು ಡನ್ಸಿನೇನ್ ಬೆಟ್ಟಕ್ಕೆ ಬರುವ ವರೆಗೆ ತನಗೆ ನಿರಪಾಯವೆಂದು ಇವನು ಧೈರ್ಯವಾಗಿದ್ದನು. ಇನ್ನೇನು? ಕಾಡು ಚಲಿಸುತ್ತಿರುವುದು! "ಇವನು ಹೇಳುವುದು ನಿಜವಾದರೆ, ಆಯುಧಪಾಣಿಯಾಗಿ ಹೊರಡುವೆನು. ಇಲ್ಲಿಂದ ಪಲಾಯನವಾಗುವುದಾಗಲಿ, ಇಲ್ಲಿಯೇ ಇರುವುದಾಗಲಿ, ಯಾವುದೂ ಸಾಧ್ಯವಲ್ಲ. ನನಗೆ ಪ್ರಪಂಚವು ಬೇಸರವನ್ನುಂಟುಮಾಡುತ್ತಿದೆ. ಈ ಜೀವಿತವು ಮುಗಿದರೆ ಸಾಕೆನ್ನಿಸುತ್ತಿದೆ" ಎಂದು ಅವನು ನಿರಾಶಾಪರ

ವಾದ ಮಾತುಗಳನ್ನು ಆಡಿಕೊಳ್ಳುತ್ತ, ಸೈನ್ಯಾಭಿಮುಖನಾದನು. ಆವೇಳೆಗೆ ಶತ್ರುಸೈನ್ಯವು ಇವನ ಭವನವನ್ನು ಸಮೀಪಿಸಿದ್ದಿತು.

ಅರಣ್ಯವು ಚಲಿಸುತ್ತಿರುವಂತೆ ಆ ದೂತನಿಗೆ ತೋರಬಂದ ಅಪೂರ್ವ ದೃಶ್ಯದ ಗುಟ್ಟು ಇಷ್ಟೇಯೆ:—ಮ್ಯಾಕ್‌ಬೆತ್‌ನ ಮೇಲೆ ದಂಡೆತ್ತಿ ಬರುತ್ತಿದ್ದ ಸೈನ್ಯವು ಆ ಕಾಡಿನಲ್ಲಿ ಬರುತ್ತಿರುವಾಗ್ಗೆ ಯುದ್ಧವಿದ್ಯಾ ನಿಪುಣನಾದ ದಳಪತಿ ಮ್ಯಾಲ್ಕೋಂನು ತನ್ನ ದಂಡಿನ ಪರಿಮಿತಿಯು ಶತ್ರುಪಕ್ಷದವರಿಗೆ ತಿಳಿಯದಂತೆ ಮಾಡುವುದಕ್ಕಾಗಿ ತನ್ನ ಕಡೆಯ ಪ್ರತಿಯೊಬ್ಬ ಯೋಧನೂ ಒಂದೊಂದು ಮರದ ಕೊಂಬೆಯನ್ನು ಕತ್ತರಿಸಿ ತನ್ನ ತನ್ನ ಮುಂದೆ ಹಿಡಿದುಕೊಂಡು ಹೋಗುವಂತೆ ಅಪ್ಪಣೆ ಮಾಡಿದ್ದನು. ಮರದ ಕೊಂಬೆಗಳ ಸಹಿತವಾಗಿ ನಡೆದು ಬರುತ್ತಿರುವ ಈ ಸೈನ್ಯವನ್ನು ದೂರದಿಂದ ನೋಡಿ ಆ ದೂತನು ಅರಣ್ಯವೇ ಬರುತ್ತಿದೆಯೆಂದು ಹೆದರಿದನು. ಈ ಪ್ರಕಾರವಾಗಿ ಆ ಭೂತವು ಹೇಳಿದ ಮಾತು ಒಂದು ರೀತಿಯಲ್ಲಿ ನಿಜವಾಯಿತು. ಇದರಿಂದ ಅವನ ಬಹು ಮುಖವಾದ ಭರವಸೆಗಳಲ್ಲಿ ಒಂದು ವಿಫಲವಾಯಿತು.

ತುಮುಲ ಯುದ್ಧಕ್ಕೆ ಮೊದಲಾಯಿತು. ಈ ಹೋರಾಟದಲ್ಲಿ ತನ್ನ ಸ್ನೇಹಿತರೆಂದು ಹೇಳಿಕೊಳ್ಳುತ್ತಿದ್ದವರಿಂದ ಕೂಡ ಮ್ಯಾಕ್‌ಬೆತ್‌ಗೆ ಸಹಾಯ ದೊರೆಯಲಿಲ್ಲ. ಅವರಿಗೆ ಈ ಕ್ರೂರಾಧಿಕಾರಿಯಲ್ಲಿ ದ್ವೇಷವು ನೆಲೆಗೊಂಡಿದ್ದುದು ಮಾತ್ರವಲ್ಲದೆ ಶತ್ರುಪಕ್ಷದವರಲ್ಲಿ ವಿಶ್ವಾಸವೂ ಇತ್ತು. ಆದರೂ ಮ್ಯಾಕ್‌ಬೆತ್‌ನು ಬಹಳ ಆಗ್ರಹದಿಂದಲೂ, ಪರಾಕ್ರಮದಿಂದಲೂ ಹೋರಾಡಿ, ತನ್ನ ವಿರೋಧಿಗಳಲ್ಲಿ ಆದಷ್ಟು ಮಂದಿಯನ್ನು ಕತ್ತರಿಸುತ್ತ ಬಂದನು. ಮ್ಯಾಕ್‌ಡಫ್‌ನನ್ನು ನೋಡುತ್ತಲೇ, ತನಗೆ ಆ ಭೂತವು "ಮ್ಯಾಕ್‌ಡಫ್‌ನ ವಿಚಾರದಲ್ಲಿ ಜಾಗರೂಕನಾಗಿರು" ಎಂದು ಹೇಳಿದ್ದ ಮಾತು ಜ್ಞಾಪಕಕ್ಕೆ ಬಂತು. ಆದುದರಿಂದ ಅವನೊಡನೆ ಯುದ್ಧಮಾಡದೆ ಹಿಂದಿರುಗುವುದರಲ್ಲಿದ್ದನು. ಆದರೆ ಆ ರಣರಂಗದಲ್ಲಿ ಇವನನ್ನೇ ಮ್ಯಾಕ್‌ಡಫ್‌ನು ಬಹಳ ಹೊತ್ತಿನಿಂದ ಹುಡುಕುತ್ತಿದ್ದನಾದುದರಿಂದ, ಅವನು ತನ್ನ ಪ್ರತಿಕಕ್ಷಿಯನ್ನು ಹಿಂದಿರುಗಬಿಡ

ಲಿಲ್ಲ. ನಿರಾಯುಧರಾದ ತನ್ನ ಸತಿಸುತರನ್ನು ಕೊಲೆಮಾಡಿದುದ ಕ್ಕಾಗಿ ಅವನನ್ನು ಬಹಳವಾಗಿ ಹೀಯಾಳಿಸಿ ನಿಂದಿಸಿದನು. ಆಗಲೂ ಅವನೊಡನೆ ಮ್ಯಾಕ್‌ಬೆತ್‌ನು ಯುದ್ಧಮಾಡುವಂತಿರಲಿಲ್ಲ. ಏಕೆಂದರೆ ಅವನು ಈಗಾಗಲೇ ಮ್ಯಾಕ್‌ಡಫ್‌ನ ಕುಟುಂಬದಲ್ಲಿ ಬಹುಜನರನ್ನು ಕೊಂದ ಪಾಪಕ್ಕೆ ಗುರಿಯಾಗಿದ್ದನು. ಆದ್ದರಿಂದ ಈಗ ಪ್ರಾಪ್ತವಾದ ದ್ವಂದ್ವಯುದ್ಧದಿಂದ ವಿಮುಖವಾಗುವುದರಲ್ಲಿ ಇದ್ದನು. ಆದರೆ ಮ್ಯಾಕ್‌ಡಫ್‌ನು ಬಿಡಲಿಲ್ಲ. ಅವನನ್ನು ಕ್ರೂರಿ, ಕೊಲೆಪಾತಕಿ, ನರಕದ ನಾಯಿಯೆಂದು ಬಯ್ಯುತ್ತ ದ್ವಂದ್ವಯುದ್ಧಕ್ಕೆ ನಿಂತೇ ನಿಲ್ಲು ವಂತೆ ಮಾಡಿದನು.

ಈಗ ಮ್ಯಾಕ್‌ಬೆತ್‌ನಿಗೆ ಭೂತವು ತನ್ನನ್ನು ಕುರಿತು "ಹೆಂಗ ಸಿನಿಂದ ಹುಟ್ಟಿ ಬಂದವನು ಯಾರೂ ನಿನ್ನನ್ನು ಕೊಲ್ಲಲಾರನು" ಎಂದು ಹೇಳಿದ ಮಾತು ಜ್ಞಾಪಕಕ್ಕೆ ಬಂದಿತು. ಆದ್ದರಿಂದ ಅವನು ಮ್ಯಾಕ್‌ಡಫ್‌ನನ್ನು ಕಂಡು ಮುಗುಳುನಗೆ ನಗುತ್ತ ಎಷ್ಟೋ ಭರವಸೆ ಯಿಂದ "ನೀನು ಮಾಡುತ್ತಿರುವುದು ನಿಷ್ಫಲವಾದ ಕಾರ್ಯ, ಮ್ಯಾಕ್ ಡಫ್! ನನ್ನನ್ನು ಕೊಲ್ಲುವುದಕ್ಕೆ ಪ್ರಯತ್ನ ಮಾಡುವುದು ಗಾಳಿ ಗುದ್ದಿ ಕೈನೋಯಿಸಿಕೊಳ್ಳುವಂಥ ಕೆಲಸ! ಹೆಂಗಸಿನಿಂದ ಹುಟ್ಟಿಬಂದ ವನಾರೂ ನನ್ನನ್ನು ಕೊಲ್ಲಲಾರನೆಂದು ನನಗೆ ವರವಿದೆ" ಎಂದನು.

ಮ್ಯಾಕ್‌ಡಫ್:—ನಿನ್ನ ವರವನ್ನು ಸುಡು. ನೀನು ಆರಾಧಿ ಸುವ ಅನೃತವಾದಿಗಳಾದ ಆ ಭೂತಗಳನ್ನು ಕೇಳು. "ಮ್ಯಾಕ್ ಡಫ್‌ನು ಎಲ್ಲರಂತೆ ಹುಟ್ಟಲಿಲ್ಲ; ಅಕಾಲದಲ್ಲಿ ಹುಟ್ಟಿದನು ಎಂದು ಅವುಗಳೇ ಹೇಳುವುವು" ಎಂದನು. ಮ್ಯಾಕ್‌ಬೆತ್‌ಗೆ ಇದ್ದ ಕೊನೆಯ ಭರವಸೆಯೂ ನೀರಾಯಿತು. ಅವನು ಕಂಪಿಸುತ್ತ "ನನಗೆ ಹೀಗೆಂದು ಹೇಳುವ ನಾಲಗೆ ಸೇದಿಹೋಗಲಿ! ಇನ್ನುಮುಂದೆ ದ್ವಂದ್ವಾರ್ಥದ ಮಾತುಗಳನ್ನಾಡುವ ಮಂತ್ರಗಾತಿಯರಿಗೂ, ತಂತ್ರಿ ಗಳಾದ ಭೂತಗಳಿಗೂ ಯಾರೂ ಮರುಳಾಗದಿರಲಿ! ಅವರು ದ್ವಂದ್ವಾ ರ್ಥವುಳ್ಳ ಮಾತುಗಳನ್ನು ಆಡಿ, ಒಂದರ್ಥದಿಂದ ಆಶೆತೋರಿ ಮತ್ತೊಂ

ದರ್ಪದಿಂದ ಭಂಗಗೊಳಿಸುವರು. ಮ್ಯಾಕ್‌ಡಫ್! ನಾನು ನಿನ್ನೊಡನೆ ಯುದ್ಧಮಾಡುವುದಿಲ್ಲ'' ಎಂದನು.

ಮ್ಯಾಕ್‌ಡಫ್:—ಹಾಗಾದರೆ ಬದುಕಿರು. ಹುಲಿ ಸಿಂಹಗಳನ್ನು ಹಿಡಿದಿಟ್ಟು ತೋರಿಸುವಂತೆ "ಇಲ್ಲಿ ಕ್ರೂರಾವತಾರಿಯಾದ ಮನುಷ್ಯನನ್ನು ನೋಡಬಹುದು,'' ಎಂದು ಹಲಗೆಯ ಮೇಲೆ ಬಣ್ಣಗಳಿಂದ ಬರೆಯಿಸಿ ನಿನ್ನನ್ನು ತೋರಿಸುವೆವು.

ಈ ಮಾತನ್ನು ಕೇಳಿ ಮ್ಯಾಕ್‌ಬೆತ್‌ಗೆ ನಿರಾಶೆಯೂ ಧೈರ್ಯವೂ ಏಕಕಾಲದಲ್ಲಿ ಬಂದುವು. ಆದ್ದರಿಂದ ಅವನು "ಅದು ಎಂದಿಗೂ ಆಗದು! ಆ ಪೋರ ಮ್ಯಾಲ್ಕೋಂನ ಕಾಲಮೇಲೆ ಬಿದ್ದು ಜನರಿಂದ ಬೈಗಳು ತಿನ್ನುವುದಕ್ಕೋಸ್ಕರ ಬದುಕಿರಲೇ? ಎಂದಿಗೂ ಆಗದು! ಬರ್ನಂ ಕಾಡು ಡನ್ಸಿನೇನಿಗೆ ಬಂದರೂ ಹೆಂಗಸಿನಿಂದ ಹುಟ್ಟಿಬಾರದ ನೀನು ನನ್ನ ಮೇಲೆ ಯುದ್ಧಕ್ಕೆ ನಿಂತಿದ್ದರೂ ಕಡೆಯವರೆಗೆ ನಾನು ಮಾಡುವುದನ್ನು ಮಾಡಿನೋಡಿಯೇ ಬಿಡುತ್ತೇನೆ'' ಹೀಗೆಂದು ಹುಚ್ಚುಹುಚ್ಚಾಗಿ ಮಾತನಾಡುತ್ತ, ಮ್ಯಾಕ್‌ಬೆತ್‌ನು ತನ್ನ ಪ್ರತಿಕಕ್ಷಿಯ ಮೇಲೆ ಬಿದ್ದನು. ಇಬ್ಬರೂ ಭಯಂಕರವಾಗಿ ಕಾದಾಡಿದರು. ಕೊನೆಗೆ ಮ್ಯಾಕ್‌ಡಫ್‌ನ ಕೈ ಮೇಲಾಯಿತು. ಅವನು ಶತ್ರುವಿನ ತಲೆಯನ್ನು ತರಿದು ರಾಜಕುವರನಾದ ಮ್ಯಾಲ್‌ಕೋಂಗೆ ಒಪ್ಪಿಸಿದನು. ಆತನು ಆ ರಾಜ್ಯಾಪಹಾರಿಯ ಭೇದೋಪಾಯಗಳಿಂದ ತಾನು ಈವರೆಗೆ ಕಳೆದುಕೊಂಡಿದ್ದ ಪ್ರಭುತ್ವವನ್ನು ಮತ್ತೆ ಪಡೆದು, ಪ್ರಜೆಗಳೂ ಪರಿವಾರದ ಶ್ರೀಮಂತರೂ ಸಂತೋಷಾತಿಶಯದಿಂದ ಜಯಧ್ವನಿಗೆಯ್ಯುತ್ತಿರಲು, ತನ್ನ ತಂದೆಯ ಸಿಂಹಾಸನವನ್ನೇರಿ ಚಿರಕಾಲ ಧರ್ಮದಿಂದ ಪ್ರಜಾಪರಿಪಾಲನೆ ಮಾಡುತ್ತಿದ್ದನು.

ಬಂದನಾ ಹುಲಿರಾಯನು

ರಂಗಯ್ಯ ಆ ದಿನ ಮರಸಿಗೆ ಹೊರಟಾಗ ಜೈಗಾಗಿತ್ತು. ಮೊನ್ನೆ ಹರಟುತ್ತಿದ್ದಾಗ ನಿಮಗೆ ಮರಸುಬೇಟೆಯ ವಿಚಾರವಾಗಿ ಒಂದೆರಡು ಮಾತು ಹೇಳಿದ್ದೆ. ನಿಮಗೆ ನೆನಪಿರಬಹುದು. ಇಂದು ಸ್ವಲ್ಪ ವಿಶದ ವಾಗಿ ಹೇಳುತ್ತೇನೆ.

ಮರಸುಬೇಟೆ ಎಂದರೆ ಮೃಗಗಳಿಗಾಗಿ ಒಂದೆಡೆ ಕುಳಿತು ಕಾಯುವುದು. ಬೇಟೆಗಾರನು ಕೆಲವು ಸಾರಿ ಮರಗಳ ಮೇಲೆ ಕೂ ರುತ್ತಾನೆ. ಇನ್ನು ಕೆಲವು ಸಾರಿ ನೆಲದಮೇಲೆಯೇ ಪೊದೆಗಳ ನಡುವೆ ಮರೆಮಾಡಿಕೊಂಡು ಕೂತು ಪ್ರಾಣಿಗಳು ಬರುವುದನ್ನೇ ಜಾಗರೂ ಕತೆಯಿಂದ ಪರೀಕ್ಷಿಸುತ್ತಾನೆ. ಮರಸುಬೇಟೆಗೆ ತಕ್ಕಸಮಯ ಎಂದರೆ ಪ್ರಾತಃಕಾಲ, ಸಂಧ್ಯಾಕಾಲ, ಬೆಳ್ದಿಂಗಳು ರಾತ್ರಿ. ಪ್ರಾಣಿ ಗಳು ಸಂಜೆಯಾಗಲು ಅರಣ್ಯದ ಮಧ್ಯದಿಂದ ಇಳಿಯಲು ತೊಡಗು ವುವು. ಏಕೆಂದರೆ ಕಣಿವೆಗಳಲ್ಲಿ, ಗದ್ದೆಗಳಲ್ಲಿ ಅವುಗಳಿಗೆ ಮೇವು ಸಿಕ್ಕು ವುದು ಸುಲಭ. ಹಂದಿ, ಕಾಡುಕುರಿ, ಜಿಂಕೆ ಮೊದಲಾದ ಪ್ರಾಣಿ ಗಳು ಪೈರಿಗೆ ಮಾರಿಗಳು. ಬೇಟೆಗಾರರು ಜೀವಿಗಳು ಇಳಿದುಬರುವ ಮಾರ್ಗಗಳನ್ನು ಅನುಭವದಿಂದಲೋ ಅಥವಾ ಐತಿಹ್ಯದಿಂದಲೋ ಅರಿತು ಅಂತಹ ಕಂಡಿಗಳನ್ನು ಕಾಯುವರು. ಆದ್ದರಿಂದ ಕಾಡಿನಿಂದ ಕೆಳಗಿಳಿವ ಪ್ರಾಣಿಗಳನ್ನು ಹೊಡೆಯಬೇಕಾದರೆ ಸಾಯಂಕಾಲವು ಸುಸಮಯ. ಹಾಗೆ ಇಳಿದ ಪ್ರಾಣಿಗಳು ರಾತ್ರಿಯೆಲ್ಲ ಗದ್ದೆಗಳನ್ನೋ, ತೋಟಗಳನ್ನೋ ಲೂಟಿಮಾಡಿ ಉಷಃಕಾಲಕ್ಕೆ ಸರಿಯಾಗಿ ಪುನಃ ಅರಣ್ಯಾಭಿಮುಖವಾಗಿ ಮೇಲೇರುವುವು. ಆದ್ದರಿಂದ ಬಯಲಿನಿಂದ ಮೇಲೇರುವ ಜೀವಾದಿಗಳನ್ನು ಸುಡಬೇಕಾದರೆ ಬೆಳಗಿನ ಜಾವವು ಪ್ರಶಸ್ತವಾದುದು. ಇನ್ನು ಕಾಡಿನಲ್ಲಿ ಹಣ್ಣಿನ ಮರಗಳಿದ್ದರೆ

ಅಲ್ಲಿಯೂ ಕೂಡ ಪ್ರಾಣಿಗಳನ್ನು ಎದುರುಗೊಳ್ಳುವುದು ಸುಲಭ. ವಿಶೇಷವಾಗಿ ಅವು ಹಣ್ಣಿನ ಮರಗಳಿಗೆ ಬರುವುದು ಬೆಳಿಗ್ಗೆ ಎಂಟು ಗಂಟೆಯ ಒಳಗೆ, ಅಥವಾ ಸಾಯಂಕಾಲ ಐದು ಗಂಟೆಯ ಮೇಲೆ. ಬೆಳ್ದಿಂಗಳ ರಾತ್ರಿಯಲ್ಲಿ ರಾತ್ರಿ ಎಷ್ಟು ಹೊತ್ತಿಗಾದರೂ ಬರಬಹುದು. ನಾನು ಹಿಂದೆ ನಿಮಗೆ ಕಾಡಿನಲ್ಲಿ ಕಳೆದ ಒಂದಿರುಳಿನ ಅನುಭವವನ್ನು ಹೇಳಿದ್ದೇನೆ. ಅದನ್ನು ಮರೆತಿರಲಾರಿರಿ. ಮರೆತಿದ್ದರೆ ಮರಳಿ ಓದಿ ನೋಡಿ.

ಮಲೆನಾಡಿನ ಕಾಡುಗಳಲ್ಲಿ ಹಣ್ಣಿನ ಮರಗಳಿಗೆ ಬರಗಾಲವಿಲ್ಲ. ಅದರಲ್ಲಿಯೂ ವಸಂತಋತುವಿನಲ್ಲಿ ಕೇಳಬೇಕಾದುದೇ ಇಲ್ಲ. ಎಲ್ಲಿ ನೋಡಿದರೂ ಹಣ್ಣು! ಎತ್ತ ನೋಡಿದರೂ ಹೂವು! ಕಾಡಿಗೆ ಹಣ್ಣು ಹೂವುಗಳ ಹುಚ್ಚು ಹಿಡಿದುಹೋಗಿರುವಂತೆ ತೋರುವುದು. ಕಾಡು ಮಾವಿನ ಮರದ ಹಣ್ಣು, ನೇರಿಲಹಣ್ಣು, ಸೂಣೆಹಣ್ಣು, ಕಲ್ಲು ಸಂಪಗೆ ಹಣ್ಣು, ಕಣಗಿಲು ಹಣ್ಣು. ಗೋಳಮುಟೆ ಹಣ್ಣು, ಇಪ್ಪೆ ಹಣ್ಣು, ಹೆಬ್ಬಲಸಿನ ಹಣ್ಣು, ಹಲಸಿನ ಹಣ್ಣು ಇವೇ ಮೊದಲಾದ ಹಣ್ಣುಗಳು ಸೂರೆಹೋಗಿರುವುವು. ನೀವು ಒಂದು ಪ್ರಶ್ನೆ ಹಾಕಬಹುದು. ಏನೆಂದರೆ, ಕಾಡಿನಲ್ಲಿ ತುಂಬಾ ಜಂತುಗಳಿದ್ದರೆ ಯಾವಯಾವ ಮರಗಳಿಗೆ ಯಾವ ಯಾವ ಜಂತುಗಳು ಯಾವಾಗ ಬರುತ್ತವೆ? ಬೇಟೆಗಾರರಿಗೆ ಈ ಪ್ರಶ್ನೆ ಅಷ್ಟೇನೂ ಗಹನವಾದುದಲ್ಲ. ಎಲ್ಲ ಮಾವಿನ ಮರದ ಹಣ್ಣುಗಳಿಗೂ ಒಂದೇ ತರದ ರುಚಿಯಿರುವುದಿಲ್ಲ. ಆದ್ದರಿಂದ ಪ್ರಾಣಿಗಳು ರುಚಿಯಿರುವ ಹಣ್ಣಿನ ಮರಗಳಿಗೇ ಬರುವುವು. ನಾನೇ ಎಷ್ಟೋ ಕಾಡುಮಾವಿನ ಮರಗಳ ಹಣ್ಣುಗಳನ್ನು ತಿಂದು ನೋಡಿದ್ದೇನೆ. ಕೆಲವು ಹುಳಿ ಹೆಚ್ಚು. ಕೆಲವು ಸಿಹಿ ಹೆಚ್ಚು. ಕೆಲವು ಒಗರು. ಕೆಲವು ಸಪ್ಪೆ. ಹಣ್ಣಿನ ರುಚಿಯೊಂದೇ ಅಲ್ಲ, ಮರಗಳಿರುವ ಸ್ಥಾನವನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕು. ಸಾಧಾರಣವಾಗಿ ಮೃಗಗಳು ಕಾಡಿನ ತುಂಬಾ ವಾಸಮಾಡುವುದಿಲ್ಲ. ಅವುಗಳಿಗೂ ಕೂಡ ನಿಯತಸ್ಥಾನಗಳಿರುವುವು; ಹಕ್ಕಿಗಳಿರುವುವು. ಹಕ್ಕಿಗಳಿಗೆ

ಸಮೀಪವಾಗಿ, ಹಣ್ಣು ರುಚಿಯಾಗಿ, ಸ್ಥಳವು ನಿರ್ಜನವಾಗಿ, ಜೀವಿಗಳು ತಿರುಗಾಡುವ ಕಂಡಿಗಳಲ್ಲಿರುವ ಮರಗಳಿಗೆ ಪ್ರಾಣಿಗಳು ಬಂದೇ ಬರುವುವು. ಅಂತಹ ಜಾಗಗಳಲ್ಲಿಯೇ ಬೇಟೆಗಾರರು ಮರಸು ಕೂರುವರು.

ರಂಗಯ್ಯ ಆ ದಿನ ಮರಸಿಗೆ ಹೋದುದು ಹಣ್ಣಿನ ಮರಕ್ಕಲ್ಲ, ಪೈರಿನ ಕಂಪುಗಾಳಿಗೆ ಮೋಹಗೊಂಡು ಪ್ರಾಣಿಗಳು ಬೆಟ್ಟದಿಂದ ಇಳಿದು ಬರುವ ಕಂಡಿಯೊಂದನ್ನು ಕಾಯುವುದಕ್ಕೆ. ಅವನು ಮನೆಯಿಂದ ಹೊರಟಾಗ ಆಗಲೇ ಸಾಯಂಕಾಲವಾಗುತ್ತಿತ್ತು. ಕೇಪಿನ ಕೋವಿಯೊಂದನ್ನು ಹೆಗಲಮೇಲೆ ಹೇರಿಕೊಂಡು, ಕಂಬಳಿಯನ್ನು ಹೊದೆದುಕೊಂಡು, ಎಲೆಯಡಕೆ ಚೀಲವನ್ನೂ ಕೋವಿಯ ಚೀಲವನ್ನೂ ಬಗಲಿಗೆ ಸಿಕ್ಕಿಸಿಕೊಂಡು ಬೆಟ್ಟವೇರಿದನು. ನಾಲ್ಕೈದು ಕಂಡಿಗಳನ್ನು ಪರೀಕ್ಷೆಮಾಡಿ ಕಡೆಗೆ ಒಂದುಕಡೆ ಮರಸು ಕೂರಲು ನಿರ್ಧರಿಸಿದನು. ಪೊದೆಗಳ ನಡುವೆ ತನ್ನ ಕತ್ತಿಯಿಂದ ಕಡಿದು ಕೂರಲು ಜಾಗಮಾಡಿ, ಸುತ್ತಲೂ ಹಸುರು ಕೊಂಬೆಗಳನ್ನು ಕಡಿದು ಒಡ್ಡುಹಾಕಿ ಮರೆಮಾಡಿಕೊಂಡು ಕೂತನು. ಕಂಬಳಿಯ ಅರ್ಧಭಾಗವನ್ನು ನೆಲದಮೇಲೆ ಹಾಸಿದ್ದನು. ಉಳಿದ ಅರ್ಧಭಾಗವನ್ನು ಸೊಂಟದವರೆಗೂ ಮುಚ್ಚಿದ್ದನು. ಸಂಜೆಗೆಂಪು ಮೆಲುಮೆಲನೆ ಜಾರುತ್ತಿತ್ತು. ಬೈಗುಗಪ್ಪು ಇಳಿಯುತ್ತಿತ್ತು. ಹಕ್ಕಿಗಳ ಕೂಗಾಟವು ಬರಬರುತ್ತ ಕಡಿಮೆಯಾಗುತ್ತಿತ್ತು. ವನ್ಯಕ್ರಿಮಿಕೀಟಗಳ ಅಸ್ಪಷ್ಟ ಅನಾಹತ ಧ್ವನಿಯು ವಾಯುಮಂಡಲವನ್ನೆಲ್ಲ ಗಂಭೀರವಾಗಿ ತುಂಬಿತ್ತು. ಆದರೂ ಆ ಸದ್ದಿನಿಂದ ವನದ ಮೌನಕ್ಕೆ ಭಂಗ ಬಂದಂತೆ ತೋರುತ್ತಿರಲಿಲ್ಲ. ಭೀಮಾಕಾರವಾದ ವೃಕ್ಷಗಳು ಸ್ತೂಪಾಕಾರವಾಗಿ ಮೇಲೆದ್ದು ನಿಬಿಡ ಪರ್ಣವಿತಾನಗಳಿಂದ ಆಕಾಶಮಂಡಲವನ್ನು ಆಚ್ಛಾದಿಸಿದ್ದುವು. ಎಂದಿನಂತೆ ಬನಗತ್ತಲು ಮುಸುಗಿತ್ತು. ಹೆಮ್ಮರಗಳ ನಡುನಡುವೆ ಕ್ಷುದ್ರ ತರುಗುಲ್ಮಲತಾದಿಗಳು ಒಂದನ್ನೊಂದು ಹೆಣೆದುಕೊಂಡಿದ್ದುವು. ಎಲ್ಲಿಯೋ ಒಂದೊಂದು ಎಡೆ ಮಾತ್ರ ಸ್ವಲ್ಪ ಬಿಡುವಿದ್ದಿತು. ಅಂತಹ

ಸ್ಥಳಗಳಲ್ಲಿಯೇ ಪ್ರಾಣಿಗಳು ಗುರಿಗೆ ಸಿಕ್ಕಿಬೀಳುವುದು.

ರಂಗಯ್ಯ ಕುಳಿತನು. ಸ್ವಲ್ಪಹೊತ್ತು ಕೋವಿಯನ್ನು ಕೈಯಲ್ಲಿ ಹಿಡಿದುಕೊಂಡು ದಿಕ್ಕು ದಿಕ್ಕುಗಳನ್ನು ನೋಡಿದನು. ತರುವಾಯ ಕೋವಿಯನ್ನು ತೊಡೆಯಮೇಲಿಟ್ಟುಕೊಂಡು ಕುಳಿತನು. ಸುತ್ತಲೂ ವೀಣಾವಾದ್ಯ ಧ್ವನಿಗೈಯುತ್ತ ಸೊಳ್ಳೆಗಳು ಹಾರಾಡಿ ಕಡಿಯುತ್ತಿದ್ದುವು. ಅವುಗಳನ್ನು ಸದ್ದುಮಾಡದಂತೆ ಅಟ್ಟುತ್ತ ಕುಳಿತನು. ಮರಸಿಗೆ ಕೂತವರು ಅಲ್ಲಾಡಬಾರದು. ಅಷ್ಟೇ ಏಕೆ, ಗಟ್ಟಿಯಾಗಿ ಉಸಿರಾಡಬಾರದು. ಮೈ ಕೆರೆದುಕೊಂಡರೂ ಕೂಡ ಆ ವನಮೌನದಲ್ಲಿ ಸದ್ದಾಗಿ ಜೀವಿಗಳು ಎಚ್ಚರಗೊಂಡು ಬಂದ ಹಾದಿಯಿಂದ ಹಿಂತಿರುಗುವುವು. ಮೈಮೇಲೆ ಕುಳಿತು ರಕ್ತಹೀರುವ ಸೊಳ್ಳೆಗಳನ್ನು ಕೈಯಿಂದ ತಟ್ಟಿದರೆ ಚಪ್ಪಾಳೆ ಹೊಡೆದ ಸದ್ದಾಗುವುದು. ಆದ್ದರಿಂದ ಒಳ್ಳೆಯ ಸತ್ಯಾಗ್ರಹಿಗಳಂತೆ ಅವುಗಳೇನು ಮಾಡಿದರೂ ಎಷ್ಟು ನೆತ್ತರು ಹೀರಿದರೂ 'ಕಂ ಕಿಂ' ಎನ್ನದೆ ಕೂತಿರಬೇಕು. ಅಟ್ಟಿದರೆ ಮೆಲ್ಲಗೆ ಕೈಯಲ್ಲಾಡಿಸಿ ಅಟ್ಟಬೇಕು. ಮರಸಿಗೆ ಕೂರುವುದೆಂದರೆ ಒಂದು ತಪಸ್ಸೇ ಸರಿ. ಅದನ್ನು ಅನುಭವಿಸಿ ನೋಡಬೇಕು. ಆ ಹಾಳು * ನುಸಿಗಳೂಕೂಡ ಅದನ್ನೇ ಸಮಯವೆಂದು ತಿಳಿದು ತಂಡೋಪತಂಡವಾಗಿ ಬಂದು ತಮ್ಮ ರಕ್ತಶೋಷಕ ಕರಾಳ ದಂಷ್ಟ್ರಗಳನ್ನು ಬಲವಾಗಿ ಊರಿ ಫಜೀತಿ ಪಡಿಸುವುವು. ಅವುಗಳಿಗೆ ಯಾರು ತಂತಿ ಕೊಡುತ್ತಾರೋ ಏನೋ! ಜನರಿಲ್ಲ; ಮಾತಿಲ್ಲ; ಕಾಯುವ ಕೆಲಸವಲ್ಲದೆ ಬೇರೆ ಕೆಲಸವಿಲ್ಲ; ನಿಶ್ಶಬ್ದ; ಸುತ್ತಲೂ ಹೆಗ್ಗಾಡು 'ಬೆಕೋ' ಎನ್ನುತ್ತಿರುವುದು; ವನ್ಯಕ್ರಿಮಿಕೀಟಗಳ ಮ್ಲಾನಕರವಾದ ವಿಕಟನಿರ್ಘೋಷ; ದೀರ್ಘ ನಿರೀಕ್ಷೆಯ ನಿರ್ವಿಣ್ಣತೆ; ಇವುಗಳ ಜೊತೆಗೆ ಹಾಳು ನುಸಿಗಳ ಯಮಕಾಟ! ಬಲ್ಲವನೆ ಬಲ್ಲ ಬೆಲ್ಲದ ಸವಿಯ! ಅಂತೂ ಬೆಲ್ಲವನ್ನು ಸವಿಯುತ್ತ ಕುಳಿತಿದ್ದನು ರಂಗಯ್ಯ!

---

* ನಮ್ಮ ಕಡೆ ಸೊಳ್ಳೆಗೆ 'ನುಸಿ' ಎನ್ನುತ್ತಾರೆ.

ರಂಗಯ್ಯ ಕುಳಿತಿದ್ದ. ಎಷ್ಟು ಹೊತ್ತು ತಾನೇ ಚಲಿಸದೆ ಸುಮ್ಮನೆ ಕುಳಿತಾನು ? ಅದರಲ್ಲಿಯೂ ಮೂರು ಹೊತ್ತೂ ಎಲೆಯಡಿಕೆ ಜಗಿಯುತ್ತಲೇ ಇರುವ ಮಹಾನುಭಾವ ಎಷ್ಟೆಂದು ಸುಮ್ಮನಿದ್ದಾನು ? ಅತ್ತ ಇತ್ತ ದೃಷ್ಟಿಸಿ ನೋಡುತ್ತ ಸ್ವಲ್ಪ ಸಮಯ ಕಳೆಯಿತು. ಆಮೇಲೆ ಆಕಳಿಕೆಗೆ ಪ್ರಾರಂಭವಾಯಿತು. ಕಡೆಗೆ ತೊಡೆಯ ಮೇಲೆ ಅಡ್ಡಲಾಗಿ ಮಲಗಿದ್ದ ಕೋವಿಯನ್ನು ಮೆಲ್ಲಗೆ ತೆಗೆದೆತ್ತಿ ನೆಲದಮೇಲಿಟ್ಟು, ಬಗಲಿನಿಂದ ಎಲೆಯಡಕೆ ಚೀಲವನ್ನು ತೆಗೆದು ವೀಳ್ಯ ಸವಿಯಲು ಪ್ರಾರಂಭಿಸಿದನು. ಕಾಲಹರಣಮಾಡಲು ಎಲೆಯಡಕೆಯು ಬಹಳ ಸಹಾಯಮಾಡುತ್ತದೆ. ಇಷ್ಟ ಬಂದರೆ ಅದನ್ನು ಒಂದೆರಡು ನಿಮಿಷಗಳಲ್ಲಿ ಪೂರೈಸಿಬಿಡಬಹುದು. ಬೇಕಾದರೆ ಕಾಲು ಗಂಟೆ ಅರ್ಧಗಂಟೆಗಳನ್ನು ಸಹ ಕಳೆದುಬಿಡಬಹುದು. ಮಲೆನಾಡಿನಲ್ಲಿ ಬಾಲ್ಯ ಕಳೆದುದಕ್ಕೆ ಎಲೆಯಡಕೆ ಹಾಕಿಕೊಳ್ಳುವುದು ಒಂದು ಚಿಹ್ನೆ. ಎಂದಮೇಲೆ ಹೊರತಿಲ್ಲದೆ ದೊಡ್ಡವರೆಲ್ಲ ಎಲೆಯಡಕೆ ಹಾಕಿಕೊಳ್ಳುವರು. ಅದರಲ್ಲಿಯೂ ಮರಸುಬೇಟೆಗೆ ಹೋಗುವವರಿಗೆ ಏನಾದರೂ ಒಂದು ಚಾಳಿ ಇದ್ದೇ ಇರಬೇಕು. ಎಲೆಯಡಕೆ ಹಾಕಿಕೊಳ್ಳುವವರು ಕೆಲರು, ನಶ್ಯ ಹಾಕಿಕೊಳ್ಳುವವರು ಕೆಲರು. ಅದರಲ್ಲಿಯೂ ಮುಡ್ಡಿ ನಶ್ಯ—ನಮ್ಮಕಡೆ ಉಂಡೆ ನಶ್ಯವನ್ನು ಮುಡ್ಡಿನಶ್ಯ ಎನ್ನುತ್ತಾರೆ—ಮುಡ್ಡಿ ನಶ್ಯವನ್ನು ಮೂಗಿಗೇರಿಸುವುದರಲ್ಲಿ ಬಹಳ ಹೊತ್ತು ಕಳೆಯಬಹುದು.—ಅಂಗೈಗೆ ಸುಣ್ಣಹಚ್ಚುವುದು ; ಹಚ್ಚಿದ ಸುಣ್ಣವನ್ನು ಬಾಯಲ್ಲಿ ಊದಿ ನೀರು ಆರಿಸುವುದು ; ಹಚ್ಚಿದ್ದು ದಪ್ಪವಾಯ್ತೊ ಏನೋ ಎಂದು ನೋಡುವುದು ; ನಶ್ಯದ ಡಬ್ಬಿ ತೆಗೆಯುವುದು ; ನಶ್ಯವನ್ನು ಸಣ್ಣದಾಗಿ ಉಂಡೆಕಟ್ಟಿ ಪ್ರಮಾಣನಿರ್ಣಯಮಾಡುವುದು ; ಅದನ್ನು ಅಂಗೈ ಮೇಲೆ ಹಾಕಿಕೊಂಡು ಅದೊಂದು ಠೀವಿಯಿಂದ ತಿಕ್ಕುವುದು. ಹೀಗೆಲ್ಲ ಒಟ್ಟು, ಮುಡ್ಡಿ ನಶ್ಯದಿಂದ ಕಾಲಹನನವನ್ನು ಹೆಚ್ಚಾಗಿ ಮಾಡಬಹುದು. ಆದರೆ ಸಾಧಾರಣವಾಗಿ ಮರಸಿಗೆ ಕೂತಾಗ ನಶ್ಯತಿಕ್ಕುವುದು ಕಡಿಮೆ. ಏಕೆಂದರೆ, ಒಂದು

ವೇಳೆ ಬೇಟೆಗಾರರು ಸುಣ್ಣಹಚ್ಚಿ, ನಶ್ಯದುಂಡೆ ಕಟ್ಟಿ, ತಿಕ್ಕಲು ಪ್ರಾರಂಭಿಸಿ, ಅರೆದೂರ ಹೋದಾಗಲೇ ಯಾವುದಾದರೊಂದು ಪ್ರಾಣಿಯು ಓಡುತ್ತ ಬಂದುಬಿಟ್ಟರೆ! ಆದ್ದರಿಂದ ಮನೆಯಲ್ಲಿಯೇ ನಶ್ಯತಿಕ್ಕಿ ಚಿಟಿಕೆ ಕಟ್ಟಿ ತೆಗೆದುಕೊಂಡು ಹೋಗುತ್ತಾರೆ. ನಶ್ಯ ಎಲೆಯಡಿಕೆಗಳನ್ನು ಮರಸಿಗೆ ಕೂತಾಗ ಉಪಯೋಗಿಸಬಹುದು; ಆದರೆ ಬೀಡಿ ಸಿಗರೇಟು ಮದ್ಯಗಳನ್ನು ಖಂಡಿತ ಉಪಯೋಗಿಸಬಾರದು. ಬೀಡಿ ಸಿಗರೇಟು ಹತ್ತಿಸಿದರೆ ಹೊಗೆಯೆದ್ದು, ಪ್ರಾಣಿಗಳಂತಿರಲಿ, ಸೊಳ್ಳೆಗಳು ಕೂಡ ಸಮೀಪಕ್ಕೆ ಬರುವುದಿಲ್ಲ. ಮದ್ಯಪಾನ ಮಾಡಿದರೆ ಗೊತ್ತೇ ಇದೆ!

ಚೀಲದಿಂದ ಹತ್ತೆಂಟು ಅಡಕೆಗಳನ್ನು ತೆಗೆದು ಹಸನಾದುದನ್ನು ನಿದಾನವಾಗಿ ಆರಿಸಿದನು. ಆಯ್ದ ಮೇಲೆ ಅದನ್ನು ಒಂದು ಸಾರಿ ಪದ್ಧತಿಯಂತೆ 'ಉಫ್' ಎಂದು ಮೆಲ್ಲಗೆ ಊದಿ ಬಾಯಿಗೆ ಎಸೆದುಕೊಂಡನು. ಆದಷ್ಟು ಪ್ರಯತ್ನದಿಂದ ಸದ್ದಾಗದಂತೆ ಅದನ್ನು ಕಡಿಯತೊಡಗಿದನು. ತರುವಾಯ ಎಲೆಗಳನ್ನು ತೆಗೆದು, ಒಂದನ್ನು ಮರಿಸಿ, ಅದನ್ನು ಚೆನ್ನಾಗಿ ಹಿಂಗೈಯಿಂದ ನೀವಿ ಒರಸಿ, ಸಂಪ್ರದಾಯದಂತೆ ಶಿರವನ್ನು ತುಂಡುಮಾಡಿ, ಸುಣ್ಣದ ಡಬ್ಬಿಯಿಂದ ಸುಣ್ಣವನ್ನು ತೆಗೆದು ಬಳಿದು, ನಿದಾನವಾಗಿ ಎಲೆಯನ್ನು ಮಡಿಸಿ ಆಲೆಯಕಣೆಗೆ (ಕಬ್ಬಿನ ಗಾಣಕ್ಕೆ) ಕಬ್ಬನ್ನು ಕೊಡುವಂತೆ ಬಾಯಮೂಲೆಯಿಂದ ಎಲೆಯನ್ನು ಒಳಗೆ ತೂರಿಸಿದನು. ಆಮೇಲೆ ಹೊಗೆ ಸೊಪ್ಪನ್ನು ತೆಗೆದು ಅಂಗೈಮೇಲೆ ಸುಣ್ಣ ಹಚ್ಚಿ ನೀವಲಾರಂಭಿಸಿದನು. ಚೆನ್ನಾಗಿ ನೀವಿ ಅದನ್ನು ಕೈಬೆರಳುಗಳಲ್ಲಿ ಚಿಟಿಕೆ ಹಿಡಿದುಕೊಂಡು ಬಾಯಿಗೆ ಹಾಕಿಕೊಳ್ಳಲೋಸುಗ ತಲೆಯನ್ನು ಮೇಲೆತ್ತಿದನು. ರಂಗಯ್ಯ ಬೆಚ್ಚಿದನು! ಕಣ್ಣು ಕತ್ತಲೆಗಟ್ಟಿದಂತಾಯ್ತು! ಏನನ್ನೋ ಆಲೋಚಿಸುತ್ತ ದಿವಾಸ್ವಪ್ನಸ್ಥನಾದ ಮನುಷ್ಯನ ಮೈಮೇಲೆ ತಕಪಕ ಕುದಿಯುವ ಬಿಸಿನೀರನ್ನು ಹೊಯ್ದಂತಾಯ್ತು! ನೋಡುತ್ತಾನೆ, ತನ್ನೆದುರು ತಾನು ಕುಳಿತ ಪೊದೆಗೆ ಒಂದೂವರೆ ಮಾರು ದೂರದಲ್ಲಿ ಕುಳಿ

ತಿದೆ ಒಂದು ಹುಲಿ! ಹೆಬ್ಬುಲಿ!!

ರಂಗಯ್ಯ ಎಲೆ ಅಡಕೆ ಹಾಕುವ ಸಂಭ್ರಮದಲ್ಲಿ ಬಾಹ್ಯ ಜಗತ್ತನ್ನೇ ಮರೆತು ಬಿಟ್ಟಿದ್ದ. ಆ ಹಾಳು ಹೆಬ್ಬುಲಿ ಕೆಲವು ಅತಿಥಿಗಳಂತೆ ಹೇಳದೆ ಕೇಳದೆ, ಒಂದಿಸಿತು ಸದ್ದನ್ನು ಕೂಡ ಮಾಡದೆ, ಅಲ್ಲಿ ಬಂದು ಕುಳಿತಿದ್ದು ತಲ್ಲೀನವಾಗಿದ್ದ ಅವನ ದೃಷ್ಟಿಗೆ ಬೀಳಲೇ ಇಲ್ಲ. ಮೊದಲೇ ಕಣ್ಣಿಗೆ ಬಿದ್ದಿದ್ದರೆ ಅದನ್ನು ದೂರದಿಂದಲೇ ಸುಡುತ್ತಿದ್ದ. ಅವನೇನು ಅಷ್ಟೊಂದು ಅಂಜುಬುರುಕನಲ್ಲ. ಎದೆಗಾರ ಬೇಟೆಗಾರ. ಹಿಂದೆ ಹುಲಿಗಳನ್ನು ಹೊಡೆದಿದ್ದ. ವನವರಾಹಗಳನ್ನು ಅಟ್ಟಿಯಟ್ಟಿ ಸುಟ್ಟು ಕೆಡವಿದ್ದ. ಆದರೆ ಆ ಅನಿಷ್ಟ ಪ್ರಾಣಿಯು ಮೆತ್ತಗೆ ಬಂದು ಹತ್ತಿರ ಕುಳಿತು ಬಿಟ್ಟಿತ್ತು! ಅವನಿಗೆ ಇದ್ದಕ್ಕಿದ್ದ ಹಾಗೆ ಲೋಕಗಳೆಲ್ಲ ಮುಳುಗಿ ಹೋದಂತಾಯಿತು. ಕಣ್ಣು ಕೂಡ ಹೆದರಿ ರೆಪ್ಪೆ ಹಾಕಲಿಲ್ಲ. ತಂಬಾಕನ್ನು ಬಾಯಿಗೆ ತಲಪಿಸುತ್ತಿದ್ದ ಕೈ ಅರ್ಧದಲ್ಲಿಯೇ ನಿಂತು ನಿಷ್ಪಂದವಾಯಿತು. ಬಾಯಿ ಎಲೆಯಡಕೆ ಜಗಿಯುವುದನ್ನು ಹೇಳದೆ ಕೇಳದೆ ನಿಲ್ಲಿಸಿಬಿಟ್ಟಿತು. ಉಸಿರಾಡುವುದು ಮಾತ್ರ ಕಡಿಮೆ ಮಾಡಬೇಕೆಂದು ಅವನು ಯತ್ನಿಸಿದಂತೆಲ್ಲ ಪ್ರಬಲವಾಗತೊಡಗಿತು. ಮೈ ನವಿರು ನಿಮಿರಿ ನಿಂತಿತು. ಮೊದಲು ಕಾಡಿನ ಕುಳಿರ್ಗಾಳಿಯಿಂದ ಚಳಿಯಾಗುತ್ತಿದ್ದ ಅವನಿಗೆ ಈಗ ಸೆಕೆಯಾಗಲಾರಂಭಿಸಿತು. ಹಣೆ ಬೆವರಿ ಹೋಯಿತು. ಅಂಗಿಯ ಒಳಗೆ ನೀರಿನ ಚಿಲುಮೆಗಳು ಉಕ್ಕಿಯುಕ್ಕಿ ಹರಿಯ ತೊಡಗಿದುವು. 'ಗೋವಿನ ಕಥೆ' ಯಲ್ಲಿ ಬರುವ "ಬಂದನಾ ಹುಲಿರಾಯನು" ಎಂಬ ಪಂಕ್ತಿಯ ಅರ್ಥವು ಅವನಿಗೆ ಚೆನ್ನಾಗಿ ಸ್ಫುರಿಸಿತೆಂದು ತೋರುತ್ತದೆ.

ಇದೇ ಸಮಯ. ಹುಲಿಗಳ ನಡತೆಯ ವಿಚಾರವಾಗಿ ನಿಮಗೆ ಎರಡು ಮಾತು ಹೇಳಿಬಿಡುತ್ತೇನೆ. ಹುಲಿಗಳ ನಡತೆಯು ನನಗೇನೋ ಅಷ್ಟು ಸಮರ್ಪಕವಾಗಿ ಕಾಣುವುದಿಲ್ಲ. "ಬಾಲಬೋಧೆ" ಯಲ್ಲಿ "ಎಲೆ ಬೆಕ್ಕೆ ರೂಪಿನಿಂದಲೆ ಹುಲಿ ಜಾತಿಗೆ ಸೇರ್ದನೆಂದು ಗರ್ವಿಸಬೇಡ" ಎಂಬ ಪದ್ಯವನ್ನು ನೀವೆಲ್ಲ ಓದಿರಬೇಕು. ನನಗೇನೊ ಹೀಗೆಂದು

ತೋರುವುದು. ಬೆಕ್ಕು ಹೆಮ್ಮೆ ಪಡುವಷ್ಟು ಶ್ರೇಷ್ಠವಾದುದಲ್ಲ ಹುಲಿಯ ಜಾತಿ. ಸಿಂಹದಂತಹ ದೊಡ್ಡ ದೇಹದ ಹುಲಿಯೊಳಗೆ ಇರುವುದು ಬೆಕ್ಕಿನಂತಹ ಕ್ಷುದ್ರಪ್ರಾಣಿಯ ಹೀನಾತ್ಮ. ವ್ಯಕ್ತಿತ್ವಕ್ಕೆ ತಕ್ಕ ಆತ್ಮಗೌರವ ಬೇಡವೇ! ವೇಷವನ್ನು ನೋಡಿದರೆ ದೊಡ್ಡ ದೊಡ್ಡ ಪಟ್ಟೆನಾಮದ ವನಾಚಾರ್ಯ! ಆಚಾರವನ್ನು ನೋಡಿದರೆ ಅತಿಹೀನ. ಬರಿಯ ಕುಹಕ, ಠಕ್ಕು, ಠೌಳಿ, ಮೋಸ. ಕಳ್ಳರು ಕೂಡ ನಾಚಿಕೆ ಪಟ್ಟುಕೊಳ್ಳುವಂತಹ ಕೀಳುನಡತೆ. ನನಗೇನೋ ಖಂಡಿತ ಸಮರ್ಪಕವಾಗಿಲ್ಲ ಹುಲಿಗಳ ನಡತೆ. ಹುಟ್ಟಿಸಿದ ದೇವರಿಗೂ ಅವಮಾನಕರವೆಂದೇ ಹೇಳಬಹುದು. ಅವು ಮಲೆನಾಡಿನಲ್ಲಿ ಮಾಡುವ ಕಳ್ಳತನವನ್ನೂ ಮೋಸವನ್ನೂ ಅನ್ಯಾಯವನ್ನೂ ಕುರಿತು ನಿಮಗೆ ನಾನು ಹೇಳಿದರೆ ಆಗ ಗೊತ್ತಾಗುವುದು ನಾನು ಹೇಳುವ ಮಾತು ವೇದವಾಕ್ಯವೆಂದು. ಅವುಗಳನ್ನೆಲ್ಲ ಕುರಿತು ಇನ್ನಾವಾಗಲಾದರೂ ಸಮಯ ದೊರೆತಾಗ ಉಪನ್ಯಾಸ ಮಾಡುವೆನು. ಈಗ ಸದ್ಯಕ್ಕೆ ಅವುಗಳ ಮೆಲ್ಲಡಿಗಳ ವಿಚಾರ ಹೇಳುವೆನು. ಬೇಸಗೆಯಲ್ಲಿ ಕಾಡಿನ ನಡುವೆ ಯಾವ ಪ್ರಾಣಿ ತಿರುಗಾಡಿದರೂ ಸದ್ದಾಗದೆ ಇರುವುದಿಲ್ಲ. ಏಕೆಂದರೆ ಚೆನ್ನಾಗಿ ಒಣಗಿ ಗರಿಗರಿ ಎನ್ನುವ ತರಗೆಲೆಗಳು ಸಾಂದ್ರವಾಗಿ ಬಿದ್ದಿರುವುವು. ಗಾಳಿ ನಡೆದರೂ ಕೂಡ ಸದ್ದಾಗುವುದು. ಹಲ್ಲಿ ಹರಿದರೂ ಕೂಡ ಸದ್ದಾಗುವುದು. ಇನ್ನು ಹಂದಿ, ಕಣೆ ಹಂದಿ, ಮಿಗ, ಬರ್ಕ, ಮುಂಗುಸಿ, ಕಬ್ಬೆಕ್ಕು, ಕಾಡುಕುರಿ, ಸಾರಗ, ಕಾಡು ಕೋಳಿ, ಚಿಪ್ಪಿನ ಹಂದಿ, ಕಾಡು ಕೋಣ ಇವುಗಳು ಬಂದರಂತೂ ಹೇಳುವುದೇನು! ಎರಡು ಫರ್ಲಾಂಗು ದೂರದಿಂದಲೇ ಬೇಟೆಗಾರನಿಗೆ ವರ್ತಮಾನ ಸಿಕ್ಕುವುದು. ಆದರೆ ಈ ಹಾಳು ಹುಲಿಗಳು ಮಾತ್ರ ಒಂದಿನಿತು ಸದ್ದನ್ನೂ ಮಾಡದೆ ಸಂಚರಿಸಬಲ್ಲುವು. ತಮ್ಮ ನಖಗಳನ್ನು ಮೇಲಕ್ಕೆ ಸೇದಿಕೊಂಡು ಅಂಗಾಲನ್ನು ಬೂರುಗದ ಹತ್ತಿಯ ತಲೆದಿಂಬಿನಂತೆ ಮಾಡಿಕೊಂಡು ತರಗೆಲೆಗಳಿಗೆ ಮೆಲ್ಲಗೆ ಮುತ್ತು ಕೊಡುತ್ತ ಸಂಚಾರ ಮಾಡುವುವು. ಇದನ್ನು ನೋಡಿ ತಿಳಿಯದ ಕೆಲವು ಬೇಟೆ

ಗಾರರು ಹುಲಿಗಳು, ದೇವತೆಗಳಂತೆ, ನೆಲದ ಮೇಲೆ ನಡೆಯುವುದೇ ಇಲ್ಲ ಎಂದು ಸಾಧಿಸುತ್ತಾರೆ. ಹುಲಿಯು ತನ್ನ ಮೆತ್ತೆಗಾಲನ್ನು 'ಧಪ್ ಧಪ್' ಎಂದು ನಿದಾನವಾಗಿ ಇಡುತ್ತ ಬಂದಿತೆಂದರೆ ಕೇಳು ವುದಕ್ಕೆ ನೂರು ಕಿವಿಗಳಿದ್ದರೂ ಸಾಲದು. ಹೀಗಿರುವಾಗ ಅನ್ಯಮನ ಸ್ಕರಾಗಿ ಮೇಯುವ ದನ ಕರುಗಳು ಹುಲಿರಾಯನ ಆಗಮನವನ್ನು ತಿಳಿಯುವ ಬಗೆ ಹೇಗೆ? ತತ್ಪರತೆಯಿಂದ ಎಲೆಯಡಕೆ ಹಾಕುತ್ತ ಕುಳಿತ ರಂಗಯ್ಯನಂತಹ ಬೇಟೆಗಾರರು ಅರಣ್ಯಾಚಾರ್ಯನ ಆಗಮನವನ್ನು ಅರಿ ಯುವುದೆಂತು?

ಅಂತೂ ರಂಗಯ್ಯನ ಮುಂದೆ ಹೆಬ್ಬುಲಿ ಕುಳಿತಿತ್ತು. ರಂಗಯ್ಯ ಎಲ್ಲಿ ಹುಲಿಯು ಗಮನ ತನ್ನ ಮೇಲೆ ಬೀಳುವುದೋ ಎಂದು ಹೆದರಿ ಸೆಡೆತುಕೊಂಡು ನೋಡಿದ. ದೊಡ್ಡ ಹೆಬ್ಬುಲಿ. ಅದಕ್ಕೂ ತನಗೂ ಒಂದೇ ಮಾರು! ಅಥವಾ ಒಂದೂವರೆ ಮಾರು! ಮುಂದಿನ ಕಾಲು ಗಳೆರಡನ್ನು ನೆಲದ ಮೇಲೆ ನೇರವಾಗಿ ಊರಿಕೊಂಡು, ನೀಳವಾದ ಬಾಲವನ್ನು ಗಾಳಿಯಲ್ಲಿ ಆಡಿಸುತ್ತ, ಭಯಂಕರವಾದ ಮೀಸೆಗಳನ್ನು ಅತ್ತಿತ್ತ ಕುಣಿಸುತ್ತ, ಮಿಂಚಿನ ಕಣ್ಣುಗಳನ್ನು ಗುಡ್ಡೆಗಳಲ್ಲಿ ಹೊರ ಳಿಸುತ್ತ, ಉಗ್ರ ಕರಾಳವದನವನ್ನು ಒಂದೊಂದು ಸಾರಿ ಅತ್ತಿತ್ತ ತಿರು ಗಿಸಿ ವನಪ್ರಾಂತವನ್ನು ಧೀರವಾಗಿ ಪರೀಕ್ಷಿಸುತ್ತ ಸರಿಯಾದ ಆಳಿನ ಎದೆಯೆತ್ತರ ಕೂತಿದೆ! ಕೂತಿದೆ!! ನಿಂತರೇನು ಗತಿ?

ಪಾಪ, ಎಂತಹ ಬೇಟೆಗಾರನಾದರೂ ಅಂತಹ ಸನ್ನಿವೇಶದಲ್ಲಿ ಏನು ಮಾಡುತ್ತಾನೆ? ಹುಲಿ ಸ್ವಲ್ಪವಾದರೂ ದೂರವಾಗಿದ್ದರೆ ಸುಡ ಬಹುದು. ಅದರಲ್ಲಿಯೂ ರಂಗಯ್ಯನ ಕೋವಿ ಕೇಪಿನ ಕೋವಿ. ಒಂದೂವರೆ ಮಾರಿಗಿಂತ ಹೆಚ್ಚೇ ಉದ್ದವಿದೆಯೋ ಏನೋ! ಹುಲಿಗೆ ಅವನು ಕೂತದ್ದು ಗೊತ್ತಾದರೆ ಗತಿಯೇನು? ಮುಂದಿನ ಪಾದ ವೊಂದನ್ನು ನಿರ್ಲಕ್ಷ್ಯವಾಗಿ ಬೀಸಿದರೂ ಸಾಕು, ರಂಗಯ್ಯನ ಕರುಳು, ಬಾಲ್ಯದಿಂದಲೂ ಮಮತೆಯಿಂದ ಸಾಕಿ ಸಲಹಿದ ಕರುಳು, ಪೋಲೀ ಸಿನವರ ಯಮ ಪೀಡನೆಗೆ ಸಿಕ್ಕಿದ ಕಳ್ಳನ ಕದ್ದ ಗಂಟಿನಂತೆ ಈಚೆಗೆ ಬರು

ವುದು. ಕರುಳಿನ ಜೊತೆಗೆ ಕುಂಬಳ ಕಾಯಿಯಷ್ಟು ದಪ್ಪವಾಗಿರುವ ಅವನ ಜ್ವರಗಡ್ಡೆಯಂತೂ, ಸಿಂಹಗರ್ಜನೆಗೆ ಬೆದರಿದ ಗರ್ಭಿಣಿ ಜಿಂಕೆಯ ಬಸುರಿನಿಂದ ಅರೆ ಬೆಳೆದ ಭ್ರೂಣವು ಜಗುಳಿ ಬಿದ್ದಂತೆ, ಹೊರಬೀಳು ವುದು. ಕಾಸೂ ಖರ್ಚಿಲ್ಲದೆ ಶಸ್ತ್ರ ಚಿಕಿತ್ಸೆಯಾಗುವುದು. ಅದರಲ್ಲಿ ಯೂ ಹೆಬ್ಬುಲಿಯೊಡನೆ ಇತರ ಪ್ರಾಣಿಗಳ ಮೇಲೆ ಕೆಚ್ಚು ತೋರಿಸು ವಂತೆ ತೋರಿಸಲಾಗುವುದಿಲ್ಲ. ರಂಗಯ್ಯ ವ್ಯಾಘ್ರನಖಾಘಾತದಿಂದ ಆದ ಅನಾಹುತಗಳನ್ನು ಹಿಂದೆ ಕಂಡು ಕೇಳಿದ್ದ. ಒಂದು ಉಗುರೇ ಸಾಕು ಮನುಷ್ಯನ ಎದೆ ಹೊಟ್ಟೆಗಳನ್ನು ಸೀಳುವುದಕ್ಕೆ. ಅದಕ್ಕೆ ಇಪ್ಪತ್ತು ಉಗುರುಗಳಿವೆ. ಅವುಗಳ ಸಹಾಯಕ್ಕೆ ಆ ಹಾಳು ಕರಾಳದಂಷ್ಟ್ರ ಗಳು ಬೇರೆ! ಹೆದರಿಕೆಯನ್ನು ಇನ್ನೂ ಹೆಚ್ಚು ಮಾಡಲು ಆ ಭಯಾನಕ ವಾದ ಬಣ್ಣ ಬಣ್ಣದ ವೇಷ ಬೇರೆ! ಹೆಸರು ನೋಡಿದರೆ "ಹುಲಿ!" ಎಷ್ಟು ಅಸಮಂಜಸ! ಅಷ್ಟು ದೊಡ್ಡ ಭಯಂಕರವಾದ ಪ್ರಾಣಿಗೆ ಕನ್ನಡದಲ್ಲಿ ಎಷ್ಟು ನಯವಾದ ಪುಟ್ಟ ಹೆಸರು! ಸಂಸ್ಕೃತದ ಹೆಸರೇ ಸರಿಯಾಗಿದೆ. "ವ್ಯಾಘ್ರ!" ಶಬ್ದವು ಕೇಳುವುದಕ್ಕೂ ನೋಡುವು ದಕ್ಕೂ ಪ್ರಾಣಿಯಂತೆಯೇ ಕರ್ಕಶಭಯಾನಕವಾಗಿದೆ.

ರಂಗಯ್ಯನ ಬಳಿ ಇದ್ದದ್ದು ಒಂಟಿನಳಿಗೆ ಕೇಪಿನ ಕೋವಿ. ಕೇಪಿನ ಕೋವಿಯೇ ಫಜೀತಿ! ಒಂದು ಈಡು ಹೊಡೆದರೆ ಮತ್ತೊಂದು ಈಡು ತುಂಬಬೇಕಾದರೆ ಐದು ನಿಮಿಷವಾದರೂ ಬೇಕೇ ಬೇಕು. ತೋಟಾ ಕೋವಿಯಾದರೋ ಸಿದ್ಧವಾಗಿರುವ ತೋಟಾಗಳು ಜೇಬಿ ನಲ್ಲಿ ಇರುವುವು. ತೋಟಾ ತುಂಬುವುದೊಂದೇ ತಡ, ಎಷ್ಟು ಗುಂಡುಗಳನ್ನು ಬೇಕಾದರೂ ಸಿಡಿಯಬಹುದು. ಅದರಲ್ಲಿಯೂ ಒಂದು ನಳಿಗೆ ಕೇಪಿನ ಕೋವಿ! ಜೋಡುನಳಿಗೆಯದಾಗಿದ್ದರೆ ಎರಡು ಈಡುಗಳನ್ನಾದರೂ ಹಾರಿಸಬಹುದು! ಒಂದು ತಪ್ಪಿದರೆ ಮತ್ತೊಂದು! ಅಥವಾ ಒಂದು ಗುಂಡಿಗೆ ಅರೆಪೆಟ್ಟಾದರೆ ಮತ್ತೊಂದು ಗುಂಡು ಹೊಡೆದು ಕೊಲ್ಲಬಹುದು. ಅಲ್ಲದೆ ಹುಲಿಯನ್ನು ಅಷ್ಟು ಸಮೀಪ ಹೊಡೆಯುವುದು ಕ್ಷೇಮಕರವಲ್ಲ. ನೀವು ಯಾರಾದರೂ ರಂಗಯ್ಯ

ಹೇಡಿ ಎಂದು ಹೇಳಿದರೆ ನನಗೆ ಕೋಪ ಬರುತ್ತದೆ. ನಾನು ಒಲ್ಲೆ ಅದರ ಸುಖಾಸುಖಗಳನ್ನು. ಅಂತಹ ಸಮಯದಲ್ಲಿ ಭಗವದ್ಗೀತೆಯು ''ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ'' ಎಂಬ ಶ್ಲೋಕವನ್ನು ಎಷ್ಟುಸಾರಿ ಹೇಳಿಕೊಂಡರೂ ಪ್ರಯೋಜನವಿಲ್ಲ. ರಂಗಯ್ಯನ ಮುಂದಿದ್ದುದು ಊಹನೆಯ ಶಸ್ತ್ರಗಳಲ್ಲ; ತತ್ವಶಾಸ್ತ್ರದ ಪಾವಕನಲ್ಲ. ಅರಣ್ಯದ ಶನಿಯಾದ ವ್ಯಾಘ್ರದ ಸಾಕ್ಷಾತ್ ನಖಗಳು! ಗೀತೆಯು ''ನೈನಂ ಛಿಂದಂತಿ'' ಎಂದು ಹೇಳಿದ್ದರೂ ಕೂಡ ರಂಗಯ್ಯನಿಗೆ ಗೊತ್ತು ಅದು ಸುಳ್ಳು ಎಂದು. ವ್ಯಾಘ್ರವು ತನ್ನ ಕ್ರೂರ ನಖಾನ್ವಿತ ಪಾದಗಳನ್ನು ಬೀಸಿದ್ದರೆ ಸಾಕು, ಭಗವದ್ಗೀತೆಯೆಲ್ಲಾ ಹರಿದು ಹರಿದು ಚೂರು ಚೂರಾಗಿ ಕರುಳು, ರಕ್ತ, ಜ್ವರಗಡ್ಡೆ, ಹೃದಯ, ಶ್ವಾಸಕೋಶ, ಆರೋಗ್ಯಶಾಸ್ತ್ರ, ಶಿವ ಮಾಡಿದ ಸೃಷ್ಟಿ ಎಲ್ಲವೂ ಸ್ವಲ್ಪವೂ ದಾಕ್ಷಿಣ್ಯವಿಲ್ಲದೆ ಹೊರಗೆ ಹಾರುತ್ತಿದ್ದುವು! ಆದ್ದರಿಂದ ರಂಗಯ್ಯ ಎಷ್ಟು ಎದೆ ಗಟ್ಟಿ ಮಾಡಿಕೊಂಡರೂ ದೇಹವು ಮೆಲ್ಲಗೆ ಕಂಪಿಸಲು ಪ್ರಾರಂಭವಾಯಿತು. ಅದರಲ್ಲಿಯೂ ಹುಲಿಯು ಒಂದು ಸಾರಿ ಆಕಳಿಸಿ, ಕಣ್ಣು ಮೀಸೆಗಳನ್ನು ತಿರುಗಿಸಿ, ಭುಜಪ್ರದೇಶವನ್ನು ನೆಕ್ಕಿಕೊಂಡಿತು. ಆಗ ಅದರ ಬಾಳ್ಮೊಗದ ಗುಟ್ಟು ರಂಗಯ್ಯನಿಗೆ ಸ್ವಲ್ಪ ಗೊತ್ತಾಯಿತು. ಏನು ದಂತಪಂಕ್ತಿಗಳು! ಎಂತಹ ನಾಲಗೆ! ಎಷ್ಟು ಉದ್ದ ಆ ಕೋರೆದಾಡೆಗಳು! ಯಶೋದೆಯು ಕೃಷ್ಣನ ಬಾಯಲ್ಲಿ ಬ್ರಹ್ಮಾಂಡಗಳನ್ನು ಕಂಡು ಭಯಗೊಂಡುದು ಸುಳ್ಳೋ ನಿಜವೋ ನನಗೆ ಗೊತ್ತಿಲ್ಲ. ರಂಗಯ್ಯನಂತೂ ಹುಲಿಯ ಬಾಯೊಳಗೆ ಪಾತಾಳ, ನರಕ, ಮೃತ್ಯು ಎಲ್ಲವನ್ನೂ ಒಂದೇ ತಡವೆ ಕಂಡು ನಡುಗತೊಡಗಿದನು. ನಡುಕ ಹೆಚ್ಚಿತು. ನಡುಗಿದರೆ ಎಲ್ಲಿ ಹುಲಿಗೆ ತಾನಡಗಿರುವುದು ಗೊತ್ತಾಗುವುದೋ ಏನೋ ಎಂದು ನಡುಕವನ್ನು ತಡೆಯಲು ಬಹಳ ಪ್ರಯತ್ನಪಟ್ಟನು. ಸ್ಪಂದನವು ಇನ್ನೂ ಹೆಚ್ಚಾಗಿ ಹೋಯಿತು. ಅರಳಿಯ ಎಲೆಗಳು ಗಾಳಿಗೆ ಕಂಪಿಸುವಂತೆ ಅವನ ದೇಹ ಸಮಸ್ತವೂ ಗಡಗಡನಡುಗತೊಡಗಿತು. ಮೆದುಳಿನಲ್ಲಿ ಪಿಪ್ಲವಕ್ಕಾರಂಭವಾ

ಯಿತು. ಕಣ್ಣು ಕಿವಿಯಾಯಿತು ; ಕಿವಿ ಕಣ್ಣಾಯಿತು ; ಮೂಗು ಬಾಯಿಯಾಗಿ, ಬಾಯಿ ಮೂಗಾಗಿ, ಕೂದಲು ತಲೆಯೊಳಗೆ ಇಳಿಯ ತೊಡಗಿದವು ಹೆದರಿಕೆಯಿಂದ! ತಲೆಯ ಕೂದಲೆ ಹೆದರಿ ಬುರುಡೆ ಯೊಳಗೆ ಹುದುಗಹೊರಟರೆ ರಂಗಯ್ಯ ಏನು ಮಾಡಿಯಾನು? ಇಷ್ಟ ರಲ್ಲಿ ಉಸಿರು ಮೂಗು ಬಾಯಿಗಳಲ್ಲಿ ತಿದಿಯೊತ್ತುತ್ತಿತ್ತು. ಇಷ್ಟಾ ದರೂ ನಾನು ರಂಗಯ್ಯ ಎದೆಗಾರನೆಂದೇ ಸಾರಿ ಸಾರಿ ಹೇಳುತ್ತೇನೆ. ಏಕೆಂದರೆ ನಾವು ಯಾರಾದರೂ ಆಗಿದ್ದರೆ, ಸತ್ತು ಆಗಲೇ ಶತಮಾನ ವಾಗಿರುತ್ತಿತ್ತು!

ರಂಗಯ್ಯ ಜೀವದ ಮೇಲೆ ಆಸೆ ಬಿಟ್ಟನು. ನೆಲದ ಮೇಲಿದ್ದ ಕೋವಿಯನ್ನು ಎತ್ತಿಕೊಳ್ಳುವುದಕ್ಕೂ ಅವನಿಗೆ ಚೈತನ್ಯವಿರಲಿಲ್ಲ. ವ್ಯಾಘ್ರವೇನೋ ಆಕಳಿಸುತ್ತ ಮೈ ನೆಕ್ಕಿಕೊಳ್ಳುತ್ತ ನಿರ್ದಾಕ್ಷಿಣ್ಯ ವಾಗಿ ಕುಳಿತಿತ್ತು. ರಂಗಯ್ಯ ಹರಿಕಥೆಗಳಲ್ಲಿ ಕೇಳಿದ್ದನು, ಸಾಯುವ ಹೊತ್ತು ಬಾರದೆ ಯಾರೂ ಸಾಯುವುದಿಲ್ಲ ಎಂದು. ಹುಲಿಯು ಆ ಹೊತ್ತನ್ನೇ ಕಾಯುತ್ತಿದೆ ಎಂದು ನಿರ್ಧರಿಸಿದನು. ಅಂತೂ, ನಾನು ಸಾಯುತ್ತೇನೆ! ಈಗಲೋ ಆಗಲೋ ಅಷ್ಟೆ! ಸಾಯುವುದೇನೋ ನಿಶ್ಚಯ! ಹೀಗೆಂದು ಚಿಂತಿಸುತ್ತಿದ್ದ ಹಾಗೆಯೇ ಕಣ್ಣು ಹನಿಗಣ್ಣಾ ಯಿತು. ಎರಡು ಅಶ್ರುಗಳು ಕೆನ್ನೆಯ ಮೇಲುರುಳಿ ತೊಡೆಯ ಮೇ ಲಿದ್ದ ಕಂಬಳಿಯ ಮೇಲೆ ಬಿದ್ದು ಬತ್ತಿ ಹೋದುವು. ಹುಲಿರಾಯನು ಆಗ ಅವನನ್ನು ನೋಡಿದ್ದರೆ ಮರುಕದಿಂದ ತೊಲಗುತ್ತಿದ್ದನೆಂದು ತೋರುತ್ತದೆ. ಆದರೆ ಆ ಮಹಾನುಭಾವನ ಧೀರ ಪ್ರಶಾಂತ ದೃಷ್ಟಿಗೆ ಈ ಬಡಪಾಯಿಯ ಗೋಳು ಬೀಳಲೇ ಇಲ್ಲ. ನಸುಗಪ್ಪು ಬಾನಿನಿಂದಿ ಳಿಯುತ್ತಿತ್ತು.

ರಂಗಯ್ಯ ಹೆಂಡಿರು ಮಕ್ಕಳನ್ನು ನೆನೆದನು. ಆಸ್ತಿಪಾಸ್ತಿ ಗಳನ್ನು ನೆನೆದನು. ನಂಟರಿಷ್ಟರನ್ನು ನೆನೆದನು. ಮನೆ ಮಾರು ಗಳನ್ನು ನೆನೆದನು. ಕಣ್ಣೀರು ಧಾರೆ ಧಾರೆಯಾಗಿ ಹರಿದು ನನೆದು ಹೋದನು. ತಾನು ಬೆಳೆದಿದ್ದ ತರಕಾರಿಯ ತೋಟ, ಬೆಳೆದು ನಿಂತ

ಗದ್ದೆಗಳು, ಸಾಕಿ ಸಲಹಿದ ದನಕರುಗಳು, ಮೊನ್ನೆತಾನೇ ಸಾಲ ಮಾಡಿ ಕೊಂಡುಕೊಂಡಿದ್ದ ಅಡಿಕೆ ತೋಟ ಎಲ್ಲವೂ ಚಿತ್ತಭಿತ್ತಿಯಲ್ಲಿ ಚಲನಚಿತ್ರಗಳಂತೆ ಮಿಂಚಿದುವು. ಇಷ್ಟರಲ್ಲಿ ಹುಲಿಯು ಒಂದು ಸಾರಿ ಮೆಲ್ಲನೆ ಗರ್ಜಿಸಿತು. ರಂಗಯ್ಯನು ತನಗೆ ಸಾಯುವ ಹೊತ್ತು ಬಂತೆಂದು ತಿಳಿದನು. ಹುಲಿಯು ಮೈಮೇಲೆ ಹಾರುವುದಕ್ಕೆ ಪೀಠಿಕಾ ಪ್ರಾಯವಾಗಿ "ಮರಣಕ್ಕೆ ಸಿದ್ಧನಾಗು" ಎಂದು ಎಚ್ಚರಿಕೆ ಹೇಳಲು ಗರ್ಜಿಸಿತೆಂದು ತಿಳಿದುಕೊಂಡನು. ಗರ್ಜನೆಯು ಮೌನವಾಗುತ್ತಿದ್ದ ಕಾಡಿನಲ್ಲಿ ಧುಮುಕಿ ಅನುರಣನವಾಗಿ ದೂರದಲ್ಲಿ ಮುಳುಗಿ ಹೋಯಿತು. ಇರುಳಿನ ಕರಿನೆರಳುಗಳು ಹಿಂಡು ಹಿಂಡಾಗಿ, ಮುಂದೆ ಮುಂದೆಯಾಗಿ ಒಂದರ ಮೇಲೊಂದು ಇಳಿದು ಅಡವಿಯನ್ನು ಮುತ್ತ ತೊಡಗಿದುವು. ವ್ಯಾಘ್ರದೇಹವು ಮಬ್ಬು ಮಬ್ಬಾಗುತ್ತ ಬಂದ ಹಾಗೆಲ್ಲ ಅದರ ಅಗ್ನಿತುಲ್ಯ ನೇತ್ರಗಳು ಕೆಂಗೆಂಡಗಳಾಗುತ್ತ ಬಂದುವು. ರಂಗಯ್ಯ ನಡ ನಡ ನಡುಗುತ್ತಿದ್ದನು. ಬೆವರು ಎಡೆಬಿಡದೆ ಸುರಿಯುತ್ತಿತ್ತು. ಬಾಯಲ್ಲಿದ್ದ ಎಲೆಯಡಕೆಯು ಸದ್ದು ಮಾಡದೆ ಸ್ವಲ್ಪವೂ ಚಲಿಸದೆ ಹೆದರಿ ಹೆದರಿ ದವಡೆಮೂಲೆಯನ್ನು ಸೇರಿತ್ತು. ರಂಗಯ್ಯ ತನ್ನ ತೋಟದಾಚೆಯ ಭೂತವನ್ನು ನೆನೆದು ಬೇಡಿಕೊಂಡನು. ಬೇಟೆ ದೇವರಿಗೆ ಹಣ್ಣುಕಾಯಿ ಕೊಡುವೆನೆಂದು ಹೇಳಿಕೊಂಡನು. ಪಂಜರಳ್ಳಿಗೆ ಪೂಜೆ ಮಾಡಿ ಕೋಳಿಬಲಿ ಕೊಡುವೆನೆಂದು ಹರಕೆಹೊತ್ತನು. ಜಕಣಿಗೆ ಹೆಚ್ಚಾಗಿ ಎಡೆಯಿಕ್ಕುವಂತೆ ಪ್ರಲೋಭನಗೊಳಿಸಿದನು. ಇಂತು ದ್ರಾವಿಡ ದೆವ್ವಗಳೆಲ್ಲ ಪೂರೈಸಿದ ಮೇಲೆ ಆರ್ಯದೇವತೆಗಳಿಗೆ ಹರಕೆಹೊತ್ತನು. ಮನೆದೇವರಾದ ತಿರುಪತಿ ವೆಂಕಟರಮಣನನ್ನು ಸಂಕಟಕಾಲದಲ್ಲಿ ಪ್ರಾರ್ಥಿಸಿದನು. ಧರ್ಮಸ್ಥಳಕ್ಕೆ ತನ್ನಷ್ಟುದ್ದ ಚಿನ್ನದ ತಂತಿ ಮಾಡಿಸಿಕೊಡುವಂತೆ ಪ್ರತಿಜ್ಞೆಮಾಡಿದನು. ಅವನ ಅಲ್ಪ ಬುದ್ಧಿಗೆ ತಿಳಿದ ದೇವತೆಗಳನ್ನೆಲ್ಲಾ ಅಂಗಲಾಚಿ ಬೇಡಿಕೊಂಡನು. ಆದರೂ ಹುಲಿರಾಯನು ಇಟ್ಟ ಹೆಜ್ಜೆಯನ್ನು ಕೀಳಲಿಲ್ಲ.

ಕಡೆಯಲ್ಲಿ, ಹುಲಿಗಳು ಮನುಷ್ಯರ ಸದ್ದನ್ನು ಕೇಳಿದರೆ ಓಡಿ

ಹೋಗುವುವು ಎಂಬುದನ್ನು ತಿಳಿದಿದ್ದ ಅವನು ಏನಾದರೂ ಸದ್ದು ಮಾಡಲು ಧೈರ್ಯಮಾಡಿದನು. ಮೆಲ್ಲಗೆ ಕೆಮ್ಮಿದನು. ಹುಲಿಗೆ ಕೇಳಿಸಿದಂತೆ ತೋರಲಿಲ್ಲ. ಸ್ವಲ್ಪ ಗಟ್ಟಿಯಾಗಿ ಕೆಮ್ಮಿದನು. ಅದೂ ಕೂಡ ಹುಲಿಗೆ ಕೇಳಿಸಿದಂತೆ ತೋರಲಿಲ್ಲ. ಅದರ ಕಿವಿ ಸ್ವಲ್ಪ ಮಂದವಾಗಿರಬಹುದೆಂದು ತಿಳಿದು ಮೆಲ್ಲಗೆ "ಹೋ!" ಎಂದು ಕೂಗಿದನು. ಅದೂ ಕೇಳಿಸಲಿಲ್ಲ. ಆಮೇಲೆ ಇನ್ನು ಸ್ವಲ್ಪ ಗಟ್ಟಿಯಾಗಿ ದೂರದಲ್ಲಿರುವ ಯಾರನ್ನೋ ಕರೆಯುವಂತೆ "ಹೋ!!" ಎಂದು ಕೂಗಿದನು. ಅದೂ ಹುಲಿಗೆ ಕೇಳಿಸಿದಂತೆ ತೋರಲಿಲ್ಲ. ಹಾಳು ಪ್ರಾಣಿ ಕಿವುಡೋ ಏನೋ! ಕಿವುಡಾಗಿರಬಹುದು! ಯಾಕಾಗಬಾರದು? ಹುಲಿಗೆ ವಾಸನೆಯೇನೋ ಇತರ ಕಾಡು ಪ್ರಾಣಿಗಳಿಗೆ ಸಿಕ್ಕಿದಂತೆ ಸಿಗುವುದಿಲ್ಲ ಎಂದು ಹೇಳುತ್ತಾರೆ. ಇರಬಹುದು. ಆದರೆ ಕಿವಿಗೇನು ಕೇಡು? ಇಷ್ಟಾದ ಮೇಲೆ ರಂಗಯ್ಯನ ಎದೆಯಲ್ಲಿ ನಿರಾಶೆಯಿಂದ ನಿರ್ಲಕ್ಷ್ಯತೆ ಹುಟ್ಟಿತು; ನಿರ್ಲಕ್ಷ್ಯತೆಯಿಂದ ಮೊಂಡ ಕೆಚ್ಚು ಜನಿಸಿತು. ಆದುದಾಗಲಿ ಎಂದು ಆಲೋಚಿಸಿ ಗಟ್ಟಿಯಾಗಿ "ಹೋ!!" ಎಂದು ಕೂಗಿಕೊಳ್ಳಲಾರಂಭಿಸಿದನು. ಅವನ ಕೂಗು ಕಾಡಿನಲ್ಲೆಲ್ಲ ತೊಳಲಿ ತೊಳಲಿ ಕತ್ತಲೆಯಲ್ಲಿ ನುಗ್ಗಿ ನುಗ್ಗಿ ಬೆಟ್ಟದ ತಪ್ಪಲಿನ ಕಣಿವೆಯಲ್ಲಿದ್ದ ಅವನ ಮನೆಗೂ ಮುಟ್ಟಿತು. ಆದರೆ ಮಹಾನುಭಾವ ಹುಲಿರಾಯನ ಕಿವಿಗೆ ಮುಟ್ಟಿದಂತೆ ತೋರಲಿಲ್ಲ. ಅಂತೂ ಹುಲಿಯು ರಂಗಯ್ಯನ ಕಡೆಗೆ ತಿರುಗಿ ಕುಳಿತುಕೊಂಡಿತು ಎಂಬುದು ಅದರ ತಳತಳಿಸುವ ಕಣ್ಣುಗಳಿಂದ ಗೊತ್ತಾಯಿತು. ಆದರೂ ಅದು ತಾನಿದ್ದ ಸ್ಥಳದಿಂದ ಕದಲಲಿಲ್ಲ. ರಂಗಯ್ಯನ ಮೇಲೂ ಬೀಳಲಿಲ್ಲ.

ಕಾಡು ಪ್ರಾಣಿಗಳು ಸುಮ್ಮಸುಮ್ಮನೆ ಮನುಷ್ಯರ ಮೇಲೆ ಬೀಳುವುದಿಲ್ಲ. ಹುಲಿಯು ಬಹುಶಃ ಆಗತಾನೇ ಭೋಜನವನ್ನು ಪೂರೈಸಿತ್ತೆಂದು ತೋರುತ್ತದೆ; ಸುಮ್ಮನೆ ವಾಯುವಿಹಾರಕ್ಕೆ ಹೊರಟಿದ್ದಿರಬಹುದು. ಆದ್ದರಿಂದ ಬಡಪಾಯಿ ರಂಗಯ್ಯನ ಕಡೆ ನೋಡುತ್ತ ಆಶ್ಚರ್ಯಪಡುತ್ತ ಕುಳಿತುಕೊಂಡಿತ್ತೇ ಹೊರತು ಸಿಟ್ಟಿಗೇಳಲಿಲ್ಲ.

ಅದಕ್ಕೆ ಪ್ರಹಸನ; ಇವನಿಗೆ ಪ್ರಾಣಸಂಕಟ!

ರಂಗಯ್ಯನ ಕೂಗು ಮಾಲೆಮಾಲೆಯಾಗಿ ಅವನ ಮನೆಗೆ ಮುಟ್ಟಿತು. ಮಲೆನಾಡಿನಲ್ಲಿ ಮನೆಯಿಂದ ಹೊರಟು ಮಧ್ಯಕಾಡಿಗೆ ಹೋದರೂ ಕಾಡು ಬೆಟ್ಟಗಳು ಇಳಿಜಾರಾಗಿರುವುದರಿಂದ ಮನೆಯಿಂದ ಅಲ್ಲಿಗೆ ನೇರ ದೂರವು ಕಡಿಮೆಯಾಗಿರುತ್ತದೆ. ಅದರಲ್ಲಿಯೂ ಇರುಳಾದ ಮೇಲೆ ಭಯಂಕರ ಮೌನವು ಗಗನದಿಂದಿಳಿತಂದು ಭೂಮಿಯ ಮೇಲೆ ಹಕ್ಕಿಯು ಮೊಟ್ಟೆಯನ್ನು ಅಪ್ಪಿ ಕಾವು ಕೂರುವಂತೆ ಕೂರುವುದರಿಂದ ಕಾಡಿನಲ್ಲಿ ಗಟ್ಟಿಯಾಗಿ ಮಾತಾಡಿದರೆ ಮನೆಗೆ ಕೇಳಿಸುವುದು. ಅಂತೂ ರಂಗಯ್ಯನ ಕೂಗು ಕೇಳಿ ಅವನ ತಮ್ಮ ಸಿದ್ದಣ್ಣನು, ಅಣ್ಣನು ಏನೋ ದೊಡ್ಡ ಪ್ರಾಣಿಯನ್ನು ಹೊಡೆದು ಕೊಂದು ಹೊರಲಾರದೆ ತನ್ನನ್ನು ಕರೆಯುವನೆಂದು ಬಗೆದು ಒಂದು ಬಂಡೂಕನ್ನು ಕೈಲಿ ಹಿಡಿದುಕೊಂಡು ಕೂಗಿಗೆ ಉತ್ತರವಾಗಿ ಕೂಗುತ್ತ ಹೊರಟು ಬಂದನು. ರಂಗಯ್ಯನಿಗೆ ಸ್ವಲ್ಪ ಧೈರ್ಯವಾಗಿ ಇನ್ನೂ ಗಟ್ಟಿಯಾಗಿ ಕೂಗಿದನು. ವ್ಯಾಘ್ರವು ವಿಚಿತ್ರ ಪ್ರಾಣಿಯ ವಿಚಿತ್ರ ಸ್ವರಮಾಲೆಗಳನ್ನು ಆಲೈಸುತ್ತ ಆಶ್ಚರ್ಯಪಡುತ್ತಿತ್ತು. ಈ ವಿಷಯ ಸಿದ್ದಣ್ಣನಿಗೆ ಗೊತ್ತಾಗಿದ್ದರೆ ಅವನು ಅಷ್ಟು ಕೆಚ್ಚಿನಿಂದ ಕೂಗುತ್ತ ಬರುತ್ತಿರಲಿಲ್ಲ. ಸಿದ್ದಣ್ಣನು ಕೂಗುತ್ತ ಕೂಗುತ್ತ ಹತ್ತಿರ ಬರಲು ಹುಲಿರಾಯನು ನಾಟಕರಂಗದಿಂದ ಚಿಮ್ಮಿ ಕಣ್ಮರೆಯಾದನು. ರಂಗಯ್ಯನ ಆಗಿನ ಸ್ಥಿತಿಯನ್ನು ನೀವೇ ಊಹಿಸಿಕೊಳ್ಳಿ. ಅವನು ಯಾವ ದೇವರಿಗೂ ಹರಕೆ ಒಪ್ಪಿಸಲಿಲ್ಲ. ಏಕೆಂದರೆ, ಯಾವ ದೇವರ ಕೃಪೆಯಿಂದ ಅವನು ಬದುಕಿದನೆಂದು ಯಾರುತಾನೇ ತೀರ್ಮಾನಮಾಡುವರು? ಅಲ್ಲಿಗೆ ಬಂದ ಸಿದ್ದಣ್ಣನು ನಿಜವನ್ನು ಕೇಳಿ ತಿಳಿದು ಮರವಟ್ಟು ಹೋಗಿದ್ದ ಅಣ್ಣನನ್ನು ಕೈಹಿಡಿದು ಎತ್ತಿ ನಿಲ್ಲಿಸಿದನು. ರಂಗಯ್ಯ ಕೈಯಲ್ಲಿ ಹಿಡಿದಿದ್ದ ತಂಬಾಕಿನ ಚಿಟಿಕೆಯನ್ನು ಬಾಯಿಗೆ ಹಾಕಿಕೊಂಡು ಎಲೆಯಡಿಕೆ ಜಗಿಯಲು ಪ್ರಾರಂಭಿಸಿದನು.

ಈ ಸಂಗತಿ ನಾನೇ ಅವನ ಬಾಯಿಂದ ಕೇಳಿ ತಿಳಿದುಕೊಂಡದ್ದು.

ಅವನ ಶೈಲಿ, ಅವನ ಭಾಷೆ, ಅವನ ಚಮತ್ಕಾರ, ಅವನ ವರ್ಣನಾ ಶಕ್ತಿ ನನಗಿಲ್ಲ. ನಿರ್ಜೀವಲೇಖನಿಯು ಸಜೀವ ಜಿಹ್ವೆಯ ಕಾರ್ಯವನ್ನು ಸಮರ್ಪಕವಾಗಿ ಮಾಡಬಲ್ಲುದೇ? ಅಂತೂ ರಂಗಯ್ಯನು ಅಂದಿನಿಂದ ಮರುಸುಬೇಟೆಗೆ ಹೋಗುವುದನ್ನು ಸಂಪೂರ್ಣವಾಗಿ ಬಿಟ್ಟಿದ್ದಾನೆ. ನೀವು ಯಾವಾಗಲಾದರೂ ಮಲೆನಾಡಿನಲ್ಲಿ ನಮ್ಮೂರ ಕಡೆಗೆ ಹೋದರೆ ಈ ಕತೆಯನ್ನು ಅವನ ಬಾಯಿಂದಲೇ ಕೇಳಿನೋಡಿ.

ಆಲಂಗಿರಿ

" ಏನಕ್ಕ, ಹೂ ಕೀಳುತಿದ್ದೀ ? "

" ನಮಗೆ ಬೇಕಾದ್ದು ಹೂವಲ್ಲದೆ ಮತ್ತೇನು ? "

" ಹಾರ ಕಟ್ಟಿ ಯಾರ ಕೊರಳಿಗೆ ಹಾಕುತ್ತೀ ? "

" ಯಾರ ಕೊರಳಿಗೆ ಹಾಕಬೇಕೋ ಅವರಿಗೇ "

" ಪಾದಷಹರ ಕೊರಳಿಗೋ ? "

" ಅವರಿಗೂ ಹಾದು."

" ಹಾಗಾದರೆ ಮತ್ತೊಬ್ಬರಿನ್ನಾರು ? "

" ನನ್ನ ದೇವರು."

" ಏನು ! ಆ ಕಲ್ಲು ಪ್ರತಿಮೆ ! "

" ನಿನಗೆ ಕಲ್ಲು ; ಅದೇ ನನಗೆ ದೇವರು "

" ಇನ್ನೂ ಹದಿನೈದು ದಿನ ಇರುವ ಅಭಿಷೇಕಕ್ಕಾಗಿ ಈಗಿನಿಂದಲೂ ಹೂ ಕಟ್ಟುತ್ತೀಯಾ ? "

" ನೀನು ಹಾಸ್ಯಮಾಡಬೇಡ ಹೋಗು."

" ಹಾಸ್ಯವೇನಕ್ಕ ಇದರಲ್ಲಿ ? ಒಂದು ತಿಂಗಳ ಹಿಂದೆ ಪಾದಷಹರು ಸೈನ್ಯ ಕಳುಹಿಸಿದ್ದಾರೆ ; ಆ ವಿಗ್ರಹವನ್ನು ತಂದು, ಜುಮ್ಮಾಮಸೀದಿಯ ಮೆಟ್ಟಲಿಗೆ ಹಾಕಿಸಿ ಎಲ್ಲರೂ ತುಳಿಯುವಂತೆ ಮಾಡುತ್ತಾರೆ. ನೀನೂ ಅದರ ಮೇಲೆ ನಡೆಯಬೇಕೆಂದು ಬಲಾತ್ಕರಿಸುತ್ತಾರೆ. ಆಗ ನಿನ್ನ ದೇವರನ್ನು ನೋಡಬೇಕು.— ನನ್ನ ಮಾತು ಪಾದಷಹರಲ್ಲಿ ಹೇಗೆ ನಡೆಯುತ್ತೆ ಕಾಣೆಯಾ ? "

" ನಿನ್ನ ಮಾತು ನಿನ್ನರೂಪಿರುವವರೆಗೂ ನಡೆಯುತ್ತೆ. ಆ ಮೇಲೆ ನಿನ್ನ ಪಾಡು ನಾಯಿಗೂ ಬೇಡ. ಅಲ್ಲಿ ದೇವರಿಗೂ ನಿನ್ನಂಥ ಪಾಪಿಯ ಮೇಲೆ ಕೃಪೆ ಇರುವುದಿಲ್ಲ. ಇಲ್ಲಿ ಪಾದಷಹರೂ ಕೈ ಬಿಡುವರು."

"ನೀನು ಹಾಳಾಗು!" ಎಂದು ರೋಷದಿಂದ ಹೇಳುತ್ತಾ ಮೊದಲು ಮಾತನಾಡಿದವಳು ಕಣ್ಣೀರು ಸುರಿಸಿದಳು.

ಸ್ವಲ್ಪ ಹೊತ್ತು ಇಬ್ಬರೂ ತಲೆ ಬಗ್ಗಿಸಿಕೊಂಡು ಸುಮ್ಮನಿದ್ದರು. ಆ ಮೇಲೆ ಒಬ್ಬರ ಮುಖವನ್ನೊಬ್ಬರು ದುರುಗುಟ್ಟಿಕೊಂಡು ನೋಡಿದರು. ಇವರಿಬ್ಬರ ನಡುವೆ ಮುದುಕನೊಬ್ಬನು ಬಂದು ನಿಂತ. ಅವನು ಬಿಳಿಯ ಷರಾಯಿಯನ್ನು ಹಾಕಿಕೊಂಡಿದ್ದ. ಮೊಳಕಾಲವರೆಗೂ ಇದ್ದ ಅದೇ ತರದ ನಿಲುವಂಗಿ. ಕಾಲಿನಲ್ಲಿ ತುರ್ಕಿಯ ಚಪ್ಪಲಿ. ತಲೆಯ ಮೇಲೆ ಜರತಾರಿಯ ಪೇಟ. ಬಲಗೈಯಿಂದ ಗಡ್ಡವನ್ನು ಸವರುತ್ತಾ, ತನ್ನ ಹೆಂಡಿರ ಕಡೆ ತಿರುಗಿ, "ಯಾಕೆ ಅಳುವೆ ಉದಯು?" ಎಂದ.

ಈತನೇ ಮೊಗಲ್ ಚಕ್ರವರ್ತಿಯಾದ ಅವರಂಗಜೇಬ್. ಅವನನ್ನು ಆಲಂಗೀರ್ ಎಂದೂ ಕರೆಯುತ್ತಿದ್ದರು. ಅಳುತ್ತಿದ್ದವಳು ಅವನ ಎರಡನೆಯ ಹೆಂಡತಿ ಉದಯಪುರಿ. ಅವಳ ರೂಪನ್ನು ಮೋಹಿಸಿಯೇ, ಅವಳನ್ನು ಕೂಡಿದ್ದ ತನ್ನ ಅಣ್ಣ ದಾರನನ್ನೂ ಕೊಂದು, ಬಡವಳಾಗಿದ್ದರೂ ಅವಳನ್ನೇ ಅವರಂಗಜೇಬನು ವರಿಸಿದ್ದು. ಜಾತಿಯಲ್ಲಿ ಅವಳು ಕ್ರಿಸ್ತರವಳು. ಅವಳಲ್ಲಿ ಅವನಿಗೆ ವಿಶ್ವ ಪ್ರೇಮ. ಅವಳ ಮಾತೆಂದರೆ ಅವನಿಗೆ ವೇದವಾಕ್ಯ. ಅವನು ಅವಳ ಮನೋಭೀಷ್ಟಗಳನ್ನೆಲ್ಲಾ ಸಲ್ಲಿಸುತ್ತಿದ್ದ. ಎರಡನೆಯವಳು ಯೋಧಪುರದ ಮಹಾರಾಣನ ತಂಗಿ. ರಜಪೂತೆ; ವಿಷ್ಣುಭಕ್ತೆ; ಪಾದಷಹನ ಪಟ್ಟಮಹಿಷಿ. ಹೆಸರಿಗೆ ಮಾತ್ರ ಇವಳು ರಾಣಿ. ಎಲ್ಲಾ ಸೌಭಾಗ್ಯಗಳಲ್ಲಿಯೂ ಉದಯುಳೇ ಚಕ್ರವರ್ತಿನಿ.

ಪಾದಷಹನ ಮೃದುಮಾತನ್ನು ಕೇಳಿ ಉದಯುಳು ತನ್ನ ತೊಯ್ದ ಕಣ್ಣಿನ ಕಟಾಕ್ಷವನ್ನು ಬೀರುತ್ತಾ, "ದೊರೆಯೇ! ಅಕ್ಕ ನನ್ನನ್ನು ಅವಮಾನ ಪಡಿಸಿದಳು" ಎಂದು ಹೇಳಿದಳು.

"ಹೇಗೆ?" ಎಂದು ನಸುನಗೆಯಿಂದ ಅವರಂಗಜೇಬನು ಅವಳನ್ನು ಕೇಳಿದ.

"ಅಕ್ಕ ಹೂ ಕೊಯ್ಯುತ್ತಿದ್ದಳು. 'ಯಾರ ಕೊರಳಿಗೆ ಹಾಕಲು ಹಾರ? ಕಲ್ಲಿನ ಕೊರಳಿಗೋ?' ಎಂದೆ. 'ನಿನ್ನ ರೂಪಿರುವವರೆಗೂ

ನಿನಗೆ ಗೌರವವಿದೆ. ಆಮೇಲೆ ದೇವ ಮತ್ತು ಪಾದಷಹರಿಂದ ಬಿಡಲ್ಪಟ್ಟ ನೀನು ಸತ್ತ ನಾಯಿಯಂತಿರುತ್ತೀ' ಎಂದಳು. ದೊರೆಯೇ! ರಾಣಿ ಯಾಗಿದ್ದುಕೊಂಡೂ ಹೀಗೆಲ್ಲ ಮಾತುಗಳು...."

"ಯೋಧು, ನಿನಗೆ ತಲೆಹರಟೆ ಬಹಳವಾಗಿ ಹೋಗಿದೆ. ಹದ್ದು ಮೀರಿ ಮಾತನಾಡಲು ಪ್ರಾರಂಭಿಸಿದ್ದೀ. ನಿನಗೆ ಬೇಕು...."

"ಪಾದಷಹ! ತಮ್ಮ ಸೇವಕಳು ಯಾವ ತಪ್ಪನ್ನೂ ಮಾಡಿಲ್ಲ. ಮಹಾರಾಣಿಯವರೇ ಇಲ್ಲಿಗೆ ಬಂದು ಕೆಣಕಿದರು. ಗುಲಾಮರಿಗೂ ಸಹ ಸ್ವಾತಂತ್ರ್ಯವುಂಟು; ದೇವನನ್ನು ಪೂಜಿಸುವ ಹಕ್ಕುಂಟು."

"ಇರಬಹುದು. ಆದರೆ ಅವಳನ್ನು ಯಾಕೆ ಹಾಗೆ ಬೈದೆ?"

"ಆಕೆ ನನ್ನ ದೇವನನ್ನು ಬೈದಳು. ನಾನು ಆಕೆಯ ದೇವರ ಮೇಲೆ ಏನೂ ಹೇಳಲಿಲ್ಲ. ಅವಳ ದೇವನೂ ನನ್ನ ದೇವನೇ. ಆತನೇ ವಿಶ್ವಮೂರ್ತಿ. ಆಕೆಗೆ 'ರೂಪು ಶಾಶ್ವತವಲ್ಲ; ಕೀರ್ತಿಯೊಂದೇ ಸ್ಥಿರ' ಎಂದೆ. ಅಷ್ಟೆ."

"ನಿನ್ನದು ಬಲು ಸತ್ಯದೇವರೋ! ನಿನ್ನಿಂದಲೇ ಅದನ್ನು ತುಳಿಸುತ್ತೇನೆ ನೋಡುವೆಯಾ?"

"ಸತ್ಯವೊಂದಿದ್ದರೆ ಅದು ಎಂದಿಗೂ ಆಗದು, ಪ್ರಭುವೆ!"

"ಎಂದಿಗೂ ಆಗದೋ? ಆಗಲಿ ನೋಡೋಣ. ಈ ಪಾಡ್ಯಮಿ ಅಲ್ಲಿ ಪ್ರತಿಷ್ಠೆ. ಇನ್ನೊಂದು ಪಾಡ್ಯಮಿಯ ಹೊತ್ತಿಗೆ ಅದನ್ನು ಇಲ್ಲಿಗೆ ತರಿಸಿ ಹಾಕಿ ಭಕ್ತಳಾದ ನಿನ್ನಿಂದಲೇ ತುಳಿಸುತ್ತೇನೆ" ಎಂದು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಪಾದಷಹ ಹೇಳಿದ.

"ನಾನು ಅದರ ಮೇಲೆ ಅಂದು ಪಾದಷಹರ ಪಾದಗಳನ್ನು ತೊಳೆಯುತ್ತೇನೆ" ಎಂದು ಉದಯಳು ನಸುನಗೆಯಿಂದ ಕೂಡಿದ ವೈಯಾರದೊಡನೆ ಹೇಳಿದಳು.

ಯೋಧಳು ಏನು ಉತ್ತರವನ್ನೂ ಕೊಡಲಿಲ್ಲ. ಸುಮ್ಮನೆ ಕಣ್ಣೀರು ಸುರಿಸುತ್ತಾ ನಿಂತಳು.

ಆಗ ದಾಸಿಯೊಬ್ಬಳು ಬಂದು, ಪಾದಷಹನಿಗೆ ನಮಸ್ಕರಿಸಿ, ಕಾಗದ ವೊಂದನ್ನು ಕೊಟ್ಟಳು. ಅದನ್ನು ಅವನು ಒಡೆದು ನೋಡಿ, "ಯೋಧು! ನಿನ್ನ ಅಣ್ಣ ಕಾಗದ ಬರೆದಿದ್ದಾನೆ. ನಿನ್ನ ತಾಯಿಗೆ ಖಾಯಿಲೆಯಂತೆ. ನಿನ್ನನ್ನು ನೋಡಲು ಬಲು ಬಯಸುವಳಂತೆ. ತತ್‌ಕ್ಷಣ ಕಳುಹಿಸ ಹೇಳಿದ್ದಾನೆ" ಎಂದನು.

"ಭಕ್ತಳು ದೇವನ ಪೂಜೆಯನ್ನು ಮಾಡುವುದು ತಪ್ಪಿಹೋಗುತ್ತದಲ್ಲ!" ಎಂದಳು ಉದಯಳು.

"ಮುಂದಿನ ತಿಂಗಳು ಪಾಡ್ಯಮಿಯ ದಿನ ಇಲ್ಲಿ ಇರುವುದಾದರೆ ಕಳುಹಿಸುತ್ತೇನೆ. ಇಲ್ಲವಾದರೆ ಇಲ್ಲ" ಎಂದು ಪಾದಷಹನು ನಗುತ್ತಾ ಯೋಧಳಿಗೆ ಹೇಳಿದ.

"ಆಕೆಯನ್ನು ಒಮ್ಮೆ ನೋಡಿ ಅಷ್ಟರೊಳಗಾಗಿಯೇ ಬಂದುಬಿಡುತ್ತೇನೆ. ನನ್ನ ದೇವನ ಮುಖವನ್ನು ಅಂದು ನೋಡುತ್ತೇನೆ. ಅಪ್ಪಣೆಯಾದರೆ ಇಂದೇ ಹೊರಡುತ್ತೇನೆ."

"ಆಗಬಹುದು. ಮರೆಯದಿರು ಪಾಡ್ಯಮಿಯನ್ನು."

ಯೋಧಳು ಕಣ್ಣೀರು ಸುರಿಸುತ್ತಾ, ಕೈಯಲ್ಲಿ ಹೂಬುಟ್ಟಿಯನ್ನು ಹಿಡಿದುಕೊಂಡು ಹೋದಳು.

"ಆಲಂಗೀರ್ ಪಾದಷಹ! ತಾವು ತಿಮ್ಮರಸನನ್ನು ಸೆರೆಹಿಡಿದು ಅವನನ್ನೂ ವಿಗ್ರಹವನ್ನೂ ತರಹೇಳಿ ಕಳುಹಿಸಿದ ಸೈನ್ಯವು ಹೋಗಿ ಒಂದು ತಿಂಗಳಾದಾಗ್ಯೂ ಇನ್ನೂ ಅದರ ಯಾವ ಸುದ್ದಿಯೂ ಬಂದೇ ಇಲ್ಲ."

"ನಾನೂ ಅದನ್ನೇ ಯೋಚಿಸುತ್ತಿದ್ದೇನೆ, ಉದಯು"

"ಪಾಡ್ಯಮಿ ಇನ್ನು ಹದಿನೈದು ದಿನವಿದೆ. ಆ ದಿನ ನನ್ನ ಮನೋರಥವನ್ನು ಸಲ್ಲಿಸಿದರೆ ತಮ್ಮನ್ನು ಜನ್ಮಜನ್ಮದಲ್ಲಿಯೂ ನೆನೆಯುವೆನು" ಎಂದು ಉದಯಳು ಹೇಳುತ್ತಾ ಪಾದಷಹನ ಕಾಲುಗಳನ್ನು ಹಿಡಿದುಕೊಂಡಳು.

"ಆಗಲಿ ಬಿಡು, ಉದಯು. ನಾಳೆ ನಾನೇ ಹೊರಟು ಆ ಕಾಫರನ ತಲೆಯನ್ನೂ ವಿಗ್ರಹವನ್ನೂ ತರುತ್ತೇನೆ."

“ನಾನೇ ಧನ್ಯಳು!” ಎಂದು ಉದಯಳು ಪಾದಪಹನನ್ನಪ್ಪಿ ಕೊಂಡು ಮುದ್ದಿಟ್ಟಳು.

೨

ಪಾಡ್ಯಮಿಯ ದಿನ ಬೆಳಗ್ಗೆ ಹತ್ತುಗಂಟೆಯಲ್ಲಿ ಗಿರಿಪುರಕ್ಕೆ ಹೋಗುವ ರಸ್ತೆಯಲ್ಲಿ ರಜಪೂತ ರಮಣಿಯೊಬ್ಬಳು ಹಬ್ಬದ ಉಡುಗೆಯನ್ನುಟ್ಟು, ಕೈಯಲ್ಲಿ ಬೆಳ್ಳಿಯ ತಟ್ಟೆಯೊಂದನ್ನು ಹಿಡಿದುಕೊಂಡು, ಸ್ವಲ್ಪ ದೂರದಲ್ಲಿ ಕೇಳಿಸುತ್ತಿರುವ ವಾದ್ಯಗಳ ನಾದವನ್ನು ಆಲಿಸುತ್ತಾ, ಮದುವೆ ಹೆಣ್ಣಿನಂತೆ ಹೆಜ್ಜೆ ಇಡುತ್ತಾ ಬರುತ್ತಿದ್ದಳು. ತಟ್ಟೆಯಲ್ಲಿ ನಾನಾ ತರದ ಹಣ್ಣುಗಳೂ ಮತ್ತು ಎರಡು ಬೆಳ್ಳಿಯ ಲೋಟಗಳೂ ಇದ್ದುವು. ಅವುಗಳೊಂದರಲ್ಲಿ ನೀರು; ಮತ್ತೊಂದರಲ್ಲಿ ಹಾಲು. ಮುಂದೆ ಮುಂದೆ ಹೋಗುತ್ತಾ ರಮಣಿಯು ಇದ್ದಕ್ಕಿದ್ದಂತೆಯೇ ನಿಂತು ಹಿಂದುಗಡೆ ನೋಡಿದಳು. ಅವಳಿಗೆ ಕುದುರೆಯೊಂದರ ಖುರಪುಟ ಧ್ವನಿಯು ಕೇಳಿಸಿತು. “ಏನಿರಬಹುದು!” ಎಂದುಕೊಂಡು, ತಟ್ಟೆಯನ್ನು ಕೆಳಗೆ ಬೆಳೆದಿದ್ದ ಹುಲ್ಲಿನ ಮೇಲಿಟ್ಟು, ಕುದುರೆಯನ್ನು ನೋಡುವ ಉತ್ಸುಕತೆಯಿಂದ ಆಕೆ ನಿಂತಳು. ಬಹು ದೂರದಲ್ಲಿ ಆ ದಾರಿಯಲ್ಲಿಯೇ ಬರುತ್ತಿದ್ದ ಅರಬ್ಬೀ ಕರಿಯ ಟಾಕಣವೊಂದು ಆಕೆಗೆ ಕಂಡುಬಂದಿತು. ಅದು ನಾಗಾಲೋಟದಿಂದ ಬರುತ್ತಿತ್ತು. ಸವಾರನು ಅದರ ಮೇಲೆ ಕುಳಿತಿರಲಿಲ್ಲ. ಅವನ ಒಂದು ಕಾಲು ಮಾತ್ರ ಒಂದು ರಿಕಾಪಿಗೆ ಸಿಕ್ಕಿಕೊಂಡಿತ್ತು. ಎರಡು ಕಾಲುಗಳೂ ಮೇಲೆ; ತಲೆ ಕೆಳಗೆ. ಅವನು ಒಟ್ಟಿನಲ್ಲಿ ಮರದ ಕೊಂಬೆಗೆ ಸಿಕ್ಕಿಕೊಂಡಿದ್ದ ಬಾವುಲಿಯಂತಿದ್ದ; ಮುಖ ಮತ್ತು ನೆಲವನ್ನು ಸೋಕುತ್ತಿದ್ದ ಕೈಗಳಿಗೆ ಹಾದಿಯಲ್ಲಿ ಮುಳ್ಳು ತಗಲಿ ರಕ್ತ ಸುರಿಯುತ್ತಿತ್ತು. ರಮಣಿಯು ಈ ದೃಶ್ಯವನ್ನು ನೋಡಿ ದುಃಖಾಕ್ರಾಂತಳಾಗಿ ಕುದುರೆಯು ತನ್ನ ಮುಂದೆ ಬಂದೊಡನೆಯೇ, “ರಾಜ!” ಎಂದಳು. ಕೋಪೋದ್ರೇಕದಿಂದಿದ್ದ ಕುದುರೆಯು ರಮಣಿಯ ಮಂಜುಳ ವಾಣಿಯು ಕಿವಿಗೆ ಬಿದ್ದೊಡನೆಯೇ ಅವಳ ಬಳಿಗೆ ಬಂದು ನಿಂತಿತು.

ಅವಳು ರಿಕಾಪಿಗೆ ಸಿಕ್ಕಿಕೊಂಡಿದ್ದ ಮನುಷ್ಯನನ್ನು ತನ್ನ ಕೈಗಳಿಂದ ಎಳೆ ಮಗುವಂತೆ ಎತ್ತಿಕೊಂಡು ಕೆಳಗಿದ್ದ ಹಸುರಿನ ಮೇಲೆ ಬಿಟ್ಟಳು.

ಅವನ ಬಲಗೈಯಲ್ಲಿದ್ದ ಬಿಚ್ಚುಗತ್ತಿಯು ಹಾಗೆಯೇ ಇತ್ತು. ಆಕೆ ಕುದುರೆಯನ್ನು ಪಕ್ಕದ ಮರಕ್ಕೆ ಕಟ್ಟಿಹಾಕಿ, "ರಾಜ! ಎಂತಹ ಕೆಲಸ ಮಾಡಿದೆ!" ಎನ್ನುತ್ತಾ ಅದರ ಬೆನ್ನನ್ನು ಸವರಿದಳು. ಅದು ದಾಸನಂತೆ ತಲೆ ಬಗ್ಗಿಸಿತು.

ರಮಣಿಯು ಸವಾರನನ್ನು ಮುಟ್ಟಿನೋಡಿದಳು. ಮೂರ್ಛಿತನಾಗಿದ್ದ. ಆಕೆ ತನ್ನ ಸೀರೆಯ ಸೆರಗನ್ನು ಹರಿದು, ತಟ್ಟೆಯಲ್ಲಿದ್ದ ಲೋಟದಲ್ಲಿನ ನೀರಿನಲ್ಲಿ ನೆನಸಿ, ಸವಾರನ ತಲೆ ಮತ್ತು ಇತರ ಭಾಗಗಳಲ್ಲಿನ ಗಾಯಗಳನ್ನೆಲ್ಲಾ ತೊಳೆದು ಅವುಗಳಿಗೆ ಕಟ್ಟುಗಳನ್ನು ಕಟ್ಟಿದಳು. ಅವನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು, ಸೀರೆಯ ಅಂಚಿನಿಂದ ಚಾಮರವನ್ನಿಕ್ಕುತ್ತಿದ್ದಳು. ಆಗ ಪಕ್ಕದ ಮರಗಳನ್ನು ಅಲುಗಿಸುತ್ತಿದ್ದ ಮಂದಮಾರುತವು ಇವರ ಮೇಲೆ ಬೀಸಿತು. ಕೋಗಿಲೆಯು ಮರದ ಮೇಲಿನಿಂದ "ಕೂ" ಎಂದಿತು. ಈ ದೃಶ್ಯವನ್ನು ನೋಡಿ, ಕಣ್ಣೀರು ಸುರಿಸುತ್ತಿದ್ದ ರಮಣಿಯು ನಕ್ಕಳು. ಅವಳ ಸೊಬಗನ್ನು ಆಗ ನೋಡಬೇಕಾಗಿತ್ತು ಸವಾರನು!

ಸ್ವಲ್ಪ ಹೊತ್ತಾದ ಮೇಲೆ ಮೂರ್ಛಿತನಾಗಿದ್ದ ಸವಾರನಿಗೆ ಸರಿಯಾಗಿ ಉಸಿರಾಡಲಾರಂಭಿಸಿತು. ಕಣ್ಣು ತೆರೆದು ಸುತ್ತಲೂ ನೋಡಿದ. ವಸಂತನು ಪ್ರಕೃತಿಯೊಡನೆ ನರ್ತಿಸುತ್ತಿರುವುದನ್ನು ಕೆಂಗಣ್ಣುಗಳಿಂದ ಕಂಡ. ಆದರೆ ಭೂಲೋಕದ ಜೀವಿಯಂತೆ ಈ ನೋಟದಿಂದ ಪುಳುಕಿತನಾಗಲಿಲ್ಲ. ಉಸಿರಾಡುತ್ತಿದ್ದರೂ ಇಹಲೋಕದ ಜ್ಞಾನವಿಲ್ಲವೆಂದೇ ಹೇಳಬಹುದು. ರಮಣಿಯು ತಟ್ಟೆಯಲ್ಲಿದ್ದ ಹಣ್ಣುಗಳನ್ನು ಸುಲಿದು ಸವಾರನ ಬಾಯಲ್ಲಿ ಸ್ವಲ್ಪ ಸ್ವಲ್ಪವಾಗಿಟ್ಟಳು. ಕನಸಿನಲ್ಲಿ ಉಂಡಂತೆ ಅವನು ತಿಂದನು. ಕೊನೆಯಲ್ಲಿ ಆಕೆ ಹಾಲನ್ನು ಕುಡಿಸಿದಳು. "ಉಸ್ಸಪ್ಪಾ!" ಎಂದು ಸವಾರನು ಕಣ್ಣುಗಳನ್ನು ತಿರುಗಿಸಿ ಹಾಗೆಯೇ ಮುಚ್ಚಿಕೊಂಡನು. ಬಹುದೂರ ಸವಾರಿಮಾಡಿ ಆಯಾಸ ಪಟ್ಟಿದ್ದುದರಿಂದಲೂ ಮತ್ತು ಗಾಯಗಳ ನೋವು ಸ್ವಲ್ಪ ಕಡಮೆಯಾಗಿದ್ದುದರಿಂದಲೂ ಅವನಿಗೆ ಚನ್ನಾಗಿ ನಿದ್ದೆ ಬಂದಿತು.

ರಮಣಿಯು ಸುಮಾರು ಎರಡು ಗಂಟೆಗಳ ಹೊತ್ತು ಸವಾರನ ಮುಖವನ್ನೀಕ್ಷಿಸುತ್ತಾ ಕುಳಿತಳು. ಕಣ್ಣೀರು ತೊಟ್ಟಿಕ್ಕುತ್ತಿತ್ತು. ಅವಳು

ಏನನ್ನೋ ನೆನೆದು ನಗುವಳು; ಕ್ಷಣಕ್ಷಣಕ್ಕೂ ಅವನನ್ನು ಮುಟ್ಟಿ ನೋಡುವಳು. ಕಟ್ಟಕಡೆಯಲ್ಲಿ ಆಕೆ "ಪ್ರಾಣಭಯವಿಲ್ಲ" ಎಂದು ಕೊಂಡು, ಅವನ ತಲೆಯನ್ನು ತೊಡೆಯ ಮೇಲಿನಿಂದ ಹುಲ್ಲ ಮೇಲಿಟ್ಟು, ಹೂವಿನ ಹಾರವೊಂದನ್ನು ಮಾತ್ರ ತಟ್ಟೆಯಲ್ಲಿಟ್ಟುಕೊಂಡು, ಮಿಕ್ಕ ಹಣ್ಣು ಗಳಲ್ಲಿ ಕೆಲವನ್ನು ಕುದುರೆಗೆ ತಿನ್ನಿಸಿ, ಉಳಿದುವನ್ನು ಸವಾರನ ಬಳಿ ಯಲ್ಲಿಯೇ ಬಿಟ್ಟು, ಕುದುರೆಯನ್ನು ತಡವಿ, "ಹೋಗಿ ಬರುತ್ತೇನೆ, ರಾಜ!" ಎಂದು ಅದನ್ನು ನೋಡುತ್ತಾ, ವಾದ್ಯಘೋಷವು ಕೇಳಿ ಬರು ತ್ತಿದ್ದ ಕಡೆಗೆ ಹೊರಟಳು.

೩

ರಮಣಿಯು ಹೋದ ಸ್ವಲ್ಪ ಹೊತ್ತಿನ ಮೇಲೆ ಸವಾರನು ಇದ್ದ ಕ್ಕಿದ್ದಂತೆಯೇ ಎದ್ದು ಕುಳಿತು, "ಪಾಪಿ, ಕಾಫರ್, ಸಾಯಿ!" ಎಂದು ಕತ್ತಿ ಯನ್ನು ಬೀಸಿದ. ಅದು ಸ್ವಲ್ಪ ದೂರದಲ್ಲಿ ಸೂರ್ಯನ ಕಾಂತಿಯಿಂದ ಥಳಥಳಿಸುತ್ತಾ ಭೂಮಿಯ ಮೇಲೆ ಬಿದ್ದಿತು. ಸುತ್ತಲೂ ತಿರುಗಿ ನೋಡಿದ. ಎಲ್ಲಿ ನೋಡಿದರೂ ಹಸುರಾದ ಗಿಡಮರಗಳೇ. ಹಣ್ಣುಗಳಿದ್ದ ಬಳ್ಳಿಗಳೇ. "ಎಲ್ಲಿರುವೆನು" ಎಂದುಕೊಳ್ಳುತ್ತಾ ಬೆಪ್ಪಾಗಿ ನೋಡಿದ. "ರಾಜೋ ದ್ಯಾನವೇ? ಅಲ್ಲ. ಇಲ್ಲಿ ಕಾಡುಮರಗಳಿವೆ" ಎಂದು, ಬಟ್ಟೆಯ ಕಟ್ಟು ಗಳಿಂದ ಬಿಗಿಯಲ್ಪಟ್ಟಿದ್ದ ತನ್ನ ಕೈಕಾಲುಗಳ ಕಡೆ ನೋಡಿದ. ಕಟ್ಟು ಗಳ ಪಕ್ಕಗಳಲ್ಲಿಯೂ ರಕ್ತಧಾರೆ. "ಇದೇನು ಕನಸೋ!" ಎಂದು ಪಕ್ಕದ ಮರವನ್ನು ನೋಡಿದ. ತನ್ನ 'ರಾಜ' ಅಲ್ಲಿತ್ತು. "ಯಾರೋ ಕಾಫರರು ಗಾಯಪಡಿಸಿರಬೇಕು" ಎಂದುಕೊಂಡು, ಮತ್ತೊಮ್ಮೆ ತನ್ನ ಗಾಯಗಳಿಗೆ ಕಟ್ಟಿದ್ದ ಕಟ್ಟುಗಳ ಕಡೆ ಈಕ್ಷಿಸಿದ. "ಕೋಟ್ಯಧೀಶ್ವರರ ಹೆಂಡಿರು ಉಡುವ ಜರತಾರಿ ಸೀರೆಯನ್ನು ಹರಿದು ನನ್ನಂಥ ಮ್ಲೇಚ್ಛನ ಗಾಯಗಳಿಗೆ ಕಟ್ಟಿರುವವರಾರು!" ಎನ್ನುತ್ತಾ ಇನ್ನೂ ಚೆನ್ನಾಗಿ ದೃಷ್ಟಿಸಿ ನೋಡಿದ. "ಹಿಂದೂ ರಮಣಿಯರು ಉಡುವ ಸೀರೆಯದು!". ಹಿಂದಿನ ನೆನಪಾವುದೋ ಹೊಳೆಯಿತು. ಒಂದೆರಡು ತೊಟ್ಟು ಕಣ್ಣೀರು ಸುರಿಸಿದ. ಹಾಗೆಯೇ ಮುಂದಿರುವ ಕತ್ತಿಯನ್ನೂ ಈಕ್ಷಿಸಿದ. ಕಣ್ಣೀರು ವಾಹಿನಿ ಯಂತೆ ಹರಿಯಲಾರಂಭಿಸಿತು. "ನಾನು ಪಾಪಿ. ಎಷ್ಟೋ ಜನ ಹಿಂದು

ಗಳ ತಲೆಯನ್ನು ಈ ಕತ್ತಿಯಿಂದ ಕಡಿದಿದ್ದೇನೆ. ಎಷ್ಟು ಮಂದಿಯನ್ನು ಜಾತಿ ಕೆಡಿಸಿದ್ದೇನೆ. ಎಷ್ಟು ಜನರನ್ನು ಆನೆಗಳಿಂದ ತುಳಿಸಿ ಹಾವುಗಳಿಂದ ಕಚ್ಚಿಸಿದ್ದೇನೆ. ಹಾ! ಅವರ ಹೆಂಡಿರ ಕಣ್ಣೀರು ಎಷ್ಟು ಹರಿದಿರಬಹುದು ಆ ಮಾತೆಯೊಬ್ಬಳು ನನ್ನಂಥ ಪಾಪಿಯನ್ನು ಕೊಲ್ಲದೆ ಕನಿಕರದಿಂದ ಕಂಡಳಲ್ಲಾ!" ಎಂದು ಪಕ್ಕಕ್ಕೆ ತಿರುಗಿದ. ಸುಲಿದ ಹಣ್ಣಿನ ಹೋಳುಗಳೂ, ಕೆಲವು ಹಣ್ಣುಗಳೂ, ಒಂದೆರಡು ಹೂಗಳೂ ಬಿದ್ದಿದ್ದುವು. "ಯಾರೋ ದೇವನ ದರುಶನಕ್ಕಾಗಿ ಹೋಗುತ್ತಿದ್ದ ಹಿಂದೂ ರಮಣಿ!" ಎಂದು ನಿರ್ಧರಿಸಿಕೊಂಡು, "ಅನಾಥರೇ ಮೊದಲ ದೇವರು ಎನ್ನುವರು ಹಿಂದುಗಳು. ಅವರ ತತ್ವವೇ ಶ್ರೇಷ್ಠ ಮತ್ತು ಲೋಕೋಪಕಾರಕವಾದದ್ದು." ಎಂದುಕೊಂಡು, ಎದ್ದುನಿಂತು, ಕೈಗಳನ್ನು ಮೆಲ್ಲಗೆ ಸ್ವಲ್ಪ ಚಾಚಿ, ದೂರದಲ್ಲಿ ಬಿದ್ದಿದ್ದ ಖಡ್ಗವನ್ನು ತೆಗೆದುಕೊಂಡು ಒರೆಯಲ್ಲಿಟ್ಟು, ಕೆಳಗೆ ಬಿದ್ದಿದ್ದ ಹಣ್ಣುಗಳನ್ನು 'ರಾಜ' ನಿಗೆ ತಿನ್ನಿಸಿ, ತನ್ನ ಗಾಯದ ಕಟ್ಟುಗಳನ್ನೆಲ್ಲಾ ಮೆಲ್ಲಗೆ ಕಿತ್ತುಹಾಕಿ, ಕುದುರೆಯ ಮೇಲೆ ಕುಳಿತು ಸವಾರನು ಹೊರಟ.

ವಾದ್ಯಘೋಷವು ಕೇಳಿ ಬರುತ್ತಿದ್ದ ದೇವಾಲಯದ ಮುಂದೆ ಕುದುರೆ ನುಗ್ಗಿತು. ಸವಾರನು ತನ್ನ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಕುದುರೆಯನ್ನು ಆರಾಧನೆಯಾಗುತ್ತಿದ್ದ ಕಡೆಗೆ ತಿರುಗಿಸಿದ. ಆಗತಾನೆ ಅರ್ಚಕನು ಮಂಗಳಾರತಿ ಮಾಡುತ್ತಿದ್ದ. ಜನರೆಲ್ಲಾ ಕೈಮುಗಿದು ನಿಂತಿದ್ದರು. ಆ ಹೊತ್ತಿನಲ್ಲೇ ಕೈಯಲ್ಲಿ ಕತ್ತಿಯನ್ನು ಹಿಡಿದು ಬಂದ ಸವಾರನನ್ನು ನೋಡಿ ಎಲ್ಲರೂ ಬೆಪ್ಪಾದರು. ಸವಾರನು ಕುದುರೆಯಿಂದ ಚಂಗನೆ ನೆಗೆದು, "ತಿಮ್ಮರಸ!" ಎಂದ.

"ಪಾದಷಹ!" ಎಂದು ತಿಮ್ಮರಸನು ಬಂದು ಮೊಳಕಾಲೂರಿ ಕೈ ಮುಗಿದ.

"ಆ ಪಾಪಿ ತಿಮ್ಮರಸನೆಲ್ಲಿ?" ಎಂದು ಮತ್ತೊಮ್ಮೆ ಪಾದಷಹನು ಚೀರಿದ.

"ಆಲಂಗೀರ್ ಮಹಾಪ್ರಭು! ತಮ್ಮ ಗುಲಾಮು ಇಲ್ಲಿಯೇ ಇದ್ದಾನೆ" ಎಂದು ತಿಮ್ಮರಸನು ಶಾಂತನಾಗಿ ಹೇಳಿದ.

"ರಹೀಂ!" ಎಂದು ಪಾದಷಹನು ಮತ್ತೊಬ್ಬನ ಹೆಸರನ್ನು ಕೂಗಿದ.

"ಸೇವಕನು ತಮ್ಮ ಚರಣತಲದಲ್ಲಿದ್ದಾನೆ" ಎಂದು ಸೈನ್ಯಾಧ್ಯಕ್ಷ ರಹೀಮನು ಮೊಳಕಾಲೂರಿ ನಮಸ್ಕರಿಸುತ್ತಾ ಹೇಳಿದ.

"ಆ ಕಾಫರ ತಿಮ್ಮರಸನನ್ನು ಹಿಡಿದುಕೊಂಡು ಬಾ"

"ಮುಂದೆಯೇ ನಿಂತಿದ್ದಾನೆ, ಮಹಾಪ್ರಭು!"

"ಏನು! ಇವನು ನನ್ನ ಮಗ ಅಕ್ಬರನಲ್ಲವೇ? ಅವನನ್ನು ನನ್ನಿಂದಲೇ ಕೊಲ್ಲಿಸಬೇಕೆಂದಿದ್ದೀಯಾ, ಪಾಪಿ! ನೀನೂ ಒಬ್ಬ ಕಾಫರ! ಎಂದು ಪಾದಷಹನು ಕತ್ತಿಯನ್ನು ಮೇಲಕ್ಕೆತ್ತಿದ. ಅದು ಜಾರಿ ಕೆಳಗೆ ಬಿತ್ತು! ಮಂಗಳಾರತಿಯಿಂದ ಬೆಳಗುತ್ತಿದ್ದ ದೇವರ ಕಡೆ ನೋಡಿ, "ಅಲ್ಲಾ!" ಎನ್ನುತ್ತಾ ಪಾದಷಹನು ಕೈಮುಗಿದ.

ಇದನ್ನು ನೋಡಿ ನಿಂತಿದ್ದ ತಿಮ್ಮರಸನಿಗೆ ಆಶ್ಚರ್ಯವಾಯಿತು. ಬೆಪ್ಪಾಗಿ ಆಲಂಗೀರನನ್ನೇ ನೋಡಿದ. "ತಿಮ್ಮರಸ!" ಎಂದು ಮತ್ತೊಮ್ಮೆ ಸೌಮ್ಯದಿಂದ ಪಾದಷಹನು ಕೂಗಿದ.

ತಿಮ್ಮರಸನು ಮುಗಿದಿದ್ದ ಕೈಯಿಂದ ಕೂಡಿಯೇ "ಮಹಾ ಪ್ರಭು" ಎಂದ.

ಆಗ ಪಾದಷಹನ ಕಣ್ಣಿಗೆ ತಿಮ್ಮರಸನು ತಿಮ್ಮರಸನಂತೆಯೇ ಕಾಣಿಸಲು, "ನನ್ನ ಮಗ ಅಕ್ಬರ್ ಎಲ್ಲಿ?" ಎಂದು ಪಾದಷಹನು ಕೇಳಿದ.

"ಇಲ್ಲಿಗೆ ಅವರು ಬಂದಿಲ್ಲ ಖಾವಂದ್"

ಸ್ವಲ್ಪಕಾಲ ಆಲಂಗೀರನು ತಲೆಬಾಗಿ ಯೋಚಿಸಿದ. ಕತ್ತೆತ್ತಿ ಮತ್ತೊಮ್ಮೆ ದೇವನ ಕಡೆ ನೋಡಿದ. ದಿವ್ಯ ವೆಂಕಟರಮಣ ಸ್ವಾಮಿ! ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಇನ್ನೂ ನೋಡಿದ. ಅಲ್ಲಾ ಅಭಯ ಹಸ್ತದಿಂದ ಎದುರಿಗೆ ನಿಂತಂತಾಯಿತು. ತಪ್ಪಾಯಿತೆಂದು ಕೈ ಮುಗಿಯುತ್ತಾ ಹಾಗೆಯೇ ಇದ್ದ. ಶಿಲುಬೆಯ ಮೇಲಿನ ಕ್ರಿಸ್ತನ ದೇವ ಮೂರ್ತಿ ಕಂಡಿತು.

"ತಿಮ್ಮರಸ!"

"ಏನು ದೊರೆಯೇ!"

ಪಾದಷಹನು ನೋಡುತ್ತಿದ್ದಂತೆಯೇ ಸ್ವಲ್ಪ ಹೊತ್ತಾದ ಮೇಲೆ ಹಿಂದೂ ಪ್ರತಿಮೆಯೇ ಕಂಡಿತು. ಪಾದಷಹನು "ತಿಮ್ಮರಸ, ನೀನು ಮಹಾನುಭಾವ! ಆದುದರಿಂದಲೇ ನೀನು ಪಾಪಿಯಾದ ನನ್ನ ಕಣ್ಣಿಗೆ ಮೊದಲು ಬೀಳಲಿಲ್ಲ" ಎಂದು ಮುಂದೆ ನಿಂತಿರುವ ತಿಮ್ಮರಸನ ಭುಜದ ಮೇಲೆ ಕೈಯಿಟ್ಟು ಹೇಳಿದನು.

"ಪಾದಷಹ! ನನ್ನನ್ನು ಹಾಗೆ ಸ್ತುತಿಸಬೇಡಿ. ನಾನೊಬ್ಬ ಪಾಮರ, ತಮ್ಮ ಮತ್ತು ದೇವನ ಗುಲಾಮ."

"ಗುಲಾಮನೆನ್ನದಿರು, ತಿಮ್ಮರಸ! ಎಲ್ಲಾ ದೇವರೂ ಒಬ್ಬನೇ ಎಂಬ ಜ್ಞಾನವನ್ನು ದೃಷ್ಟಾಂತದೊಡನೆ ತೋರಿಸಿದ ಮಹಮದ್. ನಿನ್ನಿಂದ ದೇವ ದೇವನನ್ನು ಕಂಡೆ. ಇಂಥ ಪಾಪಿಗೆ— ಎಷ್ಟೋ ಜನ ರನ್ನು ಕೊಂದು ಅವರ ರಮಣಿಯರ ಕಣ್ಣೀರ ವಾಹಿನಿಯನ್ನು ಹರಿಸಿದ ಪಾತಕಿಗೆ— ದೇವೇಶನ ದರುಶನವನ್ನು ಕೊಡಿಸಿದೆ."

"ದೇವರೇ ತಮಗೆ ಹೀಗೆ ಜ್ಞಾನೋದಯವನ್ನುಂಟು ಮಾಡಿದ, ಖಾವಂದ್"

"ಅದಿರಲಿ ತಿಮ್ಮರಸ. ನಾನು ವಿಗ್ರಹ ದ್ವೇಷಿ ಎಂದು ತಿಳಿದಿದ್ದ ನೀನು, ನನಗೆ ಬರಬೇಕಾಗಿದ್ದ ತೆರಿಗೆಯಿಂದ ಹಿಂದೂ ದೇವಾಲಯವನ್ನು ಯಾವ ಧೈರ್ಯದಿಂದ ಕಟ್ಟಿಸಲು ಮನಸ್ಸು ಮಾಡಿದೆ?"

"ದೇವನ ಆಜ್ಞೆಯಂತೆ."

"ಹೇಗೆ ಹೇಳು!"

"ಪಾದಷಹ! ಆ ದಿನ ಸೈನ್ಯ ಸಮೇತನಾಗಿ ಬಂದು, ಈ ಪ್ರಾಂತ ದಲ್ಲೆಲ್ಲಾ ತೆರಿಗೆಯನ್ನು ವಸೂಲುಮಾಡಿ, ಈ ಕಾಡಿಗೆ ಬರುವ ವೇಳೆಗೆ ರಾತ್ರಿಯಾದುದರಿಂದ ಈ ದಿಣ್ಣೆಯ ಮೇಲೆಯೇ ಮಲಗಿದೆವು. ಹೊದ್ದು ಕೊಂಡಿದ್ದರೂ ಬಲು ಛಳಿಯಿಂದ ನಡುಗಿದೆ. 'ದೇವ, ಛಳಿಯನ್ನು ಏಕೆ ಹೀಗೆ ಕೊಡುತ್ತಿದ್ದೀ?' ಎಂದುಕೊಂಡೆ. ನನ್ನ ಮುಂದೆ ಪುಂಡ್ರಧಾರಿ

ಯಾದ, ಚತುರ್ಭುಜನಾದ, ನನ್ನ ಮನೆ ದೇವರಾದ, ಈ ಸ್ವಾಮಿಯು ನಿಂತಂತಾಯಿತು. 'ನನ್ನನ್ನು ನೋಡು! ಬಟ್ಟೆಯಿಲ್ಲ; ಹೊಟ್ಟೆಗಿಲ್ಲ. ಹಿಂದೆ ವಸಿಷ್ಠರು ದೇವಲೋಕದ ಚಿಂತಾಮಣಿಯಿಂದ ನನಗೆ ತಿಂಡಿ ತೀರ್ಥಗಳನ್ನು ತರಿಸಿಕೊಡುತ್ತಿದ್ದರು. ಆ ಕಾಲವೂ ಕಳೆಯಿತು. ಆ ನೆನಪಿಗಾಗಿಯೇ ಅವರಿದ್ದ ಊರಿಗೆ ಚಿಂತಾಮಣಿ ಎಂದು ಹೆಸರಿಟ್ಟಿದ್ದಾರೆ ನೋಡು. ನೀನಂತೂ ಹಣ ವಸೂಲು ಮಾಡಿದ್ದೀ. ಅದು ಹಿಂದೂ ಮುಸಲ್ಮಾನರಿಬ್ಬರ ಹಣವೂ ಹೌದು. ನನಗಾಗಿ ಒಂದು ಮನೆಯನ್ನು ಕಟ್ಟಿಸು. ಅದಕ್ಕೆ ನಿನ್ನ ಒಡೆಯನ ಹೆಸರನ್ನೇ ಇಟ್ಟು, ಆತನನ್ನು ನೋಡಲು ಬರಹೇಳು" ಎಂದು ಹೇಳಿದರು.

"ಆಮೇಲೆ?"

"ಸ್ವಾಮಿ! ನಾನೊಬ್ಬನೇ ಈ ಸೈನ್ಯದಲ್ಲೆಲ್ಲಾ ಹಿಂದುವು. ತಮ್ಮ ಕೃಪೆಯಿಂದ ಮುಸಲ್ಮಾನ ಸೈನ್ಯಾಧ್ಯಕ್ಷನಾಗಿದ್ದೇನೆ. ನಿಮ್ಮ ಮಾತಿನಂತೆ ನಡೆಸಿದರೆ ಮುಸಲ್ಮಾನರಾಗಿರುವ ಸೈನಿಕರೆಲ್ಲಾ ನನ್ನನ್ನು ಬಂದಿಯಾಗಿ ಪಾದಷಹರ ಬಳಿಗೆ ಎಳೆದೊಯ್ಯುವರು. ನನಗೇನೋ ನಿಮ್ಮ ಮೇಲೆ ಪ್ರೀತಿಪೂರಿತವಾದ ಭಕ್ತಿಯಿದೆ. ಆದರೇನು ಮಾಡಲಿ? ನಾನೊಬ್ಬ ಬಡ ಹಿಂದು" ಎಂದೆ.

"ಆಗ ದೇವರು ಏನು ಹೇಳಿದ?"

"ಸೈನಿಕರಿಗೂ ಹೇಳುತ್ತೇನೆ. ನೀನು ಮಾಡುವ ಕಾರ್ಯಗಳಿಗೆಲ್ಲಾ ಅವರು ಸಹಕಾರಿಗಳಾದರೆ ಅವರಿಗೆ ಉತ್ತಮವಾಗುವುದೆನ್ನುತ್ತೇನೆ. ನೀನು ಮಾಡುವ ಯಾವ ಕೆಲಸಗಳಿಗೂ ಅವರು ಅಡ್ಡಿಬಾರರು" ಎಂದು ಹೇಳಿದಂತಾಯಿತು. 'ಪಾದಷಹರು ಮತ್ತೊಂದು ಸೈನ್ಯ ಕಳುಹಿಸಿದರೋ?' ಎಂದು ಕೇಳಿದೆ. 'ಅದೂ ಈ ಸೈನ್ಯದವರ ಮನಸ್ಸನ್ನೇ ಹೊಂದುವುದು' ಎಂದು ಉತ್ತರ ಬಂದಿತು. 'ಪಾದಷಹರೇ ಬಂದರೋ?' ಎಂದು ಬೆಪ್ಪಾಗಿ ಕೇಳಿದೆ. 'ಅವರ ಮನಸ್ಸನ್ನೂ ತಿರುಗಿಸುತ್ತೇನೆ' ಎಂದು ನಗುತ್ತಾ ಹೇಳಿ ಅದೃಶ್ಯರಾದರು. ಬೆಳಿಗ್ಗೆ ನಾನು ಎದ್ದೊಡನೆಯೇ ಸೈನಿಕರೆಲ್ಲರೂ ತಮ್ಮ ಕನಸನ್ನು ತಿಳುಹಿಸಿದರು. ನನ್ನ ಕನಸನ್ನೂ ಅವರಿಗೆ ಹೇಳಿದೆ. ಎಲ್ಲರೂ ನಾನು ಮಲಗಿದ್ದ ನೆಲವನ್ನು ಅಗೆ

ದರು. ಎರಡು ಆಳುದ್ದದ ಕೆಳಗೆ ಈ ಸೌಮ್ಯ ಮೂರ್ತಿಯು ದೊರಿಯಿತು. ದೇವಾಲಯವನ್ನು ಕಟ್ಟಿಸಿ, ದೇವರ ಆಜ್ಞೆಯಂತೆ ತಮ್ಮ ಹೆಸರನ್ನೇ ಈ ಊರಿಗಿಟ್ಟು, ಪ್ರತಿಷ್ಠೆಯ ದಿನವನ್ನು ಲಗ್ನಪತ್ರಿಕೆಯ ಮೂಲಕ ತಿಳುಹಿಸಿದೆ. ತಾವು ಕಳುಹಿಸಿದ ಸೈನ್ಯವೂ ಬಹಳ ಸಹಾಯ ಮಾಡಿತು.''

"ನೀನು ಪುಣ್ಯವಂತ ತಿಮ್ಮರಸ! ದೇವನೊಡನೆ ಮಾತನಾಡಿದೆ. ನಾನೂ ಪುಣ್ಯಶಾಲಿಯೆಂದೇ ಹೇಳಬೇಕು. ಎಷ್ಟೋ ಪಾಪಮಾಡಿದ್ದರೂ ದೇವನನ್ನು ನೋಡಿದೆ. ಅದೇನೋ ಕರ್ಣಾಟಕದ ಎಲ್ಲೆಗೆ ಬರುತ್ತಾ ಬರುತ್ತಾ ನನ್ನ ಕಠಿಣ ಹೃದಯವು ಕರಗುತ್ತಾ ಬಂದಿತು. ಇದರ ಪ್ರಕೃತಿ ಸೌಂದರ್ಯ ಹಾಗಿದೆ. ಆದುದರಿಂದಲೇ ದೇವನ ವಾಸಗೃಹವಾಗಿದೆ. ನನ್ನ ಕಡೆಗಾಲದಲ್ಲಿ ಇಲ್ಲಿಯೇ ಇದ್ದು ಪ್ರಾಣಬಿಡಬೇಕೆಂದಿದ್ದೇನೆ. ಇಲ್ಲಿಗೆ ಸ್ವಲ್ಪ ದೂರದಲ್ಲಿ, ಆ ತೋಪಿನಲ್ಲಿ, ಬಹುಶಃ ಕುದುರೆಯಿಂದ ಬಿದ್ದು ಮೂರ್ಛಿತನಾಗಿದ್ದೆ. ಬಹಳ ಹೊತ್ತಾದಮೇಲೆ ಎದ್ದು ನೋಡುವಲ್ಲಿ ನನ್ನ ಗಾಯಗಳೆಲ್ಲಾ ಹಿಂದೂ ರಮಣಿಯೊಬ್ಬಳ ಜರತಾರಿ ಸೀರೆಯ ಸೆರಗಿನ ಕಟ್ಟುಗಳಿಂದ ಕಟ್ಟಲ್ಪಟ್ಟಿದ್ದದ್ದು ಕಂಡಿತು. ಮಹಾತಾಯಿ ಹಣ್ಣು ಹಾಲಿನಿಂದ ಉಪಚರಿಸಿದಂತೆ ಕನಸು. ಪಕ್ಕದಲ್ಲಿ ಹಣ್ಣಿನ ಹೋಳುಗಳು ಬಿದ್ದಿದ್ದುವು. ಹಿಂದುಗಳು ಬಲು ದಯಶಾಲಿಗಳು. ಪಾಪಿಗಳನ್ನೂ—ಕೊಲೆಪಾತಕಿಗಳನ್ನೂ ಸಹ—ಕ್ಷಮಿಸುವರು. ಈ ಗುಣವನ್ನು ಕಂಡೇ ಅಲ್ಲವೆ ನಮ್ಮ ಮುತ್ತಜ್ಜ ಅಕ್ಬರ್ ಸಾರ್ವಭೌಮನು ನಿಮ್ಮೊಡನೆ ಸಂಬಂಧಗಳನ್ನು ಬೆಳಸಿದುದು! ನನ್ನ ಪಟ್ಟ ಮಹಿಷಿಯೂ ಹಿಂದೂ ರಮಣಿಯೇ. ದೈವಭಕ್ತೆ. 'ಎಲ್ಲರ ದೇವರೂ ಒಬ್ಬನೇ ಎಂದು ಹೇಳುತ್ತಿದ್ದಳು. ಆಗ ನನಗೆ ಅವಳ ಮಾತು ರುಚಿಸಲಿಲ್ಲ. ಈಗ ಆಕೆಯ ಪುಣ್ಯವೇ ನನಗೆ ದೇವನ ದರುಶನವನ್ನು ಕೊಡಿಸಿದುದು. ಈ ಸ್ಥಳದಲ್ಲಿಯೇ ನಾನು ಎಲ್ಲಾ ದೇವರೂ ಒಬ್ಬನೇ ಎಂಬ ಜ್ಞಾನಪಡೆದದ್ದು'' ಎಂದು ಹೇಳುತ್ತಾ ಪಾದಷಹ ಒಂದೆರಡು ತೊಟ್ಟು ಕಣ್ಣೀರು ಸುರಿಸಿದ.

"ಪಾದಷಹ! ಸುಮ್ಮನೆ ದುಃಖಿಸಬೇಡಿ. ಪಶ್ಚಾತ್ತಾಪವೇ ಪಾಪಗಳನ್ನೆಲ್ಲಾ ತೊಡೆಯುವುದು."

“ಏನು ತೊಡೆಯುವುದೋ! ಅಂತು ಮುಂದೆ ಎಲ್ಲರೂ ಈ ಪಾಪಿಯ ಹೆಸರನ್ನು ಕೇಳಿದೊಡನೆಯೇ ಬಯ್ಯುವರು. ಈ ಹೆಸರು ಕಿವಿಗೆ ಬಿದ್ದೊಡನೆಯೇ ತಮ್ಮ ಹಳೆಯ ನೆನಪುಗಳೆಲ್ಲಾ ಕಣ್ಣಮುಂದೆ ನಿಂತಂತಾಗಲು ನನ್ನನ್ನು ಹಳಿಯುವರು. ನನ್ನ ಚಿತ್ರವನ್ನು ನೋಡಿ, ಹಿಂದೂ ರಮಣಿಯರು ಕಣ್ಣೀರು ಸುರಿಸುತ್ತಾ ನೆಟ್ಟಿಗೆ ಮುರಿಯುವರು. ಆದುದೆಲ್ಲಾ ಆಗಲಿ. ಇನ್ನು ಮೇಲೆಯಾದರೂ ಹಿಂದುಗಳ ಸೋದರನಂತಿರುತ್ತೇನೆ. ನಾನು ನಿಮಗೇನನ್ನು ಮಾಡಬಲ್ಲೆ, ತಿಮ್ಮರಸ! ಏನೇನು ಬೇಕೋ ಕೇಳು, ಎಲ್ಲವನ್ನೂ ಕೊಡುತ್ತೇನೆ.”

“ದೊರೆಯೇ! ಈ ದೇವಾಲಯದ ಬಳಿ ಇರುವ ಜಮೀನನ್ನೆಲ್ಲಾ ಇಲ್ಲಿನ ಪೂಜೆಗಾಗಿ ಕೊಡಬೇಕು. ಅದೊಂದೇ ನಮ್ಮ ಪ್ರಾರ್ಥನೆ.”

“ಏನು ಬೇಕೋ ಬರೆ. ನಾನು ರುಜು ಹಾಕುತ್ತೇನೆ.”

ತಿಮ್ಮರಸನು ಒಂದು ತಾಮ್ರದ ತಗಡಿನ ಮೇಲೆ ಬರೆದ. ಪಾದಷಹನು ಅದಕ್ಕೆ ರುಜು ಹಾಕಿ “ಮತ್ತೊಮ್ಮೆ ಮಂಗಳಾರತಿಯಾಗಲಿ. ದೇವನನ್ನು ಚನ್ನಾಗಿ ನೋಡಿ ಮನಸ್ಸು ತೃಪ್ತಿಮಾಡಿಕೊಳ್ಳುತ್ತೇನೆ” ಎಂದ.

ಅರ್ಚಕನು ದೇವನಿಗೆ ಮಂಗಳಾರತಿ ಮಾಡಿದ. ಪಾದಷಹನೂ ತಲೆಯನ್ನು ಬಗ್ಗಿಸುತ್ತಾ ಕೈ ಮುಗಿದು ನಿಂತ. ದೇವನ ಕಡೆ ದೃಷ್ಟಿಸಿ ನೋಡಿದ. ಹಿಂದೂ ರಮಣಿಯೊಬ್ಬಳು ಆನಂದಾಶ್ರುಗಳನ್ನು ಸುರಿಸುತ್ತಾ ದೇವನಿಗೆರಗುತಿದ್ದುದನ್ನು ಕಂಡ. ಆಕೆ ಅಮೌಲ್ಯವಾದ ಸೀರೆಯೊಂದನ್ನು ಉಟ್ಟಿದ್ದಳು. ಅದರ ಸೆರಗು ಹರಿದಿದ್ದಿತು. ಪಾದಷಹನು ಆಕೆಯನ್ನು ನೋಡಿದೊಡನೆಯೇ ನಾಚುತ್ತಾ ತಿಮ್ಮರಸನ ಕಡೆ ತಿರುಗಿ, “ನಾನಿನ್ನು ಹೊರಡುತ್ತೇನೆ ತಿಮ್ಮರಸ, ನಾನು ಈ ದಿನ ರೋಜಕ್ಕೆ ಹೋಗಬೇಕು. ದೆಹಲಿಯಿಂದ ಬರುವಲ್ಲಿ ಅಲ್ಲಿ ನಿಲ್ಲಲಾಗಲಿಲ್ಲ. ನೀನು ಇಲ್ಲಿಯೇ ಇದ್ದುಕೊಂಡು, ದೇವನ ಪೂಜೆಯನ್ನು ಸರಿಯಾಗಿ ನಡೆಯಿಸು” ಎಂದ.

ತಿಮ್ಮರಸ ಮೊದಲಾದವರೆಲ್ಲರೂ “ಜೈ! ಆಲಂಗೀರ್!!” ಎಂದು ಸಂತೋಷ ಧ್ವನಿಮಾಡಿದರು.

" ತಿಮ್ಮರಸ! ನಾನಿನ್ನು ಹೊರಡುತ್ತೇನೆ " ಎಂದು ಪಾದಷಹನು ಕುದುರೆಯನ್ನು ಹತ್ತಿದ. ಅರ್ಚಕನು ಪ್ರಸಾದವನ್ನು ತಂದು ಆಲಂಗೀರನ ಕೈಗೆ ಕೊಟ್ಟ. ಕುದುರೆಯು ಹೊರಟಿತು.

೪

ದೌಲತ್ತಾಬಾದಿನ ಬಳಿ ಇರುವ ರೋಜವೆಂಬ ಗ್ರಾಮದಲ್ಲಿದ್ದ ತನ್ನ ಗುರುವಿನ ಗೋರಿಯನ್ನು ಪೂಜಿಸಲು ಆಲಂಗೀರನು ಆಗಾಗ ಬರುತ್ತಿದ್ದ. ರೋಜ ದಕ್ಷಿಣ ದೇಶದಲ್ಲೆಲ್ಲಾ ಸುಂದರವಾದ ಪ್ರದೇಶ. ಅದರ ಪ್ರಕೃತಿ ಸೌಂದರ್ಯವೇ ಆಲಂಗೀರನ ಮನಸ್ಸನ್ನು ಸೆಳೆಯುತ್ತಿದ್ದಿರಬಹುದು. ಅವನು ಸಂಗೀತವನ್ನು ಇಚ್ಛಿಸುವವನಲ್ಲದಿದ್ದರೂ ಪ್ರಕೃತಿ ಪ್ರಿಯನಾಗಿದ್ದ. ರೋಜದಲ್ಲಿ ಒಂದು ಅರಮನೆಯನ್ನು ಕಟ್ಟಿಸಿ ಅದರ ಸುತ್ತಲೂ ದಕ್ಷಿಣದೇಶದಲ್ಲಿನ ಗಿಡಬಳ್ಳಿಗಳನ್ನೆಲ್ಲಾ ಒಳಗೊಂಡಿದ್ದ ಉದ್ಯಾನವನವನ್ನೂ ಕೊಳಗಳು ಮತ್ತು ಲತಾಗೃಹಗಳನ್ನೂ ಮಾಡಿಸಿದ್ದ.

ಆಲಂಗೀರನು ಶನಿವಾರ ಆಲಂಗಿರಿಗೆ ಹೋಗಿ ದೇವನನ್ನು ನೋಡಿಕೊಂಡು ರೋಜಕ್ಕೆ ಹಿಂತಿರುಗಿದ. (ರೋಜಕ್ಕೂ ಆಲಂಗಿರಿಗೂ ನಲವತ್ತೈದು ಮೈಲಿ.) ಶುಕ್ರವಾರ ಗುರುವಿನ ಗೋರಿಯ ಬಳಿಗೆ ಹೋಗಿ ಪೂಜಿಸಿದ. ಮನೆಗೆ ಬಂದವನು ಹಾಗೆಯೇ ಖಾಯಿಲೆ ಬಿದ್ದ. ಕ್ರಮೇಣ ಜ್ವರ ವಿಷಮಿಸಿತು.

ಮೂರನೆಯ ದಿನ ಸಂಜೆಯಲ್ಲಿ ಆಲಂಗೀರನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಉದಯಳೂ, ಕಾಲುಗಳನ್ನು ಹಿಸುಕುತ್ತಾ ಯೋಧಳೂ ಇದ್ದರು. " ಯೋಧು, ನೀನು ತಲೆಯ ಹತ್ತಿರಕ್ಕೆ ಬಾ. ಉದಯು ನೀನು ಕಾಲಬಳಿಗೆ ಹೋಗು " ಎಂದು ಪಾದಷಹನು ಯೋಧಳ ಮೇಲೆ ದೈನ್ಯ ಕಟಾಕ್ಷವನ್ನು ಬೀರುತ್ತಾ ಹೇಳಿದ. ಇಬ್ಬರೂ ಅವನ ಅಪ್ಪಣೆಯಂತೆಯೇ ನಡೆದರು. ಯೋಧಳು ಪಾದಷಹನ ತಲೆಯನ್ನು ತೊಡೆಯಮೇಲಿಟ್ಟುಕೊಂಡು, ಕೈಯಿಂದ ಮುಟ್ಟಿನೋಡುತ್ತಾ ಕುಳಿತಳು. ಉದಯಳು ಕಾಲಬಳಿ ಕುಳಿತು ಕಣ್ಣೀರು ಸುರಿಸ ತೊಡಗಿದಳು.

“ ಯಾಕೆ ಅಳುವೆ, ಉದಯು!'' ಎಂದು ಪಾದಷಹನು ಕೇಳಿದ.

“ ಕಡೆಗಾಲದಲ್ಲಿ ನಾನು ಬೇಡವಾದೆ. ''

“ ಇಲ್ಲ; ನೀನೂ ಬೇಕು. ಎಲ್ಲರೂ ಬೇಕು. ಆದರೆ ಯೋಧಳು ಸರಿಯಾದ ಗೌರವಕ್ಕೆ ಅರ್ಹಳು. ನಾನು ಬದುಕಿರುವತನಕ ನೀನು ಎರಡನೆಯ ಅರಸಿಯಾಗಿದ್ದರೂ ಚಕ್ರವರ್ತಿನಿಯಂತೆ ಮೆರೆದೆ. ಸಾಯುವಲ್ಲಿಯಾದರೂ ನಿಜವಾದ ಚಕ್ರವರ್ತಿನಿಯನ್ನು 'ಚಕ್ರವರ್ತಿನಿ' ಎನ್ನುತ್ತೇನೆ”

“ ದೊರೆಯೇ! ಅಂದು ನೀವು ಆಲಂಗಿರಿಗೆ ಹೋದಾಗಿನಿಂದ ನಿಮ್ಮ ಮನಸ್ಸೇ ಬದಲಾಯಿಸಿ ಹೋಗಿದೆ. ''

“ ಹೇಗೆ?'' ಎಂದು ಆಲಂಗೀರನು ಕೇಳಿ, “ದಾಹ....'' ಎನ್ನುತ್ತಾ ನಾಲಗೆಯನ್ನು ನೀಡಿದ. ಉದಯಳು ಸ್ವಲ್ಪ ಹಾಲನ್ನು ಕುಡಿಸಿ, “ ಆಲಂಗಿರಿಯ ವಿಗ್ರಹವನ್ನು ತಂದು ಕೊಡುವೆನೆಂದು ಹೇಳಿದ್ದಿರಿ. ಆದರೆ ಕೊಡಲಿಲ್ಲ. ಈ ಸಮಾಚಾರವನ್ನು ಯಾವಾಗ ಎತ್ತಿದರೂ ಉತ್ತರ ಕೊಡುತ್ತಲೇ ಇರಲಿಲ್ಲ. ಅಕ್ಕ ಕೂಡ ನನ್ನ ಬಳಿ ಆ ಪ್ರಸ್ತಾಪವನ್ನು ಯಾವಾಗಲೂ ಎತ್ತಲಿಲ್ಲ'' ಎಂದಳು.

“ ಉದಯು! ಯೋಧಳ ದೇವ ವಿಶ್ವಮೂರ್ತಿ. ನಮ್ಮ ಎಲ್ಲರ ದೇವನೂ ಅವನೇ. ನನಗೆ ಜ್ಞಾನೋದಯವನ್ನುಂಟುಮಾಡಿ, ಸಾಯುವ ಮುಪ್ಪಿನಲ್ಲಿಯಾದರೂ ಇಷ್ಟುಮಟ್ಟಿಗೆ ಪರಮಾತ್ಮನ ನೈಜಸ್ಥಿತಿ ತಿಳಿಯುವಂತೆ ಮಾಡಿದ.'' ಎಂದು ಆಲಂಗಿರಿಯಲ್ಲಿ ನಡೆದ ವೃತ್ತಾಂತವನ್ನೆಲ್ಲಾ ಸಂಕ್ಷೇಪವಾಗಿ ಹೇಳಿ, “ ನೀನೇ ಆ ದಿನ ನನಗೆ ಜೀವದಾನಮಾಡಿದ ರಮಣಿಯಲ್ಲವೇ ಯೋಧು?'' ಎಂದು ಆಲಂಗೀರನು ಕೇಳಿದ.

“ ರಮಣಿಯಲ್ಲ ದೇವ; ತಮ್ಮ ದಾಸಿ—ನಾನೇ.”

“ ದಾಸಿಯಲ್ಲ; ನನ್ನನ್ನುದ್ಧರಿಸಿದ ದೇವಿ. ಬರಿಯ ರೂಪಿನಲ್ಲೇನಿದೆ ಯೋಧು! ಕಡೆಗೆ ನಿಲ್ಲುವುದು ಒಳ್ಳೆಯ ಗುಣವೊಂದೇ. ಅದೆಲ್ಲಾ ಸರಿ, ದೇವನಿಗಾಗಿ ತೆಗೆದುಕೊಂಡು ಹೋಗುತ್ತಿದ್ದ ಹಣ್ಣುಗಳನ್ನು ನನಗೆ ಯಾಕೆ ಕೊಟ್ಟೆ?'' ಎಂದು ಹೇಳುತ್ತಾ “ ಕಾಲುನೋವು. ಸ್ವಲ್ಪ ಗಟ್ಟಿಯಾಗಿ ಹಿಸುಕು, ಉದಯು'' ಎಂದ. ಉದಯಳು ಗಟ್ಟಿಯಾಗಿ ಪಾದಗಳನ್ನು ಒತ್ತಲು ಪ್ರಾರಂಭಿಸಿದಳು.

"ಪತಿಯೇ ಪ್ರಥಮ ದೇವ" ಎಂದು ನಮ್ಮ ಶಾಸ್ತ್ರವು ಸಾರುತ್ತಿದೆ." ಎಂದು ಯೋಧಳು ನಿದಾನವಾಗಿ ಹೇಳಿದಳು.

"ಹೌದು, ಪ್ರಿಯೆ! ಎಲ್ಲರ ಶಾಸ್ತ್ರಗಳೂ ಒಂದೇ. ಆದರೆ ನಮ್ಮಂಥ ಪಾಪಿಗಳು ಅವುಗಳ ವಾಕ್ಯಗಳಿಗೆ ವಿಪರೀತಾರ್ಥಗಳನ್ನು ಕಲ್ಪಿಸಿಕೊಂಡು, ಶಾಸ್ತ್ರದ ಹೆಸರು ಹೇಳಿ ಪಾಪದ ದಾರಿಗೆ ಹೋಗುತ್ತೇವೆ."

"ದೊರೆಯೇ! ಹೋಗಲಿ. ಆ ಕಾಲವನ್ನು ಮರೆಯಿರಿ."

"ಯೋಧು, ಅಣ್ಣನ ಊರಿಗೆ ಹೋಗುತ್ತೇನೆಂದವಳು ಆಲಂಗಿರಿಗೆ ಹೇಗೆ ಬಂದೆ?"

"ಅಣ್ಣನಿಗೆ ಅಲ್ಲಿನ ಸಮಾಚಾರಗಳನ್ನೆಲ್ಲಾ ಮೊದಲೇ ತಿಳುಹಿಸಿದ್ದೆ. ಆತನೇ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದದ್ದು. ಆತನು ಮೊದಲು ದೇವಾಲಯಕ್ಕೆ ಹೋದ. ನನ್ನನ್ನು ಹಣ್ಣುಕಾಯಿ ತರಹೇಳಿದ್ದ. ನಾನೊಬ್ಬಳೇ ಗುಪ್ತಳಾಗಿ, ಹಣ್ಣುಕಾಯಿಗಳ ತಟ್ಟೆಯೊಡನೆ ರಸ್ತೆಯಲ್ಲಿ ಬರುತ್ತಿದ್ದೆ. ದುರವಸ್ಥೆಯಲ್ಲಿದ್ದ ತಮ್ಮನ್ನು ಕುದುರೆಯಮೇಲೆ ಕಂಡೆ. ದೇವರ ದಯೆಯಿಂದ ಅಂದು ತಾವು ನನ್ನ ರಾಜನ ಮೇಲಿದ್ದಿರಿ. ನನ್ನನ್ನು ನೋಡಿದೊಡನೆಯೇ ಅದು ನಿಂತಿತು. ಆಗ ತಮಗೆ ಸೇವೆ ಮಾಡಿದ್ದೆ."

"ನಿನಗೇನೋ ದೇವನನ್ನು ನೋಡಲು ಆಸೆ ಇತ್ತು, ಹೋದೆ. ನಿನ್ನ ಅಣ್ಣನೇಕೆ ಅಲ್ಲಿಗೆ ಸೈನ್ಯಸಮೇತನಾಗಿ ಬಂದಿದ್ದ?" ಎಂದು ಹೇಳುತ್ತಾ ಪಾದಷಹನು ಕೈಗಳನ್ನು ಯೋಧಳ ಕಡೆ ಚಾಚಿದನು.

ಯೋಧಳು ಗಂಡನ ಕೈಗಳನ್ನು ಹಿಸುಕುತ್ತಾ, "ಎನ್ನರಸಾ! ನೀವು ಖಂಡಿತವಾಗಿಯೂ ಅಲ್ಲಿಗೆ ಹೋಗುತ್ತೀರೆಂದುಕೊಂಡೆ. ಹೋದೊಡನೆಯೇ ವಿಗ್ರಹ ಕೀಳಿಸುವಿರಿ; ದೇವರೆಂದರೆ ಹಿಂದುಗಳು ತಮ್ಮ ಪ್ರಾಣವನ್ನೂ ಸಹ ಕೊಡಲು ಸಿದ್ಧವಾಗಿರುತ್ತಾರೆ. ಆದ್ದರಿಂದ ಅವರು ಮೇಲೆ ಬಿದ್ದು ತಮಗೆ ಅಪಾಯ ಸಂಭವಿಸದಂತೆಯೂ, ಪ್ರತಿಷ್ಠೆ ನಡೆಯುವಂತೆಯೂ, ಮಾಡಬೇಕೆಂದೇ ಅಣ್ಣನು ಸೈನ್ಯದೊಡನೆ ಬಂದುದು. ಇದು ನನ್ನ ಆಲೋಚನೆಯೇ, ದೊರೆಯೇ! ಈ ತಪ್ಪಿಗಾಗಿ ತಮ್ಮ ಕ್ಷಮೆ ಬೇಡುತ್ತೇನೆ" ಎಂದು ಹೇಳಿದಳು.

“ ತಪ್ಪೇನೂ ಇಲ್ಲ ಯೋಧು. ನೀನು ಸರಿಯಾದ ಚಕ್ರವರ್ತಿನಿ. ಅನೇಕವೇಳೆ ನಿನ್ನ ಆಲೋಚನೆ ಕೇಳದಿದ್ದರೂ, ನೀನೇ ನನಗೆ ಹೇಳದಂತೆ ಕಾರ್ಯಗಳನ್ನು ನಡೆಸಿ ಒಳ್ಳೆಯದನ್ನು ಮಾಡಿದ್ದೀ! ಅಯ್ಯೋ! ಹುಳುಗಳು ಕೈಕಾಲನ್ನು ಕಚ್ಚುವಂತೆ ಆಗುತ್ತೆ. ಗಟ್ಟಿಯಾಗಿ ಹಿಸುಕು.”

ಈ ಸಂಭಾಷಣೆಯನ್ನು ಕೇಳುತ್ತಿದ್ದ ಉದಯುಳು ಯೋಧಳನ್ನು ಆಶ್ಚರ್ಯದಿಂದ ನೋಡುತ್ತಾ, ಕಣ್ಣೀರು ಸುರಿಸುತ್ತಾ, “ಪಾದಷಹ! ಅಕ್ಕನೇ ತಮ್ಮ ಕಷ್ಟಗಳಲ್ಲಿ ಭಾಗಿಯಾದ ಧರ್ಮಪತ್ನಿ; ನಾನು ಕ್ಷಣಮಾತ್ರ ಸುಖವನ್ನಿತ್ತ ತಮ್ಮ ಬಂಗಾರದವಳು” ಎಂದಳು.

“ ಉದಯು! ಹಾಗೆ ಅನ್ನದಿರು. ನೀವಿಬ್ಬರೂ ನನಗೆ ಒಂದೇ. ಬಾ ಯೋಧಳ ಬಳಿಗೆ....ಬಾಯಿ....ಒಣಗು....ತ್ತಿದೆ....”

ಉದಯುಳು ಲೋಟದಲ್ಲಿದ್ದ ಹಾಲನ್ನು ಕುಡಿಸಿ, ಯೋಧಳ ಬಳಿ ಕುಳಿತಳು. ಆಲಂಗೀರನು ಉದಯುಳ ಕೈಯನ್ನು ಯೋಧಳ ಕೈಲಿಟ್ಟು “ ಅಕ್ಕ....ತಂಗಿಯ....ರಂತೆ....ಇರಿ. ” ಎಂದ. ಒಬ್ಬರ ಮುಖವನ್ನೊಬ್ಬರು ನೋಡಿದರು. ಮೂವರ ಕಣ್ಣಿನಲ್ಲಿಯೂ ಕಣ್ಣೀರೇ!

“ ಆಗಲಿ ” ಎಂದಳು ಉದಯುಳು.

“ ನಿನ್ನ....ದೇವರು....ಹೆಚ್ಚಿನ್ನ....ದಿರು. ಎಲ್ಲರದೂ..... ಒಂದೇ. ಮೂವರೂ....ಆಲಂಗಿರಿ....ಯಲ್ಲಿ....ಕಾಣಿಸಿ....ದರು. ಎಳೆತನ....ದಲ್ಲಿಯೆ ....ಈ ತತ್ವ....ಕ್ಕಾಗಿಯೇ....ಹಿಂದು....ಪಟ್ಟದರಸಿ....ನೀನು....ರಾಣಿ.... ಮಾಡಿದ....ಆದರೆ....ಮೂಢ....ಆ ತತ್ವ....ಅರಿಯ....ಲಿಲ್ಲ. ”

ಯೋಧಳು ಪಾದಷಹನ ಮುಖವನ್ನು ನೋಡುತ್ತಾ ದಿಕ್ಕೇ ತೋಚದೆ ಬೆಪ್ಪಾದಳು. ಉದಯುಳು ಅಳುತ್ತಾ, ಸುಮ್ಮನೆ ಅವನನ್ನೇ ನೋಡುತ್ತಾ, ಅವನು ನಾಲಿಗೆಯನ್ನು ಚಾಚುತ್ತಲೇ ಹಾಲು ಹಾಕುತ್ತಿದ್ದಳು.

“ ಯೋಧು....ನನ್ನ....ಹಿಂದು....ದ್ವೇಷಿ.....ಎಂದು....ಎಲ್ಲಾ.... ಬಯ್ಯು....ವರು. ಚರಿತ್ರೆ....ಎಲ್ಲಾ....ರಕ್ತಾಕ್ಷರ. ನಿಮಗೆ....ಒಳ್ಳೆಯ.... ದೇನೂ....ಮಾಡಿಲ್ಲವೇ ? ಬಹುಶಃ ಸಹಾಯ....ತೊಂದರೆ....ಗಿಂತ....

ಕಮ್ಮಿ. ಆಗಲಿ....ನನ್ನ....ಜೀವನದ....ನೈಜ....ಹಿಂದೂ....ಪ್ರೇಮ.... ತೋರಿಸಲು.....ನೀನೊಬ್ಬಳು. ದಂತದ.....ಸಿಂಹಾಸನ.....ಮತ್ತು .... 'ರಾಜಾ ಜಗದೇವ್' ಬಿರುದು....ಪಡೆದ....ಮೈಸೂರು ಅರಸ....ನನ್ನ.... ಮಿತ್ರ....ಚಿಕ್ಕದೇವ....ರಾಯ....ನೊಬ್ಬ....ಆ....ಮೇಲೆ...." ಎನ್ನುತಿದ್ದ ಹಾಗೆಯೇ ಆಲಂಗೀರನ ಕಣ್ಣುಗಳು ತಿರುಗಲಾರಂಭಿಸಿದುವು. ಗಂಟಲು ಒಣಗಿತು. ನಾಲಗೆಯನ್ನು ಮುಂದಕ್ಕೆ ಚಾಚಿದ. ಮಾತನಾಡಲೇ ಆಗ ಲಿಲ್ಲ. ಯೋಧಳು ಇನ್ನೊಂದೆರಡು ಗುಟುಕು ಹಾಲು ಕುಡಿಸಿದಳು. ಆಲಂಗೀರನು ಎರಡು ಕೈಗಳನ್ನೂ ಜೋಡಿಸಿ, ಅಂತರಿಕ್ಷವನ್ನು ನೋಡು ತ್ತಾ, "....ಅಲ್ಲಾ...." ಎಂದು ಹೇಳಿ, "....ಆ....ಲಂ....ಗಿ....ರಿ.... ಯೊಂ....', ಎಂದು ಕಣ್ಣು ಮುಚ್ಚಿಕೊಂಡ. ಯೋಧಳು ಮತ್ತು ಉದ ಯಳು "ಅಯ್ಯೋ ! ಪಾದಷಹ !!" ಎಂದು ರೋದಿಸಲು ಮೊದಲು ಮಾಡಿದರು.

[ಕೋಲಾರದ ಡಿಸ್ಟ್ರಿಕ್ಟು ಚಿಂತಾಮಣಿಯ ಬಳಿ ಇರುವ ಆಲಂಗಿರಿಯಲ್ಲಿ ವೆಂಕಟರಮಣಸ್ವಾಮಿಯ ದೇವಾಲಯವಿದೆ. ಅದನ್ನು ಎರಡನೆಯ ತಿರುಪತಿ ಎನುವರು. ತಿರುಪತಿಗೆ ಹೋಗಲಾರದ ಬಡವರನೇಕರು ದೇವನಿಗೆ ಕಾಣಿಕೆಯನ್ನು ಅಲ್ಲಿಯೇ ಅರ್ಪಿಸುವರು. ತಿಮ್ಮರಸನು ಆ ದೇವಾಲಯವನ್ನು ಕಟ್ಟಿಸಿದನೆಂದೂ, ಆಲಂಗೀರನು ಪ್ರತಿಷ್ಠೆಮಾಡಿಸಿದನೆಂದೂ, ಪಾದಷಹನ ರುಜುವಿರುವ ತಾಮ್ರದ ಶಾಸನ ವೊಂದು ದೇವಾಲಯದಲ್ಲೆಲ್ಲೋ ಹೂಳಲ್ಪಟ್ಟಿದೆ ಎಂದೂ, ಅಲ್ಲಿನ ಜನರೆಲ್ಲಾ ಹೇಳುವರು. ಈ ಕಥೆಯು ಆ ಐತಿಹ್ಯವನ್ನು ಅವಲಂಬಿಸಿ ಬರೆದದ್ದಾಗಿದೆ. ರೈಸ್ ಸಾಹೇಬರು ತಮ್ಮ ಮೈಸೂರ್ ಗೆಜೆಟಿಯರ್‌ನಲ್ಲಿ ಈ ಊರಿನ ವಿಚಾರವಾಗಿ ಏನನ್ನೂ ಹೇಳಿಲ್ಲ.]

ಸಾದರ ಸ್ವೀಕಾರ

I ಪದ್ಯಗ್ರಂಥಗಳು

೧. ಪುತ್ತೂರು:—ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಪುತ್ತೂರು ಅಲ್ಲಿಯ ಸಂಸ್ಥೆ ಕಟ್ಟಡ ಮುಂತಾದವುಗಳನ್ನು ಕುರಿತು ಚೌಪದಿಯಲ್ಲಿ ಬರೆದಿರುವ ಹದಿನಾಲ್ಕು ಕವಿತೆಗಳು. ಲೇಖಕರು, ಮ|| ಬೈಂದೂರು ಆನಂದರಾವ್. ಮುದ್ರಕರು ಮತ್ತು ಪ್ರಕಾಶಕರು: ಹರಿಹರ ಛಾಪ ಖಾನೆ, ಪುತ್ತೂರು. ಕ್ರೌ. ೮. ೨೦. ಬೆಲೆ ೨ ಆಣೆ.

೨. ಶ್ರೀಮದ್ವಿದೇಹಕೈವಲ್ಯಪದ್ಧತಿ:—ಶಿವಕಾರುಣ್ಯ, ಜೀವ ಸಂಬೋಧನ, ಸೀತಿಕ್ರಿಯಾಚರ್ಯ, ಯೋಗಪ್ರತಿಪಾದನ, ಜ್ಞಾನ ಪ್ರತಿಪಾದನ—ಎಂಬ ಐದು ಸ್ಥಲಗಳ ಮೇಲೆ ಶ್ರೀಗುರು ರುದ್ರದೇವರು ಮತ್ತು ಅವರ ಶಿಷ್ಯ ಪ್ರಶಿಷ್ಯರು ಬರೆದ 'ಪದ'ಗಳು. ಸಂಗ್ರಹಕಾರರು, ಮ|| ಶಿದ್ಧಲಿಂಗಾರ್ಯ, ಸಾಲಿಮಠ, ರೋಣ. ಡೆ. ೮. ೧೬೦. ಬೆಲೆ ರೂ. ೧-೪-೦.

೩. ಬನ್ನಿ:—'ನಾಡಹಬ್ಬ'ದ ಸಂಬಂಧವಾಗಿ 'ವಿಜಯಪುರ ಸಾಹಿತ್ಯ ಮಂಡಲ'ದವರು ರಚಿಸಿರುವ ಒಂಬತ್ತು ಹಾಡುಗಳು; ಫೂ. ೮. ೧೨. ಬೆಲೆ ೧ ಆಣೆ.

೪. ಸೇವಾದಲ ಸಪ್ತಪದೀ (ಹಿಂದಿ):— ಹಿಂದುಸ್ಥಾನೀ ಸೇವಾದಲದ ಏಳುಗೀತೆಗಳ ಸ್ವರಲೇಖನ. ಸಂಗ್ರಹಕಾರರು, ಪ್ರೊ. ಬಿ. ಆರ್. ದೇವಧರ್. ಪ್ರಕಾಶಕರು, ಡಾ|| ನಾ. ಸು. ಹರ್ಡೀಕರ್, ಹುಬ್ಬಳ್ಳಿ. ಕ್ರೌ. ೮. ೪೪. ಬೆಲೆ ೨ ಆಣೆ. ನೂರು ಪ್ರತಿಗಳಿಗೆ—ಒಟ್ಟಾಗಿ ತೆಗೆದುಕೊಂಡರೆ—ರೂ. ೯-೬-೦.

II ನಾಟಕಗಳು

೧. **ಆಷಾಢಭೂತಿ** (ಸಚಿತ್ರ):—ಮೋಲಿಯೇರ್ ಎಂಬ ಪ್ರಸಿದ್ಧ ಫ್ರೆಂಚ್ ಕವಿಯ 'ತಾರ್ತುಫ್' ಎಂಬ ಸಾಮಾಜಿಕ ನಾಟಕದ ಆಧಾರದ ಮೇಲೆ ಬರೆದ ಗದ್ಯಾನುವಾದ. 'ಪ್ರಬೋಧಕ'ದಿಂದ ಪುನರ್ಮುದ್ರಿತ: ಲೇಖಕರು, ಮ|| ಎ. ಎನ್. ಮೂರ್ತಿರಾವ್, ಎಂ.ಎ. ಪ್ರಕಾಶಕರು: ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು, ಮೈಸೂರು; ಕ್ರೌನ್. ೮. ೮೦. ಬೆಲೆ ೧ ರೂಪಾಯಿ.

ಇದರಲ್ಲಿ ಮ|| ಟಿ. ಎಸ್. ವೆಂಕಣ್ಣಯ್ಯನವರ ಮುನ್ನುಡಿಯೂ, ಗ್ರಂಥಕರ್ತರ ಪ್ರಸ್ತಾವನೆಯೂ ಇವೆ. ಪ್ರಸ್ತಾವನೆಯಲ್ಲಿ ಅನುವಾದದ ರೀತಿಯನ್ನೂ ತಾವು ಮಾಡಿರುವ ಬದಲಾವಣೆಗಳನ್ನೂ ಅದಕ್ಕೆ ಕಾರಣವನ್ನೂ ಮ|| ಮೂರ್ತಿರಾಯರು ವಿವರಿಸಿದ್ದಾರೆ. ಈ ನಾಟಕವನ್ನು ಓದುತ್ತಿದ್ದರೆ "ಸಣ್ಣ ಕಥೆ"ಯನ್ನು ಓದುತ್ತಿದ್ದಂತೆ ಆಗುತ್ತದೆ. ಕಥೆ ಅಲ್ಪವಾದರೂ ಪಾತ್ರಗಳು ಸ್ಪಷ್ಟವಾಗಿವೆ. ಶೈಲಿ ಸುಲಭವಾಗಿ, ನೈಸರ್ಗಿಕವಾಗಿ, ಗದ್ಯಸಾಮಾಜಿಕ ನಾಟಕಕ್ಕೆ ಹೊಂದುವಂತಿದೆ; ಸುಲಭ, ನೈಸರ್ಗಿಕ, ಎಂದು ಗ್ರಾಮ್ಯತೆಗೂ ವಕ್ರತೆಗೂ ಹೋಗಿಲ್ಲ; ಶುದ್ಧ, ಗಂಭೀರ, ಎಂದು ಪಾಂಡಿತ್ಯಕ್ಕೂ ಕ್ಲಿಷ್ಟತೆಗೂ ಹೋಗಿಲ್ಲ. ಮೈಸೂರು ಪ್ರಾಂತದ ಅಚ್ಚಕನ್ನಡಿಗರು ಮನೆಯಲ್ಲಿ ಮಾತನಾಡುವ ಬಗೆ, ಅವರ ಮಾತಿನ ರೂಢಿ ಸಂಪ್ರದಾಯಗಳು, ಶೈಲಿ ರಚನೆಗಳು, ಬಿಗಿಬಣ್ಣಗಳು ಎಲ್ಲವೂ ಬಹು ಚೆನ್ನಾಗಿ ಮೂರ್ತಿರಾಯರ ಗದ್ಯದಲ್ಲಿ ಕಂಡುಬಂದಿವೆ.

೨. **ಮನೋರಮಾ**:— "ಉತ್ಪಾದ್ಯಪ್ರಕರಣವಾದ ಉಪರೂಪಕ." ವಸಂತಸೇನನೆಂಬ ರಾಜಪುತ್ರನು ಜಯಂತನೆಂಬ ವಂಗರಾಜಪುತ್ರನ ಮೂಲಕ ತೊಂದರೆಗೆ ಸಿಕ್ಕಿ ತಪ್ಪಿಸಿಕೊಂಡು ಕೊನೆಗೆ ಮನೋರಮೆ, ಮಾಲತಿ, ಶರತ್ಕುಮಾರಿ ಎಂಬ ರಾಜಪುತ್ರಿಯರನ್ನು ಮದುವೆಯಾಗುವನು—ಎಂಬುದೇ ಇದರಲ್ಲಿರುವ ಕಲ್ಪಿತಕಥೆ. ಗ್ರಂಥಕರ್ತರು, ಮ|| ಎನ್. ನಾರಾಯಣರಾವ್, ಬಿ.ಎ. ಕ್ರೌನ್. ೮. ೮೪. ಬೆಲೆ ?

ಇದಕ್ಕೆ ಮ|| ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರು ಇಂಗ್ಲಿಷಿನಲ್ಲಿ ಒಂದು ಸಣ್ಣ ಮುನ್ನುಡಿಯನ್ನು ಬರೆದಿದ್ದಾರೆ. ಗ್ರಂಥಕರ್ತರಿಗೆ ಪ್ರಾಚೀನ ನಾಟಕ ಲಕ್ಷಣದಲ್ಲಿ ತುಂಬ ಅಭಿಮಾನ ವಿರುವಂತೆ ತೋರುತ್ತದೆ.

III ಅಲಂಕಾರ

೧. **ಅಪ್ರತಿಮವೀರಚರಿತಂ:**—ತಿರುಮಲಾರ್ಯ ಮಹಾಕವಿ ಪ್ರಣೀತಂ. ಪರಿಷ್ಕೃತ ದ್ವಿತೀಯ ಮುದ್ರಣಂ, ೧೯೩೧. ಚಿಕ್ಕದೇವ ರಾಜ ಒಡೆಯರವರ ಆಳಿಕೆಯಲ್ಲಿ ಹುಟ್ಟಿದ, ಅವರ ಪ್ರಶಂಸಾಪರವಾದ ಸುಪ್ರಸಿದ್ಧ ಅಲಂಕಾರ ಗ್ರಂಥ. ಪ್ರಕಾಶಕರು, ಮ|| ಆ. ಜಿ. ನರ ಸಿಂಹಾಚಾರ್, ಬಿ.ಎ. ಕಾವ್ಯಮಂಜರೀ ಆಫೀಸು, ಮೈಸೂರು. ಕ್ರೌ. ೮. ೧೦+೧೩೬. ಬೆಲೆ ?

IV ಗದ್ಯಗ್ರಂಥಗಳು

೧. **ಸಚಿತ್ರ ಮಹಾಭಾರತಾಮೃತ :**—ಆದಿಪರ್ವ. ಸಂಪಾದ ಕರು, ಮ|| ವೆಂಕಟೇಶ ತಿರಕೋ ಕುಲಕರಣಿ, ಗಳಗನಾಥರು, ಹಾವೇರಿ. ಕ್ರೌ. ಅ. ೫೦ + ೫೩೨. ಬೆಲೆ ರೂ. ೩-೮-೦.

ಈ ಗ್ರಂಥದ ಸ್ವರೂಪವನ್ನು ಅವರೇ ಈರೀತಿ ತಿಳಿಸಿದ್ದಾರೆ :— “ ಮೂಲ ಮಹಾಭಾರತದೊಳಗಿನ......ಮಿತಿಮೀರಿ ಬೆಳೆದಿರುವ ವರ್ಣನೆ ಗಳನ್ನು ಕಡಿಮೆ ಮಾಡಿ, ಉಳಿದ ವಿಷಯಗಳಲ್ಲಿಯೂ ರಸಭಂಗ ವಾಗಲಿ ಬೋಧದ ಕೊರತೆಯಾಗಲಿ ಮನೋಹಾರಿಕೆಯ ಹಾನಿಯಾ ಗಲಿ ಸೌಂದರ್ಯದ ಸೊಗಸುಗೇಡೇ ಆಗಲಿ ಆಗದಂತೆ ಬಿಡತಕ್ಕುವನ್ನು ಬಿಟ್ಟು ಗ್ರಂಥವನ್ನು ಬಹು ಎಚ್ಚರಿಕೆಯಿಂದ ಸಂಕೋಚಮಾಡಿ, ಬರೆ ಯ ತಕ್ಕದ್ದನ್ನೆಲ್ಲ ಅಚ್ಚುಕಟ್ಟಿನಲ್ಲಿ ಬರೆದಿರುತ್ತದೆ. ಹೀಗೆ ಬರೆಯುವಾಗ ....ಲೇಖಕನು ಬುದ್ಧಿಪೂರ್ವಕ ಸೇರಿಸಿದ ಹೊಸ ವಿಷಯವೆಂದರೆ,

ಶ್ರೀ ವೇದವ್ಯಾಸರ ತ್ರಿಕಾಲಾಬಾಧಿತ ಸತ್ಯಸಿದ್ಧಾಂತಗಳಲ್ಲಿ ಪ್ರಕೃತ ಪರಿಸ್ಥಿತಿಗೆ ಅವಶ್ಯವಾದವುಗಳೆಂದು ತೋರಿದವುಗಳನ್ನು ಮಾತ್ರ, ಪ್ರತಿ ಉಪಪರ್ವದ ಕೊನೆಯಲ್ಲಿ "ಶ್ರೀ ಶೇಷಸದ್ಗುರು ಸೂಕ್ತಿರೂಪರಹಸ್ಯಗಳೆಂ"ಬ ಹೆಸರಿನಿಂದ ತೀರ ಅಚ್ಚುಕಟ್ಟಿನಲ್ಲಿ ಸ್ಪಷ್ಟವಾಗಿ ರಹಸ್ಯಗಳನ್ನು ವಿವರಿಸಿದ್ದಾಗಿರುವದು.........ಬಹುತರ ಎಲ್ಲ ರಹಸ್ಯಗಳ ಸಂಬಂಧವು ಒಂದಿಲ್ಲೊಂದು ಬಗೆಯಿಂದ ರಾಜಕೀಯ ವ್ಯವಹಾರಕ್ಕಿರುತ್ತದೆಂಬುದನ್ನರಿತು ಎಲ್ಲ ರಹಸ್ಯಗಳನ್ನು ಓದಿಯೇ ತೀರತಕ್ಕದ್ದು........."

೨. **ವೀರ ವಲ್ಲಭಭಾಯಿ:**—ಸುಪ್ರಸಿದ್ಧ ದೇಶಭಕ್ತರ ಜೀವನ ಚರಿತ್ರೆ; ಒಂದಾಣೆ ಮಾಲೆಯ ಕಾಣಿಕೆಯ ಪುಷ್ಪ. ಸಂಗ್ರಾಹಕರು, ಮ|| ಅನಂತ ಅಣ್ಣಾಜಿ ಚಿಕ್ಕೋಡಿ; ಪ್ರಕಾಶಕರು, ತುಂಟರ ತಂಡ, ಬೆಳಗಾಂವಿ. ಮ|| ದೇಶಪಾಂಡೆ ಗಂಗಾಧರರಾಯರು ಮುನ್ನುಡಿ ಬರೆದಿದ್ದಾರೆ. ಕ್ರಾ್ರೌ. ಅ. ೯೨; ಬೆಲೆ ೧೦ ಆಣೆ.

೩. **ಶಿವಲಿಂಗ ಪೂಜಾಕ್ರಮವು:**—ಸಂಗ್ರಾಹಕರು ಮ|| ಶಿ. ಮೂ. ಶಿದ್ಧಲಿಂಗಾರ್ಯರು, ಸಾಲಿಮಠ, ರೋಣ. ಡೆ. ಷೋ. ೩೦. ಬೆಲೆ, ೪ ಆಣೆ.

V ಪತ್ರಿಕೆಗಳು

೧. **ಸ್ವದೇಶಾಭಿಮಾನಿ:**—ರಜತೋತ್ಸವ ಸಂಚಿಕೆ. ಡೆಮ್ಮಿ ದ್ವಿಪತ್ರ. ಪುಟಗಳು ೭೨. ಮುದ್ರಕರು ಸಂಪಾದಕರು ಮತ್ತು ಪ್ರಕಾಶಕರು, ಮ|| ವಿ. ಎಸ್. ಕಾಮತ್, ಶಾರದಾ ಛಾಪಖಾನೆ, ಮಂಗಳೂರು. ಬೆಲೆ? ಸಾಹಿತ್ಯ, ವಿಜ್ಞಾನ, ರಾಜಕೀಯ, ಶಿಲ್ಪ, ಮುಂತಾದ ವಿಷಯಗಳ ಮೇಲೆ ಬರೆದಿರುವ ಹಲವು ಸಚಿತ್ರವಾದ ಲೇಖನಗಳಿವೆ. ಮುದ್ರಣವು ಮುದ್ದಾಗಿದೆ. ಕನ್ನಡಭಾಷಾಸಾಹಿತ್ಯಗಳ ದೃಷ್ಟಿಯಿಂದ ಉಪಯುಕ್ತವಾದ ಕೆಲವು ಅಂಶಗಳನ್ನು ಇದರಿಂದ 'ವಸ್ತುಕೋಶ'ದಲ್ಲಿ ಸಂಗ್ರಹಿಸಿದೆ.

೨. **ಸದ್ವೈದ್ಯ**:—"ಪ್ರತಿ ಶುಕ್ಲಪಕ್ಷದಲ್ಲೂ ಆರೋಗ್ಯವಿಷಯ ಗಳನ್ನು ಪ್ರಕಟಿಸುವ ಮಾಸಪತ್ರಿಕೆ." ಸಂಪಾದಕರು, ಭಿಷಗ್ರತ್ನ ಆಯುರ್ವೇದ ವಿದ್ವಾನ್ ಮ|| ಬಿ. ಎ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು. ಡೆ. ಅ. ೨೦. ವಾರ್ಷಿಕ ಚಂದಾ, ಅಂಚೆ ವೆಚ್ಚ ಸೇರಿ ರೂ. ೧-೧೨-೦.

೩. **ತಾಯ್ನುಡಿ**:—ಸಂಪುಟ ೧, ಸಂಚಿಕೆ ೩. ನಂಜನಗೂಡಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟದ್ದು. ಡೆ. ಅ. ೪೮.

೪. **ಅಧ್ಯಾತ್ಮ ಪ್ರಕಾಶ**:—ಸಂಪುಟ ೩, ಸಂಚಿಕೆ ೧. ಸಂಪಾ ದಕರು ಮತ್ತು ಪ್ರಕಾಶಕರು, ಮ|| ವೈ. ಸುಬ್ಬರಾವ್, ಎರಡನೆಯ ಬೀದಿ, ಚಾಮರಾಜಪೇಟೆ, ಬೆಂಗಳೂರು. ವೇದಾಂತ ವಿಚಾರವನ್ನೂ 'ಧಾರ್ಮಿಕ ಸಾಮಾಜಿಕ ವಿದ್ಯಾಭ್ಯಾಸ ಆರ್ಥಿಕ—ಇವೇ ಮುಂತಾದ ವಿಚಾರಗಳನ್ನೂ' ತಿಳಿಸುವ ಮಾಸಪತ್ರಿಕೆ. ಡೆ. ಅ. ೪೦. ವಾರ್ಷಿಕ ಚಂದಾ, ಅಂಚೆ ವೆಚ್ಚ ಸೇರಿ ರೂ. ೨.

೫. **Bulletin of the Hindusthan Students' Club**:—(ಬುಲೆಟಿನ್ ಆಫ್ ದಿ ಹಿಂದೂಸ್ಥಾನ್ ಸ್ಟೂಡೆಂಟ್ಸ್ ಕ್ಲಬ್, ಮ್ಯೂನಿಚ್, ಜುಲೈ ೧೯೩೧.) ಇಂಡಿಯಾ ದೇಶದಿಂದ ಜರ್ಮನಿಗೆ ವ್ಯಾಸಂಗಕ್ಕಾಗಿ ಹೋಗಿರುವ ವಿದ್ಯಾರ್ಥಿಗಳು ಮ್ಯೂನಿಚ್ ನಗರದಲ್ಲಿ ಮೇಲೆ ಕಂಡ ಹೆಸರಿನ ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಅದರ ಕಾರ್ಯ ಕಲಾಪಗಳ ವರದಿಯು ಈ ಪತ್ರಿಕೆಯಲ್ಲಿ ಬಂದಿದೆ.

VI ವರದಿ

ಭಗಿನೀ ಸೇವಾ ಸಮಾಜದ ಎಂಟನೆಯ ವಾರ್ಷಿಕ ವರದಿ. ೧೯೩೦-೩೧.

ವಸ್ತುಕೋಶ

ಈ ವರ್ಷ ನಮ್ಮ ಸಂಘದ ಕಾರ್ಯಗಳು ಮೈಸೂರು ಸರ್ಕಾರದ ಕೈಗಾರಿಕೆ ಮತ್ತು ವ್ಯಾಪಾರಗಳ ಡೈರೆಕ್ಟರವರಾದ ಮ॥ರಾ॥ ಸನರತ್ನ ರಾಮರಾವ್, ಬಿ.ಎ., ಬಿ.ಎಲ್. ಅವರ ಸಮಾರಂಭ ಭಾಷಣದಿಂದ ಮೊದಲಾದುವು. ಅವರ ಭಾಷಣದ ಸಾರಾಂಶವನ್ನು ಈ ಸಂಚಿಕೆಯಲ್ಲಿ ಬಂದಿರುವ "ಕನ್ನಡ ಸಾಹಿತ್ಯವನ್ನು ಕುರಿತು ಕೆಲವು ಸಲಹೆಗಳು" ಎಂಬ ಲೇಖನದಲ್ಲಿ ನೋಡಬಹುದು. ಮ॥ರಾ॥ ರಾಮರಾಯರು ಕನ್ನಡಿಗರಿಗೇನು ಅಪರಿಚಿತರಲ್ಲ. ಅವರ 'ಲಕ್ಷ್ಮಣರಾಯನ ಭಾಗ್ಯ'ವನ್ನು ನಮ್ಮ ಪಾಠಕರೆಲ್ಲರೂ ಓದಿದ್ದಾರೆ. ಕೈಗಾರಿಕೆ ವ್ಯಾಪಾರಗಳ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಸರ್ಕಾರದ ಅಧಿಕಾರಿಗಳಿಗೆ ಸಾಹಿತ್ಯದ, ಕನ್ನಡ ಸಾಹಿತ್ಯದ, ಕ್ಷೇತ್ರದಲ್ಲಿ ಕೆಲಸ ಮಾಡಲು ಅವಕಾಶವಾಗುವುದು ಕಷ್ಟ. ಆದರೆ ಅವರು ಉಪನ್ಯಾಸ ಮಾಡಿದ ದಿವಸ ನಮ್ಮ ಸಂಘದ ಅಧ್ಯಕ್ಷರು ಅಪ್ಪಣೆ ಕೊಡಿಸಿದಂತೆ ಸಾಹಿತ್ಯವು 'ಕೈಗಾರಿಕೆ'ಯೂ ಹೌದು, 'ವ್ಯಾಪಾರ'ವೂ ಆಗುತ್ತಿದೆ. ಆದ್ದರಿಂದ, ಒಂದು ವಿಧದಲ್ಲಿ 'ಸಾಹಿತ್ಯ'ವು ಅವರಿಗೆ ಸ್ವಂತ ಕೆಲಸವೇ ಆಯಿತು. ಅವರು ಹಿಂದಿನ ಮತ್ತು ಇಂದಿನ ಕನ್ನಡ ಸಾಹಿತ್ಯದ ಮಾರ್ಗಸ್ವರೂಪಗಳನ್ನು ಹೇಗೆ ವಿಮರ್ಶದೃಷ್ಟಿಯಿಂದ ನೋಡುತ್ತ ಅದರ ಬೆಳೆವಣಿಗೆಯನ್ನು ಕುರಿತು ಯೋಚಿಸುತ್ತಿದ್ದಾರೆಂಬುದು ಮೇಲೆ ಕಂಡ ಅವರ ಉಪನ್ಯಾಸ ಸಾರಾಂಶದಿಂದಲೇ ಗೊತ್ತಾಗುತ್ತದೆ. ಅಲ್ಲದೆ ಅವರು ಸಾಹಿತ್ಯವನ್ನು, ವಿಶ್ವಸಾಹಿತ್ಯವನ್ನು, ಅಪಾರವಾಗಿ ಓದಿದವರು; ಕನ್ನಡದಲ್ಲಿ ಅಭಿಮಾನವಿರತಕ್ಕವರು; ಆದ್ದರಿಂದ ಅವರು ತಮ್ಮ ಓದಿನ ಫಲವನ್ನು ಕನ್ನಡಕ್ಕೆ ಇನ್ನೂ ಹೆಚ್ಚಾಗಿ ಕೊಡಬೇಕೆಂದು ಈ ಮೂಲಕ ಅವರನ್ನು ಪ್ರಾರ್ಥಿಸುತ್ತೇವೆ.

ಕರ್ಣಾಟಕ ಸಂಘದ ಕಾರ್ಯಗಳು

ಶಿವಮೊಗ್ಗೆಯ ಕರ್ಣಾಟಕ ಸಂಘದ ವರದಿ :— ಸಂಘವು ಸ್ಥಾಪಿತವಾದ ಈ ೮-೯ ತಿಂಗಳಲ್ಲಿ ಸಂಘದಲ್ಲಿ ಅನೇಕ ಉಪನ್ಯಾಸಗಳೂ ಭಾರತವಾಚನ ಕಾವ್ಯಪಠನ ಸಂಗೀತ ನಾಟಕಗಳೂ ನಡೆದವು. ಮೊದಲನೆಯ ಉಪನ್ಯಾಸವು ಶ್ರೀಮಾನ್ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳದ್ದು: ಕಾಳಿದಾಸನ ಮೇಘಸಂದೇಶವನ್ನು ಕುರಿತದ್ದು. ಶಾಸ್ತ್ರಿಗಳು ಕಾಳಿದಾಸನ ಕಾವ್ಯದ ಪ್ರಾಶಸ್ತ್ಯವನ್ನು ವಿವರಿಸಿ ತಮ್ಮಿಂದ ರಚಿತವಾದ ಕನ್ನಡ ಮೇಘಸಂದೇಶದ ಪರಿಚಯವನ್ನು ಜನರಿಗುಂಟುಮಾಡಿ ಕೊಟ್ಟರು. ಈಚೆಗೆ ಅವರ "ಕುಮಾರವ್ಯಾಸನ ಶೈಲಿ" ಎಂಬ ಉಪನ್ಯಾಸವೂ ನಡೆಯಿತು. ಅವರು ಅದರಲ್ಲಿ "ಶೈಲಿ" ಎಂದರೇನು ?—ಎಂಬುದನ್ನು ವಿಚಾರಮಾಡಿ, ನಾರಣಪ್ಪನ ಶೈಲಿಯ ವೈಶಿಷ್ಟ್ಯವನ್ನು ಕೊಂಡಾಡಿದರು.

ಮ|| ರಾ|| ಟಿ. ಎಸ್. ವೆಂಕಣ್ಣಯ್ಯನವರಿಂದ ಎರಡು ಉಪನ್ಯಾಸಗಳು ಶಿವಮೊಗ್ಗೆಯಲ್ಲಿ ಆದುವು. ಕುಮಾರವ್ಯಾಸನನ್ನು ಕುರಿತು ಮಾಡಿದ ಉಪನ್ಯಾಸವು ಮೊದಲನೆಯದು. ಎರಡನೆಯ ಉಪನ್ಯಾಸವು "ಬಸವರಾಜದೇವರ ರಗಳೆ"ಯನ್ನು ಕುರಿತುದು. ಬಸವೇಶ್ವರರು, ಅವರ ಚಳವಳಿ, ಅದರಿಂದ ಕನ್ನಡ ಸಾಹಿತ್ಯದ ಮೇಲಾದ ಪರಿಣಾಮ, ಹರಿಹರನ ಸಾಮರ್ಥ್ಯ, ಮೊದಲಾದ ವಿಷಯಗಳನ್ನು ಹೇಳುತ್ತ ಅವರು "ಬಸವರಾಜದೇವರ ರಗಳೆಯು" ಧರ್ಮದೃಷ್ಟಿಯಿಂದ ಮಹಾತ್ಮರ ಜೀವನ ಚರಿತೆಯನ್ನು ಕಾವ್ಯರೂಪದಲ್ಲಿ ಬರೆಯಲು ಒಂದು ಆದರ್ಶಕಾವ್ಯವಾಗಿದೆ ಎಂದು ತಿಳಿಸಿದರು.

ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಂದ "ವಿಮರ್ಶೆಯ ಆವಶ್ಯಕತೆ"ಯ ಮೇಲೆ ಒಂದು ಭಾಷಣವೂ, ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಂದ "ಕರ್ಣಾಟಕ ಸಂಸ್ಕೃತಿಯೂ ಕನ್ನಡ ಭಾಷೆಯೂ" * ಎಂಬ ಉಪನ್ಯಾಸವೂ ನಡೆಯಿತು.

---

* ಈ ಉಪನ್ಯಾಸದ ಹಲವು ಅಂಶಗಳು ಈ ಸಂಚಿಕೆಯಲ್ಲಿ ಆರಂಭವಾಗಿರುವ "ಕರ್ಣಾಟಕ ಜನತೆಯ ಸಂಸ್ಕೃತಿ"ಯಲ್ಲಿ ಅಡಗಿವೆ. —ಸಂ.

ಮ|| ರಾ|| ವೆಂಕಟೇಶ ಅಯ್ಯಂಗಾರ್ಯರು ಇನ್ನೊಂದು ದಿನ ಸಂಘದಲ್ಲಿ ತಮ್ಮ ಕವನಗಳನ್ನು ಓದಿ, ಗೀತಿಕೆಗಳನ್ನು ಹಾಡಿ, ಅವುಗಳನ್ನು ರಚಿಸಿದ ಸಂದರ್ಭಗಳನ್ನೂ ಸನ್ನಿವೇಶಗಳನ್ನೂ ತಿಳಿಸಿದರು.

ಜನವರಿ ತಿಂಗಳಲ್ಲಿ ಮ|| ರಾ|| ಕೆ. ಕೃಷ್ಣರಾಯರ ಭಾರತವಾಚನವೂ, ಮಾರ್ಚಿ ತಿಂಗಳಲ್ಲಿ ಮ|| ಎ. ಆರ್. ಗುಂಡಪ್ಪನವರ ಭಾರತ ವಾಚನವೂ ನಡೆದವು.

ಸಂಘವು ಮುಖ್ಯವಾಗಿ ಸಾಹಿತ್ಯದ ಸೇವೆಗೆಂದೇ ಹೊರಟರೂ, ಇತರ ಕಲೆಗಳ ಪೋಷಣೆಯ ಭಾರವೂ ಅದರ ಮೇಲೆ ಬೀಳುತ್ತಿದೆ. ಇದು ಒಂದು ವಿಧದಲ್ಲಿ ಸಂತೋಷಜನಕವಾದುದಾದರೂ, ಇದನ್ನು ಒಂದು ಕೊರತೆಯೆಂದೇ ಭಾವಿಸಬೇಕು. ಗೊಟ್ಟುವಾದ್ಯಂ ನಾರಣ್ಯೆಂಗಾರ್ಯರೆಂಬ ಸಂಗೀತ ವಿದ್ವಾಂಸರು ಶಿವಮೊಗ್ಗೆಗೆ ಬಂದು ತಮ್ಮ ವಿದ್ಯಕ್ಕೆ ಇಲ್ಲಿ ಬೆಲೆಯಿಲ್ಲವೆಂದು ನಿರಾಶರಾಗಿ ಹೋಗುವ ಕಾಲಕ್ಕೆ ಸಂಘವು ಅವರಿಗೆ ಆಶ್ರಯವನ್ನಿತ್ತು ಅವರ ದಿವ್ಯವಾದ ಗೊಟ್ಟುವಾದ್ಯ ವಾದನವನ್ನು ಎರಡು ದಿವಸ ಜನರಿಗುಂಟುಮಾಡಿಕೊಟ್ಟಿತು.

ಜೂನ್ ತಿಂಗಳಲ್ಲಿ 'ಯಮನ ಸೋಲು' ಮತ್ತು 'ಹೋಂರೂಲು' ಎಂಬ ನಾಟಕಗಳು ಅಭಿನಯಿಸಲ್ಪಟ್ಟವು. ಶ್ರೀಯುತ ಪುಟ್ಟಪ್ಪನವರೇ ಸತ್ಯವಾನನ ಪಾತ್ರವನ್ನಭಿನಯಿಸಿದರು. ಮ|| ರಾ|| ಗಳಾದ ಆರ್. ಎಸ್. ನಾರಾಯಣಶಾಸ್ತ್ರಿ, ಎಂ.ಎ., ಬಿ. ಕೃಷ್ಣಮೂರ್ತಿ, ಬಿ.ಎ., ಎ. ಎಂ. ನಟೇಶಮೊದಲಿಯಾರ್, ಎಂ.ಎ., ಬಿ. ಆರ್. ಪುಟ್ಟಸಂಜಪ್ಪ, ಬಿ.ಎ., ಎ. ಸಿ. ನರಸಿಂಹಮೂರ್ತಿ, ಕೆ. ವಿಶ್ವೇಶ್ವರಯ್ಯ, ಬಿ.ಎ., ಸಿ. ಬಿ. ಜಯರಾವ್, ಬಿ.ಎ., ಎ. ಸೀತಾರಾಂ, ಬಿ.ಎಸ್‌ಸಿ.,—ಇವರುಗಳು ಇತರ ಪಾತ್ರಗಳನ್ನು ವಹಿಸಿದರು. ಶ್ರೀಮಾನ್ ಬಿ. ಎಸ್. ರಾಮರಾಯರು ವಿರಾಮ ಕಾಲದಲ್ಲಿ ಕೆಲವು ಆಧುನಿಕ ಕವನಗಳನ್ನು ಹಾಡಿದರು. ಈ ವರ್ಷದ ಕಡೆಯ ಉಪನ್ಯಾಸವು ಕುಮಾರ ವ್ಯಾಸನ ಮೇಲೆ ಮ|| ಎಚ್. ಶ್ರೀನಿವಾಸರಾವ್, ಬಿ.ಎ., ಎಲ್‌ಎಲ್.ಬಿ. ಅವರು ಕೊಟ್ಟದ್ದು. ಅವರು ಅದರಲ್ಲಿ ಕವಿ

ಕಾವ್ಯ ವಿಚಾರಗಳನ್ನು ಸಂಕ್ಷೇಪವಾಗಿಯೂ ಸುರಸವಾಗಿಯೂ ಪ್ರತಿಪಾದಿಸಿದರು. ವೇ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ಅಂದು ಅಧ್ಯಕ್ಷತೆಯನ್ನು ವಹಿಸಿದ್ದರು. ಅಧ್ಯಕ್ಷರ ಮಾತುಗಳಾದ ಮೇಲೆ ಮ|| ರಾ|| ಪಿ. ಆರ್. ಕರಿಬಸವಶಾಸ್ತ್ರಿಗಳು ಸ್ವರ್ಗಸ್ಥರಾದ ನಿಮಿತ್ತ ದುಃಖವು ಸೂಚಿಸಲ್ಪಟ್ಟಿತು.

ಸಂಘದ ವಿಷಯದಲ್ಲಿ ಆದರವನ್ನು ತೋರಿಸಿ ಉಪನ್ಯಾಸದಿಂದಲೊ, ಕಾವ್ಯವಾಚನದಿಂದಲೊ, ನಾಟಕಾಭಿನಯದಿಂದಲೊ ಉಪಕಾರ ಮಾಡಿದ ಮೇಲ್ಕಂಡ ಎಲ್ಲ ಮಹನೀಯರಿಗೂ, ಸಂಘಕ್ಕೋಸ್ಕರ ಬೆನಿಫಿಟ್ ಆಟವನ್ನಾಡಿ ಉಪಕಾರ ಮಾಡಿದ ಶ್ರೀಗುರುಸಮರ್ಥ ಶ್ರೀ ಚಂದ್ರಮೌಳೀಶ್ವರ ನಾಟಕ ಕಂಪೆನಿಯವರಿಗೂ, ಇತರ ವಿಧಗಳಲ್ಲಿ ಸಂಘಕ್ಕೆ ಸಹಾಯಕರಾದ ಅನೇಕರಿಗೂ ಸಂಘದವರು ಅತ್ಯಂತ ಕೃತಜ್ಞರಾಗಿರುತ್ತಾರೆ.

ಕೆ. ಚಿದಂಬರಂ, ಕಾರ್ಯದರ್ಶಿ.

''ಸ್ವದೇಶಾಭಿಮಾನಿ''ಯ ಸುಂದರವಾದ ರಜತೋತ್ಸವ ''ಸಂಚಿಕೆಯಲ್ಲಿ'' ಭಾಷಾಸಾಹಿತ್ಯಗಳಿಗೆ ಸಂಬಂಧಪಟ್ಟ ಕೆಲವು ಲೇಖನಗಳಿವೆ. ನಮ್ಮ ಪಾಠಕರಿಗಾಗಿ ಅವುಗಳ ಸಾರಾಂಶವನ್ನು ಇಲ್ಲಿ ಕೊಟ್ಟಿದ್ದೇವೆ :—

ಮೊದಲನೆಯದಾಗಿ ಮ|| ಎಸ್. ರಾಜಗೋಪಾಲಕೃಷ್ಣರಾಯರು ಬರೆದಿರುವ ''ಕಾಳೀದಾಸನ ಕಾಲದಲ್ಲಿ'' ಎಂಬ ಸ್ವಾರಸ್ಯವಾದ ಲೇಖನ (ಪುಟ ೭). ಇದರಲ್ಲಿ ಮ|| ರಾಯರು

ಕಾಳೀದಾಸನ ಕಾಲದಲ್ಲಿ

ಕಾಳಿದಾಸನ ಕಾವ್ಯನಾಟಕಗಳ ಆಂತರ ಪ್ರಮಾಣದಿಂದ ಆ ಕಾಲದ ಜನತೆಯ ಪರಿಸ್ಥಿತಿಯನ್ನು ನಿರ್ದೇಶಿಸಿದ್ದಾರೆ. ಆಗಿನ ಚಿತ್ರ, ಗೀತ, ಶಿಕ್ಷಣ, ಶಾಸ್ತ್ರ, ವಿಜ್ಞಾನ, ದರ್ಶನ, ಧರ್ಮ, ರಾಜ್ಯತಂತ್ರ, ವಿವಾಹ, ವ್ಯವಹಾರ, ವ್ಯವಸಾಯ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟ ಹಲವು

ಅಂಶಗಳು ಒಂದು ಕಡೆ ಬಂದಿರುವುದರಿಂದ ಇದು ಪ್ರಾಚೀನ ಸಂಸ್ಕೃತಿಯ ಇತಿಹಾಸದಿಂದ ತೆಗೆದ ಒಂದು ಅಧ್ಯಾಯದಂತಿದೆ. ಸಾಮಾನ್ಯವಾಗಿ ಕಾವ್ಯಪಾಠಕರು ಕಾಳಿದಾಸನ ಕಾವ್ಯಗಳೆಲ್ಲವನ್ನೂ ಆಮೂಲಾಗ್ರವಾಗಿ ಈ ದೃಷ್ಟಿಯಿಂದಲೇ ಓದದಿದ್ದರೆ ಈ ಅಂಶಗಳು ಅವರ ಕಣ್ಣಿಗೆ ಬೀಳುವುದು ಕಷ್ಟ.

ಸ್ಥಳನಾಮ

ಎರಡನೆಯದು ಮ|| ಪಂಜೆ ಮಂಗೇಶರಾವ್, ಬಿ.ಎ., ಎಲ್.ಟಿ. ಯವರ 'ಸ್ಥಳನಾಮ' ಎಂಬ ಲೇಖನ. (ಪುಟ ೧೯.) ಇದರಲ್ಲಿ ಅವರು "ಮನುಷ್ಯನ ಕಲ್ಪನಾ ಸಾಮರ್ಥ್ಯವು ಕುದುರಿದ ಹಾಗೆಲ್ಲಾ ಅನೇಕ ಹಳ್ಳಿಪಳ್ಳಿಗಳ (ಕೊಡಲಿಪೇಟೆ, ಬಂದಳಿಕೆ ಇತ್ಯಾದಿ) ಹೆಸರುಗಳ ಮೇಲೆ ಇಂಥ ಕಟ್ಟು ಕಥೆಗಳು ಚಿಗುರಿ ಬೆಳೆದು ಅವುಗಳ ಹುಟ್ಟನ್ನು ಅಡಗಿಸುವಷ್ಟು ಹಬ್ಬಿಹೋಗಿವೆ" ಎಂದು ಆರಂಭಿಸಿ "ಮಂಗಳೂರು" ಮುಂತಾದ ಹೆಸರುಗಳ ನಿಷ್ಪತ್ತಿಯನ್ನು ವಿಚಾರಮಾಡಿದ್ದಾರೆ. ಮಂಗಳೂರಿಗೂ ಮಂಗಳಾದೇವಿಗೂ ಸಂಬಂಧವಿಲ್ಲ; "ವಾಸ್ತುಶಾಸ್ತ್ರದ ಪ್ರಕಾರ ಮಂಗಲ ಎಂದರೆ ದುರ್ಗರಕ್ಷಣಕ್ಕಾಗಿ ನಗರದಲ್ಲಿದ್ದ ಸೈನ್ಯಕ್ಕೆ ಬೇಕಾದ ಸೌಕರ್ಯಗಳುಳ್ಳ ಸ್ಥಳವೆಂದರ್ಥ; ದಂಡಿನವರು ಇರುವ ಕೋಟೆಕೇರಿ ಎಂದು ಹೇಳಬಹುದು. ಈ ಮಂಗಲವು ನೆಲದಡಿಯಲ್ಲಿದ್ದರೆ ನೆಲಮಂಗಲವಾಯಿತು, ನಗರದ ಎಡಕ್ಕಿದ್ದರೆ ಎಡಮಂಗಲವಾಯಿತು; ದುರ್ಗದ ಆಕಾರವನ್ನೋ ಸೈನ್ಯದ ಮಿತಿಯನ್ನೋ ಅನುಸರಿಸಿ ನಾಗಮಂಗಲವಾಗುತ್ತದೆ, ಇಲ್ಲವೇ ಈಶ್ವರಮಂಗಲವಾಗುತ್ತದೆ. . ." ಎಂಬುದು ಅವರ ಅಭಿಪ್ರಾಯ. ಮೈಸೂರಿನ ಮೇಲೆ ಬರೆದಿರುವ ಟಿಪ್ಪಣಿ ಇದು:–**ಮೈಸೂರ**—ಮೆಯ್ ಪೂರ್ವಪದ (ಮೆಯ್‌ನಾಡು, ಮೆಯ್ಲಾರು.) ಮೆಯ್ ಪರಪದ (ಪಟ್ರಮೆಯ್ ಬೊಳ್ಮ.) ಮೆಯ್= ಮೇಯಿಸುವುದು. ಸೂರು: ಸೂರ್ ಪೂರ್ವಪದ (ಸುರಾಲ್, ಸೂರಂಜೆ); ಸೂರ್ ಪರಪದ (ಹೊಸೂರು, ಅಯ್ಸೂರು, ಮಾಸೂರು) ಸೂರ್ = ಸುತ್ತು (ಸುರುಳಿ, ಸುಳಿ).

(‘ಮೈಸೂರು’ ಎಂಬುದು ‘ಮಯಿಸ’ (ಮಹಿಷ) ‘ಊರು’ ಎಂಬ ಮಾತುಗಳಿಂದ ನಿಷ್ಪನ್ನವಾಗಿದೆಯೆಂದು ಹೇಳುವುದು ರೂಢಿಯಾಗಿದೆ.)

ಮೂರನೆಯದು ಮ|| ಎಂ. ಗೋವಿಂದಪೈಯವರು ಬರೆದಿರುವ ‘ಶಿಶುಮಾಯಣ ಕವಿಯ ಕಾಲವಿಚಾರ’ ಎಂಬ ಲೇಖನ. ‘ತ್ರಿಪುರ ದಹನ’ ಮತ್ತು ‘ಅಂಜನಾ ಚರಿತ್ರೆ’ಗಳೆಂಬ ಸಾಂಗತ್ಯ ಕಾವ್ಯಗಳನ್ನು ರಚಿಸಿದ ಈ ಕವಿಯು ಕ್ರಿ.ಶ. ೧೨೩೨-೩೩ರಲ್ಲಿ ಇದ್ದನೆಂದು ಕವಿಚರಿತಕಾರರೂ, ಕ್ರಿ.ಶ. ೧೬೬೦ರಲ್ಲಿ ಇದ್ದನೆಂದು ಡಾ|| ವೆಂಕಟಸುಬ್ಬಯ್ಯನವರೂ ಅಭಿಪ್ರಾಯಪಡುತ್ತಾರೆಯಷ್ಟೆ. ಈ ವಿಚಾರದಲ್ಲಿ ಮ|| ಗೋವಿಂದಪೈಗಳು ಹೀಗೆ ತೀರ್ಮಾನ ಮಾಡಿದ್ದಾರೆ:—

ಶಿಶುಮಾಯಣಕವಿಯ ಕಾಲ. ಕ್ರಿ. ಶ. ೧೪೭೨

“. . . . . ತ್ರಿಪುರ ದಹನದಿಂದ ಮೇಲೆ ಎತ್ತಿಕೊಟ್ಟಿರುವ ಆ ಕಾಲವಾಚಿ ಸಾಂಗತ್ಯದ ಪಾಠವು ‘ಕನ್ನಡ ಸಹಕಾರಿ’ಯಲ್ಲಿ ಪ್ರಕಟಿತವಾಗಿರುವ ಮೇರೆಗೆ ತಾನೇ ಇರಬೇಕು, ಆ ಪಾಠವೇ ಶುದ್ಧವಾಗಿರಬೇಕು ವಿನಾ ಅದು ‘ಕವಿಚರಿತೆ’ಯಲ್ಲಿ ಕೊಟ್ಟಂತೆ ಇರಲಾರದು; ಅಂದರೆ ‘ಶಕವರ್ಷ (ದ) ಸಾವಿರದ ನಾನೂರರೊಳ್ವಿಕಲವಾದಾರುವತ್ಸರದ’ ಎಂಬ ಪಾಠವೇ ಸರಿಯಲ್ಲದೆ, ‘ಶಕವರ್ಷದ ಸಾವಿರದ ನೂರರೊಳುತ್ಸಕಲವಾದಾರುವತ್ಸರದ’ ಎಂಬುದು ಸರಿಯಲ್ಲವೆಂದೂ ನಿಷ್ಪನ್ನವಾಗುತ್ತದೆ. ಕ್ರಿ.ಶ. ೧೪೭೨ರಲ್ಲಿ ಇದ್ದ ಶಿಶುಮಾಯಣನ ಸಮಕಾಲೀನನಾಗಿದ್ದ ಬೆಳುಕೆರೆಯ ಅರಸಾದ ಗುಮ್ಮಟದೇವನೆಂಬವನು ಈ ಶಾಸನದಲ್ಲಿ (ಶ್ರವಣಬೆಳ್ಗೊಳ ೬೫) ಹೇಳಲ್ಪಟ್ಟಿರುವ ಬೆಳುಕೆರೆಯಧಿಪನಾದ ‘ರಾಯರಾಜಗುರು ಗುಮ್ಮಟ’ನ ಮೊಮ್ಮಗನೊ ಮಗನೊ ಆಗಿರಬೇಕು.”

ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (ಏಪ್ರಿಲ್ ೧೯೩೧) ಡಾ|| ಎ. ವೆಂಕಟಸುಬ್ಬಯ್ಯನವರು 'ತಂತ್ರಿಚರಿತದ ಎರಡು ಕಥೆಗಳು' ಎಂಬ ಒಂದು ಲೇಖನವನ್ನು ಬರೆದಿದ್ದಾರೆ. ('ತಂತ್ರಿಚರಿತ'ವೆಂಬುದು ಜಾವಾ ಭಾಷೆಯಲ್ಲಿರುವ 'ಪಂಚತಂತ್ರ'). ಅದರಲ್ಲಿ ಅವರು ವೃತ್ತವಿಲಾಸನ ಮತ್ತು ಅಮಿತಗತಿಯ 'ಧರ್ಮಪರೀಕ್ಷೆ'ಗಳಿಗೆ ಇರುವ 'ಅನೇಕ ವ್ಯತ್ಯಾಸ'ಗಳನ್ನು ತೋರಿಸಿ (ಪುಟ ೧೭) "..............ಅಮಿತಗತಿಯ ಧರ್ಮಪರೀಕ್ಷೆಯಿಂದ ಭಿನ್ನವಾದ ಒಂದು ಸಂಸ್ಕೃತ ಧರ್ಮಪರೀಕ್ಷೆಯನ್ನು ವೃತ್ತವಿಲಾಸನು ಕನ್ನಡದಲ್ಲಿ ಅನುವಾದಿಸಿರುವನೆಂದು ನಂಬುವುದೇ ಸದ್ಯಃಕಾಲದಲ್ಲಿ ಉತ್ತಮ ಪಕ್ಷವೆಂದು ನಮಗೆ ತೋರುವುದು" ಎಂದು ಹೇಳುತ್ತಾರೆ.

ತಂತ್ರಿಚರಿತ ಮತ್ತು ವೃತ್ತವಿಲಾಸ

ಕರ್ಣಾಟಕದ ಸಂಗೀತ ಸಾಹಿತ್ಯ ಪ್ರಪಂಚಗಳಲ್ಲಿ ಹೆಸರುಗೊಂಡು ಹಳೆಯ ಹುಲಿಗಳಾಗಿದ್ದ ಗಾನವಿಶಾರದ ಬಿಡಾರ ಕೃಷ್ಣಪ್ಪನವರೂ ಕರ್ಣಾಟಕ ಭಾಷಾರತ್ನಂ ಕರಿಬಸವಶಾಸ್ತ್ರಿಗಳೂ ಸ್ವರ್ಗಸ್ಥರಾದುದರಿಂದ ಕನ್ನಡಿಗರೆಲ್ಲರಿಗೂ ಅಪಾರವಾದ ಶೋಕನಷ್ಟಗಳು ಉಂಟಾಗಿವೆ. ಇಬ್ಬರೂ ತಮ್ಮ ವಿದ್ಯೆಯನ್ನೂ ಯಶಸ್ಸನ್ನೂ ನೆಲೆಗೊಳಿಸಿ ಪ್ರಸರಿಸಬಲ್ಲ ಸಮರ್ಥ ಶಿಷ್ಯಕೋಟಿಯನ್ನು ನಿರ್ಮಿಸಿಹೋಗಿದ್ದಾರೆ. ಆದ್ದರಿಂದ ಅವರ ಯಶಸ್ಸೂ ವಿದ್ಯೆಯೂ ಮಲಿನವಾಗುವಂತಾಗಲಿ ಮರೆಯುವಂತಾಗಲಿ ಇಲ್ಲ. ಅವರ ಆತ್ಮಕ್ಕೆ ಶಾಂತಿಯುಂಟಾಗಲೆಂದೂ ಆತ್ಮೀಯರಿಗೆ ಸಮಾಧಾನವುಂಟಾಗಲೆಂದೂ ಕರ್ಣಾಟಕ ಸಂಘವು ಈ ಮೂಲಕ ಭಗವಂತನನ್ನು ಪ್ರಾರ್ಥಿಸುತ್ತದೆ. ಅವರ ಸಂಕ್ಷೇಪ ಜೀವನಚರಿತ್ರೆಯನ್ನು ಅವರ ಶಿಷ್ಯರೇ ಬರೆಯುತ್ತಿದ್ದಾರೆ. ಅದು ಕೈಸೇರಿದ ಕೂಡಲೆ ಪ್ರಕಟವಾಗುತ್ತದೆ.

ಕರ್ಣಾಟಕದ ಎರಡು ಹಳೆಯ ಹುಲಿಗಳು

ಭಕ್ತಿಭಾಂಡಾರಿ ಬಸವಣ್ಣನವರು

ಇದು ಈಗ ಹಲವು ವರ್ಷಗಳಿಂದ ವೀರಶೈವ ಮತಗ್ರಂಥಗಳನ್ನೂ ಚರಿತ್ರ ಗಳನ್ನೂ ವ್ಯಾಸಂಗ ಮಾಡಿ ಅವುಗಳ ಮೇಲೆ ಹಲವು ಲೇಖನಗಳನ್ನು ಬರೆದು ಉಪನ್ಯಾಸಗಳನ್ನು ಕೊಟ್ಟು ಪ್ರಸಿದ್ಧರಾಗಿರುವ ಮ|| ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ. ಅವರು ಬರೆದಿರುವ ಗದ್ಯ ಗ್ರಂಥ. ಇದರಲ್ಲಿ ಮ|| ಮೂರ್ತಿ ಗಳವರು ಬಸವಣ್ಣನವರ ಮತ್ತು ಅವರ ಸಮಕಾಲೀನರ ವಚನಗಳು ಶಾಸನ ಗಳು ಕಾವ್ಯಗಳು ಐತಿಹಾಸಿಕ ಸ್ಥಳಗಳು ಈಚಿನ ಗ್ರಂಥಗಳು ಮುಂತಾದವು ಗಳ ಪರಿಶೀಲನೆಯಿಂದ ಹನ್ನೆರಡನೆಯ ಶತಮಾನದ ಕರ್ಣಾಟಕ ಚರಿತ್ರೆಯನ್ನೂ ಮುಖ್ಯ ವ್ಯಕ್ತಿಗಳ ಕಾರ್ಯಕಲಾಪಗಳನ್ನೂ ಸಂಶೋಧನೆಮಾಡಿ ಪ್ರಕಟಿಸಿದ್ದಾರೆ. ಇದನ್ನು ಓದಿದರೆ ಬಸವಣ್ಣನವರ ಮೂರ್ತಿಸ್ವರೂಪವೂ ಸ್ಥಾನಮಹತ್ವವೂ ಚೆನ್ನಾಗಿ ಗೋಚರಿಸುತ್ತವೆ. ಕಾವ್ಯಪಾಠಕರಿಗೂ ಚರಿತ್ರಶೋಧಕರಿಗೂ ಧರ್ಮ ಪಕ್ಷಪಾತಿಗಳಿಗೂ ಏಕರೀತಿಯಾಗಿ ಉಪಯುಕ್ತವಾಗಿರುವ ಪ್ರಮಾಣ ಗ್ರಂಥ. ಇದರಲ್ಲಿ ಆರು ಚಿತ್ರಪಟಗಳಿರುತ್ತವೆ. ಉತ್ತಮವಾದ ಬೆಂಡು ಕಾಗದದಲ್ಲಿ ಮುದ್ರಿತವಾಗಿ ಕ್ರೌನ್ ೧೫೦ ಪುಟಗಳನ್ನು ಒಳಗೊಂಡಿದೆ. ಬೆಲೆ ರೂ. ೧-೪-೦.

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ಮೈಸೂರು ದೇಶದ ವಾಸ್ತುಶಿಲ್ಪ

ಈ ಗ್ರಂಥದ ವಿಚಾರವಾಗಿ ಇಂಗ್ಲೆಂಡಿನ ರಾಯಲ್ ಏಷಿಯಾಟಿಕ್ ಸೊಸೈಟಿ ಪತ್ರಿಕೆಯು (ಏಪ್ರಿಲ್ ೧೯೩೦) ಹೀಗೆ ಬರೆದಿದೆ:—

"Maisuru Desada Vasthu Silpa. ....issued by the Karnataka Sangha, a society of scholarly Kannadigas which is doing excellent service to the cause of literary and historical culture in Kannada speaking lands. Mr. Venkoba Rao, than whom no more competent writer on Indian Architecture and antiquities is to be found here furnishes his readers (who, we hope, will be many) with the first instalment... ...and as is to be expected from him he has performed his task with notable success. His Kannada diction is simple, lucid, and vigorous; and the amount of information on details which he gives is abundant. Numerous illustrations and plans complete the excellence of the work ... ..."

ೆ ರೂ. ೫.

(Dr L. D. Barnett.)

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ಮೈಸೂರಿನ ಸಾಬೂನು
ಮಕ್ಕಳಿಗೆತಾನೇ ಬೇಡವೇನು?

ಬೇಕು. ಎಲ್ಲರಿಗೂ ಬೇಕು. ಎಲ್ಲರೂ ಬೇಕೆನ್ನುವ ಉತ್ತಮ ಸಾಬೂನುಗಳನ್ನೇ ನಾವು ಮಾಡುತ್ತೇವೆ. ನಮ್ಮಲ್ಲಿ ಶ್ರೀಗಂಧ, ಜಾಜಿ, ಗುಲಾಬಿ ಮುಂತಾದ ಪರಿಮಳದ ಸಾಬೂನುಗಳು ತಯಾರಾಗುತ್ತವೆ. ನಮ್ಮ ಸಾಬೂನುಗಳನ್ನು ಕೊಂಡು ಉಪಯೋಗಿಸಿದರೆ ನಮ್ಮ ಹಣವು ನಮ್ಮ ದೇಶದಲ್ಲಿಯೇ ಉಳಿಯುತ್ತದೆ.

ಎಲ್ಲೆಲ್ಲಿಯೂ ಸುಪ್ರಸಿದ್ಧವಾದ ಸಾಬೂನೆಂದರೆ ನಮ್ಮ

ಮೈಸೂರು ಶ್ರೀಗಂಧದ ಸಾಬೂನು

Mysore Sandal Soap

ಗೌರ್ನಮೆಂಟು ಸೋಪು ಫ್ಯಾಕ್ಟರಿ
ಬೆಂಗಳೂರು ಸಿಟಿ

B. B. D. POWER PRESS, BANGALORE CITY.